ವಿಶ್ವವಾಣಿ

ವಿಶ್ವಾಸವೇ ವಿಶ್ವ

ಇಂದು, ನಾಳೆ ತೇಜಸ್ವಿ ಸೂರ್ಯ ಶಿವಶ್ರೀ ಸ್ಕಂದಪ್ರಸಾದ್ ವಿವಾಹ ಮಹೋತ್ಸವ

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಅವರ ವಿವಾಹ ಮಹೋತ್ಸವವು ಬುಧವಾರ ಮತ್ತು ಗುರುವಾರ ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಖಾಸಗಿ ರೆಸಾರ್ಟ್‌ವೊಂದರಲ್ಲಿ ನಡೆಯಲಿದೆ. ಮಾರ್ಚ್ 9ರಂದು ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಆರತಕ್ಷತೆ ಕಾರ್ಯಕ್ರಮ ನಡೆಯಲಿದೆ.

ಸೊಂಪಾದ ಪುಟಗಳು



ವ್ಯಕ್ತಿತ್ವವನ್ನು ನಿರ್ಧರಿಸುವುದು ನಿಮ್ಮ ಹುಟ್ಟೋ ಅಥವಾ ಶಿಕ್ಷಣವೋ?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಕೊಬ್ಬಿನ ಸಮಸ್ಯೆ ಕೊಬ್ಬಿದ ನಮ್ಮ ವ್ಯವಸ್ಥೆಯಲ್ಲಿದೆ!

ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಕೆಲವರು ಸುಂದರವಾದ ಸ್ಥಳಗಳನ್ನು ಅರಸಿಕೊಂಡು ಹೋಗುತ್ತಾರೆ. ಇನ್ನು ಕೆಲವರು ತಾವು ಇರುವ ಸ್ಥಳವನ್ನೇ ಸುಂದರವಾಗಿ ಮಾಡಲು ಪ್ರಯತ್ನಿಸುತ್ತಾರೆ ಮತ್ತು ಅಲ್ಲಿಗೆ ಎಲ್ಲರನ್ನೂ ಬರುವಂತೆ ಮಾಡುತ್ತಾರೆ. ಆಯ್ಕೆ ನಿಮಗೆ ಬಿಟ್ಟದ್ದು.

ವಕ್ರತುಂಡೋಕ್ತಿ

ಪ್ರತಿಯೊಬ್ಬರಲ್ಲೂ ಒಂದಾದರೂ ಕೊರತೆ ಇದ್ದೇ ಇರುತ್ತದೆ. ಹೆಚ್ಚಿನ ಸಮಯದಲ್ಲಿ ಅದು ನಿದ್ದೆಗೆ ಸಂಬಂಧಿಸಿದ್ದಿರುತ್ತದೆ.

ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಫೈಝಿ ಇ.ಡಿ ವಶಕ್ಕೆ

ದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸೋಷಿಯಲಿಸ್ಟ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ರಾಷ್ಟ್ರೀಯ ಅಧ್ಯಕ್ಷ ಎಂ.ಕೆ. ಫೈಝಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ವಶಕ್ಕೆ ಪಡೆದಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿ ಸೋಮವಾರ ರಾತ್ರಿ ದೆಹಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಫೈಝಿ ಅವರನ್ನು ವಶಕ್ಕೆ ಪಡೆಯಲಾಗಿದೆ. 2009ರಲ್ಲಿ ಎಸ್‌ಡಿಪಿಐ ಸ್ಥಾಪನೆಗೊಂಡಿತ್ತು. ನಿಷೇಧಿತ ಪಿಎಫ್‌ಐ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದೆ ಎಂಬ ಆರೋಪವೂ ಈ ಸಂಘಟನೆ ಮೇಲಿದೆ. ಆದರೆ, ಈ ಆರೋಪವನ್ನು ಎಸ್‌ಡಿಪಿಐ ನಿರಾಕರಿಸಿದೆ.

ಮಾತಂದ್ರೆ ಮಾತು

ನಾಯಿಗಳಿಗೆ ನಿಯತ್ತು ಇದೆ. ಆದರೆ ಹಂದಿಗಳಿಗೆ ನಿಯತ್ತು ಇಲ್ಲ. ಬಿಎಸ್‌ವೈ, ವಿಜಯೇಂದ್ರ ಪರ ರೇಣುಕಾಚಾರ್ಯ ಇಂದು ಮಾತನಾಡುತ್ತಿದ್ದಾರೆ. ಆದರೆ, ಅಂದು ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಲು ಗೋವಾಗೆ ಹೋಗಿ ಸಂಚು ಮಾಡಿದ್ದು ಇದೇ ರೇಣುಕಾಚಾರ್ಯ.

- ಬಸನಗೌಡ ಪಾಟೀಲ ಯತ್ನಾಳ
ಶಾಸಕ

ಫನ್‌ತರಂಗ
- ರಘುಪತಿ ಶೃಂಗೇರಿ -



ಚಾಂಪಿಯನ್ಸ್ ಟ್ರೋಫಿ: ಭಾರತ ತಂಡ ಫೈನಲ್‌ಗೆ ಲಗ್ಗೆ । ಕಾಂಗರೂಗಳ ವಿರುದ್ಧ ನಾಲ್ಕು ವಿಕೆಟ್ ಅಂತರದ ಜಯ

ಟ್ರೋಫಿಗಿನ್ನು ಒಂದೇ ಹೆಜ್ಜೆ

ದುಬೈ: ವಿರಾಟ್ ಕೊಹ್ಲಿ ಅವರ ಸಮಯೋಚಿತ ಅರ್ಧಶತಕದ (84) ನೆರವಿನಿಂದ ಭಾರತ ತಂಡವು ಆಸ್ಟ್ರೇಲಿಯಾ ವಿರುದ್ಧ ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ನಾಲ್ಕು ವಿಕೆಟ್ ಅಂತರದ ಜಯ ಗಳಿಸಿದ್ದು, ಫೈನಲ್‌ಗೆ ಪ್ರವೇಶಿಸಿದೆ. ಆ ಮೂಲಕ ಚಾಂಪಿಯನ್ಸ್ ಟ್ರೋಫಿ ಇತಿಹಾಸದಲ್ಲೇ ಐದನೇ ಸಲ ಫೈನಲ್‌ಗೆ ಲಗ್ಗೆ ಇಟ್ಟಿದೆ. 2002 ಹಾಗೂ 2013ನೇ ಸಾಲಿನಲ್ಲಿ ಭಾರತ ಚಾಂಪಿಯನ್ ಪಟ್ಟ ಅಲಂಕರಿಸಿದ್ದರೆ 2000 ಹಾಗೂ 2017ರಲ್ಲಿ ರನ್ನರ್ ಅಪ್ ಎನಿಸಿಕೊಂಡಿತ್ತು. ಈ ಪೈಕಿ ಸತತ ಎರಡನೇ ಸಲ ಫೈನಲ್‌ಗೇರಿದ ಸಾಧನೆ ಮಾಡಿದೆ.

- 98 ಎಸೆತಗಳಲ್ಲಿ 5 ಬೌಂಡರಿ ಬಾರಿಸಿ 84 ರನ್ ಗಳಿಸಿದ ಕೊಹ್ಲಿ
- ಶ್ರೇಯಸ್ ಅಯ್ಯರ್ (45), ಕೆ.ಎಲ್.ರಾಹುಲ್ (42*)
- ಮಾ.5 ಲಾಹೋರ್‌ನಲ್ಲಿ ನಡೆಯಲಿರುವ ದ್ವಿತೀಯ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ-ನ್ಯೂಜಿಲೆಂಡ್ ತಂಡಗಳು ಮುಖಾಮುಖಿ
- ಲಾಹೋರ್‌ನಲ್ಲಿ ಗೆದ್ದ ತಂಡವು ಮಾ.9ರಂದು ದುಬೈನಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಟ್ರೋಫಿಗಾಗಿ ಭಾರತ ತಂಡದ ವಿರುದ್ಧ ಸೆಣಸಲಿದೆ



7ರಂದು ಅಮಿತ್ ಶಾ ಬೆಂಗಳೂರಿಗೆ ಆಗಮನ । ಭಿನ್ನ ಬಣಗಳ ಜತೆ ಪ್ರತ್ಯೇಕ ಮಾತುಕತೆ ಸಂಭವ

ಬಣದಾಟಕ್ಕೆ ಕಾದಿದೆ ಶಾಕ್?

ಬೆಂಗಳೂರು: ಬಿಜೆಪಿಯಲ್ಲಿನ ಬಣ ಬಡಿದಾಟ ತಾರಕಕ್ಕೇರಿ ಸದ್ಯ ಕದನ ವಿರಾಮ ಘೋಷಣೆಯಂತಿರುವ ಸಮಯದಲ್ಲೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾ.7ರಂದು ಬೆಂಗಳೂರಿಗೆ ಆಗಮಿಸಲಿದ್ದಾರೆ.

ಈ ವೇಳೆ ರಾಜ್ಯಾಧ್ಯಕ್ಷರ ಹಾಗೂ ಭಿನ್ನರ ಬಣ ಮತ್ತೊಮ್ಮೆ ತದ್ವಿರುದ್ಧ ದೂರು ಸಲ್ಲಿಸುವ ಸಾಧ್ಯತೆ ಇದ್ದು, ವಿಜಯೇಂದ್ರ ಬಣ ಶಕ್ತಿ ಪ್ರದರ್ಶನಕ್ಕೆ ಬೆಂಗಳೂರಿನಲ್ಲಿ ಪೂರ್ವಭಾವಿ ಸಮಾವೇಶ ನಡೆಸಿದೆ.

- ರಾಜ್ಯ ಬಿಜೆಪಿಯಲ್ಲಿನ ಗರಿಗೆದರಿದ ಚಟುವಟಿಕೆಗಳು
- ಎರಡೂ ಬಣಗಳಿಂದ ದೂರು ಸಲ್ಲಿಸುವ ಸಾಧ್ಯತೆ
- ಒಂದೇ ವೇದಿಕೆಯಲ್ಲಿ ವಿಜಯೇಂದ್ರ-ಲಿಂಬಾವಳಿ ಭಾಗಿ

ಬೆಂಗಳೂರಿನ ಕುಂದಲಹಳ್ಳಿಯಲ್ಲಿರುವ ವಿಶ್ವೇಶ್ವರ ತೀರ್ಥ ಸೇವಾಶ್ರಮ ಹಾಗೂ ಸೇವಾಶ್ರಮ ಉದ್ಘಾಟನೆಗೆ ಕೇಂದ್ರ ಸಚಿವ ಅಮಿತ್ ಶಾ ಆಗಮಿಸಲಿದ್ದು, ರಾಜ್ಯ ಬಿಜೆಪಿಯಲ್ಲಿನ ಚಟುವಟಿಕೆಗಳು ಗರಿಗೆದರಿದೆ. ಮಾ.7ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಭಿನ್ನರ ಬಣದಲ್ಲಿ ಗುರುತಿಸಿಕೊಂಡಿರುವ ಅರವಿಂದ ಲಿಂಬಾವಳಿ ಕೂಡ ಅದೇ ವೇದಿಕೆಯಲ್ಲಿ ಭಾಗಿಯಾಗುತ್ತಿರುವುದು ಕುತೂಹಲ ಮೂಡಿಸಿದೆ.

ಅಂದಿನ ಕಾರ್ಯಕ್ರಮ ಮುಗಿದ ನಂತರ ರಾಜ್ಯ ಬಿಜೆಪಿ ಘಟಕಕ್ಕೆ ಸಂಬಂಧಿಸಿದಂತೆ ಯಾವುದೇ ಪೂರ್ವ ನಿರ್ಧರಿತ ಕಾರ್ಯಕ್ರಮಗಳು ಅಮಿತ್ ಶಾ ಅವರ ನಿಗದಿತ ಪಟ್ಟಿಯಲ್ಲಿಲ್ಲ. ಹೀಗಾಗಿ ರಾಜ್ಯ ಘಟಕಕ್ಕೆ ಸಂಬಂಧಿಸಿದಂತೆ ಕೆಲ ನಿರ್ದೇಶನ ನೀಡಲಿದ್ದಾರೆ ಎನ್ನಲಾಗಿದ್ದು, ರಾಜ್ಯದಲ್ಲಿ ಬಿಜೆಪಿಯಿಂದ ನಡೆಯುತ್ತಿರುವ ಸಂಘಟನೆ ಹಾಗೂ ಸದಸ್ಯತ್ವ ಅಭಿಯಾನದ ಬಗ್ಗೆ ರಾಜ್ಯಾಧ್ಯಕ್ಷ ವಿಜಯೇಂದ್ರ ವರದಿ ಒಪ್ಪಿಸಲಿದ್ದಾರೆ ಎನ್ನಲಾಗಿದೆ.

ಬಿಎಸ್‌ವೈ ಭೇಟಿ

ಅಮಿತ್ ಶಾ ಅವರು ರಾಜ್ಯಕ್ಕೆ ಆಗಮಿಸಿದ ವೇಳೆ ಮಾಜಿ ಸಿಎಂ ಯಡಿಯೂರಪ್ಪ ಅವರು ಕೂಡ ಅಮಿತ್ ಶಾ ಅವರನ್ನು ಭೇಟಿಯಾಗುವ ಸಾಧ್ಯತೆ ಇದ್ದು, ರಾಜ್ಯದಲ್ಲಿನ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಲಿದ್ದಾರೆ ಎನ್ನಲಾಗಿದೆ.

ಕೆಪಿಎಸ್‌ಸಿ ಎಡವಟ್ಟುಗಳ ಬಗ್ಗೆ ವಿಧಾನಸಭೆಯಲ್ಲಿ ಸದಸ್ಯರ ಕಳವಳ

ಸದನದಲ್ಲಿ ಲೋಪಸೇವೆ ಚರ್ಚೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ ಅಕ್ರಮಗಳ ಬಗ್ಗೆ ಪಕ್ಷಾತೀತವಾಗಿ ಆಕ್ರೋಶ ವ್ಯಕ್ತಪಡಿಸಿರುವ ಶಾಸಕರು, ವ್ಯವಸ್ಥೆ ಸುಧಾರಣೆಗೆ ಆಗ್ರಹಿಸಿದ್ದಾರೆ. ಇದೇ ವೇಳೆ ಕೆಪಿಎಸ್‌ಸಿಯಲ್ಲಿ ಪ್ರತಿಯೊಂದಕ್ಕೂ ದರ ನಿಗದಿ(ರೇಟ್ ಫಿಕ್ಸ್) ಯಾಗಿದ್ದು, ಪೂರ್ವಭಾವಿ ಪರೀಕ್ಷೆಗೆ 60 ಲಕ್ಷ ರು., ಮುಖ್ಯ ಪರೀಕ್ಷೆಗೆ ಒಂದು ಕೋಟಿ ರು. ಮತ್ತು ಸಂದರ್ಶನಕ್ಕೆ 40 ಲಕ್ಷ ರು. ನಿಗದಿ ಮಾಡಲಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಗಂಭೀರ ಆರೋಪ ಮಾಡಿದ್ದಾರೆ.

ಮಂಗಳವಾರ ಸದನದಲ್ಲಿ ಕೆಪಿಎಸ್‌ಸಿ ಹಗರಣ ಕುರಿತು ಪ್ರಸ್ತಾಪಿಸಿ ಮಾತನಾಡಿದ ಅವರು, ಕೆಪಿಎಸ್‌ಸಿಯಲ್ಲಿ 14 ಸದಸ್ಯರಿದ್ದು, ಒಬ್ಬರಿಗೆ ಎರಡೂವರೆ ಲಕ್ಷ ರು. ವೇತನವಿದೆ. ಉಳಿದ ಸೌಲಭ್ಯಗಳು ಸೇರಿ 4 ಲಕ್ಷ ರು. ಆಗಲಿದೆ. ರಾಜ್ಯದಲ್ಲಿ ಆರೂವರೆ ಕೋಟಿ ಜನರಿದ್ದಾರೆ. 20 ಕೋಟಿ ಜನರಿರುವ ಉತ್ತರ ಪ್ರದೇಶದ ಆಯೋಗದಲ್ಲಿ 8 ಸದಸ್ಯರಿದ್ದಾರೆ. ಇದರಲ್ಲೂ ರಾಜ್ಯದಲ್ಲಿ ಹಗಲು ದರೋಡೆ ನಡೆಯುತ್ತಿದೆ. ಉಪವಿಭಾಗಾಧಿಕಾರಿ ಹುದ್ದೆಗೆ 2 ಕೋಟಿ ರು., ಡಿವೈಎಸ್ಪಿಗೆ 2 ಕೋಟಿ ರು., ವಾಣಿಜ್ಯ ತೆರಿಗೆ ಇಲಾಖೆ ಹುದ್ದೆಗೆ 1.50 ಕೋಟಿ ರು., ಪಂಚಾಯತ್ ಅಧಿಕಾರಿಗೆ ಒಂದೂವರೆ ಕೋಟಿ ರದ ನಿಗದಿ ಮಾಡಲಾಗಿದೆ ಎಂದು ಆರೋಪಿಸಿದರು.

ಈ ವೇಳೆ ಆಡಳಿತ ಪಕ್ಷದ ಶಿವಲಿಂಗೇಗೌಡ ಆಕ್ಷೇಪ ವ್ಯಕ್ತಪಡಿಸಿ, ಆರೋಪಕ್ಕೆ ಪೂರಕ ದಾಖಲೆ ಒದಗಿಸುವಂತೆ ಆಗ್ರಹಿಸಿದರು. ಶಿವಲಿಂಗೇಗೌಡರ ಮಾತನ್ನು ಬೆಂಬಲಿಸಿ ಮಾತನಾಡಿದ ಸಂಗಮೇಶ್ ಅವರು, ಹಣ ಪಾವತಿಗೆ ದಾಖಲೆ ಒದಗಿಸುವಂತೆ ಆಗ್ರಹಿಸಿದರು. ಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ರಾಜಕೀಯಕ್ಕಾಗಿ ಮಾತನಾಡುವುದು ಬೇಡ. ದಾಖಲೆ ಸಹಿತ ಸಾಬೀತು ಪಡಿಸಿದರೆ ಒಳ್ಳೆಯದು ಎಂದರು.

ನಂತರ ಮಾತನಾಡಿದ ಆರ್.ಅಶೋಕ, ಪೂರ್ವಭಾವಿ ಪರೀಕ್ಷೆಗೆ 60 ಲಕ್ಷ ರು., ಮುಖ್ಯ ಪರೀಕ್ಷೆಗೆ ಒಂದು ಕೋಟಿ ರು. ಮತ್ತು ಸಂದರ್ಶನಕ್ಕೆ 40 ಲಕ್ಷ ರು. ನಿಗದಿ ಮಾಡಲಾಗಿದೆ. ಈ ರೀತಿ ರೇಟ್‌ಕಾರ್ಡ್ ಫಿಕ್ಸ್ ಮಾಡಲಾಗಿದೆ. ಓಎಂಆರ್ ಶೀಟ್‌ನಲ್ಲಿ 16 ಅಥವಾ 10 ಪ್ರಶ್ನೆಗಳಿಗೆ ಮಾತ್ರ ಗುರುತು ಮಾಡುವಂತೆ ಮಧ್ಯವರ್ತಿ ಹೇಳಲಿದ್ದು, ಅದರಂತೆಯೇ ಅಭ್ಯರ್ಥಿ ಮಾಡುತ್ತಾನೆ. ಓಎಂಆರ್ ಶೀಟ್ ಹೋಗುವ ಎರಡು ಕೊಠಡಿಗಳಲ್ಲಿ ಸಿಸಿಟಿವಿ ಇರುವುದಿಲ್ಲ. ಅಲ್ಲಿಯೇ ಉಳಿದ ಪ್ರಶ್ನೆಗಳಿಗೆ ಉತ್ತರವನ್ನು ಟಿಕ್ ಮಾಡಲಾಗುತ್ತದೆ. ಇದರಲ್ಲಿ ಲೋಕಸೇವಾ ಆಯೋಗದ ಅಧಿಕಾರಿಗಳು ಕೂಡ ಶಾಮೀಲಾಗಿರುತ್ತಾರೆ. ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಈ ಕುರಿತು ಪರೀಕ್ಷೆ ನಡೆಸಲಾಗಿದೆ. ಅಭ್ಯರ್ಥಿ ಮತ್ತು ಮಧ್ಯವರ್ತಿ ಬಳಸಿರುವ ಪೆನ್‌ಗಳಲ್ಲಿ ವ್ಯತ್ಯಾಸ ಇರುವುದರ ಬಗ್ಗೆ ಪತ್ತೆ ಮಾಡಲಾಗಿದೆ ಎಂದರು.

ಸದನದಲ್ಲಿ ಕೆಪಿಎಸ್‌ಸಿ ಹಗರಣ ಕುರಿತು ಪ್ರಸ್ತಾಪಿಸಿದ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ.

ಪ್ರಶ್ನೆ ಪತ್ರಿಕೆಗಳಲ್ಲಿ ತಪ್ಪುಗಳಿರುವ ಹಿನ್ನೆಲೆಯಲ್ಲಿ ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ನಡೆಸಿರುವ ಪೂರ್ವಭಾವಿ ಮರು ಪರೀಕ್ಷೆಯನ್ನು ರದ್ದುಗೊಳಿಸಬೇಕು. ಹಳೆ ಅಧಿಸೂಚನೆ ಹಿಂಪಡೆದು ಹೊಸದಾಗಿ ಅಧಿಸೂಚನೆ ಹೊರಡಿಸಬೇಕು. ಪರೀಕ್ಷೆಯಲ್ಲಿ 30 ಕೋಟಿ ರು. ಹಾಳು ಮಾಡಿದ ಅಧಿಕಾರಿಯನ್ನು ಅಮಾನತು ಮಾಡಬೇಕು. ಅಭ್ಯರ್ಥಿಗಳ ವಯೋಮಿತಿಗೆ ವಿನಾಯಿತಿ ನೀಡಬೇಕು. ಅಕ್ರಮದ ವಿರುದ್ಧ ತನಿಖೆ ಮಾಡಬೇಕು. ಕನ್ನಡ ಅಪಮಾನ ಮಾಡಿದ ಅಧಿಕಾರಿಯ ವಿರುದ್ಧ ಕ್ರಮ ವಹಿಸಬೇಕು.

-ಆರ್.ಅಶೋಕ ಪ್ರತಿಪಕ್ಷದ ನಾಯಕ

ಕೆಪಿಎಸ್‌ಸಿ ಸುಧಾರಣೆಗೆ ಆಗ್ರಹ

ಕೆಪಿಎಸ್‌ಸಿ ಪರೀಕ್ಷಾ ಅಕ್ರಮ ಮತ್ತು ಎಡವಟ್ಟುಗಳ ಕುರಿತು ಪಕ್ಷಾತೀತವಾಗಿ ಬಹುತೇಕ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಆರ್. ಅಶೋಕ ವಿಚಾರ ಪ್ರಸ್ತಾಪಿಸುತ್ತಿದ್ದಾಗ, ಕಾಂಗ್ರೆಸ್‌ನ ಎಂ.ಶಿವಲಿಂಗೇಗೌಡ ಮಾತನಾಡಿ, ಎಲ್ಲ ಸರಕಾರದ ಅವಧಿಯಲ್ಲೂ ಕೆಪಿಎಸ್‌ಸಿ ಅಕ್ರಮಗಳು ನಡೆದಿವೆ. ಹೀಗಾಗಿ ಕೆಪಿಎಸ್‌ಸಿಯನ್ನು ರದ್ದು ಮಾಡಬೇಕು ಅಥವಾ ಅದರ ವ್ಯವಸ್ಥೆ ಬದಲಿಸಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಧ್ವನಿಗೂಡಿಸಿದ ಬಿಜೆಪಿಯ ಸುರೇಶ್ ಗೌಡ, ಕೆಪಿಎಸ್‌ಸಿಗೆ ರಾಜಕಾರಣಿಗಳ ಚೇಲಾಗಳನ್ನು ಸದಸ್ಯರನ್ನಾಗಿ ನೇಮಕ ಮಾಡುವುದನ್ನು ಮೊದಲು ನಿಲ್ಲಿಸಬೇಕು. ಇಲ್ಲದಿದ್ದರೆ ಕೆಪಿಎಸ್‌ಸಿ ಬಂದ್ ಮಾಡಬೇಕು. ಹಾಗೆಯೇ, ಕೆಪಿಎಸ್‌ಸಿ ಮೇಲೆ ಸರಕಾರ ನಿಯಂತ್ರಣ ಇಟ್ಟುಕೊಳ್ಳುವಂತಹ ನಿಯಮ ರೂಪಿಸಬೇಕು ಎಂದರು. ಬಿಜೆಪಿಯ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಇತರರು ಅದನ್ನು ಅನುಮೋದಿಸಿದರು.

ಕರಾವಳಿ ಪ್ರವಾಸೋದ್ಯಮ ಉತ್ತೇತನಕ್ಕೆ ಕ್ರಮ: ಎಚ್‌ಕೆಪಿ

ವಿಧಾನಸಭೆ: ಕರಾವಳಿ ಭಾಗಕ್ಕೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ತರುವ ಪ್ರಸ್ತಾವನೆ ಇಲ್ಲ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಹೇಳಿದ್ದಾರೆ. ಬಿಜೆಪಿ ಶಾಸಕ ಗುರುರಾಜ್ ಗಂಟಿಹೊಳೆ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರವಾಸೋದ್ಯಮ ನೀತಿಯಲ್ಲೇ ಕರಾವಳಿ ಭಾಗದಲ್ಲಿನ ಎಲ್ಲ ವರ್ಗದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಅವಕಾಶಗಳನ್ನು ಕಲ್ಪಿಸಲಾಗಿದೆ. ಕರಾವಳಿ ಅಭಿವೃದ್ಧಿ ಮಂಡಳಿ ರಚನೆ ಮಾಡುತ್ತೇವೆ. ಭೂ ಬ್ಯಾಂಕ್ ಮಾಡುತ್ತೇವೆ. ಕಂಬಳಕ್ಕೆ ತಲಾ 5 ಲಕ್ಷ ಅನುದಾನ ನೀಡಲಾಗುತ್ತಿದೆ. 320 ಕಿ.ಮೀ. ಉದ್ದದ ಕರಾವಳಿಯಲ್ಲಿ ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ ಎಂದರು.

ಬಲ್ಡೋಟ ಕಾಮಗಾರಿ ಸ್ಥಗಿತಕ್ಕೆ ಸಿಎಂ ಸಿದ್ದರಾಮಯ್ಯ ಸೂಚನೆ

ಬೆಂಗಳೂರು: ಬಲ್ಡೋಟ ಕಾರ್ಖಾನೆ ಸ್ಥಾಪನೆಗೆ ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ ರಾಜ್ಯ ಸರಕಾರ ಕಾರ್ಖಾನೆ ಸ್ಥಾಪನೆಗೆ ಬ್ರೇಕ್ ಹಾಕಿದೆ. ಬಲ್ಡೋಟ ಕಾರ್ಖಾನೆ ಆರಂಭಿಸುವ ಘೋಷಣೆ ಮಾಡಿಸಿದ ದಿನದಿಂದಲೂ ಕೊಪ್ಪಳ ಸೇರಿದಂತೆ ಸುತ್ತಲಿನ ಊರುಗಳಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ ಕೊಪ್ಪಳದ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ನೇತೃತ್ವದ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಕಾರ್ಖಾನೆ ಸ್ಥಾಪನೆಗೆ ಅವಕಾಶ ನೀಡಬಾರದು ಎಂದು ಮನವಿ ಸಲ್ಲಿಸಿತು. ಇದರ ಬೆನ್ನಲ್ಲೇ ಕಾರ್ಖಾನೆ ಕಾಮಗಾರಿ ಮುಂದುವರಿಸದಂತೆ ಸೂಚನೆ ನೀಡಿದ್ದಾರೆ.

ಪ್ಯಾನಿಕ್ ಬಟನ್‌ಗೆ ದರ ನಿಗದಿ

ಬೆಂಗಳೂರು: ಸಾರ್ವಜನಿಕ ವಾಹನಗಳಿಗೆ ಜಿಪಿಎಸ್-ಪ್ಯಾನಿಕ್ ಬಟನ್ ಅಳವಡಿಕೆ ಕಡ್ಡಾಯಗೊಳಿಸಿರುವುದನ್ನೇ ಬಂಡವಾಳ ಮಾಡಿಕೊಂಡು ಸಾಧನಗಳನ್ನು ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದವರಿಗೆ ದರ ನಿಗದಿ ಮಾಡಿ ಸರಕಾರ ಕಡಿವಾಣ ಹಾಕಿದೆ. ಒಂದು ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್‌ಗೆ (ವಿಎಲ್‌ಟಿ) 5,424 ರು., ಪ್ರತಿ ತುರ್ತು ಬಟನ್‌ಗೆ 325 ರು. ಮತ್ತು ಒಂದು ವರ್ಷದ ನೆಟ್‌ವರ್ಕ್ ಸಂಪರ್ಕ ಮತ್ತು ನಿರ್ವಹಣಾ ಶುಲ್ಕವನ್ನು 1,800 ರು.ಗಳಿಗೆ ನಿಗದಿಪಡಿಸಿದೆ. ಈ ಸಾಧನಗಳ ಮಾರುಕಟ್ಟೆ ದರ ಸುಮಾರು 4,000 ರು.ಗಳಾಗಿದ್ದರೂ, ಮಾರಾಟಗಾರರು 18,000 ವಿಧಿಸುತ್ತಿದ್ದಾರೆಂದು ದೂರುಗಳು ಕೇಳಿಬಂದಿದ್ದವು.

ಅಸ್ಸಾಂ: ಕಳ್ಳ ಸಾಗಣೆ ಅಡಕೆ ವಶ

ಲಖೀಂಪುರ: ಅಸ್ಸಾಂ ರಾಜ್ಯದ ಕಛಾರ್ ಜಿಲ್ಲೆಯ ಲಖೀಂಪುರ ಠಾಣೆಯ ಪೊಲೀಸರು 60 ಸಾವಿರ ಕಿಲೋ ಅಡಕೆಯನ್ನು ಮಂಗಳವಾರ ವಶಪಡಿಸಿಕೊಂಡಿದ್ದು, ಅದರ ಮಾಲೀಕರು ಯಾರು ಎನ್ನುವುದೇ ತಿಳಿದುಬಂದಿಲ್ಲ. ಹಾಗಾಗಿ ಇದು ಹೊರದೇಶದಿಂದ ಕಳ್ಳಸಾಗಣೆ ಮಾರ್ಗದಲ್ಲಿ ಬಂದ ಅಡಕೆ ಇರಬೇಕು ಎಂದು ಶಂಕಿಸಲಾಗಿದೆ. ಲಖೀಂಪುರ ಪೊಲೀಸರು ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ 60,421 ಕಿಲೋ ಅಡಕೆಯನ್ನು ವಶಪಡಿಸಿಕೊಂಡರು. ಆದರೆ, ಈಗ ಲಖೀಂಪುರ ಪೊಲೀಸರಿಗೆ ಇಷ್ಟೊಂದು ಪ್ರಮಾಣದ ಅಡಕೆ ಚೀಲಗಳನ್ನು ಸಂಗ್ರಹಿಸಿಟ್ಟು ಕಾವಲು ಕಾಯುವುದೇ ದೊಡ್ಡ ಸವಾಲಾಗಿದೆ.

ಗುಜರಾತ್‌ನ ಜಾಮ್‌ನಗರದಲ್ಲಿ ಉದ್ಯಮಿ ಅನಂತ್ ಅಂಬಾನಿ ಸ್ಥಾಪಿಸಿರುವ ಅತ್ಯಾಧುನಿಕ ಪ್ರಾಣಿ ಸಂರಕ್ಷಣೆ ಮತ್ತು ಪುನರ್ವಸತಿ ಸಂಸ್ಥೆಯಾದ 'ವಂತಾರಾ'ವನ್ನು ಮಂಗಳವಾರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಸಿಂಹದೊಂದಿಗೆ ಫೋಟೊಗೆ ಪೋಸ್ ನೀಡಿದ್ದು ಹೀಗೆ...

ಸಭಾಧ್ಯಕ್ಷರೇ ನಮ್ ಮುಖ ತೋರಿಸಿ!

ವಿಧಾನಸಭೆ ಲೈವ್‌ನಲ್ಲಿ ಪ್ರತಿಪಕ್ಷದವರನ್ನು ತೋರಿಸುತ್ತಿಲ್ಲ: ಬಿಜೆಪಿ ಆರೋಪ
ತಾಂತ್ರಿಕ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಸ್ಪೀಕರ್ ಯು.ಟಿ.ಖಾದರ್

ವಿಧಾನಸಭೆ: 'ಸಚಿವರು ಮಾತಾಡಿದರೆ ಕಾಣಿಸುತ್ತೆ... ಸಭಾಧ್ಯಕ್ಷರು ಮಾತಾಡಿದರೆ ಕಾಣಿಸುತ್ತೆ.. ಕಾಂಗ್ರೆಸ್ ಶಾಸಕರು ಮಾತಾಡಿದರೂ ಕಾಣಿಸುತ್ತೆ..' ಆದರೆ ನಾವು ಮಾತನಾಡಿದರೆ ಮಾತ್ರ ಏಕೆ ಕಾಣಿಸಲ್ಲ? ನಮ್ ಮುಖಗಳನ್ನು ತೋರ್ಸಿ ಸಭಾಧ್ಯಕ್ಷರೇ...

ಇದು ಬಿಜೆಪಿ ಶಾಸಕರ ಒಕ್ಕೊರಲ ಆಗ್ರಹ. ಈ ಆಗ್ರಹ ವಾಕ್ಸಮರ, ಗಲಾಟೆಯಿಂದಾಗಿ ಸದನವನ್ನು ಮುಂದೂಡಬೇಕಾದ ಪ್ರಸಂಗಕ್ಕೆ ಸಾಕ್ಷಿಯಾಯಿತು.

ಹೌದು, ಕೆಪಿಸಿಸಿ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ನಿಲುವಳಿ ಸೂಚನೆ ಮಂಡಿಸುವಾಗ, ಮಧ್ಯಪ್ರವೇಶಿಸಿದ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಪ್ರತಿಪಕ್ಷ ನಾಯಕರು ಮಾತಾಡುವಾಗ ಕ್ಯಾಮೆರಾಗಳು ನಮ್ಮ ಕಡೆ ತಿರುಗುತ್ತಿಲ್ಲ. ಬಿಜೆಪಿ ಶಾಸಕರು ಲೈವ್‌ನಲ್ಲಿ ಮಾತನಾಡುವುದನ್ನೂ ತೋರಿಸುತ್ತಿಲ್ಲವೆಂದು ಆರೋಪಿಸಿದರು.

ಸಂಸತ್‌ನಲ್ಲಿ ಏನಾಗುತ್ತಿದೆ?

ಬಿಜೆಪಿಯವರು ಪ್ರತಿಪಕ್ಷ ನಾಯಕರ ಮಾತುಗಳನ್ನು, ಪ್ರತಿಭಟನೆಯನ್ನು ಸರಿಯಾಗಿ ತೋರಿಸುತ್ತಿಲ್ಲ ಎನ್ನುವ ಬಿಜೆಪಿಗರ ಆರೋಪಕ್ಕೆ ಸಚಿವ ಪ್ರಿಯಾಂಕ್ ಖರ್ಗೆ, 'ಇಲ್ಲಿನ ಬಗ್ಗೆ ಆರೋಪ ಮಾಡುವ ಬಿಜೆಪಿ ಗರು, ಸಂಸತ್‌ನಲ್ಲಿ ಏನು ನಡೆಯುತ್ತಿದೆ ಹೇಳಿ. ನೀವು ಮಾತನಾಡುತ್ತಿರುವುದು ದಾಖಲೆಗೆ ಹೋಗು ತ್ತಿದೆ. ಮಾಧ್ಯಮದವರೂ ಇದ್ದಾರೆ. ಇನ್ನೇನು ಬೇಕು. ಸದನದಲ್ಲಿ ಜವಾಬ್ದಾರಿಯಿಂದ ಮಾತನಾಡಿ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಬಿಜೆಪಿಯ ಹಲವು ಶಾಸಕರು ಆಕ್ಷೇಪ ವ್ಯಕ್ತಪಡಿಸಿದರು.

ಸದನದ ಕಾರ್ಯಕಲಾಪಗಳ ನೇರಪ್ರಸಾರವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮಾಡುತ್ತಿದೆ. ತಾಂತ್ರಿಕ ಸಮಸ್ಯೆ ಸರಿಪಡಿಸಲು ಹೇಳಿ 10 ನಿಮಿಷ ಕಳೆಯಿತು. ಆದರೂ ಆಗಿಲ್ಲ. ಆದ್ದರಿಂದ ಸದನವನ್ನು 10 ನಿಮಿಷ ಮುಂದೂಡೋಣ, ತಾಂತ್ರಿಕ ಸಮಸ್ಯೆ ಏನಾಗಿದೆ ಎಂಬುದನ್ನು ತಂತ್ರಜ್ಞರೊಂದಿಗೆ ಚರ್ಚಿಸಿ ಸರಿಪಡಿಸೋಣ.

- ಯು.ಟಿ.ಖಾದರ್ ಸಭಾಧ್ಯಕ್ಷ

ಮಹಿಳೆಯರಲ್ಲಿ ಹೆಚ್ಚಿದ ಬೊಜ್ಜಿನ ಸಮಸ್ಯೆ । ಪ್ರಧಾನಿ ಆತಂಕಕ್ಕೆ ಪುಷ್ಟಿ ನೀಡಿದ ಲಾನ್ಸೆಟ್ ನಿಯತಕಾಲಿಕ ವರದಿ

2050ರ ವೇಳೆಗೆ ಭಾರತ ಧಡೂತಿಗಳ ದೇಶ

- ಭಾರತವು ಇಡೀ ಜಗತ್ತಿನಲ್ಲೇ ಅತಿ ಹೆಚ್ಚು ಸ್ಥೂಲಕಾಯ ವ್ಯಕ್ತಿಗಳನ್ನು ಹೊಂದಿದ 2ನೇ ರಾಷ್ಟ್ರವಾಗಲಿದೆ
- ಚೀನಾ ಅಗ್ರಸ್ಥಾನದಲ್ಲಿದ್ದರೆ, ಅಮೆರಿಕ, ಬ್ರೆಜಿಲ್, ನೈಜೀರಿಯಾ ಕ್ರಮವಾಗಿ 3, 4, 5ನೇ ಸ್ಥಾನದಲ್ಲಿರಲಿವೆ
- ದೇಶದಲ್ಲೀಗ 18 ಕೋಟಿ ಜನಕ್ಕೆ ಸ್ಥೂಲಕಾಯ, ಇವರಲ್ಲಿ 8.1 ಕೋಟಿ ಪುರುಷರು, 9.8 ಕೋಟಿ ಸ್ತ್ರೀಯರು
- ಚೀನಾ, ಭಾರತ ಮತ್ತು ಅಮೆರಿಕದಲ್ಲಿ ಅಧಿಕ ತೂಕದ ವ್ಯಕ್ತಿಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಲಿದೆ

ದೆಹಲಿ: ಭಾರತದಲ್ಲಿ 2050ರ ಹೊತ್ತಿಗೆ 44 ಕೋಟಿ ಭಾರತೀಯರು ಸ್ಥೂಲಕಾಯ ಸಮಸ್ಯೆಯಿಂದ ಬಳಲಲಿದ್ದಾರೆ ಎಂದು ಲ್ಯಾನ್ಸೆಟ್ ಜರ್ನಲ್ ನಡೆಸಿದ ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

ಹೀಗೆ ದೇಹದ ತೂಕ ಹೆಚ್ಚಿಸಿಕೊಳ್ಳುವವರಲ್ಲಿ ಪುರುಷರ ಸಂಖ್ಯೆ 21.8 ಕೋಟಿ ಹಾಗೂ ಮಹಿಳೆಯರ ಸಂಖ್ಯೆ 23.1 ಕೋಟಿಯಷ್ಟಿರಲಿದೆ. ಆ ಮೂಲಕ ಭಾರತವು ಇಡೀ ಜಗತ್ತಿನಲ್ಲೇ ಅತಿ ಹೆಚ್ಚು ಸ್ಥೂಲಕಾಯ ವ್ಯಕ್ತಿಗಳನ್ನು ಹೊಂದಿದ 2ನೇ ರಾಷ್ಟ್ರವಾಗಲಿದೆ. ಚೀನಾ ಅಗ್ರಸ್ಥಾನದಲ್ಲಿದ್ದರೆ, ಅಮೆರಿಕ, ಬ್ರೆಜಿಲ್ ಮತ್ತು ನೈಜೀರಿಯಾ ಕ್ರಮವಾಗಿ 3, 4 ಹಾಗೂ 5ನೇ ಸ್ಥಾನದಲ್ಲಿರಲಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಗ್ಲೋಬಲ್ ಬರ್ಡನ್ ಆಫ್ ಡಿಸೀಸ್ ಎಂಬ 2021ರಿಂದ ಆರಂಭವಾಗಿರುವ ಈ ಅಧ್ಯಯನದಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಸಂಶೋಧಕರೂ ಭಾಗಿಯಾಗಿದ್ದರು.

ಜಗತ್ತಿನ 25ರ ವಯೋಮಾನದ ಅರ್ಧ ಶತಕೋಟಿ ಪುರುಷ ಹಾಗೂ ಮಹಿಳೆಯರು ಈಗಾಗಲೇ ದೇಹದ ತೂಕ ಹೆಚ್ಚಿಸಿಕೊಂಡವರೇ ಆಗಿದ್ದಾರೆ. ಭಾರತದಲ್ಲಿ ಸದ್ಯ 18 ಕೋಟಿಯಷ್ಟು ಸ್ಥೂಲಕಾಯ ದೇಹ ಹೊಂದಿದವರು ಇದ್ದಾರೆ. ಇವರಲ್ಲಿ 8.1 ಕೋಟಿ ಪುರುಷರು ಹಾಗೂ 9.8 ಕೋಟಿ ಮಹಿಳೆಯರು ಸೇರಿದ್ದಾರೆ.

→ 4

ಮಕ್ಕಳಲ್ಲೂ ಕಾಡಲಿದೆ ಸಮಸ್ಯೆ

ಇದೇ ಅಧ್ಯಯನ ಸಂಸ್ಥೆಯು ಮಕ್ಕಳ ಕುರಿತು ಅಧ್ಯಯನ ನಡೆಸಿದ್ದು, ಭಾರತದಲ್ಲಿ 5ರಿಂದ 14ರ ವಯೋಮಾನದ 1.6 ಕೋಟಿ ಬಾಲಕರು ಹಾಗೂ 1.4 ಕೋಟಿ ಬಾಲಕಿಯರ ದೇಹದ ತೂಕ 2050ರ ಹೊತ್ತಿಗೆ ಅಗತ್ಯಕ್ಕಿಂತ ಹೆಚ್ಚಾಗಿರಲಿದೆ. ಈ ವಿಭಾಗದಲ್ಲೂ ಚೀನಾ ಮುಂಚೂಣಿಯಲ್ಲಿರಲಿದೆ. ಆದರೆ 15ರಿಂದ 24ರ ವಯೋಮಾನದವರಲ್ಲಿ ಭಾರತವೇ ಮುಂದಿರಲಿದ್ದು, ವಿಶ್ವದ ಹೊರೆ ಇಲ್ಲಿಂದಲೇ ಹೆಚ್ಚಲಿದೆ. ಈ ವಯೋಮಾನದವರಲ್ಲಿ 2.2 ಕೋಟಿ ಯುವಕ ಹಾಗೂ 1.7 ಕೋಟಿ ಯುವತಿಯರು ಅಧಿಕ ದೇಹ ತೂಕ ಹೊಂದಿದವರು ಇರಲಿದ್ದಾರೆ ಎಂದು ತಿಳಿಸಿದೆ.

ಹೋರಾಡಲು ಮೋದಿ ಕರೆ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಮನ್ ಕಿ ಬಾತ್ ರೇಡಿಯೊ ಕಾರ್ಯಕ್ರಮದಲ್ಲಿ ಫೆ. 23ರಂದು ಮಾತನಾಡಿ, ಸ್ಥೂಲಕಾಯದ ವಿರುದ್ಧ ಹೋರಾಡುವಂತೆ ಕರೆ ನೀಡಿದ್ದರು. ಸದೃಢ ಹಾಗೂ ಆರೋಗ್ಯವಂತ ದೇಶವನ್ನು ಕಟ್ಟಲು ಸ್ಥೂಲಕಾಯ ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸಬೇಕು ಎಂದಿದ್ದರು.

ಸಮಾಚಾರ ಸಣ್ಣದಲ್ಲ

ಕಿತ್ತೂರು ಸೈನಿಕ ಶಾಲೆಗೆ ಆಯ್ಕೆ

ವಿಜಯಪುರ: ಕಿತ್ತೂರು ಸೈನಿಕ ಶಾಲೆಯ 2025-26 ನೆಯ ಶೈಕ್ಷಣಿಕ ವರ್ಷದ ಪ್ರವೇಶ ಪೂರ್ವ ಪರೀಕ್ಷೆಗಾಗಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಗರದ ಕನಕದಾಸ ಬಡಾವಣೆಯ ಸಿದ್ದೇಶ್ವರ ಕೋಚಿಂಗ್ ಕ್ಲಾಸಿಸ್‌ನ ಕು.ಆರಾಧ್ಯ ವಡವಡಗಿ ಆಯ್ಕೆಯಾಗಿದ್ದು, ಪರೀಕ್ಷೆಗೆ ಕುಳಿತ ಒಟ್ಟು 4 ಮಕ್ಕಳಲ್ಲಿ ಒಬ್ಬ ವಿದ್ಯಾರ್ಥಿನಿ ಆಯ್ಕೆ ಸಂತಸ ತಂದಿದೆ ಎಂದು ಸಂಸ್ಥೆಯ ಅಧ್ಯಕ್ಷ ಸುರೇಶ ಜತ್ತಿ ತಿಳಿಸಿದ್ದಾರೆ. ವಿದ್ಯಾರ್ಥಿನಿಯ ಸಾಧನೆಗೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನೀಲಾ ಜತ್ತಿ, ಆಡಳಿತಾಧಿಕಾರಿ ಮಧು ಬಿರಾದಾರ, ಮುಖ್ಯ ಶಿಕ್ಷಕಿ ಸುಚಿತ್ರ ಹೊಸಮನಿ, ಸೌಮ್ಯ ಗಲಗಲಿ, ವೃಂದಾ ಕುಲಕರ್ಣಿ, ಲಕ್ಷ್ಮಿ ಘಂಟಿ, ರಾಜೇಶ್ವರಿ ಮುಳಜಿ, ರೂಪಾ ಹಲಗಣಿ, ಅನಿತಾ ರಾಠೋಡ ಸೇರಿದಂತೆ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿದ್ದಾರೆ.

ಪಿಯುಸಿ ಪರೀಕ್ಷೆ: 998 ವಿದ್ಯಾರ್ಥಿಗಳು ಗೈರು

ವಿಜಯಪುರ: ಜಿಲ್ಲೆಯಲ್ಲಿ ಮಂಗಳವಾರ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1ರ ತಮಿಳು, ತೆಲಗು, ಮಲಯಾಳಂ, ಮರಾಠಿ ಹಾಗೂ ಫ್ರೆಂಚ್ ಭಾಷಾ ಪರೀಕ್ಷೆಗೆ ನೊಂದಾಯಿಸಿಕೊಂಡ 1298 ವಿದ್ಯಾರ್ಥಿಗಳ ಪೈಕಿ 1215 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ, 83 ಅಭ್ಯರ್ಥಿಗಳು ಪರೀಕ್ಷೆಗೆ ಗೈರ ಹಾಜರಾಗಿದ್ದರು. ಮಂಗಳವಾರ ನಡೆದ ಪರೀಕ್ಷೆಯಲ್ಲಿ ಯಾವುದೇ ಡಿಬಾರ್ ಆಗಿರುವುದಿಲ್ಲ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಪೂರೈಕೆ ವ್ಯತ್ಯಯ ನಾಳೆ

ವಿಜಯಪುರ: ಕೆರೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಈ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜಾಗುವ ಎಲ್ಲಾ 11 ಕೆ.ವ್ಹಿ ವಿದ್ಯುತ್ ಮಾರ್ಗಗಳಲ್ಲಿ ಮಾರ್ಚ್ 6ರ ಮಧ್ಯಾಹ್ನ 2 ಗಂಟೆಯಿಂದ ಸಂಜೆ 6ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಆದ್ದರಿಂದ, ಗ್ರಾಹಕರು ಸಹಕರಿಸುವಂತೆ ಇಂಡಿ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಕರವೇಯಿಂದ ರವಿ ಗೊಳಸಂಗಿ ವಜಾ

ಕೊಲ್ಹಾರ: ಕರ್ನಾಟಕ ರಕ್ಷಣಾ ವೇದಿಕೆ ಕೊಲ್ಹಾರ ತಾಲೂಕ ಉಸ್ತುವಾರಿ ರವಿ ಗೊಳಸಂಗಿ ಅವರನ್ನು ತಕ್ಷಣದಿಂದ ಉಸ್ತುವಾರಿ ಹುದ್ದೆಯಿಂದ ತೆಗೆದು ಹಾಕಲಾಗಿದೆ ಎಂದು ಕರವೇ ತಾಲೂಕ ಅಧ್ಯಕ್ಷ ವಿಜಯಮಹಾಂತೇಶ ಗಿಡ್ಡಪ್ಪಗೋಳ ಆದೇಶ ಹೊರಡಿಸಿದ್ದಾರೆ. ಕರವೇ ರಾಜ್ಯಾಧ್ಯಕ್ಷರಾದ ಟಿ.ಎ ನಾರಾಯಣಗೌಡರ ಆದೇಶದ ಮೇರೆಗೆ ರಾಜ್ಯ ಉಪಾಧ್ಯಕ್ಷರಾದ ಎಂ.ಸಿ ಮುಲ್ಲಾ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ಅಶೋಕ ಹಾರಿವಳ ಅವರ ಸೂಚನೆಯ ಈ ಕ್ರಮ ಕೈಗೊಂಡಿದ್ದು ಇನ್ನು ಮುಂದೆ ರವಿ ಗೊಳಸಂಗಿ ಅವರಿಗೂ ಕರವೇ ಸಂಘಟನೆಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

ಭೂಮಿತೂಕದ ಹೆಣ್ಣು ಕವನ ಸಂಕಲ ಬಿಡುಗಡೆ

ರಾಯಬಾಗ: ಪಟ್ಟಣದ ಸರಕಾರಿ ನೀರಿಕ್ಷಣಾ ಮಂದಿರದಲ್ಲಿ ಶನಿವಾರ ದಿ.8 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ಯ ಡಾ.ಬಾಬುರಾವ ನಿಡೋಣಿ ರಾಷ್ಟ್ರೀಯ ಪ್ರತಿಷ್ಠಾನ ಮಕ್ಕಳ ಸಾಹಿತ್ಯ ಪರಿಷತ್ತು ಹಾಗೂ ಚುಟುಕು ಸಾಹಿತ್ಯ ಪರಿಷತ್ತು ತಾಲೂಕಾ ಘಟಕ ಇವುಗಳ ಸಹಯೋಗದಲ್ಲಿ ಕನ್ನಡ ಪ್ರಾಧ್ಯಾಪಕರು, ಸಾಹಿತಿ ಡಾ.ಜಯವೀರ ಎ.ಕೆ. ಹಾಗೂ ಉದಯೋನ್ಮುಖ ಚುಟುಕು ಕವಿ, ವಾಣಿಜ್ಯ ವಿಷಯದ ಪ್ರಾಧ್ಯಾಪಕರಾದ ಪ್ರೋ.ಎಲ್.ಎಸ್. ವಂಟಮೂರೆಯವರು ಸಂಪಾದಿಸಿದ ''ಭೂಮಿತೂಕದ ಹೆಣ್ಣು'' ಚೊಚ್ಚಿಲ ಕವನ ಸಂಕಲನದ ಲೋಕಾರ್ಪಣೆಕಾರ್ಯಕ್ರಮ ನಡೆಯಲಿದೆ. ಪಟ್ಟಣದ ಹಿರಿಯ ಕವಿ ಪ್ರೋ.ಶಿವಾನಂದ ಬೆಳಕೂಡ ಅಧ್ಯಕ್ಷತೆ ವಹಿಸಲಿರುವರು. ತಾಲೂಕಾ 8 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆ ವಿಶ್ರಾಂತ ಪ್ರಾಧ್ಯಾಪಕಿ ಕವಿಯತ್ರಿ ಡಾ.ರತ್ನಾ ಬಾಳಪ್ಪನವರ ಕೃತಿ ಲೋಕಾರ್ಪಣೆ ಮಾಡುವರು. ಹಿರಿಯ ನ್ಯಾಯವಾದಿ ಚಿಂತಕ ಡಿ.ಎಚ್.ಯಲ್ಲಟ್ಟಿ ಕೃತಿ ಪರಿಚಯ ಮಾಡಲಿದ್ದಾರೆ. ಕವನ ಸಂಕಲನದ ಸಂಪಾದಕರಾದ ಡಾ.ಜಯವೀರ ಎ.ಕೆ., ಪ್ರೋ. ಎಲ್.ಎಸ್. ವಂಟಮೂರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಪ್ರದೀಪ್ ಈಶ್ವರ್} ಶಾಸಕ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಅವರೇ ಐದು ವರ್ಷಗಳ ಅವಧಿಗೆ ಚಿಕ್ಕಬಳ್ಳಾಪುರದ ಜಿಲ್ಲಾ ಉಸ್ತುವಾರಿ ಸಚಿವರಾಗಿ ಮುಂದುವರೆಯಲಿದ್ದಾರೆ.ನಾನು ಶಾಸಕನಾಗಿದ್ದೇ ಹೆಚ್ಚು. ನನಗೆ ಸಚಿವನಾಗುವ ಆಸೆ ಇಲ್ಲ. ಬಲಿಜ ಸಮುದಾಯಕ್ಕೆ ನೀಡುವುದಾದರೆ ಹಿರಿಯರಿಗೆ ನೀಡಲಿ.

ತೆಲಂಗಾಣಕ್ಕೆ ನೀರು: ಆಕ್ರೋಶ

ನದಿಗೆ ಇಳಿದು ರೈತರ ಪ್ರತಿಭಟನೆ | ಸಿಎಂ, ನೀರಾವರಿ ಸಚಿವರ ಅಣುಕು ಯಾತ್ರೆ

ವಿಜಯಪುರ(ಆಲಮಟ್ಟಿ): ಜಿಲ್ಲೆಯ ಆಲಮಟ್ಟಿ ಲಾಲ್ ಬಹದ್ದೂರ್ ಶಾಸ್ತ್ರೀ ಜಲಾಶಯದಿಂದ ತೆಲಂಗಾಣ ರಾಜ್ಯದ ರಂಗಾರೆಡ್ಡಿ ಜಿಲ್ಲೆಯ ಜುರಾಲಾ ಆಣೆಕಟ್ಟಿಗೆ ರಾಜ್ಯ ಸರಕಾರ ನೀರು ಹರಿಸಿರುವುದನ್ನು ಖಂಡಿಸಿ ರೈತರು ಆಲಮಟ್ಟಿಯ ಕೃಷ್ಣಾ ನದಿ ತೀರದ ಹಿನ್ನೀರಿನಲ್ಲಿ ಸಿಎಂ, ಜಲಸಂಪನ್ಮೂಲ ಸಚಿವರ ಅಣುಕು ಶ್ರದ್ಧಾಂಜಲಿ ಸಲ್ಲಿಸಿ ನದಿಯಲ್ಲಿಯೆ ಪ್ರತಿಭಟನೆ ಮಾಡಿ ರಾಜ್ಯ ಸರಕಾರದ ವಿರುದ್ಧ ಘೋಷಣೆ ಕೂಗಿ ತೀವ್ರ ಆಕ್ರೋಶ ಹೊರಹಾಕಿದರು.

ಈ ಸಂದರ್ಭದಲ್ಲಿ ರೈತ ಮುಖಂಡ ಅರವಿಂದ ಕುಲಕರ್ಣಿ ಮಾತನಾಡಿ, ಅವಳಿ ಜಿಲ್ಲೆಯ ರೈತರ ಮೇಲೆ ಕಾಳಜಿ ಇಲ್ಲದ ರಾಜ್ಯ ಸರಕಾರ ತೆಲಂಗಾಣ ರಾಜ್ಯಕ್ಕೆ ನಿರಂತರವಾಗಿ ನೀರು ಹರಿಸಿ ಆಲಮಟ್ಟಿ ಜಲಾಶಯದ ನೀರನ್ನು ಸಂಪೂರ್ಣ ಖಾಲಿ ಮಾಡಲು ಹೊರಟಿದೆ. ತೆಲಂಗಾಣಕ್ಕೆ ಕೇವಲ 1.27 ಟಿ.ಎಮ್.ಸಿ ಮಾತ್ರ ನೀರು ಹರಿ ಬಿಟ್ಟಿದ್ದೇವೆಂದು ಸುಳ್ಳು ಹೇಳಿ ಮಾ.17 ರಿಂದ ಇಲ್ಲಿಯವರೆಗೂ 10 ಟಿ.ಎಮ್.ಸಿ ಗೂ ಮೇಲ್ಪಟ್ಟು ನೀರು ಹರಿಸಲಾಗಿದೆ ಎಂದು ಆರೋಪಿಸಿದರು.

ರಾಜ್ಯ ಸರಕಾರ ರೈತ ವಿರೋಧಿ ನೀತಿ ಅನುಸರಿಸಿ ಅವಳಿ ಜಿಲ್ಲೆಯ ರೈತರಿಗೆ ಘೋರ ಅನ್ಯಾಯ ಮಾಡಿದೆ ಎಂದು ರಾಜ್ಯ ಸರಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅಖಂಡ ಕರ್ನಾಟಕ ರೈತ ಸಂಘದ ಮುಖಂಡ ವಿಠ್ಠಲ ಬಿರಾದಾರ, ತಾಲೂಕಾ ಉಪಾಧ್ಯಕ್ಷ ಹೊನಕೇರೆಪ್ಪ ತೆಲಗಿ, ಈರಪ್ಪ ಹಂಚನಾಳ, ಸೋಮು ಬಿರಾದಾರ, ತಾಳಿಕೋಟಿ ತಾಲೂಕಾಧ್ಯಕ್ಷ ಬಾಲಪ್ಪಗೌಡ ಲಿಂಗದಳ್ಳಿ, ರಾಮನಗೌಡ ಹಾದಿಮನಿ, ಮಲ್ಲಪ್ಪ ಪಡಸಲಗಿ, ಗಿರಿಮಲ್ಲಪ್ಪ ದೋಡಮನಿ, ಪುತ್ರಪ್ಪ ಬೂದಗೋಳಿ, ದಾವಲಸಾಬ ನದಾಫ್, ಹಣಮಂತ್ರಾಯ ಹಂದ್ರಾಳ, ರಾಜೇಸಾಬ ವಾಲಿಕಾರ, ಈರಣ್ಣ ದೇವರಗುಡಿ, ಮೋತಿಲಾಲ್ ಲಮಾಣಿ, ಶೆಟ್ಟೆಪ್ಪ ಲಮಾಣಿ, ಸಿದ್ದನಗೌಡ ಕುಂಟೋಜಿ, ಬಸನಗೌಡ ಪಾಟೀಲ, ಚಂದ್ರಶೇಖರ ಪಾಟೀಲ, ಹಣಮಂತ್ರಾಯ ಗುಣಕಿ ಇದ್ದರು.

ರೈತರು ನದಿಗೆ ಇಳಿದು ಸಿಎಂ, ಜಲಸಂಪನ್ಮೂಲ ಸಚಿವರ ಅಣುಕು ಯಾತ್ರೆ ಮಾಡಿದರು.

ಹೋರಾಟದ ಎಚ್ಚರಿಕೆ

ಜಿಲ್ಲೆಯ ಜನ ಪ್ರತಿನಿಧಿಗಳು ಕಂಡು ಕಾಣದಂತಿದ್ದಾರೆ. ಈಗಲಾದರೂ ರಾಜ್ಯ ಸರಕಾರ ಎಚ್ಚೆತ್ತುಕೊಂಡು ತೆಲಂಗಾಣಕ್ಕೆ ಹರಿಸುತ್ತಿರುವ ನೀರನ್ನು ತಕ್ಷಣದಿಂದಲೆ ಸ್ಥಗಿತಗೊಳಿಸಬೇಕು. ಇಲ್ಲದಿದ್ದರೆ ಅವಳಿ ಜಿಲ್ಲೆಯ ರೈತರು ಸರಕಾರದ ವಿರುದ್ಧ ಸೀಡಿದೆದ್ದು ಸರಕಾರದ ವಿರುದ್ಧ ಕ್ರಾಂತಿ ಮಾಡಬೇಕಾಗುತ್ತದೆಂದು ರೈತರು ಎಚ್ಚರಿಕೆ ನೀಡಿದರು.

ರಸ್ತೆ ನಿರ್ಮಾಣ ಕಾಮಗಾರಿಗೆ ಮುಖಂಡ ಸಚೀನಗೌಡ ಚಾಲನೆ

ಹೂವಿನಹಿಪ್ಪರಗಿ: ಗ್ರಾಮದ ಮೇಲ್ವರ್ಗದ ಜನರಂತೆ ಪರಿಶಿಷ್ಟ ಜಾತಿಯ ಬಂಧುಗಳು ಸಹಿತ ಸುಂದರ ಬದುಕು ನಡೆಸುವ ನಿಟ್ಟಿನಲ್ಲಿ ಅವರ ಆರೋಗ್ಯವನ್ನು ಗಮನದಲ್ಲಿ ಇರಿಸಿ ಅವರಿಗೆ ಸುಸಜ್ಜಿತ ಸಿಸಿ ರಸ್ತೆ ನಿರ್ಮಾಣಕ್ಕೆ ದೇವರಹಿಪ್ಪರಗಿ ಶಾಸಕ ರಾಜುಗೌಡರ ಸಹೋದರ ಜೆಡಿಎಸ್ ಮುಖಂಡ ಸಚೀನಗೌಡ ಪಾಟೀಲ ಕುದರಿ ಸಾಲವಾಡಗಿ ಚಾಲನೆ ನೀಡಿದರು.

ಬಸವನ ಬಾಗೇವಾಡಿ ತಾಲೂಕಿನ ನರಸಲಗಿ ಹಾಗೂ ಕಣಕಾಲ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯ (ಪ್ರಗತಿ ಕಾಲೋನಿಯಲ್ಲಿ) ತಲಾ ಗ್ರಾಮಕ್ಕೆ ಲಕ್ಷ ರೂಪಾಯಿ ಅನುದಾನಲ್ಲಿ ಸಿಸಿ ರಸ್ತೆ ನಿರ್ಮಾರ್ಣಕ್ಕೆ ಭೂಮಿ ಪೂಜಾ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ಸಹೋದರ ರಾಜುಗೌಡರು ವಿರೋಧ ಪಕ್ಷದ ಶಾಸಕರು ಇಡೀ ರಾಜ್ಯದ ಜನರಿಗೆ ಗೊತ್ತಿರುವಂತೆ ಆಡಳಿತ ಪಕ್ಷದ ಶಾಸಕರಿಗೆ ತಕ್ಕ ಮಟ್ಟಿಗೆ ಅನುದಾನ ದೊರೆಯುತ್ತಿಲ್ಲ. ಇಂತ ಸ್ಥಿತಿಯಲ್ಲಿ ಶಾಸಕ ರಾಜುಗೌಡರು ಎಲ್ಲ ಸಚಿವರೊಂದಿಗೆ ಉತ್ತಮ ಬಾಂದವನ್ನು ಹೊಂದಿ ಅವರಿಂದ ಅನುದಾನವನ್ನು ತಂದು ನಮಗೆ ಆರ್ಶೀವಾದ ಮಾಡಿದ ಜನರ ಋಣ ತೀರಿಸುವ ಕಾಯಕ ನಡೆಯುತ್ತಿದೆ, ಮುಂದಿನ ದಿನದಲ್ಲಿ ಇನ್ನೂ ಬೇಕಾದಷ್ಟು ಕಾಮಗಾರಿಯನ್ನು ಮಾಡುವ ಉದ್ದೇಶ ಹಾಗೂ ಗುರಿಯನ್ನು ಹೊಂದಲಾಗಿದೆ ಎಂದು ಹೇಳಿದರು.

ಮುಖಂಡರಾದ ಮಾಹಾಂತೇಶ ಚಕ್ರವರ್ತಿ, ರಾಜಶೇಖರ ಹುಲ್ಲಳ್ಳಿ, ಸಿದ್ದಣ್ಣ ಗೋನಾಳ, ನಿಲರಾಜ ಹಾಲಿಹಾಳ, ಡಾ. ಬಸವರಾಜ ಸಗರನಾಳ, ಗ್ರಾಮ ಪಂ ಅಧ್ಯಕ್ಷ ಅವ್ವಣ್ಣ ಬಿರಾದಾರ ಇತರರಿದ್ದರು.

ರಸ್ತೆ ಕಾಮಗಾರಿಗೆ ಸಚೀನಗೌಡ ಪಾಟೀಲ ಕುದರಿ ಸಾಲವಾಡಗಿ ಚಾಲನೆ ನೀಡಿದರು.

ಮದ್ಯ ಮಾರಾಟ ತಡೆಗೆ ಮನವಿ

ಮುದ್ದೇಬಿಹಾಳ: ತಾಲೂಕಿನ ಬಂಗಾರಗುಂಡ ಗ್ರಾಮದಲ್ಲಿರುವ ಮಾರುತೇಶ್ವರ ದೇವಸ್ಥಾನ ಹತ್ತಿರ ಹೊಟೇಲೊಂದರಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಮದ್ಯ ಮಾರಾಟ ತಡೆಗಟ್ಟುವಂತೆ ಕೋರಿ ದೇವಸ್ಥಾನಕ್ಕೆ ಭೂಮಿ ಬಿಟ್ಟುಕೊಟ್ಟಿರುವ ರೈತರಾದ ರಾಜೇಂದ್ರಪ್ಪ ಗುಡಗುಂಟಿ, ಶಾಂತಪ್ಪ ಗುಡಗುಂಟಿ ಅವರು ಸೋಮವಾರ ತಹಸೀಲ್ದಾರ್, ಅಬಕಾರಿ ಕಚೇರಿಗಳಿಗೆ ಆಗಮಿಸಿ ಪ್ರತ್ಯೇಕ ಮನವಿ ಸಲ್ಲಿಸಿದರು.

ಬಂಗಾರಗುಂಡದ ನಾಲತವಾಡ-ತಂಗಡಗಿ ಮುಖ್ಯ ರಸ್ತೆಗೆ ಹೊಂದಿಕೊಂಡು ಶೇಖರ ಧರ್ಮಣ್ಣ ಅಂಗಡಿ (ಈಳಗೇರ) ಎಂಬಾತ ಹೊಟೇಲು, ಅಂಗಡಿ ನಡೆಸುತ್ತಿದ್ದಾನೆ. ಅದರಲ್ಲಿ ಅನಧಿಕೃವಾಗಿ ಸಾರಾಯಿ, ಮದ್ಯ ಮಾರಾಟ ಮಾಡುತ್ತಾನೆ. ದೇವಸ್ಥಾನ ಹತ್ತಿರ ಮದ್ಯ ಮಾರುವುದು ಬೇಡ. ಮಹಿಳೆಯರು, ಸಾರ್ವಜನಿಕರು, ಶಾಲಾ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಸಾಕಷ್ಟು ಸಲ ತಿಳಿಹೇಳಲಾಗಿತ್ತು. ಗ್ರಾಪಂಗೆ ಸಾರ್ವಜನಿಕರೇ ಮನವಿ ಸಲ್ಲಿಸಿದಾಗ ಅವರು ಎರಡು ಬಾರಿ ನೋಟಿಸ್ ಕೊಟ್ಟಿದ್ದಾರೆ. ಆದರೂ ಅಕ್ರಮ ಮಾರಾಟ ನಿಂತಿಲ್ಲ ಎಂದು ದೂರಿದರು.

ದೇವಸ್ಥಾನದ ಅಧ್ಯಕ್ಷ ಈಶ್ವರಪ್ಪ ಪತ್ತಾರಗೆ ನನ್ನ (ರಾಜೇಂದ್ರಪ್ಪ ಗುಡಗುಂಟಿ) ಮಾಲ್ಕಿ ಕಬ್ಜಾ ವಹಿವಾಟಿಯಲ್ಲಿರುವ ರಿಸ ನಂಬರ್ 94/1ರಲ್ಲಿನ 12 ಗುಂಟೆ ಜಾಗವನ್ನು ದಾನವಾಗಿ ಕೊಟ್ಟಿದ್ದೇನೆ. ಸಾರಾಯಿ, ಮದ್ಯ ಮಾರಾಟ ನಡೆಸಿ ದೇವಸ್ಥಾನ ಜಾಗ ಅಪವಿತ್ರಗೊಳಿಸದಂತೆ ನಾನು ತಿಳಿಹೇಳಲು ಹೋದರೆ ಇದು ನಿನ್ನ ಜಾಗ ಅಲ್ಲ. ಮಾರುತೇಶ್ವರನ ಜಾಗ ಎಂದು ಬಾಯಿಗೆ ಬಂದಂತೆ ಬೈದು ಬೆದರಿಕೆ ಹಾಕುತ್ತಾರೆ. ದೇವಸ್ಥಾನದ ಪಾವಿತ್ರ್ಯತೆ ಹಾಳಾಗಲು ಕಾರಣವಾಗಿರುವ ಹೊಟೇಲ್‌ನಲ್ಲಿ ಅಕ್ರಮವಾಗಿ ಮದ್ಯ ಮಾರುವುದನ್ನು ಕೂಡಲೇ ತಡೆಗಟ್ಟಿ ಭಕ್ತರಿಗೆ, ಮಹಿಳೆಯರಿಗೆ, ಸಾರ್ವಜನಿಕರಿಗೆ ನೆಮ್ಮದಿಯ ವಾತಾವರಣ ಮೂಡಿಸಬೇಕು. ಇಲ್ಲವಾದಲ್ಲಿ ಬಂಗಾರಗುಂಡ, ಕಪನೂರ ಗ್ರಾಮಗಳ ಮಹಿಳಾ ಸಂಘಟನೆಗಳು, ದಲಿತಪರ ಸಂಘಟನೆಗಳು, ಸಾರ್ವಜನಿಕರು ತಹಸೀಲ್ದಾರ್ ಕಚೇರಿ ಎದುರು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಲಾಗಿದೆ. ಮನವಿಯ ಪ್ರತಿಗಳನ್ನು ಜಿಲ್ಲಾಧಿಕಾರಿ, ಪಿಎಸೈ, ತಾಪಂ ಇಒ, ಗ್ರಾಪಂ ಪಿಡಿಒ ಅವರಿಗೂ ಸಲ್ಲಿಸಲಾಗಿದೆ.

ದೈಹಿಕ, ಮಾನಸಿಕ ಸದೃಢತೆಗೆ ಕ್ರೀಡೆ ಸಹಕಾರಿ

ವಿಜಯಪುರ: ಕ್ರೀಡೆಗಳಲ್ಲಿ ಪಾಲ್ಗೋಳ್ಳುವುದರಿಂದ ರೋಗಗಳನ್ನು ನಿಯಂತ್ರಿಸಿ ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗಲು ಸಾಧ್ಯ ಎಂದು ಎಂಎಲ್ಸಿ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ತಿಕೋಟಾ ತಾಲೂಕಿನ ಕನಮಡಿಯಲ್ಲಿ ಮಹಾಶಿವರಾತ್ರಿ ಅಂಗವಾಗಿ ಶ್ರೀ ಧರಿದೇವರ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಆಯೋಜಿಸಲಾಗಿದ್ದ ಕನಮಡಿ ಕಬಡ್ಡಿ ಉತ್ಸವ- 2025 ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ 14-15 ವರ್ಷದ ಮಕ್ಕಳಲ್ಲಿ ಹೃದಯಾಘಾತ ಉಂಟಾಗುತ್ತಿವೆ. ಇದು ಅಘಾತಕಾರಿಯಾಗಿದೆ. ನಾವು ಚಿಕ್ಕವರಿದ್ದಾಗ ದಿನವಿಡೀ ಮನೆಯ ಹೊರಗಡೆ ಆಟವಾಡುತ್ತಿದ್ದೆವು. ಆಗ ನಮ್ಮ ತಂದೆ-ತಾಯಿ ಊಟಕ್ಕೆ ಕರೆಯಲು ನಮ್ಮನ್ನು ಹುಡುಕಿಕೊಂಡು ಬರುತ್ತಿದ್ದರು. ಆದರೆ, ಈಗ ಮೊಬೈಲ್ ಗೀಳು ಅಂಟಿಸಿಕೊಂಡಿರುವ ಮಕ್ಕಳನ್ನು ಪೋಷಕರು ಮೊಬೈಲನ್ನು ಮನೆಯಲ್ಲಿಟ್ಟು ಹೊರಗಡೆ ಆಟವಾಡಲು ಹೋಗಿ ಎಂದು ತಮ್ಮ ಮಕ್ಕಳಿಗೆ ಬುದ್ಧಿವಾದ ಹೇಳುವ ಕಾಲ ಬಂದಿದೆ. ಮೊಬೈಲ್ ಗೀಳಿನಿಂದ ಮಕ್ಕಳನ್ನು ಹೊರ ತರುವುದು ಅಗತ್ಯವಾಗಿದೆ ಎಂದು ಅವರು ಹೇಳಿದರು.

ಯೌವ್ವನದಲ್ಲಿ ನಾವು ಹಣ ಗಳಿಕೆಗಾಗಿ ಊಟ, ನಿದ್ದೆ ಬಿಟ್ಟು ಉಪವಾಸವಿದ್ದು ದುಡ್ಡು ಗಳಿಸುತ್ತೇವೆ. ನಿವೃತ್ತಿಯ ಹೊತ್ತಿಗೆ ಬಿಪಿ ಮತ್ತು ಶುಗರ್ ಕಾಯಿಲೆ ನಿಯಂತ್ರಣ ಮತ್ತು ಚಿಕಿತ್ಸೆಗಾಗಿ ವೈದ್ಯರ ಬಳಿಗೆ ತೆರಳುತ್ತೇವೆ. ಯೌವ್ವನದಲ್ಲಿ ಗಳಿಸಿದ ಸಂಪತ್ತನ್ನು ನಿವೃತ್ತಿಯ ಬಳಿಕ ಔಷದಿಗಾಗಿ ಖರ್ಚು ಮಾಡುತ್ತೇವೆ. ಇದಕ್ಕೆ ಪರ್ಯಾಯವಾಗಿ ಬಾಲ್ಯದಿಂದಲೇ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ಸದೃಡ ಆರೋಗ್ಯದತ್ತ ಗಮನಹರಿಸಬೇಕು ಎಂದು ಅವರು ಹೇಳಿದರು.

ವಿದೇಶಗಳು ತಮ್ಮ ರಾಷ್ಟ್ರೀಯ ಕ್ರೀಡೆಗಳನ್ನು ಪ್ರೋತ್ಸಾಹಿಸುತ್ತಿವೆ. ಅದೇ ರೀತಿ ನಾವೂ ಕೂಡ ಭಾರತೀಯ ಗ್ರಾಮೀಣ ಕ್ರೀಡೆಗಳಾದ ಕಬಡ್ಡಿ, ಕುಸ್ತಿ, ಹಾಕಿ, ಖೋಖೋ, ವ್ಹಾಲಿಬಾಲ್‌ಗಳನ್ನು ಪ್ರೋತ್ಸಾಹಿಸುವ ಅಗತ್ಯವಿದೆ. ಕನಮಡಿ ಯುವಕರು ಕಬಡ್ಡಿ ಉತ್ಸವ ಆಯೋಜಿಸಿರುವುದು ಶ್ಲಾಘನೀಯವಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಕಕಮರಿಯ ರಾಯಲಿಂಗೇಶ್ವರ ಸಂಸ್ಥಾನ ಮಠದ ಸದ್ಗುರು ಅಭಿನವ ಗುರುಲಿಂಗ ಜಂಗಮ ಮಹಾಸ್ವಾಮಿಗಳು, ಗ್ರಾ, ಪಂ ಅಧ್ಯಕ್ಷ ಭಾಸ್ಕರ ಹೊಸಮನಿ, ಮುಖಂಡರಾದ ಎ. ಡಿ. ಮುಲ್ಲಾ, ಬಾಪುಗೌಡ ಪಾಟೀಲ, ಶಂಕರಗೌಡ ಬಿರಾದಾರ, ಮಹಾನಿಂಗ ಜವನರ, ಶಂಕರ ಹ್ಯಾಮಗೋಳ, ಸುರೇಶ ಬಾಬಾನಗರ, ಶರಣು ಚಂಡಕಿ, ಶಿವಾನಂದ ಗುಡ್ಡೇವಾಡಿ, ಸುರೇಶ ಬಾಬಾನಗರ, ಗಾಂಧಿಬಾಯಿ ಗಡಾಲೋಟಿ ಮುಂತಾದವರು ಉಪಸ್ಥಿತರಿದ್ದರು.

ಕನಮಡಿ ಕಬಡ್ಡಿ ಉತ್ಸವ ಉದ್ಘಾಟಿಸಿ ಎಂಎಲ್ಸಿ ಸುನೀಲಗೌಡ ಪಾಟೀಲ ಅವರು ಮಾತನಾಡಿದರು.

ಚೌಧರಿ ಅಭಿಮಾನಿಗಳಿಂದ ರೋಗಿಗಳಿಗೆ ಹಣ್ಣು ವಿತರಣೆ

ಮುದ್ದೇಬಿಹಾಳ: ಕರ್ನಾಟಕ ರಾಜ್ಯದ ಮಹಿಳಾ ಆಯೋಗದ ಅಧ್ಯಕ್ಷರಾಗಿ ಒಂದು ವರ್ಷ ಗತಿಸಿದ ಹಿನ್ನೆಲೆಯಲ್ಲಿ ಮುದ್ದೇಬಿಹಾಳ ತಾಲೂಕಿನಲ್ಲಿ ಡಾ. ನಾಗಲಕ್ಷ್ಮೀ ಚೌದರಿ ಅಕ್ಕನ ಅಭಿಮಾನಿ ಬಳಗದಿಂದ ಮುತ್ತು ಟಕ್ಕಳಕಿ ಅವರ ನೇತೃತ್ವದಲ್ಲಿ ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಮತ್ತು ತಾಲೂಕು ಕಾಳಗಿ ಸರಕಾರಿ ಆಸ್ಪತ್ರೆಯ ರೋಗಿಗಳಿಗೆ ಅನ್ನ ಸಂತರ್ಪಣೆ, ಹಣ್ಣು, ಬ್ರೇಡ್ ಮತ್ತು ಬಿಸ್ಕತ್ತು ವಿತರಣೆ ಕಾರ್ಯಕ್ರಮವನ್ನು ಮಾರ್ಚ್ 1 ಶನಿವಾರದಂದು ಮುಂಜಾನೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಕ್ರಾಂತಿ ರಾಯಣ್ಣ ಯುವ ಬ್ರಿಗೇಡ್ ಮುಖಂಡ, ಮುತ್ತು ಟಕ್ಕಳಕಿ ಅವರು ಮಾತನಾಡಿ ಶ್ರೀಮತಿ ಡಾ ನಾಗಲಕ್ಷ್ಮೀ ಚೌದರಿ ಮೇಡಂ ಅವರು ಅಧಿಕಾರ ವಹಿಸಿಕೊಂಡು ಇವತ್ತಿಗೆ ಒಂದು ವರ್ಷ ಗತಿಸಿತು.ಕೇವಲ ಹನ್ನೆರಡು ತಿಂಗಳಲ್ಲಿ ಇಪ್ಪತ್ತು ಜಿಲ್ಲೆಗೆ ಪ್ರವಾಸ ಮಾಡಿ.ಸಾರ್ವಜನಿಕರ ಕುಂದುಕೊರತೆ ಆಲಿಸಿ ಮತ್ತು ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. 224 ವಿಧಾನಸಭಾ ಮತ ಕ್ಷೇತ್ರದ ಶಾಸಕರು ಕೂಡಾ ಕಾಲಿಡದ ಗ್ರಾಮಕ್ಕೆ ಹೋಗಿ ಅಲ್ಲಿಯ ನೋಂದ ಮಹಿಳೆಯರ ಮತ್ತು ಸಾರ್ವಜನಿಕರ ಸಮಸ್ಯೆಯನ್ನು ಆಲಿಸದ್ದಾರೆ. ಅವರ ಒಳ್ಳೆಯ ಜನಾಭಿವೃದ್ಧಿ ಕಾರ್ಯಕ್ರಮ ಸದಾ ಹೀಗೆ ಮುಂದುವರಿಯಲಿ ಮತ್ತು ಅವರಿಗೆ ಮುಂದಿನ ದಿನಗಳಲ್ಲಿ ಸರಕಾರದ ಹುನ್ನತ ಹುದ್ದೆ ಸಿಗಲಿ ಎಂದು ಮಾತನಾಡಿದರು.

ಹಾಸ್ಯ ಕಲಾವಿದ ಶ್ರೀಶೈಲ ಹೂಗಾರ ಮಾತನಾಡಿ, ಯಾವ ಅಧಿಕಾರಿಗಳು ಹೋಗದ ಗ್ರಾಮಕ್ಕೆ ಹೋಗಿ ಅಲ್ಲಿಯ ಸಮಸ್ಯೆ ಕುಂದುಕೊರತೆಗಳನ್ನು ಆಲಿಸಿ, ಸ್ಥಳದಲ್ಲಿಯೇ ಅಧಿಕಾರಿಗಳನ್ನು ಕರೆಸಿ ಸಾರ್ವಜನಿಕರ ಸಮಸ್ಯೆಗೆ ಸೂಕ್ತ ಪರಿಹಾರ ಕೊಡಿಸುವಲಿ ಒಂದು ವರ್ಷದಿಂದ ಸದಾ ನೊಂದ ಜನರ ಪರನಿಂತು ಕೆಲಸ ಮಾಡಿದ ಡಾ. ನಾಗಲಕ್ಷ್ಮೀ ಅಕ್ಕಾವರಿಗೆ ಮುಂದಿನ ದಿನಗಳಲ್ಲಿ ಇನ್ನೂ ದೊಡ್ಡ ಹುದ್ದೆ ಅವರಿಗೆ ಸಿಗಲಿ ಎಂದು ಮಾತನಾಡಿದರು.

ಇದೇ ವೇಳೆಯಲ್ಲಿ ಅಭಿಮಾನಿಗಳಾದ ಶಶಿಕುಮಾರ ಹಿರೇಮಠ, ಅನಿಲ ವಾಲಿಕಾರ ಮುದ್ನಾಳ, ದೇವು ವಾಲಿಕಾರ, ಮಾಳಿಂಗರಾಯ ಯರಝುರಿ, ಬಸವರಾಜ ಬಡಿಗೇರ, ಗೂಪಿ ಗೊಲ್ಲರ, ಶಿವು ವನಕಿಹಾಳ, ಬೀರಪ್ಪ ಮೇಟಿ, ಪರಶುರಾಮ ವರ್ತೂರ, ಭೀಮನಗೌಡ ಟಕ್ಕಳಕಿ, ಬಸಯ್ಯ ಕಾಳಗಿ, ಪ್ರಕಾಶಗೌಡ ಪಾಟೀಲ, ಸುನಿಲ ಸಂಗಮ ಇದ್ದರೂ. ಹಾಗೂ ಆಸ್ಪತ್ರೆಯ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದರು.



ಡಾ.ಚೌಧರಿ ಅಭಿಮಾನಿಗಳು ಸರಕಾರಿ ಆಸ್ಪತ್ರೆಯ ರೋಗಿಗಳಿಗೆ ಅನ್ನ ಸಂತರ್ಪಣೆ ಮಾಡಿದರು.

ಆಸ್ಪತ್ರೆಯಲ್ಲಿ ಮೂಲ ಸೌಲಭ್ಯ ಕೊರತೆಗೆ ಆಯೋಗ ಆಕ್ರೋಶ

ಸಿಂದಗಿ: ಆಸ್ಪತ್ರೆಯ ನಿರ್ವಹಣೆಗೆ ತನ್ನದೆಯಾದ ಅನುದಾನ ಇರುತ್ತದೆ. ಬಂದ ಅನುದಾನ ಏನು ಮಾಡುತ್ತೀರಿ? ಒಂದು ಸಣ್ಣ ಶೌಚಾಲಯ ನಿರ್ಮಿಸಲಾಗದಷ್ಟು ಮತ್ತು ದುರಸ್ತಿ ಮಾಡುವಷ್ಟು ಅನುದಾನ ನಿಮ್ಮಲ್ಲಿ ಇಲ್ಲವೆಂದರೆ ಆಸ್ಪತ್ರೆಯನ್ನು ಅಧಿಕಾರಿಗಳೆಲ್ಲರು ಸೇರಿ ಮುಚ್ಚಿಬಿಡಿ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಸಾರ್ವಜನಿಕ ಅಹವಾಲು ಸ್ವೀಕರಿಸಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಇಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯರಾದಿಯಾಗಿ ಸಿಬ್ಬಂದಿಗಳು ಯಾರಾದರೂ ಮೇಲಾಧಿಕಾರಿಗಳು ಭೇಟಿ ನೀಡಿದಾಗಷ್ಟೇ ಕರ್ತವ್ಯದ ಮೇಲೆ ಹಾಜರಿರುತ್ತಾರೆ. ಇತರೆ ಸಂದರ್ಭಗಳಲ್ಲಿ ಅರ್ಧಕ್ಕಿಂತ ಕಡಿಮೆ ಸಂಖ್ಯೆಯ ಹಾಜರಾತಿ ಇರುತ್ತದೆ. ಅದು ಅಲ್ಲದೇ ಕರ್ತವ್ಯದ ಮೇಲೆ ಹಾಜರಿರದಿದ್ದರೂ ಹಾಜರಿ ಪುಸ್ತಕದಲ್ಲಿ ಮಾತ್ರ ಸಹಿ ಇರುತ್ತದೆ. ಬಯೋಮೆಟ್ರಿಕ್ ಕೆಟ್ಟು ಹೋಗಿ ತಿಂಗಳುಗಳೇ ಕಳೆದು ಹೋದರೂ ಅದನ್ನು ರಿಪೇರಿ ಮಾಡಿಸುವ ಗೊಡವಿಗೆ ಹೋಗದೆ ಇರುವುದಕ್ಕೂ ಜಾಣತನವೇ ಕಾರಣವಾಗಿದೆ ಎನ್ನುವ ದೂರುಗಳು ಸಾರ್ವಜನಿಕರಿಂದ ಕೇಳಿ ಬಂದವು.

ಬಾಣಂತಿಯರು ಅಂತಹ ಅವಸ್ಥೆಯಲ್ಲಿ ಅಷ್ಟೊಂದು ದೂರ ಕ್ರಮಿಸಿ ಹೋಗುವುದು ಒಬ್ಬ ಬಾಣಂತಿಯಿಂದ ಸಾಧ್ಯವೇ? ಎಂಬುದನ್ನು ಊಹಿಸಿಕೊಳ್ಳಲೂ ಕಷ್ಟಸಾಧ್ಯವಾಗುವಂತಹ ಪರಿಸ್ಥಿತಿ ಇದೆ. ಆಸ್ಪತ್ರೆಗೆ ಬಂದ ಹೊರ ರೋಗಿಗಳನ್ನು ದನಗಳಂತ ಒಂದೆಡೆ ಕೂಡಿ ಹಾಕಲಾಗುತ್ತದೆ. ಕುಳಿತುಕೊಂಡ ರೋಗಿಗಳನ್ನು ಕಸಗುಡಿಸುವ ಕರ್ಮಚಾರಿಗಳು ಕಸಬರಿಗೆಯಿಂದಲೆ ತಳ್ಳಿ ದಾರಿಮಾಡಿಕೊಂಡು ಹೋಗುತ್ತಾರೆ. ಇದೆಲ್ಲವನ್ನು ಗಮನಿಸಿದರೆ ಇಲ್ಲಿ ಮಾನವೀಯತೆ ಎನ್ನುವ ಪದಕ್ಕೆ ಅರ್ಥವೇ ಇಲ್ಲದಂತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಇದೇ ಸಂದರ್ಭದಲ್ಲಿ ಟಿಎಚ್‌ಒ ಡಾ.ಎ.ಎ.ಮಾಗಿ, ಡಾ.ಮಹಾಂತೇಶ ಹಿರೇಮಠ, ಡಾ.ರಮೇಶ ರಾಠೋಡ ಸೇರಿದಂತೆ ಇನ್ನೂಳಿದ ವೈದ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸಚಿವಾಲಯಕ್ಕೆ ವರದಿ ಸಲ್ಲಿಕೆ

ಯಾವುದೇ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ ಎನ್ನುವ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬಂದವು. ಈ ಎಲ್ಲ ಸಮಸ್ಯೆಗಳನ್ನು ಆಲಿಸಿದ ನಂತರ ಸಮಸ್ಯೆಗಳನ್ನು ಸಂಬಂಧಪಟ್ಟ ಸಚಿವಾಲಯಕ್ಕೆ ವರದಿ ಸಲ್ಲಿಸಿ ಶೀಘ್ರ ಇಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸುತ್ತೇನೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅವರು ಭರವಸೆ ನೀಡಿದರು.

ಕರ್ನಾಟಕ ಪೊಲೀಸ್ ರನ್ ಮಾ.9ಕ್ಕೆ

ವಿಜಯಪುರ: ಜಿಲ್ಲಾ ಪೊಲೀಸ್ ವತಿಯಿಂದ ಮಾ.09 ರಂದು ಡ್ರಗ್ ಫ್ರೀ ಕರ್ನಾಟಕ ಫಿಟ್‌ನೆಸ್ ಫಾರ್ ಆಲ್ ಹಾಗೂ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಥೀಮ್‌ನ ಅಡಿಯಲ್ಲಿ ಕರ್ನಾಟಕ ಪೊಲೀಸ್ ರನ್ 2025 ಮ್ಯಾರಾಥಾನ್ ಓಟವನ್ನು (5 ಏಂ) ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 6.30 ಗಂಟೆಗೆ ಮ್ಯಾರಾಥಾನ್ ಓಟವು ಗೋಲಗುಂಬಜ್ ನಿಂದ ಆರಂಭವಾಗಿ, ಜಿಲ್ಲಾ ಕ್ರೀಡಾಂಗಣ, ಬಸವೇಶ್ವರ ವೃತ್ತ, ಗಾಂಧಿಚೌಕ, ಶಿವಾಜಿ ವೃತ್ತ, ವಾಟರ್ ಟ್ಯಾಂಕ್, ಸೋಲಾಪೂರ ರಸ್ತೆ ಮಾರ್ಗವಾಗಿ ಜಿಲ್ಲಾ ಪೊಲೀಸ್ ಕವಾಯತು ಮೈದಾನಕ್ಕೆ ಬಂದು ಮುಕ್ತಾಯಗೊಳ್ಳಲಿದೆ. ಮ್ಯಾರಾಥಾನ್‌ನಲ್ಲಿ ಭಾಗವಹಿಸಿ, ವಿವಿಧ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆಯುವ ವಿಜೇತರಿಗೆ ಪ್ರಮಾಣ ಪತ್ರ ಹಾಗೂ ಮೆಡಲ್‌ಗಳನ್ನು ವಿತರಣೆ ಮಾಡಲಾಗುವುದು.

ಮ್ಯಾರಾಥಾನ್‌ನಲ್ಲಿ ಭಾಗವಹಿಸುವ ಆಸಕ್ತರು ಮಾ.08 ರೊಳಗೆ ತಮ್ಮ ಹೆಸರುಗಳನ್ನು ವಿಜಯಪುರ ಡಿಎಆರ್ ಘಟಕದ ಶ್ರೀರಂಗಪ್ಪ ಆರ್‌ಎಸ್‌ಐ (ಮೋ: 9901145001), ಮಲ್ಲನಗೌಡ ಆರ್‌ಎಸ್‌ಐ (ಮೋ: 9880299439) ಹಾಗೂ ದಾನೇಶ ಕಲ್ಯಾಣಿ ಆರ್‌ಎಸ್‌ಐ (ಮೋ: 8050481012) ರವರ ಬಳಿ ಹೆಸರನ್ನು ನೋಂದಾಯಿಸಬಹುದಾಗಿದೆ. ಭಾಗವಹಿಸುವ ಸ್ಪರ್ಧಾಳುಗಳಿಗೆ ಟಿ-ಶರ್ಟ್ ಹಾಗೂ ಕ್ಯಾಪ್ ವಿತರಣೆ ಮಾಡಲಾಗುವುದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕರ್ನಾಟಕ ಪೊಲೀಸ್ ರನ್-2025 ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಎಸ್ಪಿ ಲಕ್ಷ್ಮಣ ನಿಂಬರಗಿ ಕೋರಿದ್ದಾರೆ.

ಶ್ರವಣ ದೋಷಕ್ಕೆ ಶಬ್ದಮಾಲಿನ್ಯ ಕಾರಣ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು, ಸರ್ಕಾರಿ ನರ್ಸಿಂಗ ಕಾಲೇಜ ಹಾಗೂ ವಿವಿಧ ನರ್ಸಿಂಗ್ ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಶ್ರವಣ ದಿನಾಚರಣೆಯ ಪ್ರಯುಕ್ತ ಸೋಮವಾರ ಬೆಳಿಗ್ಗೆ ಹಮ್ಮಿಕೊಂಡ ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಪರ ನಿರ್ದೇಶಕಿ ಡಾ.ಚನ್ನಮ್ಮ ಕಟ್ಟಿ ಹಾಗೂ ಡಿಎಚ್‌ಒ ಡಾ.ಸಂಪತ್ ಗುಣಾರಿ ಜಂಟಿಯಾಗಿ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಪರ ನಿರ್ದೇಶಕಿ ಡಾ.ಚನ್ನಮ್ಮ ಕಟ್ಟಿ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಹೆಚ್ಚುತ್ತಿರುವ ಶಬ್ದಮಾಲಿನ್ಯದಿಂದ ಶ್ರವಣದೋಷ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದ್ದು, ರೇಡಿಯೋ, ಟಿ.ವಿ, ಮೊಬೈಲ್ ಶಬ್ದ ಅಧಿಕ ಬಳಕೆಯಿಂದಾಗಿ ಕಿವಿಯ ಒಳಭಾಗದ ನರಕೋಶಗಳು ದುರ್ಬಲಗೊಂಡು ಶ್ರವಣ ದೋಷಕ್ಕೆ ಎಡೆ ಮಾಡಿದಂತಾಗುತ್ತದೆ ಎಂದು ಹೇಳಿದರು. ಡಿಎಚ್‌ಒ ಡಾ.ಸಂಪತ್ತ ಗುಣಾರಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ವರಿ ಗೊಲಗೇರಿ, ಬಸವನ ಬಾಗೇವಾಡಿ ತಾಲೂಕು ಆರೋಗ್ಯಾಧಿಕಾರಿ ಡಾ. ಕವಿತಾ ದೊಡ್ಡಮನಿ, ಡಾ.ಪರಸುರಾಮ ಹಿಟ್ನಳ್ಳಿ, ಡಾ. ರವಿ ಅಂಬೇವಾಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಜಿ.ಎಂ ಕೊಲೂರ, ಸುರೇಶ ಹೊಸಮನಿ, ವಿದ್ಯಾರ್ಥಿನೀಯರು ಉಪಸ್ಥಿತರಿದ್ದರು.

ಎಣ್ಣೆಕಾಳು ಬೆಳೆಗಳಿಂದ ಆದಾಯ ವೃದ್ಧಿ

ವಿಜಯಪುರ: ರೈತರು ಎಣ್ಣೆಕಾಳು ಬೆಳೆಗಳ ಉತ್ಪಾದನೆಯತ್ತ ಹೆಚ್ಚಿನ ಗಮನ ಹರಿಸಬೇಕೆಂದು ಜಂಟಿ ಕೃಷಿ ನಿರ್ದೇಶಕಿ ರೂಪ ಎಲ್. ತಿಳಿಸಿದರು.

ನಗರದ ಹೊರವಲಯದ ಹಿಟ್ನಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಮಂಗಳವಾರ 2024-25ನೇ ಸಾಲಿನ ರಾಷ್ಟ್ರೀಯ ಖ್ಯಾದ ತೈಲ ಅಭಿಯಾನ ಎಣ್ಣೆಕಾಳು ಯೋಜನೆಯಡಿಯಲ್ಲಿ ಎಣ್ಣೆಕಾಳು ಉತ್ಪಾದನೆಯಲ್ಲಿ ನವೀನ ತಾಂತ್ರಿಕತೆಗಳು ವಿಷಯದ ಕುರಿತು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಹಮ್ಮಿಕೊಂಡ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯೋಜನೆಯಡಿಯಲ್ಲಿ ಆಯ್ಕೆ ಮಾಡಿರುವ ಜಿಲ್ಲೆಗಳಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಕ್ಷೇತ್ರ ವಿಸ್ತಿರ್ಣ ಹಾಗೂ ಉತ್ಪಾದಕತೆ ಹೆಚ್ಚು ಮಾಡುವ ಮುಖಾಂತರ ಹೆಚ್ಚು ಉತ್ಪಾದನೆಯನ್ನು ಸಾಧಿಸಬೇಕಾಗಿದ್ದು, ಈ ಹಿನ್ನಲೆಯಲ್ಲಿ ವಿಜಯಪುರ ಜಿಲ್ಲೆ ಆಯ್ಕೆಯಾಗಿದೆ. ರೈತರಿಗೆ ಪ್ರಮುಖ ಎಣ್ಣೆಕಾಳು ಬೆಳೆಗಳಾದ ಸೂರ್ಯಕಾಂತಿ, ಶೇಂಗಾ, ಕುಸುಬೆ ಬೆಳೆಗಳನ್ನು ಬೆಳೆಯಲು ಅಧಿಕಾರಿಗಳು ಮುತುವರ್ಜಿವಹಿಸಬೇಕು ಎಂದರು.

ಮುಖ್ಯ ಅತಿಥಿ ಸಹ ವಿಸ್ತರಣಾ ನಿರ್ದೇಶಕ ಡಾ. ಆರ್. ಬಿ. ಬೆಳ್ಳಿ ಮಾತನಾಡಿ, ರೈತರು ಒಂದೆ ಬೆಳೆಯನ್ನು ಬೆಳೆಯದೇ ಹೆಚ್ಚೆಚ್ಚು ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಬೇಕು. ಎಣ್ಣೆಕಾಳು ಬೆಳೆಯಲು ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದಲ್ಲದೇ ರೈತರ ಕೃಷಿ ಆದಾಯ ಹೆಚ್ಚಿಸುವುದರ ಮೂಲಕ ರೈತರಲ್ಲಿ ಆತ್ಮವಿಶ್ವಾಸವನ್ನು ತುಂಬಬೇಕೆಂದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ವಸ್ತ್ರದ, ಡಾ. ಶಿವಶಂಕರಮೂರ್ತಿ ಎಂ., ವಿಜ್ಞಾನಿಗಳಾದ ಡಾ. ಪ್ರಸನ್ನ ಪಿ., ಡಾ. ಶಿಲ್ಪಾ ಚೋಗಟಾಪುರ, ಡಾ. ಕಿರಣ ಸಾಗರ, ಡಾ. ವಿವೇಕ ದೇವರನಾವದಗಿ ಎಣ್ಣೆಕಾಳು ಉತ್ಪಾದನೆ ಕುರಿತು ತಾಂತ್ರಿಕ ಸಲಹೆ ನೀಡಿದರು.

ತರಬೇತಿಯಲ್ಲಿ ಉಪ ಕೃಷಿ ನಿರ್ದೇಶಕ ಡಾ. ಪ್ರಕಾಶ ಚವ್ಹಾಣ, ಡಾ. ಚಂದ್ರಕಾಂತ ಪವಾರ, ಡಾ. ಬಾಲರಾಜ ಬಿರಾದಾರ ಸಹಾಯಕ ಕೃಷಿ ನಿರ್ದೇಶಕರುಗಳಾದ ಡಾ. ಮಲ್ಲಿಕಾರ್ಜುನ ಭಾವಿಕಟ್ಟಿ, ಡಾ.ಎಚ್. ವಾಯ್. ಸಿಂಗೆಗೋಳ, ಎಮ್. ಹೆಚ್. ಯರಝುರಿ, ಡಾ. ಎಸ್. ಎ. ಇನಾಮದಾರ, ಪ್ರಕಾಶ ಕಳಸಗೊಂಡ, ಎಸ್. ಕೆ. ಬಿರಾದಾರ ಸೇರಿದಂತೆ ಇಲಾಖೆಯ ವಿವಿಧ ತಾಲೂಕು, ಹೋಬಳಿಗಳಿಂದ ಬಂದ ಕೃಷಿ ಅಧಿಕಾರಿಗಳು, ಆತ್ಮಾ ಯೋಜನೆ ಸಿಬ್ಬಂದಿ ಉಪಸ್ಥಿತರಿದ್ದರು. ಡಾ. ಶಿವನಗೌಡ ಪಾಟೀಲ ಸ್ವಾಗತಿಸಿದರು. ಡಾ. ಬಾಲರಾಜ ಬಿರಾದಾರ ವಂದಿಸಿದರು.



ಕೃಷಿ ಇಲಾಖೆಯ ಅಧಿಕಾರಿಗಳಿಗೆ ಹಮ್ಮಿಕೊಂಡ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಜಂಟಿ ಕೃಷಿ ನಿರ್ದೇಶಕಿ ರೂಪ ಎಲ್. ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಅರಿವು ಅಗತ್ಯ

ವಿಜಯಪುರ: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಜಿ.ಪಂ ಹಾಗೂ ಸಾರವಾಡ ಗ್ರಾ.ಪಂ ಸಂಯುಕ್ತಾಶ್ರಯದಲ್ಲಿ ಕಣಮುಚನಾಳದ ಸರಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಆಚರಣೆ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರೌಡಶಾಲೆಯ ಮುಖೋಪಾದ್ಯಾಯ ಆರ್.ವಿ.ಹೊಸೂರ, ಎಲೆಕ್ಟ್ರಾನಿಕ್ ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹತ್ತರವಾದ ಬದಲಾವಣೆಯನ್ನು ಮಾಡಿದೆ. ಮಕ್ಕಳು ಇಂತಹ ಹೊಸ ಆವಿಷ್ಕಾರಗಳ ಬಗ್ಗೆ, ತಂತ್ರಜ್ಞಾನದ ಬದಲಾವಣೆಗಳ ವಿಷಯಗಳ ಕುರಿತು ಅರಿತುಕೊಳ್ಳಬೇಕು ಎಂದು ಹೇಳಿದರು.ಜಿಲ್ಲಾ ಪಂಚಾಯತಿಯ ಎನ್ ಆರ್ ಡಿ ಎಮ್ ಎಸ್ ಕೇಂದ್ರದ ಯೋಜನಾ ಸಂಯೋಜಕರ ಅಧಿಕಾರಿಗಳಾದ ವಿದ್ಯಾಧರ ಮಾತನಾಡಿ, ವಿಜ್ಞಾನ ತಂತ್ರಜ್ಞಾನದ ಕ್ಷೇತ್ರ ದಲ್ಲಿನ ನೂತನವಾದ ಆವಿಸ್ಕಾರಗಳು ಮಕ್ಕಳಿಗೆ ಕಲಿಕೆಗೆ ಸಹಾಯಕವಾಗಿವೆ ಎಂದು ಹೇಳಿದರು. ವಿಕಸಿತ ಭಾರತಕ್ಕಾಗಿ ವಿಜ್ಞಾನ ಮತ್ತು ನಾವೀನ್ಯತೆಯಲ್ಲಿ ಜಾಗತಿಕ ನಾಯಕತ್ವಕ್ಕಾಗಿ ಭಾರತೀಯ ಯುವಕರ ಸಬಲೀಕರಣ'' ಎಂಬ ವಿಷಯದ ಕುರಿತು ಉಪನ್ಯಾಸ ನೀಡಲಾಯಿತು. ಎಸ್.ಡಿ.ಎಮ್,ಸಿ ಅಧ್ಯಕ್ಷರಾದ ಲಕ್ಷಣಗೌಡ ಬಿರಾದಾರ, ಶಾಂತು ನಾಟೀಕಾರ ,ಶಿಕ್ಷಣ ಪ್ರೇಮಿ ಮಹಾದೇವಪ್ಪ ಮಮುದಾಪೂರ, ಬೀಮಪ್ಪ ಪತ್ತಾರ ಶಿಕ್ಷಕರಾದ ಉಷಾರಾಣಿ, ಸುಮಲತಾ ನಂದಿಮಠ, ಕಾರ್ಯದರ್ಶಿ ರಮೇಶ ಗೌಡಪ್ಪಗೋಳ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಸಾಹಿತ್ಯೋತ್ಸವಕ್ಕೆ ರವಿ ಕೋಟಾರಗಸ್ತಿ ಆಯ್ಕೆ

ಬೆಳಗಾವಿ: ಕೇಂದ್ರ ಸಾಂಸ್ಕೃತಿಕ ಮಂತ್ರಾಲಯದ ಸಹಯೋಗದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಮಾರ್ಚ್ 7 ರಿಂದ 12ರವರೆಗೆ ನವದೆಹಲಿಯಲ್ಲಿ ಆಯೋಜಿಸಿರುವ ಸಾಹಿತ್ಯ ರಂಗದಲ್ಲೇ ಪ್ರತಿಷ್ಠಿತ ಕಾರ್ಯಕ್ರಮವಾದ ಏಷ್ಯಾದ ಅತಿದೊಡ್ಡ ಸಾಹಿತ್ಯೋತ್ಸವಕ್ಕೆ ಬೆಳಗಾವಿಯ ಹಿರಿಯ ಸಾಹಿತಿ, ಕವಿ ಮತ್ತು ನಿವೃತ್ತ ಅಧಿಕಾರಿ ರವಿ ಕೋಟಾರಗಸ್ತಿ ಆಯ್ಕೆಯಾಗಿದ್ದಾರೆ. ಮಾರ್ಚ್ 8ರಂದು ಬೆಳಗ್ಗೆ 10ಕ್ಕೆ ನಡೆಯುವ ಎಸೆಂಬಲ್ ಆಫ್ ಇಮೇಜ್, ರಿದಮ್ ಆ್ಯಂಡ್ ಬ್ಯೂಟಿ: ಮಲ್ಟಿಲಿಂಗ್ವಲ್ ಪೋಯಿಟ್ರಿ ರೀಡಿಂಗ್ ವಿಷಯ ಕುರಿತ ಕವಿಗೋಷ್ಠಿಯಲ್ಲಿ ಕನ್ನಡ ವಿಷಯದಲ್ಲಿ ಅವರು ಕಾವ್ಯ ವಾಚಿಸಲಿದ್ದಾರೆ.

ಅವರೊಂದಿಗೆ ಡೊಗ್ರಿ, ಗುಜರಾತಿ, ಹಿಂದಿ, ಕಾಶ್ಮೀರಿ, ಓಡಿಯಾ, ಸಾಂಸ್ಕೃತಿಕ ಮತ್ತು ತಮಿಳು ಭಾಷೆಗಳಲ್ಲೂ ಕವಿಗಳು ಕಾವ್ಯ ವಾಚಿಸಲು ವೇದಿಕೆ ಹಂಚಿಕೊಳ್ಳಲಿದ್ದಾರೆ. ಸರ್ಕಾರಿ ನೌಕರಿ ಜತೆ ಜತೆಯಲ್ಲೇ ಸಾಹಿತ್ಯಿಕ ಚಟುವಟಿಕೆಯಲ್ಲೂ ಪಾಲ್ಗೊಳ್ಳುತ್ತ ಬಂದವನು ನಾನು. ಇಂಥ ದ್ದೊಂದು ಸಾಹಿತ್ಯೋತ್ಸವದಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿದ್ದಕ್ಕೆ ಖುಷಿಯಾಗಿದೆ ಎಂದು ರವಿ ಕೋಟಾರಗಸ್ತಿ ಸಂತಸ ಹಂಚಿಕೊಂಡರು.

ಅನಸೂಯಾಗೆ ಅಬ್ಬಕ್ಕ ದೇವಿ ರಾಜ್ಯ ಪ್ರಶಸ್ತಿ

ಯರಗಟ್ಟಿ: ಸಮೀಪದ ಸರಕಾರಿ ಹಿರಿಯ ಪ್ರಾಥ ಮಿಕ ಶಾಲೆ ಸಿಂದೋಗಿ ಶಾಲೆಯ ಶಿಕ್ಷಕಿ ಅನಸೂಯಾ ಶಂಕರಪ್ಪ ಮದನಬಾವಿಯವರಿಗೆ ಕರ್ನಾಟಕ ರಾಜ್ಯ ಮಹಿಳಾ ನೌಕರರ ಸಂಘದ ಆಶ್ರಯದಲ್ಲಿ ಕಲಬುರಗಿಯಲ್ಲಿ ಜರಗುತ್ತಿರುವ ರಾಜ್ಯ ಮಟ್ಟದ ಮಹಿಳಾ ದಿನಾಚರಣೆ ಅಂಗವಾಗಿ ರಾಣಿ ಅಬ್ಬಕ್ಕ ದೇವಿ ಪ್ರಶಸ್ತಿ ಗೌರವ ಲಭಿಸಿದೆ ಎಂದು ಕಲಬುರಗಿ ಜಿಲ್ಲೆಯ ಮಹಿಳಾ ನೌಕರರ ಸಂಘದ ಅಧ್ಯಕ್ಷೆ ನಂದಿನಿ ಸನಬಾಳ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರ್ಚ್ 9 ರಂದು ಕಲಬುರಗಿಯ ಪೂಜ್ಯ ಅಪ್ಪ ಮೆಮೋರಿಯಲ್ ಹಾಲ್ ನಲ್ಲಿ ಜರಗುವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಗಲಿದ ಜೀವ

ಗೀತಾ ಅಸುಂಡಿ

ಗೋಕಾಕ: ಚನ್ನಮ್ಮನ ಕಿತ್ತೂರು: ಸ್ಥಳೀಯ ಸೋಮವಾರ ಪೇಟೆಯ ನಿವಾಸಿ ಗೀತಾ ಬಸವರಾಜ ಅಸುಂಡಿ (58) ಮಂಗಳವಾರ ನಿಧನರಾದರು. ಮೃತರು ಪತಿ, ಪಟ್ಟಣ ಪಂಚಾಯಿತಿ ಸದಸ್ಯರೂ ಆಗಿರುವ ಪುತ್ರ ನಾಗರಾಜ ಅಸುಂಡಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಕಮಲವ್ವ ಅವಕ್ಕನವರ

ಬೈಲಹೊಂಗಲ: ಪಟ್ಟಣದ ಶಿವಬಸವ ನಗರ ನಾಲ್ಕನೇ ಅಡ್ಡರಸ್ತೆ ನಿವಾಸಿ ಕಮಲವ್ವ ಶಿವಪುತ್ರಪ್ಪ ಅವಕ್ಕನ್ನವರ (80) ಮಂಗಳವಾರ ನಿಧನರಾದರು.ಮೃತರಿಗೆ ಓರ್ವ ಪುತ್ರ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಇದ್ದಾರೆ. ಮೃತರ ಅಂತಿಮ ಇಚ್ಛೆಯಂತೆ ಅವರು ಶ್ರೀರಾಮಣ್ಣವರ ಚಾರಿಟೇಬಲ ಟ್ರಸ್ಟ್ ಮೂಲಕ ದೇಹದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಜಿಲ್ಲೆಯ ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ | ಸಂಸದ ಜಗದೀಶ್ ಶೆಟ್ಟರ್ ಭಾಗಿ

ರೈಲ್ವೆ ಯೋಜನೆ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಿ

ಬೆಳಗಾವಿ: ಬೆಳಗಾವಿ-ಧಾರವಾಡ ಮಾರ್ಗದ ರೈಲ್ವೆ ಯೋಜನೆಗೆ ಮಂಜೂರಾತಿ ದೊರೆತು ಬಹಳ ದಿನಗಳ ಕಳೆದಿವೆ. ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ, ಸಮೀಕ್ಷೆ ಪೂರ್ಣಗೊಳ್ಳದ ಕಾರಣ ಕಾಮಗಾರಿ ವಿಳಂಬವಾಗುತ್ತಿದೆ. ಮಾರ್ಚ್ ಅಂತ್ಯದೊಳಗೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಸಮೀಕ್ಷೆ ಕಾರ್ಯ ಪ್ರಾರಂಭಿಸಬೇಕು ಎಂದು ಲೋಕಸಭಾ ಸಂಸದ ಜಗದೀಶ್ ಶೆಟ್ಟರ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲೆಯ ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹಲಗಾ-ಮಚ್ಛೆ ಮಾರ್ಗವಾಗಿ ರಸ್ತೆ ನಿರ್ಮಾಣಕ್ಕೆ ಈಗಾಗಲೇ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಭೂ ಸ್ವಾಧೀನ ಪಡಿಕೊಳ್ಳಲಾಗಿದೆ. ಖಾನಾಪುರ-ರಾಮನಗರ ರೈಲ್ವೆ ಮಾರ್ಗದಲ್ಲಿ ಸಣ್ಣ ಪುಟ್ಟ ಸೇತುವೆಗಳಿದ್ದು, ಮೇಲ್ಸೇತುವೆಗಳ ನಿರ್ಮಾಣಕ್ಕೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಬಾಕಿ ಉಳಿದಿರುವ ಭೂಸ್ವಾಧೀನವನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ಬಳಿಕ ಏಪ್ರಿಲ್ ಮೊದಲ ವಾರದಲ್ಲಿ ಕಾಮಗಾರಿ ಆರಂಭಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು. ನಿರಂತರ ಶುದ್ಧ ಕುಡಿಯುವ ನೀರು ಸರಬರಾಜು ಯೋಜನೆ ವಿಳಂಬವಾಗದಂತೆ ನಿಗದಿತ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗಳೊಳ್ಳಬೇಕು ಎಂದು ಸಂಸದ ಜಗದೀಶ್ ಶೆಟ್ಟರ್ ಸೂಚಿಸಿದರು. ಖಾನಾಪುರ ತಾಲ್ಲೂಕಿನ ಕುಸುಮಳ್ಳಿ ಸೇತುವೆ ನಿರ್ಮಾಣಕ್ಕೆ ಟೆಂಡರ್ ಕರೆದು, ಕಾಮಗಾರಿ ಪ್ರಾರಂಭಿಸಲಾಗಿದೆ. ಸದ್ಯದಲ್ಲೇ ಪೂರ್ಣಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಬೆಳಗಾವಿ ಧಾರವಾಡ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಬೆಳಗಾವಿ ವ್ಯಾಪ್ತಿಯಲ್ಲಿ ಬರುವ ಜಾಮೀನುಗಳನ್ನು ಸಮೀಕ್ಷೆ ನಡೆಸಿ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು.

ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಸಂಸದ ಜಗದೀಶ್ ಶೆಟ್ಟರ್ ಅವರು ಮಾತನಾಡಿದರು

ತಕರಾರು ಇರುವ ಊರುಗಳಿಗೆ ನೋಟಿಸ್ ಜಾರಿ ಮಾಡಿ ಸ್ಥಳೀಯ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಹೇಳಿದರು. ಕೆಲವು ರೈತರು ನೋಟಿಸ್ ಜಾರಿ ಮಾಡಿದರೂ ನೋಟಿಸ್ ಸ್ವೀಕರಿಸುತ್ತಿಲ್ಲ. ಹಾಗಾಗಿ ಸಮೀಕ್ಷೆ ಸಂದರ್ಭಲ್ಲಿ ಅಡತಡೆಗಳು ಉಂಟಾಗುತ್ತಿವೆ ಎಂದು ರೈಲ್ವೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಬಾಕಿ ಗ್ರಾಮಗಳ ವ್ಯಾಪ್ತಿಯಲ್ಲಿರುವ ಭೂ ಸಮೀಕ್ಷೆ ಪೂರ್ಣಗೊಳಿಸಬೇಕು. ಸಮೀಕ್ಷೆ ಬಳಿಕ ಟೆಂಡರ್ ಕರೆದು ಕಾಮಗಾರಿಗೆ ಚಾಲನೆ ನೀಡಲಾಗುವುದು. ನೋಟಿಸ್ ಸ್ವೀಕರಿಸದ ರೈತರೊಂದಿಗೆ ಚರ್ಚಿಸಿ ಸರಕಾರದ ಮಾರ್ಗಸೂಚಿ ಅನ್ವಯ ಕಡ್ಡಾಯವಾಗಿ ಸಮೀಕ್ಷೆ ಮಾಡಬೇಕಾಗಿದೆ ಎಂದು ತಿಳಿಸಬೇಕು. ಇದಕ್ಕೆ ಬೆಳಗಾವಿ ಉಪ ವಿಭಾಗಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತರಿಗೆ ತಿಳಿಹೇಳಬೇಕು ಎಂದು ಸೂಚನೆ ನೀಡಿದರು.

> ತಿಳಕವಾಡಿ ರೈಲ್ವೆ ಗೇಟ್ ಮೇಲ್ಸೇತುವೆ ನಿರ್ಮಾಣಕ್ಕೆ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲಾಗಿದ್ದು, ಏಪ್ರಿಲ್ ಮೊದಲ ವಾರದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಬೇಕು. ಕಾಮಗಾರಿ ಹಂತದಲ್ಲಿ ತಾನಾಜಿ ರೈಲ್ವೆ ಗೇಟ್ ಈಗಾಗಲೇ ಬಂದ್ ಇರಿಸಲು ಸೂಚನೆ ನೀಡಲಾಗಿದೆ.
> **ಮೊಹಮ್ಮದ್ ರೋಷನ್, ಜಿಲ್ಲಾಧಿಕಾರಿ**

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಳಗಾವಿ ವಿಶೇಷ ಭೂ ಸ್ವಾಧೀನಾಧಿಕಾರಿ ಬಲರಾಮ ಚವ್ಹಾಣ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬಾಗಲಕೋಟೆ ಭೂ ವಿಶೇಷ ಸ್ವಾಧೀನಾಧಿಕಾರಿ ರಾಜಶ್ರೀ ಜೈನಾಪುರ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಲೋಕೋಪಯೋಗಿ ಇಲಾಖೆ, ರೈಲ್ವೆ ಇಲಾಖೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸೈಬರ್ ವಂಚನೆಗಳಿಂದ ಮಹಿಳೆಯರು ಜಾಗೃತರಾಗಲಿ

ರಾಮದುರ್ಗ: ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಭಾರತೀಯ ರಿಜರ್ವ ಬ್ಯಾಂಕ್ ದೇಶದಾದ್ಯಂತ ಮಹಿಳೆಯರಿಗಾಗಿ ಆರ್ಥಿಕ ಸಾಕ್ಷರತೆ ಸಪ್ತಾಹ ಹಮ್ಮಿಕೊಂಡು, ಮಹಿಳೆಯರಿಗೆ ಆರ್ಥಿಕ ಸಾಕ್ಷರತೆ ಮೂಡಿಸಲು ಹಲವು ಕಾರ್ಯಕ್ರಮಗಳ ಹಾಕಿಕೊಳ್ಳುತ್ತಿದೆ ಎಂದು ಬೆಳಗಾವಿ ಎಲ್.ಡಿ.ಎಂ ಪ್ರಶಾಂತ ಘೋಡಕೆ ಹೇಳಿದರು.

ಪಟ್ಟಣದ ರಾಜ್ಯ ಸರಕಾರಿ ನೌಕರರ ಭವನದಲ್ಲಿ ಭಾರತೀಯ ರಿಜರ್ವ ಬ್ಯಾಂಕ್, ಬೆಳಗಾವಿ ಎಲ್.ಡಿ.ಎಂ. ಕಚೇರಿ ಹಾಗೂ ಅಮೂಲ್ಯ ಆರ್ಥಿಕ ಸಾಕ್ಷರತೆ ಕೇಂದ್ರದ ಸಹಯೋಗದಲ್ಲಿ ಮಹಿಳೆಯರಿಗಾಗಿ ಹಮ್ಮಿಕೊಂಡ ಆರ್ಥಿಕ ಸಾಕ್ಷರತಾ ಸಪ್ತಾಹ-2025 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಆಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಂಡು, ಫೋನ್ ಕರೆಗಳ ಮುಖಾಂತರ ಓಟಿಪಿ ಮುಖಾಂತರ ಬ್ಯಾಂಕ ಖಾತೆಯ ಮಾಹಿತಿ ಪಡೆದು, ಹಣ ಲಪಟಾಯಿಸಿ, ಮೋಸ ಮಾಡುತ್ತಿರುವ ಪ್ರಕರಣಗಳು ನಡೆಯುತ್ತಿವೆ. ಅಂತಹ ಮೋಸ-ವಂಚನೆಗಳ ಬಗೆಗೆ ಮಹಿಳೆಯರು ಜಾಗೃತರಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ, ಈಗಾಗಲೇ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಜನರಿಗೆ ಸಾಮಾಜಿಕ ಭದ್ರತೆಯ ವಿಮಾ ಯೋಜನೆಗಳನ್ನು ಮಾಡಿಸಲಾಗುತ್ತಿದೆ. ಬ್ಯಾಂಕಿನ ಖಾತೆ ಹೊಂದಿರುವ ಎಲ್ಲರೂ ಈ ವಿಮೆ ಮಾಡಿಸಬೇಕೆಂದು ಕೌಟುಂಬಿಕ ಭದ್ರತೆಯೆಡಗೆ ಹೆಜ್ಜೆ ಇಡಬೇಕು ಎಂದು ಕರೆ ನೀಡಿದರು.

ಕೆನರಾ ಬ್ಯಾಂಕ ಹಿರಿಯ ಪ್ರಬಂಧಕ ಅಜಿತ್ ರಾಜನ್ನವರ, ಕೇಂದ್ರ ಸರಕಾರದ ಸಾಮಾಜಿಕ ಸುರಕ್ಷಾ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಅಮೂಲ್ಯ ಆರ್ಥಿಕ ಸಾಕ್ಷರತೆ ಕೇಂದ್ರದ ಸಮಾಲೋಚಕ ಮಲ್ಲಿಕಾರ್ಜುನರಡ್ಡಿ ಗೊಂದಿ, ಪುರಸಭೆಯ ಡೇ-ನಲ್ಮ್ ಯೋಜನಾಧಿಕಾರಿ ಗೀತಾ ಬೆಳಗಲಿ, ನೀಲಮ್ಮ ಹಿರೇಮಠ, ಅಕ್ಷತಾ ಹಲ್ಯಾಳ ಹಾಗೂ ಇತರರಿದ್ದರು.



ಆರ್ಥಿಕ ಸಾಕ್ಷರತೆ ಸಪ್ತಾಹ ಕಾರ್ಯಕ್ರಮದಲ್ಲಿ ಆರ್.ಬಿ.ಐ ಆರ್ಥಿಕ ಜಾಗೃತಿ ಬಿತ್ತಿ ಪತ್ರಗಳನ್ನು ಅನಾವರಣಗೊಳಿಸಿದರು.

ಕಾಮಗಾರಿಗೆ ಭೂಮಿಪೂಜೆ

ಸವದತ್ತಿ: ಪಟ್ಟಣದ ಸಂಗಪ್ಪನಕೊಳ್ಳದ ಸಂಗಮೇಶ್ವರ ದೇವಸ್ಥಾನಕ್ಕೆ ಶಾಸಕರ ಅನುದಾನದಲ್ಲಿ ಅಂದಾಜು 10 ಲಕ್ಷ ವೆಚ್ಚದಲ್ಲಿ ಶೌಚಾಲಯ ಹಾಗೂ ಇನ್ನಿತರ ಅಭಿವೃದ್ಧಿ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಚಂದ್ರು ಶ್ಯಾಮರಾಯನವರ, ಬಸವರಾಜ ಗುರಣ್ಣವರ, ಸೋಮಯ್ಯ ಗದ್ದಯ್ಯನವರ, ಮಲ್ಲಿಕಾರ್ಜುನ ಬೇವೂರ, ಮೌಲಾಸಾಬ ತಬ್ಬಲಜಿ, ಜಗದೀಶ್ ಹಳೇಮಣಿ, ದಿಲಾವರ ಸನದಿ ಸೇರಿ ಮುಖಂಡರು ಇದ್ದರು.

ಅಭಿವೃದ್ಧಿ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಭೂಮಿ ಪೂಜೆ ನೆರವೇರಿಸಿದರು.

ಯರಗಟ್ಟಿ ತಹಸೀಲ್ದಾರ್‌ಗೆ ಸನ್ಮಾನ

ಯರಗಟ್ಟಿ: ತಾಲೂಕಿನ ನೂತನ ತಹಸೀಲ್ದಾರ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ತಹಸೀಲ್ದಾರ ಎಂ. ವ್ಹಿ.ಗುಂಡಪ್ಪಗೋಳ ಅವರಿಗೆ ಶಿಕ್ಷಣ ಇಲಾಖೆಯ ಪರವಾಗಿ ಗೌರವ ಸನ್ಮಾನ ಜರುಗಿಸಲಾಯಿತು.

ಈ ಸಂದರ್ಭದಲ್ಲಿ ನಲಿ ಕಲಿ ರಾಜ್ಯ ಸಂಪನ್ಮೂಲ ವ್ಯಕ್ತಿ ಮನೋಹರ ಚೀಲದ. ಸಮನ್ವಯ ಶಿಕ್ಷಣ ಶಿಕ್ಷಕರಾದ ವೈ ಬಿ ಕಡಕೋಳ. ಮುರಗೋಡ ವಲಯದ ಸಮನ್ವಯ ಶಿಕ್ಷಣ ಶಿಕ್ಷಕರಾದ ದುರಗಪ್ಪ ಭಜಂತ್ರಿ. ಬಸವರಾಜ ಹೂಗಾರ ಉಪಸ್ಥಿತರಿದ್ದರು.

ಸುವರ್ಣಾ ಕರೋಶಿಗೆ ಫುಲೆ ಪ್ರಶಸ್ತಿ

ಗೋಕಾಕ: ತಾಲೂಕಿನ ಕೊಳವಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಸುವರ್ಣಾ ಕರೋಶಿ ಇವರು ಶೈಕ್ಷಣಿಕ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಪರಿ ಗಣಿಸಿ ಕರ್ನಾಟಕ ಪ್ರಾಥ ಮಿಕ ಶಿಕ್ಷಕರ ಸಂಘವು ಮಂಡ್ಯ ಜಿಲ್ಲೆಯಲ್ಲಿ ಇತ್ತೀ ಚೆಗೆ ಏರ್ಪಡಿಸಿದ್ದ ಶೈಕ್ಷಣಿಕ ಅಧಿವೇಶನದ ಕಾರ್ಯಕ್ರ ಮದಲ್ಲಿ ಅವರಿಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ರಾಜ್ಯ ಮಟ್ಟದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಶಾಸಕ ರಮೇಶ ಜಾರಕಿಹೊಳಿ, ಗೋಕಾಕ ವಲಯ ಶಿಕ್ಷಣಾಧಿಕಾರಿ ಜಿ.ಬಿ.ಬಳಗಾರ, ಜಿಲ್ಲಾಧ್ಯಕ್ಷ ಎಸ್.ಎಂ ಲೋಕನ್ನವರ ಸೇರಿದಂತೆ ಶಾಲಾ ಶಿಕ್ಷಕ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಮಡಿಕೆಗಳಿಗೆ ಹೆಚ್ಚಿದ ಬೇಡಿಕೆ

ಬೈಲಹೊಂಗಲ: ನಗರದಲ್ಲಿ ಬಿಸಿಲಿನ ಬೇಗೆ ಹೆಚ್ಚುತ್ತಿದೆ. ಸುಡುವ ಬಿಸಿಲಿನೊಂದಿಗೆ ದಾಹವೂ ಹೆಚ್ಚಾಗುತ್ತಿದೆ. ದಾಹ ತಣಿಸಲು ಜನರು ತಂಪು ಪಾನೀಯ ಮತ್ತು ಹಣ್ಣುಗಳ ಮೊರೆ ಹೋಗುತ್ತಿದ್ದರೆ, ಇನ್ನೊಂದೆಡೆ ಧಗೆಯ ನಡುವೆಯೂ ನೈಸರ್ಗಿಕವಾಗಿ ನೀರನ್ನು ತಣ್ಣಗೆ ಇಡುವ ಬಡವರ ಫ್ರಿಜ್ (ಮಣ್ಣಿನ) ಮಡಿಕೆಗಳ ವ್ಯಾಪಾರ ಗರಿಗೆದರುತ್ತಿದೆ.

ಬಿಸಿಲಿನ ತಾಪಮಾನ 31 ಡಿಗ್ರಿ ವರೆಗೂ ಏರಿಕೆಯಾಗಿದ್ದು, ಮಣ್ಣಿನಿಂದ ತಯಾರಿಸಿರುವ ಮಡಿಕೆ ಹಾಗೂ ಕೊಳಾಯಿ ಅಳವಡಿಸಿರುವ ಮಡಿಕೆಗಳಿಗೆ ಬೇಡಿಕೆ ಹೆಚ್ಚಾಗಿದೆ. ಕೆ ಆರ್ ಸಿ ಎಸ್ ಕಾಲೇಜು ರಸ್ತೆಯ ಬಳಿ, ಬಜಾರ ರಸ್ತೆಗಳಲ್ಲಿ ಮಡಿಕೆ ಮಾರಾಟ ಮಾಡುತ್ತಿರುವ ದೃಶ್ಯಗಳು ಕಾಣ ಸಿಗುತ್ತವೆ. ಬೇಸಿಗೆ ಋತುಮಾನದ ಮುಖ್ಯ ವ್ಯಾಪಾರಗಳಲ್ಲಿ ಇದು ಒಂದಾಗಿದೆ. ಮಾರ್ಚ್ ಆರಂಭದಲ್ಲೇ ನೆತ್ತಿ ಸುಡುವ ಬಿಸಿಲಿರುವ ಕಾರಣ ಈ ಬಾರಿ ಮಡಿಕೆ ವ್ಯಾಪಾರಿಗಳು ಒಳ್ಳೆಯ ವಹಿವಾಟಿನ ನಿರೀಕ್ಷೆಯಲ್ಲಿದ್ದಾರೆ.

ಪಟ್ಟಣದ ರಾಯಣ್ಣ ವೃತ್ತ, ಬಜಾರ ರಸ್ತೆಯ ಗೊಂಬಿ ಗುಡಿ , ಬೆಳಗಾವಿ ರಸ್ತೆಯ ಬಳಿ ಈಗಾಗಲೇ ಕುಂಬಾರರು ತಮ್ಮ ಸರಕುಗಳೊಂದಿಗೆ ಠಿಕಾಣಿ ಹೂಡಿದ್ದಾರೆ. ನಲ್ಲಿ ಅಳವಡಿಸಿರುವುದು ಸೇರಿದಂತೆ ವಿವಿಧ ಬಗೆಯ, ಆಕೃತಿಯ ಮಡಿಕೆಗಳು ಗ್ರಾಹಕರನ್ನು ಸೆಳೆಯುತ್ತಿವೆ. ವಿನ್ಯಾಸ, ಗಾತ್ರ ಆಧರಿಸಿ ರೂ. 250 ರಿಂದ 750 ವರೆಗೆ ಬೆಲೆ ನಿಗದಿ ಮಾಡಲಾಗಿದೆ. ಗ್ರಾಹಕರು ದರ ಕುರಿತು ಚೌಕಶಿ ಮಾಡಿ ಮಣ್ಣಿನ ಮಡಿಕೆ ಖರೀದಿಸುತ್ತಿದ್ದಾರೆ.

ತೊಂಡಿಕಟ್ಟಿ ಬುದ್ನಿ ಖುರ್ದದಲ್ಲಿನ ಬಬಲಾದಿ ಶ್ರೀಚಂದ್ರಗಿರಿದೇವಿ ಶ್ರೀಗುರು ಚಕ್ರವರ್ತಿ ಸದಾಶಿವ ಶ್ರೀಗುರು ಗಂಗಯ್ಯ ಸ್ವಾಮಿಗಳವರ ಮಠದ ಜಾತ್ರಾ ಮಹೋತ್ಸವದ ನಿಮಿತ್ಯ ಮಂಗಳವಾರ ಸಂಜೆ ಶ್ರೀಮಠದ ಶ್ರೀರವೀಂದ್ರ ಅಜ್ಜನವರ ಸಾನ್ನಿಧ್ಯದಲ್ಲಿ ಮಹಾರಥೋತ್ಸ ಸಡಗರ ಸಂಭ್ರಮದಿಂದ ಜರುಗಿತು

ನಿರಂತರ ಓದಿನಿಂದ ಗುರಿ ತಲುಪಲು ಸಾಧ್ಯ

ರಾಮದುರ್ಗ: ದ್ವಿತೀಯ ಪಿಯುಸಿ ವಿದ್ಯಾಭ್ಯಾಸದಲ್ಲಿ ಭವಿಷ್ಯ ನಿರ್ಧಾರದ ಘಟ್ಟವಾಗಿದ್ದು, ವಿದ್ಯಾರ್ಥಿಗಳು ಓದುವ ಸಮಯದಲ್ಲಿ ವಿಚಲಿತರಾಗದೇ ಏಕಾಗ್ರತೆ ಕಾಪಾಡಿಕೊಂಡು ನಿರಂತರ ಅಧ್ಯಯನ ಮಾಡಿದಲ್ಲಿ ಮಾತ್ರ ನಿಶ್ಚಿತ ಗುರಿ ತಲುಪಲು ಸಾಧ್ಯವಾಗುತ್ತದೆ ಎಂದು ಪಿಎಸ್ಐ ಸವಿತಾ ಮುನ್ಯಾಳ ಹೇಳಿದರು. ಪಟ್ಟಣದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸ್ಟೇಟ್ ಸಂಯುಕ್ತ ಪದವಿಪೂರ್ವ ಮಹಾ ವಿದ್ಯಾಲಯದಲ್ಲಿ ಇತ್ತೀಚೆಗೆ ಏರ್ಪಡಿಸಿದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಅಧ್ಯಯನ ಮಾಡುವ ವಯಸ್ಸಿನದಲ್ಲಿ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾದರೆ ತಮ್ಮ ಭವಿಷ್ಯವನ್ನು ತಾವೇ ಹಾಳು ಮಾಡಿಕೊಂಡಂತಾಗುತ್ತದೆ. ವಿದ್ಯಾರ್ಥಿಗಳು ಉಪನ್ಯಾಸಕರ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡಿ, ಹೆಚ್ಚು ಅಂಕ ಗಳಿಸಿ, ಕಲಿತ ಕಾಲೇಜು ಹಾಗೂ ತಾಲೂಕಿನ ಕೀರ್ತಿ ಹೆಚ್ಚಿಸಿ, ಪಾಲಕರ ಮೆಚ್ಚುಗೆ ಗಳಿಸಿಕೊಳ್ಳಬೇಕು ಎಂದರು. ಪ್ರಾಚಾರ್ಯ ಬೂದೇಶ್ವರ ಎಸ್. ಎಸ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಸಂಸ್ಥೆಯಲ್ಲಿ ದೊರೆಯುವ ಉಪನ್ಯಾಸಕರು ಹಾಗೂ ಸಂಪನ್ಮೂಲಗಳ ಸದ್ಬಳಕೆ ಮಾಡಿಕೊಂಡು ಸಾಧನೆ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಉಪ ಪ್ರಾಚಾರ್ಯ ಎಸ್.ಬಿ. ದಾಸರ, ಉಪನ್ಯಾಸಕಿಯರಾದ ಉಮಾ ಮಾಚಕನೂರ, ಎಸ್.ಬಿ. ಕಳಸಪ್ಪನವರ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿ ಇದ್ದರು. ಉಪನ್ಯಾಸಕ ಎಂ.ಎನ್. ಚಂದರಗಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಜಿ.ಎಸ್. ಹಿರೇಮಠ ವಂದಿಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮಾನಸಿಕ ಕಾಯಿಲೆಗಳ ಕುರಿತು ಮಾಹಿತಿಗಳು

ದೆವ್ವ ಭೂತಗಳ ಚೇಷ್ಟೆಯಿಂದ, ಮಾಟ ಮಂತ್ರಗಳಿಂದ, ಪೂರ್ವಜನ್ಮದ ಪಾಪಗಳಿಂದ, ಮದ್ದು ಹಾಕುವುದರಿಂದ ಮಾನಸಿಕ ಕಾಯಿಲೆಗಳು ಬರುವುದಿಲ್ಲ. ಮಿದುಳಿನಲ್ಲಿ ಆಗುವ ಕೆಲವು ಬದಲಾವಣೆಗಳು, ಮಿದುಳಿನ ಕಾಯಿಲೆಗಳು, ವಾತಾವರಣದಲ್ಲಿ ಕಂಡು ಬರುವ ತೊಂದರೆಗಳು, ಕಷ್ಟನಷ್ಟಗಳು, ಮೇಲಿಂದ ಮೇಲೆ ಮನಸ್ಸಿಗೆ ಆಗುವ ನೋವು ನಿರಾಶೆಗಳು, ಮದ್ಯಪಾನ ಮತ್ತು ಮಾದಕ ವಸ್ತುಗಳ ಸೇವನೆ ಇವುಗಳಿಂದ ಮಾನಸಿಕ ಕಾಯಿಲೆಗಳು ಬರುತ್ತವೆ.

ಮಾನಸಿಕ ಅಸ್ವಸ್ಥರು ತಮ್ಮ ಚಿಕಿತ್ಸೆಗಾಗಿ ಮುಂಚಿತ ನಿರ್ದೇಶನ ನೀಡಬಹುದು ಮತ್ತು ತಮ್ಮ ಪ್ರತಿನಿಧಿಗಳನ್ನು ನಾಮ ನಿರ್ದೇಶನ ಮಾಡಬಹುದು (ಮಾನಸಿಕ ಆರೋಗ್ಯ ಆರೈಕೆ ಕಾಯಿದೆ 2017).

ಮಾನಸಿಕ ಆರೋಗ್ಯ ಆರೈಕೆಕಾಯಿದೆ 2017 ರ ಅನ್ವಯ ಮಾನಸಿಕ ಆರೋಗ್ಯ ಸಂಸ್ಥೆಗಳು ಮತ್ತು ಮಾನಸಿಕ ಆರೋಗ್ಯ ವೃತ್ತಿಪರರು ಕಡ್ಡಾಯ ನೋಂದಣಿ ಮಾಡುವ ಬಗ್ಗೆ

ಸೆಕ್ಷನ್ 65 (1) ರ ಪ್ರಕಾರ "ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸದೇ ಯಾವುದೇ ವ್ಯಕ್ತಿಯೂ/ಸಂಸ್ಥೆಯೂ ಮಾನಸಿಕ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸುವಂತಿಲ್ಲ ಅಥವಾ ನಡೆಸುವಂತಿಲ್ಲ" ರಾಜ್ಯದ ಸರ್ಕಾರಿ ಮತ್ತು ಖಾಸಗಿ ಮಾನಸಿಕ ಆರೋಗ್ಯ ಸಂಸ್ಥೆಗಳು /ದುಶ್ಚಟ ನಿವಾರಣಾ ಕೇಂದ್ರಗಳು/ ಪುನರ್ವಸತಿ ಕೇಂದ್ರಗಳು ಮತ್ತು ಮಾನಸಿಕ ಆರೋಗ್ಯ ವೃತ್ತಿಪರರು e-manas ಜಾಲತಾಣದ ಲಿಂಕ್ ಮೂಲಕ ನೋಂದಾಯಿಸುವುದು.
https://e-manas.karnataka.gov.in/mhms_mhd/#/

ಮಾನಸಿಕ ಆರೋಗ್ಯ ಆರೈಕೆ ಕಾಯಿದೆ 2017 ರ ಪ್ರಕಾರ ಮಾನಸಿಕ ಅಸ್ವಸ್ಥರ ಹಕ್ಕುಗಳು ಕುರಿತು ಮಾಹಿತಿಗಳು

"ಉತ್ತಮ ಗುಣಮಟ್ಟದ ಮಾನಸಿಕ ಚಿಕಿತ್ಸೆ ಪಡೆಯುವ ಹಕ್ಕು , ಸಮುದಾಯದಲ್ಲಿ ಜೀವಿಸುವ ಹಕ್ಕು , ಚಿಕಿತ್ಸಾ ಸಮಯದಲ್ಲಿ ಘನತೆಯುಳ್ಳ ಸಮಾನ ಚಿಕಿತ್ಸೆ ಪಡೆಯುವ ಹಕ್ಕು , ಅಂಬ್ಯುಲೆನ್ಸ್‌ಸೇವೆ ಪಡೆಯುವ ಹಕ್ಕು , ಆರೋಗ್ಯ ವಿಮೆ ಪಡೆಯುವ ಹಕ್ಕು" ಹಾಗೂ ಸೇವೆಗಳಲ್ಲಿನ ಕೊರತೆಗಳ ಬಗ್ಗೆ ದೂರು ನೀಡುವ ಹಕ್ಕು

ಮಾನಸಿಕ ಆರೋಗ್ಯ ಆರೈಕೆ ಕಾಯಿದೆ 2017 ರಡಿ ಸೆಕ್ಷನ್ 107 ರ ಪ್ರಕಾರ ಮಾನಸಿಕ ಆರೋಗ್ಯ ಸಂಸ್ಥೆಗಳು ನೋಂದಣಿ ಮಾಡದಿದ್ದಲ್ಲಿ ದಂಡಗಳು

ಮೊದಲನೆಯ ಉಲ್ಲಂಘನೆಯ ದಂಡ ರೂ.5000/- (ಕನಿಷ್ಠ) ರಿಂದ ರೂ.50,000/-
ಎರಡನೆಯ ಉಲ್ಲಂಘನೆಯ ದಂಡ ರೂ.50,000/- (ಕನಿಷ್ಠ) ರಿಂದ ರೂ.2,00,000/-
ಮೂರನೆಯ ಉಲ್ಲಂಘನೆಯ ದಂಡ ರೂ.2,00,000/- (ಕನಿಷ್ಠ) ರಿಂದ ರೂ.5,00,000/-
ನೋಂದಾಯಿತವಲ್ಲದ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ಸೇವೆಸಲ್ಲಿಸುತ್ತಿರುವ ಮಾನಸಿಕ ಆರೋಗ್ಯ ವೃತ್ತಿಪರರಿಗೆ ರೂ.25,000/- ವರೆಗಿನ ದಂಡ ವಿಧಿಸ ಬಹುದಾಗಿದೆ.

ಸಾರ್ವಜನಿಕ ಹಿತಕ್ಕಾಗಿ ಪ್ರಕಟಣೆ ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ

ಮನೋರೋಗಕ್ಕೆ ಮದ್ದಿದೆ. ಯಾವುದೇ ಮಾನಸಿಕ ಸಮಸ್ಯೆಗಳಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ

ಟೆಲಿ ಮನಸ್
ಶುಲ್ಕ ರಹಿತ ದೂರವಾಣಿ ಸಂಖ್ಯೆ 14416 ಗೆ ಕರೆ ಮಾಡಿ ಸಹಾಯ ಪಡೆಯಿರಿ.

ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಸಚಿವರು ಇಲಾಖಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು

"ದೇಶದ ಕಾಡು, ವನ್ಯಜೀವಿ, ನದಿಗಳು ಒಳಗೊಂಡಂತೆ ಪರಿಸರ ಉಳಿಸಿ ಬೆಳೆಸುವುದು" - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | ನಿಮ್ಮ ಆರೋಗ್ಯ, ನಮ್ಮ ಆದ್ಯತೆ.

ಮಂಡ್ಯ ಜಿಲ್ಲೆಯ ಕೊತ್ತತ್ತಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಕೃಷಿ ವಿಹಾರ | ರಾಜ್ಯದಲ್ಲಿ ರೈತ ವಿರೋಧಿ ಸರಕಾರ: ಕಾಂಗ್ರೆಸ್ ವಿರುದ್ಧ ಬಿವೈವಿ ವಾಗ್ದಾಳಿ

ಗದ್ದೆಗಿಳಿದು ನಾಟಿ ಮಾಡಿದ ವಿಜಯೇಂದ್ರ

ಮಂಡ್ಯ: ತಮ್ಮ ತಂದೆ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ತವರು ಜಿಲ್ಲೆ ಮಂಡ್ಯದ ಕೊತ್ತತ್ತಿಯಲ್ಲಿ ಗದ್ದೆಗಿಳಿದು ಭತ್ತದ ನಾಟಿ ಮಾಡುವ ಮೂಲಕ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕೃಷಿಕರು ಹಾಗೂ ಪಕ್ಷದ ಕಾರ್ಯಕರ್ತರ ಗಮನ ಸೆಳೆದರು.

ಸಿಎಂ ಸಿದ್ದರಾಮಯ್ಯ ರೈತರ ಪರವಾದ ಬಜೆಟ್ ಕೊಡಲಿ, ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡಲಿ ಎಂದು ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸುತ್ತೇನೆ. ರೈತರು ಭೀಕರ ಬರಗಾಲ ಎದುರು ನೋಡುತ್ತಿದ್ದಾರೆ. ಶುದ್ಧ ಕುಡಿಯುವ ನೀರು ಕೊಡಬೇಕು.

-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಕೊತ್ತತ್ತಿಯಲ್ಲಿ ರೈತರೊಂದಿಗೆ ಭತ್ತದ ಸಸಿ ನಾಟಿಮಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ.

ಸ್ಥಳೀಯ ಬಿಜೆಪಿ ಮುಖಂಡ ಸಚ್ಚಿದಾನಂದ ಇಂಡುವಾಳು ನೇತೃತ್ವದಲ್ಲಿ ಈ ಭಾಗದ ರೈತರಿಗೆ ಆತ್ಮಸ್ಥೈರ್ಯ ತುಂಬಲು ಭತ್ತದ ನಾಟಿ ಏರ್ಪಡಿಸಲಾಗಿತ್ತು. ಮಂಗಳವಾರ ಬೆಳಗ್ಗೆ 11 ಗಂಟೆಗೆ ಕ್ಯಾತುಂಗೆರೆ ಗ್ರಾಮಕ್ಕೆ ಆಗಮಿಸಿದ ವಿಜಯೇಂದ್ರ ಅವರನ್ನು ಕ್ರೇನ್ ಮೂಲಕ ಬೃಹತ್ ಕಬ್ಬಿನಹಾರ ಹಾಕಿ ಸ್ವಾಗತಿಸಲಾಯಿತು. ಬಿಳಿ ಶರ್ಟ್, ಪಂಚೆಯಲ್ಲಿ ಕಂಗೊಳಿಸುತ್ತಿದ್ದ ರಾಜ್ಯಾಧ್ಯಕ್ಷರು ವೀರಾಂಜನೇಯ ದೇಗುಲದಲ್ಲಿ ಪೂಜೆ ಸಲ್ಲಿಸಿ, ಸ್ವತಃ ತಾವೇ ಟ್ರ್ಯಾಕ್ಟರ್ ಚಲಾಯಿಸುವ ಮೂಲಕ ಕ್ಯಾತುಂಗೆರೆ, ಬೇವಿನಹಳ್ಳಿ ಮಾರ್ಗವಾಗಿ ಕೊತ್ತತ್ತಿಗೆ ಆಗಮಿಸಿದರು. ಸಾವಿರಾರು ಬಿಜೆಪಿ ಕಾರ್ಯಕರ್ತರು ವಿಜಯೇಂದ್ರಗೆ ಸಾಥ್ ನೀಡಿದರು.

ಮಹಿಳೆಯರೊಂದಿಗೆ ನಾಟಿ: ಕೊತ್ತತ್ತಿ ಗ್ರಾಮದ ರೈತರಾದ ಸುಕೇಂದ್ರ ಮತ್ತು ಶಿವಬಸಪ್ಪ ಅವರ ಜಮೀನಿನಲ್ಲಿ ರೈತ ಮಹಿಳೆಯರು ಹಾಗೂ ಸ್ಥಳೀಯ ಬಿಜೆಪಿ ಮುಖಂಡರೊಂದಿಗೆ ವಿಜಯೇಂದ್ರ, ಪಂಚೆಯನ್ನು ಸೊಂಟಕ್ಕೆ ಕಟ್ಟಿ ಕೆಸರು ಗದ್ದೆಗಿಳಿದು ನಾಟಿ ಪೈರು ನೆಟ್ಟರು. ಈ ವೇಳೆ, ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ಸಾಮೂಹಿಕ ಭೋಜನ: ನಾಟಿ ಕಾರ್ಯದ ಬಳಿಕ ರೈತರೊಂದಿಗೆ ಬಿ.ವೈ.ವಿಜಯೇಂದ್ರ, ಸಾಮೂಹಿಕ ಭೋಜನ ಸವಿದರು. ಅವರೇಕಾಳು ಸಾರು, ಮುದ್ದೆ, ಅನ್ನ, ಸಾಂಬಾರ್, ಮೈಸೂರು ಪಾಕ್‌ನ್ನು ವಿಜಯೇಂದ್ರ ಸವಿದರು. ಬಳಿಕ ತಮ್ಮೊಂದಿಗೆ ನಾಟಿ ಮಾಡಿದ ರೈತ ಮಹಿಳೆಯರ ಜತೆ ಮಾತುಕತೆ ನಡೆಸಿದರು.

ರೈತವಿರೋಧಿ ಸರಕಾರ

ಈ ಸಂದರ್ಭದಲ್ಲಿ ಜನರನ್ನುದ್ದೇಶಿಸಿ ಮಾತನಾಡಿದ ವಿಜಯೇಂದ್ರ, ರಾಜ್ಯದಲ್ಲಿ ಬಡವರ ವಿರೋಧಿ ಹಾಗೂ ಭ್ರಷ್ಟ ಕಾಂಗ್ರೆಸ್ ಸರಕಾರವಿದ್ದು, ಅಭಿವೃದ್ಧಿ ಶೂನ್ಯವಾಗಿದೆ. ವಿಧಾನಮಂಡಲ ಅಧಿವೇಶನದಲ್ಲಿ ಸರಕಾರದ ಕಿವಿ ಹಿಂಡುವ ಕೆಲಸ ಮಾಡುತ್ತೇವೆ. ಕಾಂಗ್ರೆಸ್ ಆಡಳಿತದ ನಿಜವಾದ ಬಣ್ಣವನ್ನು ಜನರ ಮುಂದೆ ಬಯಲು ಮಾಡುತ್ತೇವೆ ಎಂದು ಘೋಷಿಸಿದರು. ಪ್ರಧಾನಿ ಮೋದಿ ಅವರು ಕಿಸಾನ್ ಸಮ್ಮಾನ್ ಯೋಜನೆಯಡಿ ರೈತರಿಗೆ ಆರು ಸಾವಿರ ರು. ಕೊಟ್ಟರು. ಕರ್ನಾಟಕದಲ್ಲಿ ಯಡಿಯೂರಪ್ಪ ಅವರು ನಾಲ್ಕು ಸಾವಿರ ಕೊಟ್ಟರು. ಆದರೆ ಕಾಂಗ್ರೆಸ್ ಸರಕಾರ ಅದನ್ನು ನಿಲ್ಲಿಸಿದೆ. ರೈತ ವಿದ್ಯಾನಿಧಿಯನ್ನೂ ನಿಲ್ಲಿಸಿದೆ. ಕಾಂಗ್ರೆಸ್ ಆಡಳಿತಕ್ಕೆ ಬಂದ ನಂತರ ರೈತರ ಪರ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಬದಲಾಗಿ ಕಾವೇರಿ ಕೊಳ್ಳದ ರೈತರಿಗೆ ಅನ್ಯಾಯವಾಗಿದೆ. ತಮಿಳುನಾಡಿನ ಸ್ಟಾಲಿನ್ ಗೆ ಖುಷಿ ಪಡಿಸಲು ಸರಕಾರ ಮುಂದಾಗಿದ್ದು, ರೈತರು ಕಂಗಾಲಾಗಿದ್ದಾರೆ. ಮುಂದೆ ಭೀಕರ ಪರಿಸ್ಥಿತಿ ಪರಿಸ್ಥಿತಿ ಎದುರಾಗುತ್ತದೆ ಎಂದು ವಿಜಯೇಂದ್ರ ಎಚ್ಚರಿಕೆ ಕೊಟ್ಟರು.

ರಾಡ್‌ನಿಂದ ಹೊಡೆದು ರೌಡಿಶೀಟರ್ ಹತ್ಯೆ

ಕಲಬುರಗಿ: ನಗರದಲ್ಲಿ ಮಂಗಳವಾರ ಬೆಳ್ಳಂಬೆಳಗ್ಗೆ ರೌಡಿಶೀಟರ್‌ನನ್ನು ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಭವಾನಿ ನಗರದಲ್ಲಿ ಮಂಗಳವಾರ ನಡೆದಿದೆ. ರೌಡಿಶೀಟರ್ ವೀರೇಶ್ ಅಲಿಯಾಸ್ ಸಾರಥಿ (40) ಕೊಲೆಯಾದ ರೌಡಿ ಶೀಟರ್ ಆಗಿದ್ದಾನೆ. ನಗರದ ಕಾಕಡೇ ಚೌಕ್, ನ ಲಂಗರ್ ಹನುಮಾನ್ ದೇವಸ್ಥಾನದ ಬಳಿ ಕರೆಸಿ ರಾಡ್‌ನಿಂದ ಹೊಡೆದು ಭೀಕರವಾಗಿ ಹತ್ಯೆ ಮಾಡಲಾಗಿದೆ. ಈ ಕುರಿತು ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಕಲಬುರಗಿ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ, ಡಿಸಿಪಿ ಕನಿಕಾ ಸಿಕ್ರಿವಾಲ್ ಭೇಟಿನೀಡಿದ್ದರು.



ಮುಖ್ಯಶಿಕ್ಷಕನಿಂದ ಅತ್ಯಾಚಾರ: ಆರೋಪ

ಲೈಂಗಿಕ ಕಿರುಕುಳ: ಬಿಇಒ ವಶಕ್ಕೆ

ಮೈಸೂರು: ಎಚ್.ಡಿ ಕೋಟೆ ಸರಕಾರಿ ಶಾಲೆಯ ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ ಕುರಿತಂತೆ ಎಚ್.ಡಿ.ಕೋಟೆಯ ಬಿಇಒ ಕಾಂತರಾಜು ಅವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಶಾಲೆಯಲ್ಲಿ ವಿದ್ಯಾರ್ಥಿನಿಯರ ಮೇಲೆ ನಡೆದಿದ್ದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಶಿಕ್ಷಕ ಗಿರೀಶ್ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿದ್ದು, ಆರೋಪಿ ನಾಪತ್ತೆಯಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಕರ್ತವ್ಯಲೋಪ ತೋರಿದ ಆರೋಪದ ಮೇಲೆ ಬಿಇಒ ಕಾಂತರಾಜ್, ಸಿಆರ್‌ಪಿ ದೀಪಾ, ಇಸಿಒ ಜಯರಾಂ ಅವರನ್ನು ಅಮಾನತು ಮಾಡಿ ಡಿಡಿಪಿಐ ಜವರೇಗೌಡ ಆದೇಶ ಹೊರಡಿಸಿದ್ದಾರೆ.

ನಂತರ ಬಿಇಒ ಕಾಂತರಾಜು ಅವರನ್ನು ಪೊಲೀಸರು ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ. ಮುಖ್ಯ ಶಿಕ್ಷಕ ಗಿರೀಶ್ ಎಂಬಾತ ಜಂತುಹುಳ ಮಾತ್ರೆ ಎಂದು ವಿದ್ಯಾರ್ಥಿನಿಯರಿಗೆ ನಂಬಿಸಿ ಪ್ರಜ್ಞೆ ತಪ್ಪುವ ಮಾತ್ರೆ ಕೊಟ್ಟು ಅತ್ಯಾಚಾರ ಎಸಗಿದ್ದಾನೆ ಎಂಬ ಆರೋಪ ಕೇಳಿ ಬಂದಿದೆ.

ಹಲವು ದಿನಗಳಿಂದ ಮುಖ್ಯ ಶಿಕ್ಷಕ ಇದೇ ದುರ್ವರ್ತನೆ ತೋರಿಸುತ್ತಿದ್ದ ಎಂದು ದೂರಲಾಗಿದೆ. ಶಾಲೆಯ ಶಿಕ್ಷಕರ ಬಳಿ ವಿದ್ಯಾರ್ಥಿನಿಯರು ದೂರು ಹೇಳಿದ್ದು, ಪೋಷಕರಿಗೂ ಮಾಹಿತಿ ನೀಡಿದ್ದರು. ಎಚ್.ಡಿ ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪರಾರಿಯಾಗಿರುವ ಗಿರೀಶ್‌ಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ನಾಲ್ವರ ಬಂಧನ | ಮುಖ್ಯ ಸಂಚುಕೋರರು ಪರಾರಿ, ಪತ್ತೆಗೆ ಕಾರ್ಯಾಚರಣೆ

ದಂಪತಿ ಅಪಹರಣ ಸುಖಾಂತ್ಯ

- ಕಿಡ್ನಾಪ್ ಆದ ನಿಶಾಂತ್ ಬಳಿ ಫೇಕ್ ಬಿಬಿಎಂಪಿ ಐಡಿ
- ಹಣಕಾಸಿನ ವಿಚಾರಕ್ಕೆ ಕುಟುಂಬವೇ ಕಿಡ್ನಾಪ್
- ಕಿಡ್ನಾಪ್ ನ ಮಾಸ್ಟರ್ ಮೈಂಡ್‌ಗಳು ಪರಾರಿ

ಚಾಮರಾಜನಗರ : ಪ್ರವಾಸಿತಾಣವಾದ ಬಂಡೀಪುರಕ್ಕೆ ಬಂದಿದ್ದ ಕುಟುಂಬವೊಂದು ಅಪಹರಣಕ್ಕೊಳಗಾದ ಪ್ರಕರಣವನ್ನು 24 ಗಂಟೆಗಳಲ್ಲೇ ಚಾಮರಾಜನಗರ ಪೊಲೀಸರು ಸುಖಾಂತ್ಯಗೊಳಿಸಿದ್ದಾರೆ. ನಾಲ್ವರು ಅಪಹರಣಕಾರರನ್ನು ಬಂಧಿಸಲಾಗಿದೆ. ಹಣಕಾಸಿನ ವಿಚಾರಕ್ಕೆ ಇಡೀ ಕುಟುಂಬವನ್ನು ದುಷ್ಕರ್ಮಿಗಳು ಅಪಹರಿಸಿದ್ದರೆಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣದ ವಿವರ: ಬೆಂಗಳೂರು ಮೂಲದ ನಿಶಾಂತ್ ಪತ್ನಿ ಚಂದನಾ ಮತ್ತು 7 ವರ್ಷದ ಮಗನ ಜತೆ ಭಾನುವಾರ ಬಂಡಿಪುರದ ಕಂಟ್ರಿ ಕ್ಲಬ್ ರೆಸಾರ್ಟ್ ನಲ್ಲಿ ತಂಗಿದ್ದರು. ಮಂಗಳವಾರ ಚೆಕ್‌ಔಟ್ ಆಗಬೇಕಿತ್ತು. ಆದರೆ, ಸೋಮವಾರ ಮಧ್ಯಾಹ್ನ ರೆಸಾರ್ಟ್‌ಗೆ ದಾಳಿ ಮಾಡಿದ ದುಷ್ಕರ್ಮಿಗಳು ಮಗು ಸಮೇತ ದಂಪತಿಯನ್ನು ಅಪಹರಿಸಿದ್ದರು. ವಾಚ್ ಟವರ್‌ನಲ್ಲಿದ್ದ ರೆಸಾರ್ಟ್ ಮ್ಯಾನೇಜರ್ ಗುರುರಾಜ ಆಚಾರ್ಯ ಇದನ್ನು ಗಮನಿಸಿ ಕೂಡಲೇ ನೀಡಿದ ಮಾಹಿತಿ ಹಿನ್ನೆಲೆಯಲ್ಲಿ ಸ್ಥಳಕ್ಕೆ ಪೊಲೀಸರು ದೌಡಾಯಿಸಿ ಅಪಹರಣದ ಮಾಹಿತಿ ಪಡೆದರು.

ಸಿಸಿಟಿವಿ ಆಧರಿಸಿ ಬಂಧನ: ಅಪಹರಣಕಾರರ ಬೆನ್ನುಹತ್ತಿದ ಪೊಲೀಸರು ಸಿಸಿಟಿವಿ ಹಾಗೂ ಸಿಡಿಆರ್ ಮಾಹಿತಿ ಆಧರಿಸಿ 24 ಗಂಟೆಗಳಲ್ಲೇ ದಂಪತಿ ಮತ್ತು ಮಗುವನ್ನು ರಕ್ಷಿಸಿದ್ದಾರೆ. 2 ಕಾರುಗಳಲ್ಲಿ ಬಂದಿದ್ದ ಅಪಹರಣಕಾರರು ಮೂವರನ್ನು ಅಪಹರಿಸಿ ವಿಜಯಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಹೊನ್ನಹಳ್ಳಿಯ ತೋಟದಮನೆಯಲ್ಲಿ ಇರಿಸಿದ್ದನ್ನು ಪತ್ತೆ ಹಚ್ಚಿದ ಪೊಲೀಸರು ನಾಲ್ವರು ದುಷ್ಕರ್ಮಿಗಳನ್ನು ಹೆಡೆಮುರಿ ಕಟ್ಟಿದ್ದಾರೆ. ಮಲ್ಲಿಕಾರ್ಜುನ್, ಈರಣ್ಣ, ಸಿದ್ದರಾಮಯ್ಯ, ವಿಶ್ವನಾಥ್ ಬಂಧಿತ ಅಪಹರಣಕಾರರು.

ನಕಲಿ ಬಿಬಿಎಂಪಿ ಗುರುತಿನ ಕಾರ್ಡ್: ಕಿಡ್ನಾಪ್ ಆದ ನಿಶಾಂತ್ ಬಳಿ ನಕಲಿ ಬಿಬಿಎಂಪಿ ಗುರುತಿನ ಕಾರ್ಡ್ ಪತ್ತೆಯಾಗಿದ್ದು ಸಾಕಷ್ಟು ಅನುಮಾನ ಹುಟ್ಟುಹಾಕಿದೆ. ನಿಶಾಂತ್ ವಿರುದ್ಧವೂ ಕೇಸ್ ದಾಖಲು ಮಾಡುವುದಾಗಿ ಪೊಲೀಸರು ತಿಳಿಸಿದ್ದಾರೆ. ಪ್ರಕರಣದ ಒಳಸಂಚುಕೋರ ಪುನೀತ್ ಹಾಗೂ ನಿಶಾಂತ್ ನಡುವೆ ಹಣಕಾಸಿನ ವಿಚಾರಕ್ಕೆ ಮನಸ್ತಾಪವಿತ್ತು. ಪುನೀತ್, ಸ್ನೇಹಿತ್, ಭೀಮನಗೌಡ ತಲೆಮರೆಸಿಕೊಂಡಿದ್ದು , ಅವರ ಪತ್ತೆಗೆ ಬಲೆ ಬೀಸಿದ್ದಾರೆ. 24 ತಾಸಲ್ಲೇ ಪ್ರಕರಣ ಸುಖಾಂತ್ಯ ಮಾಡಿರುವ ಚಾಮರಾಜನಗರ ಪೊಲೀಸರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

2050ಕ್ಕೆ ಭಾರತದಲ್ಲಿ ಧಡೂತಿಗಳ ಸಾಮ್ರಾಜ್ಯ

← ಮೊದಲಪುಟದಿಂದ

2050ರ ಹೊತ್ತಿಗೆ ಜಾಗತಿಕ ಮಟ್ಟದಲ್ಲಿ 1.8 ಶತಕೋಟಿ ಪುರುಷರು ಹಾಗೂ 1.9 ಶತಕೋಟಿ ಮಹಿಳೆಯರನ್ನು ಒಳಗೊಂಡು 3.8 ಶತಕೋಟಿ ಜನರು ಅಧಿಕ ದೇಹ ತೂಕ ಸಮಸ್ಯೆಯಿಂದ ಬಳಲಿದ್ದಾರೆ. ಚೀನಾ, ಭಾರತ ಮತ್ತು ಅಮೆರಿಕದಲ್ಲಿ ಅಧಿಕ ತೂಕದ ವ್ಯಕ್ತಿಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಲೇ ಇದೆ. ಮತ್ತೊಂದೆಡೆ ಆಫ್ರಿಕಾದಲ್ಲಿ ಸ್ಥೂಲಕಾಯ ದೇಹವುಳ್ಳವರ ಸಂಖ್ಯೆ ಶೇ.254.8ರಷ್ಟು ಹೆಚ್ಚಳವಾಗಲಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಬಾಡಿ ಮಾಸ್ ಇಂಡೆಕ್ಸ್ (BMI) 30ಕ್ಕಿಂತ ಹೆಚ್ಚಿರಬಾರದು. ಇಂಥ ಸ್ಥೂಲಕಾಯ ದೇಹ ಹೊಂದಿದವರಲ್ಲಿ ಚಯಾಪಚಯ ಪ್ರಕ್ರಿಯೆ ಹಾಗೂ ಹೃದಯ ಸಂಬಂಧಿ ಸಮಸ್ಯೆ ಹೆಚ್ಚಳವಾಗಿರುತ್ತದೆ. ಇದು ಮೂಳೆ ಆರೋಗ್ಯ, ಭಂಜೆತನ ಹಾಗೂ ಕ್ಯಾನ್ಸರ್‌ಗೂ ಕಾರಣವಾಗಬಹುದು ಎಂದು ಅಧ್ಯಯನ ಹೇಳಿದೆ.

ಸ್ಥೂಲಕಾಯವನ್ನು ಪತ್ತೆ ಮಾಡುವ ಮತ್ತೊಂದು ವಿಧಾನದ ಕುರಿತು ಲ್ಯಾನ್ಸೆಟ್ ಕಮಿಷನ್ ವರದಿಯಲ್ಲಿ ಹೇಳಲಾಗಿದ್ದು, ಸೊಂಟದ ಸುತ್ತಳತೆ ಅಥವಾ ಸೊಂಟ ಮತ್ತು ಪೃಷ್ಠದ ಭಾಗದ ಸುತ್ತಳತೆಯ ಅನುಪಾತವನ್ನೂ ಆಧರಿಸಿ ಬಿಎಂಐ ಲೆಕ್ಕ ಮಾಡಬಹುದು ಎಂದೆನ್ನಲಾಗಿದೆ. ಆದರೆ, ಆರೋಗ್ಯ ಮತ್ತು ರೋಗದ ವಿಷಯದಲ್ಲಿ ಬಿಎಂಐನಿಂದ ಸರಿಯಾದ ಮಾಹಿತಿ ಸಿಗದು. ಇದರಿಂದ ತಪ್ಪು ಚಿಕಿತ್ಸೆ ಪಡೆಯುವ ಅಪಾಯವೂ ಹೆಚ್ಚಿದೆ ಎಂದು ಅಧ್ಯಯನ ಹೇಳಿದೆ.

ಜಾಗತಿಕ ಮಟ್ಟದಲ್ಲಿ ದೇಹ ತೂಕ ಮತ್ತು ಸ್ಥೂಲಕಾಯ ಸಮಸ್ಯೆಯು ಗಣನೀಯವಾಗಿ ಹೆಚ್ಚಳವಾಗುತ್ತಿರುವುದು ದುರಂತವಷ್ಟೇ ಅಲ್ಲದೆ, ಸಮಾಜದ ವೈಫಲ್ಯ ಕೂಡ. ಇದಕ್ಕೆ ಸರಕಾರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು ಆದ್ಯತೆಯ ಮೇರೆಗೆ ಪರಿಗಣಿಸಿ, ಚಿಕಿತ್ಸೆ ಮತ್ತು ಪರಿಹಾರಕ್ಕೆ ಮುಂದಾಗಬೇಕು.

– ಇಮ್ಯಾನುಲೆ ಗಾಕಿಡೊ, ಅಮೆರಿಕದ ವಾಷಿಂಗ್ಟನ್

ಪ್ರೇಮಿಯ ಹತ್ಯೆ ತಾನೂ ಆತ್ಮಹತ್ಯೆ

ಬೆಳಗಾವಿ: ಮದುವೆಗೆ ನಿರಾಕರಿಸಿದ್ದಕ್ಕೆ ಸಿಟ್ಟಿಗೆದ್ದು ಯುವತಿಯನ್ನು ಚಾಕುವಿನಿಂದ ಕೊಂದ ಪ್ರೇಮಿ ತಾನೂ ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಳಗಾವಿ ನಗರದಲ್ಲಿ ಮಂಗಳವಾರ ಸಂಜೆ ನಡೆದಿದೆ. ಐಶ್ವರ್ಯ ಲೋಹಾರ್ (18) ಹಾಗೂ ಯಳ್ಳೂರು ಗ್ರಾಮದ ಪ್ರಶಾಂತ ಕುಂಡೇಕರ್ (29) ಮೃತರು. ಪೇಂಟಿಂಗ್ ಕೆಲಸ ಮಾಡುತ್ತಿದ್ದ ಪ್ರಶಾಂತ್ ಕೆಲ ದಿನಗಳಿಂದ ಐಶ್ವರ್ಯಳನ್ನು ಪ್ರೀತಿಸುತ್ತಿದ್ದ. ಐಶ್ವರ್ಯ ತಾಯಿ ಜೊತೆ ಮದುವೆ ವಿಚಾರ ಪ್ರಸ್ತಾಪಿಸಿದ್ದಕ್ಕೆ ಆಕೆ ಮದುವೆ ಬೇಡ, ಚೆನ್ನಾಗಿ ಕೆಲಸ ಮಾಡಿ ಜೀವನ ಕಟ್ಟಿಕೊಳ್ಳುವಂತೆ ಪ್ರಶಾಂತ್ ಗೆ ಬುದ್ಧಿವಾದ ಹೇಳಿದ್ದಳು. ಇಷ್ಟಕ್ಕೆ ಕೋಪಗೊಂಡ ಪ್ರಶಾಂತ್ ಮಂಗಳವಾರ ಸಂಜೆ ಐಶ್ವರ್ಯ ಚಿಕ್ಕಮ್ಮನ ಮನೆಯಲ್ಲಿದ್ದ ಪ್ರೇಮಿಯ ಭೇಟಿಗೆ ಬಂದಿದ್ದಾನೆ. ಈ ವೇಳೆ ವಿಷದ ಬಾಟಲಿ ತಂದಿದ್ದ ಪ್ರಶಾಂತ್ ಐಶ್ವರ್ಯ ಗೆ ಕುಡಿಸಲು ಯತ್ನಿಸಿದ್ದಾನೆ. ಆಕೆ ವಿರೋಧ ಮಾಡಿದ್ದಕ್ಕೆ ಚಾಕುವಿನಿಂದ ಕುತ್ತಿಗೆ ಕೊಯ್ದಾಗ ಐಶ್ವರ್ಯ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ. ಇದರಿಂದ ವಿಚಲಿತನಾದ ಪ್ರಶಾಂತ್ ಅದೇ ಚಾಕುವಿನಿಂದ ತಾನೂ ಕತ್ತು ಕೊಯ್ದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಘಟನಾ ಸ್ಥಳಕ್ಕೆ ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಭೇಟಿ ನೀಡಿದ್ದರು.

ಸಭಾಧ್ಯಕ್ಷರೇ ನಮ್ ಮುಖ ತೋರಿಸಿ!

← ಮೊದಲಪುಟದಿಂದ

ಇದಕ್ಕೆ ಪೂರಕವಾಗಿ ಪ್ರತಿಪಕ್ಷದ ಉಪನಾಯಕ ಅರವಿಂದ್ ಬೆಲ್ಲದ್ ಮಾತನಾಡಿ, ಸದನದಲ್ಲಿನ ಕಾರ್ಯಕಲಾಪಗಳು ನೇರ ಪ್ರಸಾರವಾಗುತ್ತಿವೆ. ಆದರೆ ನಮ್ಮ ನಾಯಕರು ಮಾತನಾಡುವ ವಿಚಾರ ಸದನದ ಸಭಾಂಗಣದಲ್ಲಿ ಅಳವಡಿಸಿರುವ ಟಿವಿಗಳಲ್ಲಿ ಬರುತ್ತಿಲ್ಲ. ನೀವು ಪ್ರಸಾರ ಮಾಡದಂತೆ ಸೂಚನೆ ಕೊಟ್ಟಿದ್ದೀರಾ? ಈ ವಿಚಾರವನ್ನು ನಾವು ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲೂ ಪ್ರಸ್ತಾಪ ಮಾಡಿದ್ದೆವು ಎಂದು ಹೇಳಿದರು. ಈ ಹಿಂದೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸದನದ ಕಾರ್ಯಕಲಾಪಗಳನ್ನು ನೇರ ಪ್ರಸಾರ ಮಾಡುತ್ತಿತ್ತು. ಈಗ ಅದನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ಏಕೆ ಕೊಟ್ಟಿದ್ದೀರಿ? ಅಲ್ಲದೆ ಕೆಲ ಸಚಿವರು ಅನಾವಶ್ಯಕವಾಗಿ ಎದ್ದು ನಿಲ್ಲುತ್ತಾರೆ. ಅದನ್ನು ನಿಯಂತ್ರಿಸಬೇಕು ಎಂದು ಆಗ್ರಹಿಸಿದರು. ಇದಕ್ಕೆ ಸುನೀಲ್ ಕುಮಾರ್, ಯಾವ ನಟ್ಟು, ಬೋಲ್ಟು ಲೂಸ್ ಆಗಿದೆ ಹೇಳಿ. ಅದನ್ನು ಸರಿಪಡಿಸಬೇಕಲ್ಲವೇ? ಎಂದು ಟಾಂಗ್ ಕೊಟ್ಟರು.

ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಸದನದಲ್ಲಿ ಆಡಳಿತ ಮತ್ತು ಪ್ರತಿಪಕ್ಷದ ಶಾಸಕರಿದ್ದೇವೆ. 15 ನಿಮಿಷದಿಂದ ಗಲಾಟೆ ನಡೆಯುತ್ತಿದೆ ಎನ್ನುತ್ತಿದ್ದಂತೆ ಕಾಂಗ್ರೆಸ್ ಶಾಸಕ ಕೆ.ಎಂ.ಶಿವಲಿವಲಿಂಗೇಗೌಡ ಮಾತನಾಡಿ, ಸದನದ ಸಮಯವನ್ನು ಏಕೆ ವ್ಯಯ ಮಾಡುತ್ತಿರಿ? ಕಲಾಪ ನಡೆಯಲು ಬಿಡಿ ಎಂದರು. ಆಗ ಬಿಜೆಪಿಯ ಹಲವು ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆಯಿತು.

ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಶಾಸಕರ ನಡುವೆ ಪರ-ವಿರೋಧ ಚರ್ಚೆ ಏರ್ಪಟ್ಟಿತ್ತು. ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಈ ರೀತಿಯ ಸಮಸ್ಯೆಯಿದ್ದರೆ ಸರಿಪಡಿಸುವ ಭರವಸೆ ನೀಡಿದರೂ, ಗಲಾಟೆ ಮುಂದುವರಿಯಿತು. ಈ ವೇಳೆ ಮಧ್ಯಪ್ರವೇಶಿಸಿದ ಯು.ಟಿ. ಖಾದರ್ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿ, ಸಭೆ ನಡೆಸಿದರು. ಈ ವೇಳೆ ತಾಂತ್ರಿಕ ಸಿಬ್ಬಂದಿಯನ್ನು ಕರೆಸಿ ಈ ರೀತಿಯಾಗದಂತೆ ಕ್ರಮವಹಿಸಲು ಸೂಚನೆ ನೀಡಿದರು.

ಆಡಳಿತ ಪಕ್ಷದವರು ಮಾತನಾಡುವಾಗ ಟಿವಿ ಪರದೆಯಲ್ಲಿ ಕಾಣಿಸುತ್ತಾರೆ. ಸಭಾಧ್ಯಕ್ಷರು ಮಾತನಾಡುವಾಗಲೂ ಕಾಣಿಸುತ್ತದೆ. ಆದರೆ ಬಿಜೆಪಿ ಶಾಸಕರು ಮಾತನಾಡುವಾಗ ಮಾತ್ರ ಏಕೆ ಕಾಣಿಸುವುದಿಲ್ಲ?

-ಬೈರತಿ ಬಸವರಾಜ್, ಶಾಸಕ

ಮಧ್ಯಾಹ್ನವೂ ಇದೇ ಸಮಸ್ಯೆ

ಗಲಾಟೆ ಬಳಿಕ ಸ್ಪೀಕರ್ ಯು.ಟಿ.ಖಾದರ್ ಅವರು ಸದನವನ್ನು ಮುಂದೂಡಿ ಸಭೆ ನಡೆಸಿ ತಾಂತ್ರಿಕ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರು. ಭೋಜನ ವಿರಾಮದ ಬಳಿಕ ನಡೆದ ಕಲಾಪದ ವೇಳೆಯೂ ಪ್ರತಿಪಕ್ಷ ನಾಯಕರನ್ನು ತೋರಿಸದೇ ಇದ್ದಿದ್ದನ್ನು ಗಮನಿಸಿದ ಬಸನಗೌಡ ಪಾಟೀಲ್ ಯತ್ನಾಳ್, ಮತ್ತೆ ಇದೇ ವಿಷಯವನ್ನು ಪ್ರಸ್ತಾಪಿಸಿದರು. ಈ ವೇಳೆ ಪುನಃ ಬಿಜೆಪಿ-ಕಾಂಗ್ರೆಸ್ ಶಾಸಕರ ನಡುವೆ ವಾಕ್ಸಮರ ನಡೆಯಿತು.

ಗ್ಯಾರಂಟಿ ಹೆಸರಲ್ಲಿ ಹಗಲು ದರೋಡೆ

ದಾವಣಗೆರೆ: ರಾಜ್ಯ ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆ ಹೆಸರಿನಲ್ಲಿ ಸುಮ್ಮನೆ ಶಬ್ದ ಮಾಡುತ್ತಾ ಎಸ್‌ಸಿಪಿ, ಟಿಎಸ್ ಪಿ ಉಪ ಯೋಜನೆ ಹಣದ ಹಗಲು ದರೋಡೆ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ದೂರಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ ಸಿಪಿ, ಟಿಎಸ್ ಪಿ ಎಂದರೆ ಪರಿಶಿಷ್ಟ ಜಾತಿ, ಪಂಗಡಗಳ ಉಪ ಯೋಜನೆ ಎಂದರ್ಥ. ಯಾವ ಕಾರಣಕ್ಕೂ ಮುಖ್ಯ ಯೋಜನೆಗೆ ಉಪ ಯೋಜನೆ ಅನುದಾನ ಬಳಸಿಕೊಳ್ಳುವಂತಿಲ್ಲ. ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆಗೆ ಬಡವರ ದುಡ್ಡು ಬೇಕಾ. ಎಸ್ಸಿ-ಎಸ್ಟಿ ಹೆಸರಲ್ಲಿ ಲೂಟಿ ಮಾಡುವ ಸರಕಾರ ಇದಾಗಿದೆ ಎಂದು ದೂರಿದರು. ಗ್ಯಾರಂಟಿ ಯೋಜನೆ ನಿಮ್ಮ ಕರ್ಮ. ಬಜೆಟ್ ನಲ್ಲೇ ಹೇಳಿರುವುದಕ್ಕೆ ಕೊಡಲೇಬೇಕು. ಗ್ಯಾರಂಟಿ ಯೋಜನೆ ಮುಖ್ಯ ಯೋಜನೆ. ಅವು ಉಪ ಯೋಜನೆ ಅಲ್ಲವೇ ಅಲ್ಲ. ಹಾಗಾಗಿ ಗ್ಯಾರಂಟಿ ಯೋಜನೆಗೆ ಎಸ್ ಸಿಪಿ, ಟಿಎಸ್ ಪಿ ಯೋಜನೆ ಅನುದಾನ ಬಳಕೆ ಮಾಡಿಕೊಂಡಿರುವುದು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮಾಡಿದ ಬಹು ದೊಡ್ಡ ದ್ರೋಹ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ

ಹಾವೇರಿ: ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದಕ್ಕೆ ಎಂಜಿನಿಯರಿಂಗ್ ವಿದ್ಯಾರ್ಥಿ ಉಲ್ಲಾಸ್ ಹುದಲಿ ಮಂಗಳವಾರ ದೇವಗಿರಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ. ದೇವಗಿರಿಯ ಸರಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇ ಆ್ಯಂಡ್ ಸಿ ಕೋರ್ಸ್ ಓದುತ್ತಿದ್ದ 21 ವರ್ಷದ ಉಲ್ಲಾಸ್, 4ನೇ ಸೆಮಿಸ್ಟರ್ ಅನುತ್ತೀರ್ಣನಾಗಿದ್ದಕ್ಕೆ ಮನನೊಂದು ತುಂಬಿದ ಕೆರೆಗೆ ಹಾರಿ ಪ್ರಾಣ ಕಳೆದುಕೊಂಡಿದ್ದಾನೆ. ದುರ್ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಹಾವೇರಿ ಗ್ರಾಮೀಣ ಠಾಣೆಯ ಪಿಎಸ್‌ಐ ಹೊಸಮನಿ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು. ಮರಣೋತ್ತರ ಪರೀಕ್ಷೆ ನಂತರ ವಿದ್ಯಾರ್ಥಿಯ ಮೃತದೇಹ ವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 27/2024-25 ದಿನಾಂಕ:25.02.2025 (2ನೇ ಕರೆ)
ಉಲ್ಲೇಖ : ಅಲ್ಪಾವಧಿ_ಟೆಂಡರ್ ನೋಟಿಫಿಕೇಶನ್: 24/2024-25 ದಿನಾಂಕ:31.01.2025
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ **KPWD Class-III & above** ದರ್ಜೆಯ ಗುತ್ತಿಗೆದಾರರಿಂದ ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.
ಸೊರಬ ತಾಲ್ಲೂಕು ವ್ಯಾಪ್ತಿಯಲ್ಲಿನ ಕೆರೆ, ಕಾಲುವೆ ಮತ್ತು ಕೋಡಿ ದುರಸ್ತಿ ಅಭಿವೃದ್ಧಿ ಕಾಮಗಾರಿಗಳ ಟೆಂಡರಿಗಿಟ್ಟ ಮೊತ್ತ ರೂ. 109.86 ಲಕ್ಷಗಳಿಂದ ರೂ. 29.85 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 1.87 ಲಕ್ಷಗಳಿಂದ ರೂ. 0.51 ಲಕ್ಷಗಳು. **(1)** ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ : **03.03.2025** ರಿಂದ **11.03.2025 ಸಂಜೆ 5.30 ರವರೆಗೆ.** (2) ಕಾಮಗಾರಿ ಕ್ರಮ ಸಂಖ್ಯೆ 01 ರ ಪ್ರೀಬಿಡ್ ಸಭೆಯ ದಿನಾಂಕ : **06.03.2025 ಬೆಳಿಗ್ಗೆ 11.00 ಗಂಟೆಗೆ** (ಸ್ಥಳ **ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ. ಶಿವಮೊಗ್ಗ ಜಿಲ್ಲೆ** (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **13.03.2025 ಬೆಳಿಗ್ಗೆ 11.00 ಗಂಟೆಗೆ.** (4) ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ (**www.kppp.karnataka.gov.in**) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

ವಾ.ಸಾ.ಸಂ.ಇ./ಶಿ/ನಂ 13-03
ಝೇಂಕಾರ್/2024-25

ಪಟ್ಟಣ ಪಂಚಾಯಿತಿ ಕಾರ್ಯಾಲಯ
ವೇಮಗಲ್–ಕುರುಗಲ್
Mail id:ka.vemgal.kuragal.tp@gmail.com,
www.vemgal-kurugaltown.mrc.gov.in
ಸಂಖ್ಯೆ:ಪ.ಪಂ.ವೇ–ಕು/ತಾಂತ್ರಿಕ/ಸಿಆರ್/ಟೆಂಡರ್/2024–25
ದಿನಾಂಕ: 03.03.2025

ಟೆಂಡರ್ ಪ್ರಕಟಣೆ

ವೇಮಗಲ್–ಕುರುಗಲ್ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಕೆಟಿಪಿಪಿ ಆಧ್ಯಾದೇಶ 2000ದ ಅನ್ವಯ ಶೇಕಡ/ಐಟಂವಾರು ದರಗಳ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳ ವಿವರಗಳನ್ನು **https://www.kppp.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದಾಗಿರುತ್ತದೆ. **Indent number (1)** DMA/2024-25/WS/WORK_INDENT36205 ಅಂದಾಜು ಮೊತ್ತ: ರೂ.14.50 ಲಕ್ಷ, ಇಎಂಡಿ:ರೂ.36,250/–. **(2)** DMA/2024-25/WS/WORK_INDENT 36272 ಅಂದಾಜು ಮೊತ್ತ ರೂ. 14.50 ಲಕ್ಷ, ಇಎಂಡಿ: ರೂ.36,250/–. **(3)** DMA/2024-25/EL/WORK_INDENT36209 ಅಂದಾಜು ಮೊತ್ತ: ರೂ. 13.22 ಲಕ್ಷ, ಇಎಂಡಿ: ರೂ.33,050/–. **(4)** DMA/2024-25/SE4757 ಅಂದಾಜು ಮೊತ್ತ ರೂ. 14.60ಲಕ್ಷ, ಇಎಂಡಿ: ರೂ.36,400/–. **(5)** DMA/2024-25/SE4726 ಅಂದಾಜು ಮೊತ್ತ: ರೂ.11.90, ಇಎಂಡಿ: ರೂ.29,750/–.
(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: ಕ್ರ.ಸಂ:5 ದಿನಾಂಕ: 10.03.2025 ಸಂಜೆ 17:30 ಕ್ರ.ಸಂ: 1 ರಿಂದ 4 ದಿನಾಂಕ: 18.03.2025 ರ ಸಂಜೆ 17:30 ಘಂಟೆಯವರೆಗೆ ಸಲ್ಲಿಸುವುದು. (2) ಟೆಂಡರ್‌ನ ಬಿಡ್ ದಾಖಲೆಗಳನ್ನು **https://www.kppp.karnataka.gov.in** ನಲ್ಲಿ ತೆರೆಯುವ ಕ್ರ.ಸಂ:5 ದಿನಾಂಕ: 12.03.2025 ಸಂಜೆ 17:30 ಕ್ರ.ಸಂ: 1 ರಿಂದ 4 ದಿನಾಂಕ: 20.03.2025 ರಂದು ಬೆಳಿಗ್ಗೆ 17:30 ಗಂಟೆಗೆ. (3) ಹೆಚ್ಚಿನ ಮಾಹಿತಿಗಾಗಿ **https://www.kppp.karnataka.gov.in**ನಲ್ಲಿ ನೋಡಿಕೊಳ್ಳುವುದು.

ಸಹಿ/– (ಶ್ರೀಮತಿ ಎಸ್. ಅಂಬಿಕಾ KMAS) ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ವೇಮಗಲ್–ಕುರುಗಲ್
ಸಹಿ/– (ಎಸ್.ಎಂ.ವೆಂಕಟೇಶ್) ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ವೇಮಗಲ್–ಕುರುಗಲ್
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:505/ಕೆಎಸ್ಎಂಸಿಎ/2024–25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.
bdr_eemi @yahoo.com eemibidar@gmail.com Phone/Fax: 08482 232080
ನಂ: ಇಇ/ಎಂಐಡಿ/ಬೀದರ/ತಾ.ಶಾ–1,2&3/ಟೆಂಡರ್/2024–25/460 ದಿನಾಂಕ: 03–03–2025

:: ಕೆಪಿಪಿ–ಪ್ರೋಕ್ಯೂರಮೆಂಟ್ನ ಅವಧಿ ವಿಸ್ತರಣೆ ಟೆಂಡರ್ ಪ್ರಕಟಣೆ ::

1) ಕಾಮಗಾರಿಗಳ ವಿವರ: KPP -Portalನಲ್ಲಿ ನಮೂದಿಸಿದಂತೆ, 2) ಕಾಮಗಾರಿಗಳ ಅಂದಾಜು ಮೊತ್ತ: KPP -Portalನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ: KPP -Portalನಲ್ಲಿ ನಮೂದಿಸಿದಂತೆ 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ : KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : KPP -Portalನಲ್ಲಿ ನಮೂದಿಸಿದಂತೆ,

		ಹಿಂದಿನ ದಿನಾಂಕಗಳು	ಪ್ರಸ್ತುತ ದಿನಾಂಕಗಳು
6	ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲ್ಯೂ –1 & ಕೆ.ಡಬ್ಲ್ಯೂ –2 ಮಾತ್ರ	03–03–2025 ರಂದು 17.00 ಗಂಟೆವರೆಗೆ	**07–03–2025 ರಂದು 17.00 ಗಂಟೆವರೆಗೆ**
7	ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲ್ಯೂ –1 & ಕೆ.ಡಬ್ಲ್ಯೂ –2ಮಾತ್ರ	07–03–2025 ರಂದು 16.00 ಗಂಟೆ ವರೆಗೆ	**11–03–2025 ರಂದು 16.00 ಗಂಟೆ ವರೆಗೆ**
8	ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ –1 & ಕೆ.ಡಬ್ಲ್ಯೂ –2ಮಾತ್ರ	10–03–2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ	**13–03–2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ**
9	ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ –1 & ಕೆ.ಡಬ್ಲ್ಯೂ –2ಮಾತ್ರ	12–03–2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ	**15–03–2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ**

10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 11) ಅಂತರ್ಜಾಲ ತಾಣದ ವಿಳಾಸ: KPP portal https://kppp.karnataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/431/ಕೆ.ಎಸ್.ಎಂ.ಸಿ.&ಎ/2024–25

ಪುರಸಭೆ ಯೋಜನಾ ಪ್ರಾಧಿಕಾರ, ಮಹಾಲಿಂಗಪುರ.
ಸಂಖ್ಯೆ:–ಪು.ಯೋ.ಪ್ರಾ.ಮ/ಭೂ–ಬ/2024–25 **ದಿನಾಂಕ: –02–2025**

ಪತ್ರಿಕಾ ಪ್ರಕಟಣೆ

ಭೂ–ಉಪಯೋಗ ಬದಲಾವಣೆ ಮಾಡಲು ಉದ್ದೇಶಿಸಿರುವ ಪ್ರಕಟಣೆಯ ವಿವರವು ಈ ಕೆಳಕಂಡಂತಿದೆ.
1)ಶ್ರೀ ಶಂಕರ ಗುರುಲಿಂಗಪ್ಪ ಅಂಬಿ 2) ಶ್ರೀ ಪವನ ಬಸವರಾಜ ಸೋರಗಾಂವಿ ಹಾಗೂ 3) ಶ್ರೀ ಬಸವರಾಜ ದುಂಡಪ್ಪ ಸೋರಗಾಂವಿ ಸಾ:ಮಹಾಲಿಂಗಪೂರ., ಇವರ ರಬಕವಿ–ಬನಹಟ್ಟಿ ತಾಲೂಕ ಮಹಾಲಿಂಗಪೂರ ಗ್ರಾಮದ ಸ.ನಂ.20/*/5ಬ1 ಕ್ಷೇತ್ರ:0ಎ–23ಗುಂಟೆ ಪೈಕಿ ಕ್ಷೇತ್ರ:0ಎ–03ಗುಂಟೆ "ಅ" ಖರಾಬು ಹೊರತುಪಡಿಸಿ ಕ್ಷೇತ್ರ:0ಎ–20ಗುಂಟೆ, ಸ.ನಂ.20/*/5ಬ2 ಕ್ಷೇತ್ರ:0ಎ–05ಗುಂಟೆ ಹಾಗೂ ಸ.ನಂ.23/*/4 ಕ್ಷೇತ್ರ:01ಎ–23ಗುಂಟೆ ಪೈಕಿ ಕ್ಷೇತ್ರ:0ಎ–02ಗುಂಟೆ "ಅ" ಖರಾಬು ಹೊರತುಪಡಿಸಿ ಕ್ಷೇತ್ರ:0ಎ–16ಗುಂಟೆ ಹೀಗೆ ಒಟ್ಟು ಕ್ಷೇತ್ರ:01ಎ–01ಗುಂಟೆ ಜಮೀನು ವ್ಯವಸಾಯ ವಲಯದ ಪ್ರದೇಶವನ್ನು ವಸತಿ ವಲಯಕ್ಕೆ ಭೂ–ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸರಕಾರದಿಂದ ಅನುಮೋದನೆಯಾದ ಮಹಾಲಿಂಗಪೂರ ಪಟ್ಟಣದ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದೆ. ಸದರಿ ಜಮೀನು ಪಶ್ಚಿಮಕ್ಕೆ 9ಮೀ ಅಗಲದ ಅನುಮೋದಿತ ವಿನ್ಯಾಸದ ರಸ್ತೆಗೆ ಹೊಂದಿಕೊಂಡಿರುತ್ತದೆ. ಎಲ್ಲಾ ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಯೋಗ್ಯದರದಲ್ಲಿ ನಿವೇಶನ ಮಾರಾಟ ಮಾಡುವ ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಭೂ–ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಕ್ರ. ಸಂ	ಗ್ರಾಮ	ಸ.ನಂ.	ಕ್ಷೇತ್ರ (ಎ–ಗು)	ಮಹಾಯೋಜನೆ ಪ್ರಕಾರ ಇಟ್ಟ ಉದ್ದೇಶ	ಅರ್ಜಿದಾರರು ಬಯಸಿದ ಉದ್ದೇಶ
1	ಮಹಾಲಿಂಗಪೂರ	20/*/5ಬ1	0ಎ–23ಗು ಪೈಕಿ 0ಎ–20ಗು	ವ್ಯವಸಾಯ ವಲಯ	ವಸತಿ
2	ಮಹಾಲಿಂಗಪೂರ	20/*/5ಬ2	0ಎ–05ಗು	ವ್ಯವಸಾಯ ವಲಯ	ವಸತಿ
3	ಮಹಾಲಿಂಗಪೂರ	23/*/4	01ಎ–23ಗು ಪೈಕಿ 0ಎ–16ಗು	ವ್ಯವಸಾಯ ವಲಯ	ವಸತಿ

ಆದುದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14ಎ/(1)ಸಿ ರಂತೆ ಭೂ–ಉಪಯೋಗ ಬದಲಾವಣೆ ಕುರಿತು ಸಾರ್ವಜನಿಕ ಸಲಹೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳ ಒಳಗಾಗಿ ಮುಖ್ಯಾಧಿಕಾರಿಗಳು ಪುರಸಭೆ ಯೋಜನಾ ಪ್ರಾಧಿಕಾರ ಮಹಾಲಿಂಗಪೂರ., ರವರ ಕಚೇರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ನಿಗಧಿತ ಅವಧಿಯ ನಂತರದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವದಿಲ್ಲ ತಿಳಿಯಿರಿ.

ಸಹಿ/–ಮುಖ್ಯಾಧಿಕಾರಿಗಳು,
ಪುರಸಭೆ ಯೋಜನಾ ಪ್ರಾಧಿಕಾರ, ಮಹಾಲಿಂಗಪುರ
DIPR/BGK/RO-NO-539/MCA/2024-25

ಇನ್ವೆಸ್ಟ್ ಕರ್ನಾಟಕ 2025ರ ಸಮಾವೇಶದಲ್ಲಿ ಒಡಂಬಡಿಕೆ ಮಾಡಿಕೊಂಡಿರುವ ಹಾಗೂ ಅನುಮೋದನೆ ಪಡೆದಿರುವ ಯೋಜನೆಗಳಿಂದ ಅಂದಾಜು 6 ಲಕ್ಷ ಜನರಿಗೆ ಉದ್ಯೋಗ ದೊರೆಯಲಿದೆ. ಒಟ್ಟು 98 ಕಂಪನಿಗಳೊಂದಿಗೆ ಒಡಂಬಡಿಕೆಗಳಾಗಿವೆ. ಅವುಗಳ ಹೂಡಿಕೆಯು 6,23,970 ಕೋಟಿ ರು. ಆಗಲಿದೆ.

- ಎಂ.ಬಿ.ಪಾಟೀಲ್, ಕೈಗಾರಿಕಾ ಸಚಿವ

ಬಿಜೆಪಿ ಶಾಸಕ ವೇದವ್ಯಾಸ್ ಕಾಮತ್ ಅವರ ಮೇಲೆ ಎಫ್ಐಆರ್ ದಾಖಲಿಸಲಾಗಿದೆ. ಇದರ ಉದ್ದೇಶವೇನು?. ಯಾವುದೇ ವಿಚಾರಣೆ ಮಾಡದೇ ಪ್ರಕರಣ ದಾಖಲಿಸಿರುವುದು ಸರಿಯಲ್ಲ. ವಿರೋಧ ಪಕ್ಷಗಳ ಹಕ್ಕುಗಳ ದಮನ ಮಾಡುವ ಪ್ರವೃತ್ತಿ ನಡೆಯುತ್ತಿದೆ. ಪ್ರತಿಪಕ್ಷಗಳ ವಿರುದ್ಧದ ಈ ಧೋರಣೆ ಸರಿಯಲ್ಲ.

-ಅರವಿಂದ ಬೆಲ್ಲದ, ಬಿಜೆಪಿ ಶಾಸಕ

ವಿಧಾನ ಮಂಡಲ ಅಧಿವೇಶನ

ಮದ್ಯ ಮಾರಾಟದ ಟಾರ್ಗೆಟ್ ರದ್ದುಪಡಿಸಿ : ಸುನೀಲ್ ಆಗ್ರಹ | ದಲಿತ ಕಾಲೋನಿಯಲ್ಲಿ ಹೆಚ್ಚಾಗಿದೆ ಎನ್ನುವ ಹೇಳಿಕೆಗೆ ತೀವ್ರ ವಿರೋಧ | ಶಾಸಕರಿಂದ ಮಾಹಿತಿ ಪಡೆದು ಮುಂದಿನ ಕ್ರಮಕ್ಕೆ ಸ್ಪೀಕರ್ ಖಾದರ್ ಸೂಚನೆ

ಅಕ್ರಮ ಮದ್ಯ ಮಾರಾಟ ಪಕ್ಷಾತೀತವಾಗಿ ಆರೋಪ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಅನಧಿಕೃತ ಸ್ಥಳದಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ಆರೋಪ ಮಾಡಲಾಗಿದ್ದು, ಈ ಬಗ್ಗೆ ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ ಕ್ರಮವಹಿಸುವಂತೆ ಸ್ಪೀಕರ್ ಯು.ಟಿ. ಖಾದರ್ ಸೂಚನೆ ನಡೆದ ಘಟನೆ ನಡೆಯಿತು.

ಪ್ರಶ್ನೋತ್ತರ ಅವಧಿಯಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಮಹಂತೇಶ್ ಕೌಜಲಗಿ ಅವರ ಪ್ರಶ್ನೆಗೆ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರು ಪ್ರಶ್ನಿಸುವಾಗ ಪ್ರತಿಪಕ್ಷ ನಾಯಕರು ಅಕ್ರಮ ಮದ್ಯ ಮಾರಾಟಕ್ಕೆ ಬ್ರೇಕ್‌ಹಾಕುವಂತೆ ಆಗ್ರಹಿಸಿದರು. ಇದಕ್ಕೆ ಆಡಳಿತ ಪಕ್ಷದ ಕೆಲಸ ಶಾಸಕರು ಸಾಥ್ ನೀಡಿದರು.

ಶಾಸಕರ ಪ್ರಶ್ನೆಗೆ ಉತ್ತರ ನೀಡುವಾಗ, ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವ ಪ್ರಕರಣಗಳು ಗಮನಕ್ಕೆ ಬಂದಿವೆ. ನಿಯಂತ್ರಣ ಮಾಡುವ ಕೆಲಸವನ್ನು ಇಲಾಖೆಯಿಂದ ಮಾಡುತ್ತಿದ್ದೇವೆ. ಕಾನೂನು ಉಲ್ಲಂಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಮರ್ಥಿಸಿಕೊಂಡರು. ಆದರೆ ಈ ಉತ್ತರಕ್ಕೆ ತೃಪ್ತರಾಗದ ಬಿಜೆಪಿಗರು, ರಾಜ್ಯದಲ್ಲಿ ಎಗ್ಗಿಲ್ಲದೆ ಅಕ್ರಮ ಮದ್ಯ ಮಾರಾಟವಾಗುತ್ತಿದೆ. ಇದನ್ನು ತಡೆಗಟ್ಟಬೇಕು. ಮದ್ಯ ಮಾರಾಟಕ್ಕೆ ನೀಡಿರುವ ಗುರಿಯನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ಬಾಬು ಮಾತನಾಡಿ, ಪ್ರತಿ ಮದ್ಯ ಮಾರಾಟದ ಅಂಗಡಿಗೆ ಗುರಿ ನಿಗದಿಪಡಿಸಿರುವುದರಿಂದ ಕಿರಾಣಿ ಅಂಗಡಿಗಳಲ್ಲೂ ಮದ್ಯ ಮಾರಾಟ ಮಾಡುವಂತಾಗಿದೆ ಎಂದರು. ಬಿಜೆಪಿಯ ಹಿರಿಯ ಶಾಸಕ ಅರಗ ಜ್ಞಾನೇಂದ್ರ ಮಾತನಾಡಿ, ಕಿರಾಣಿ ಅಂಗಡಿಗೆ ಮದ್ಯ ಸರಬರಾಜಾಗುತ್ತಿವೆ. ಇದನ್ನು ತಡೆಯಬೇಕು ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳಿಗೆ ಮಾರಾಟ, ಸರಕಾರದ ಗಮನದಲ್ಲಿಲ್ಲ: ಇದಕ್ಕೂ ಮೊದಲು ಸಚಿವ ತಿಮ್ಮಾಪುರ ಮಾತನಾಡಿ, ಅಕ್ರಮ ಮದ್ಯ ಮಾರಾಟದಿಂದ ವಿದ್ಯಾರ್ಥಿಗಳು ಮದ್ಯವ್ಯಸನಿಗಳಾಗುತ್ತಿರುವ ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿಲ್ಲ. ಅಪ್ರಾಪ್ತ ವಯಸ್ಕರಿಗೆ ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಅಂತಹ ಕೃತ್ಯದಲ್ಲಿ ತೊಡಗುವವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಇಲಾಖೆಯಿಂದ ಅಗತ್ಯ ಸೂಚನೆಗಳನ್ನು ನೀಡಲಾಗುತ್ತಿದೆ. ಅಕ್ರಮ ಮದ್ಯ ಮಾರಾಟ ತಡೆಯಲು ಅಬಕಾರಿ ಇಲಾಖೆಯಿಂದ ವಲಯ ವ್ಯಾಪ್ತಿಯ ಮಾರ್ಗಗಳಲ್ಲಿ ನಿರಂತರವಾಗಿ ಗಸ್ತು ನಡೆಸಲಾಗುತ್ತಿದೆ. ಗಸ್ತಿನ ಸಂದರ್ಭದಲ್ಲಿ ಮಹಿಳೆಯರು, ಮಹಿಳಾ ಸಂಘಗಳು ಸಾರ್ವಜನಿಕರಿಂದ ದೂರು ಸ್ವೀಕೃತವಾದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಸ್ಥಳಗಳ ಮೇಲೆ ದಾಳಿ ನಡೆಸಿ ಅಕ್ರಮ ಕಂಡುಬಂದಲ್ಲಿ ಅಬಕಾರಿ ನಿಯಮಗಳ ಪ್ರಕಾರ ಪ್ರಕರಣ ದಾಖಲಿಸಲಾಗುತ್ತಿದೆ ಎಂದು ಹೇಳಿದರು. 2024-25ನೇ ಅಬಕಾರಿ ಸಾಲಿನಲ್ಲಿ ಜನವರಿ ಅಂತ್ಯದವರೆಗೂ 17,390 ಮೊಕದ್ದಮೆಗಳನ್ನು ದಾಖಲಿಸಿ 18,253 ಆರೋಪಿತರನ್ನು ದಸ್ತಗಿರಿಗೆ ಒಳಪಡಿಸಲಾಗಿದೆ ಎಂದರು.

ಎಲ್ಲೆಲ್ಲಿ ಮದ್ಯ ಅಕ್ರಮವಾಗಿ ಮಾರಾಟವಾಗುತ್ತದೆ ಎಂಬ ಮಾಹಿತಿ ಶಾಸಕರಿಗೆ ಇರುತ್ತದೆ. ಅದರ ಪಟ್ಟಿ ಕೊಟ್ಟು ಕ್ರಮ ಕೈಗೊಳ್ಳಲು ಅಕಾರಿಗಳಿಗೆ ಸೂಚಿಸಿ, ಒಂದು ವೇಳೆ ಕ್ರಮ ಕೈಗೊಳ್ಳದಿದ್ದರೆ ಅಧಿಕಾರಿಯ ಮೇಲೆ ಕ್ರಮ ಜರುಗಿಸಿ. ಇದರೊಂದಿಗೆ ಹಿಂದೆ ಎಷ್ಟು ಗುರಿ ನಿಗದಿ ಮಾಡಲಾಗಿತ್ತು?, ಈಗ ಎಷ್ಟು ಗುರಿ ಮಾಡಿದ್ದಾರೆ ಎಂಬ ಮಾಹಿತಿ ನೀಡಿ

- ಯು.ಟಿ. ಖಾದರ್, ಸಭಾಧ್ಯಕ್ಷ

ವಿವಾದಕ್ಕೆ ಕಾರಣವಾದ ಆರಗ ಹೇಳಿಕೆ

ಅಕ್ರಮ ಮದ್ಯಕ್ಕೆ ಸಂಬಂಧಿಸಿದಂತೆ ಮಾತನಾಡುವಾಗ ಬಿಜೆಪಿಯ ಹಿರಿಯ ಶಾಸಕ ಆರಗ ಜ್ಞಾನೇಂದ್ರ, ಮಾತನಾಡುತ್ತಾ, ಪರಿಶಿಷ್ಟ ಜಾತಿ, ಪಂಗಡ ಕಾಲೋನಿಗಳಲ್ಲಿನ 28ರಿಂದ 35 ವರ್ಷದ ಯುವಕರು ಹೆಚ್ಚು ಮದ್ಯವ್ಯಸನಿಗಳಾಗುತ್ತಿದ್ದಾರೆ. ಇದನ್ನು ತಡೆಯಲು ಕಾನೂನು ರೀತಿ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕು ಎಂದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಶಾಸಕ ನಾರಾಯಣಸ್ವಾಮಿ, ಎಸ್ಸಿ/ಎಸ್ಟಿಯವರು ಮಾತ್ರ ಕುಡಿಯುತ್ತಾರಾ?, ನೀವು ಕುಡಿಯುವುದಿಲ್ಲವೇ? ಎಂದು ಛೇಡಿಸಿದರು. ಜ್ಞಾನೇಂದ್ರ ಹೇಳಿಕೆಗೆ ನಾರಾಯಣಸ್ವಾಮಿ ಸೇರಿದಂತೆ ಹಲವು ಕಾಂಗ್ರೆಸಿಗರು ವಿರೋಧಿಸಿದರು.

ಆರಗ ಎಷ್ಟು ಅಕ್ರಮ ಮದ್ಯದಂಗಡಿ ಬಂದ್ ಮಾಡಿಸಿದ್ದರು?

ಕಾಂಗ್ರೆಸ್-ಬಜೆಪಿ ಶಾಸಕರ ನಡುವೆ ವಾಕ್ಸಮರ ಮುಂದುವರೆಯುತ್ತಿದ್ದಂತೆ ಮಧ್ಯಪ್ರವೇಶಿಸಿದ ಡಿ.ಕೆ. ಶಿವಕುಮಾರ್, ಅರಗ ಜ್ಞಾನೇಂದ್ರ ಅವರು ತಮ್ಮ ಕ್ಷೇತ್ರದ ಸಮಸ್ಯೆಯನ್ನು ಹೇಳುತ್ತಿದ್ದಾರೆ. ರಾಜ್ಯಪಾಲರ ಮೇಲಿನ ಭಾಷಣದ ಬಗ್ಗೆ ಚರ್ಚೆ ವೇಳೆ ಈ ವಿಚಾರವನ್ನೂ ಚರ್ಚೆ ಮಾಡಲಿ. ಅವರು ಕೂಡ ರಾಜ್ಯದ ಗೃಹಮಂತ್ರಿಯಾಗಿದ್ದವರು, ಅವರ ಕಾಲದಲ್ಲಿ ಇಂತಹ ಎಷ್ಟು ಅಂಗಡಿಗಳನ್ನು ಮುಚ್ಚಿಸಿದ್ದಾರೆ ಎಂದು ಸದನಕ್ಕೆ ಮಾಹಿತಿ ನೀಡಲಿ ಎಂದು ಹೇಳಿದರು.

ಮಾಸಿಕವಾಗಿ ಎಲ್ಲಾ ಮದ್ಯ ಮಾರಾಟ ಸನ್ನದ್ದುಗಳನ್ನು ನಿಯಮಿತವಾಗಿ ಪರಿಶೀಲಿಸಿ ಷರತ್ತು ಉಲ್ಲಂಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆ ನಡೆಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮ ಮಾರಾಟ ತಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಮದ್ಯವ್ಯಸನ ಮತ್ತು ಮಾರಾಟದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

-ಆರ್.ಬಿ. ತಿಮ್ಮಾಪುರ, ಅಬಕಾರಿ ಸಚಿವ



ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವವರ ಮಾಹಿತಿ ಅಬಕಾರಿ ಇನ್ಸ್ಪೆಕ್ಟರ್‌ಗಳಿಗೆ ಇರುತ್ತವೆ. ಇಂತಹ ಕಾರ್ಯಕ್ಕೆ ಉತ್ತೇಜನ ನೀಡುವ ಅಧಿಕಾರಿಯನ್ನು ಅಮಾನತು ಮಾಡಿ.

-ಸಿದ್ದು ಸವದಿ, ಶಾಸಕ

ಹಣ ಸಂಗ್ರಹಿಸಬೇಕು ಎನ್ನುವ ಕಾರಣಕ್ಕೆ ರಾಜ್ಯ ಸರಕಾರ ಮದ್ಯ ಮಾರಾಟಕ್ಕೆ ಗುರಿ ನಿಗದಿಪಡಿಸಿರುವುದರಿಂದ ಅಕ್ರಮ ಮಾರಾಟ ಮಾಡಲಾಗುತ್ತಿದೆ. ಕೂಡಲೇ ಇದಕ್ಕೆ ತಡೆಹಾಕಬೇಕು ಹಾಗೂ ನೀಡಿರುವ ಗುರಿಯನ್ನು ಹಿಂಪಡೆಯಬೇಕು.

-ಸುನೀಲ್‌ಕುಮಾರ್, ಶಾಸಕ

ಪ್ರವಾಸೋದ್ಯಮ ಉತ್ತೇಜಿಸಲು ಕಾನೂನು ಸಡಿಲಕ್ಕೆ ಮನವಿ | ಕರಾವಳಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿ : ಎಚ್‌ಕೆಪಿ | ಕಂಬಳಕ್ಕೆ 5 ಲಕ್ಷ ರು. ಅನುದಾನ

ಕರಾವಳಿಗೆ ಅಭಿವೃದ್ಧಿಗೆ ಅನುದಾನ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯ ಸರಕಾರ ರೂಪಿಸಿರುವ ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ, ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಬೇಕೆಂದರೆ, ಕರಾವಳಿಯಲ್ಲಿ ಕಾನೂನುಗಳಿಗೆ ಕೆಲ ವಿನಾಯಿತಿ ನೀಡಬೇಕು ಎನ್ನುವ ಬೇಡಿಕೆ ಕೇಳಿಬಂದಿದೆ.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕ ಗುರುರಾಜ್ ಗಂಟಿಹೊಳೆ ಅವರು ಮಾತನಾಡಿ, ರಾಜ್ಯ ಸರಕಾರದ ಹಲವು ನಿರ್ಬಂಧಗಳಿಂದ ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ರಾಜ್ಯ ಸರಕಾರ ನಿರ್ಬಂದ ಸಡಿಲಿಕೆ ಮಾಡಿದರೆ, ಸ್ಥಳೀಯರೇ ಉದ್ಯಮದ ಮೂಲಕ ಎಲ್ಲ ರೀತಿಯ ಸೌಕರ್ಯವನ್ನು ಕಲ್ಪಿಸುತ್ತಾರೆ. ಆದ್ದರಿಂದ ರಾಜ್ಯ ಸರಕಾರ ಈ ನಿಟ್ಟನಲ್ಲಿ ಕ್ರಮವಹಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಪ್ರವಾಸೋದ್ಯಮ ಸಚಿವ ಎಚ್. ಕೆ. ಪಾಟೀಲ್ ಮಾತನಾಡಿ, ಕರಾವಳಿ ಭಾಗಕ್ಕೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ತರುವ ಪ್ರಸ್ತಾವನೆ ಇಲ್ಲ. ಪ್ರವಾಸೋದ್ಯಮ ನೀತಿಯಲ್ಲೇ ಕರಾವಳಿ ಭಾಗದಲ್ಲಿನ ಎಲ್ಲಾ ವರ್ಗದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಅವಕಾಶಗಳನ್ನು ಕಲ್ಪಿಸಲಾಗಿದೆ. ಕರಾವಳಿ ಪ್ರವಾಸೋದ್ಯಮ ಹೆಚ್ಚು ಜನಪ್ರಿಯವಾಗಿದ್ದು, ವಾರ್ಷಿಕ 8 ಕೋಟಿ ಪ್ರವಾಸಿಗರು ಕರಾವಳಿ ಜಿಲ್ಲೆಗಳಿಗೆ ಭೇಟಿ ನೀಡುತ್ತಾರೆ. ರಾಜ್ಯದ ಕರಾವಳಿ ಭಾಗವೂ ಒಳಗೊಂಡಂತೆ ಒಟ್ಟಾರೆ ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದರು.

ಅಭಿವೃದ್ಧಿ ಮಂಡಳಿ ಸ್ಥಾಪನೆ: ಕರಾವಳಿ ಅಭಿವೃದ್ಧಿ ಮಂಡಳಿ ರಚನೆ ಮಾಡುತ್ತೇವೆ. ಭೂ ಬ್ಯಾಂಕ್ ಮಾಡುತ್ತೇವೆ. ಕಂಬಳಕ್ಕೆ 5 ಲಕ್ಷ ಅನುದಾನ ನೀಡಲಾಗುತ್ತಿದೆ. 320 ಕಿ.ಮೀ. ಉದ್ದದ ಕರಾವಳಿಯಲ್ಲಿ ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಹಕ್ಕುಗಳನ್ನು ವರ್ಗಾಯಿಸಲು ಅನುವು ಮಾಡಿಕೊಡಲಾಗಿದೆ. ಸಾಹಸ, ಪರಿಸರ ಸ್ನೇಹಿ ವಸತಿ, ಸಂಸ್ಕೃತಿ ಸೇರಿದಂತೆ ಪ್ರವಾಸಿಗರಿಗೆ ಪೂರೈಸುವ ಸೌಲಭ್ಯ ಗಳನ್ನು ಸಮಗ್ರ ಕರಾವಳಿ ಪ್ರವಾಸೋದ್ಯಮ ವಲಯಗಳು ಒಳಗೊಂಡಿವೆ. ಕರಾವಳಿಯಲ್ಲಿ ಕನಿಷ್ಠ 10 ಬೃಹತ್ ಪ್ರವಾಸೋದ್ಯಮ ಯೋಜನೆ ಗಳ ಅಭಿವೃದ್ಧಿಗೆ ಯೋಜನೆ ಮಾಡಲಾಗುತ್ತಿದೆ. ಕರಾವಳಿ ಉತ್ಸವಗಳಿಗೆ ಉತ್ತೇಜನ ನೀಡಲಾಗು ತ್ತಿದೆ ಎಂದು ವಿವರಿಸಿದರು.

ಕರಾವಳಿ ಕರ್ನಾಟಕದ ಯೋಜಿತ ಅಭಿವೃದ್ಧಿ ಯೋಜನೆ ಮತ್ತು ಸಿಆರ್‌ಝಡ್ ಮಾನದಂಡಗಳೊಂದಿಗೆ ಹೊಂದಾಣಿಕೆಗೆ ಒತ್ತು ನೀಡಲಾಗಿದೆ. ಹೀಗೆ 20 ಅಂಶಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಸಮುದ್ರದ ಮೇಲೆ ವಿಮಾನಗಳನ್ನು ಇಳಿಸುವ ಬಗ್ಗೆ ಚಿಂತನೆ ನಡೆದಿದ್ದು, ರಷ್ಯಾದವರು ಆಸಕ್ತಿ ತೋರಿದ್ದಾರೆ ಎಂದು ಹೇಳಿದರು. ಈ ವೇಳೆ ಮಧ್ಯಪ್ರವೇಶಿಸಿದ ಸ್ಪೀಕರ್ ಯು.ಟಿ. ಖಾದರ್, ಕರಾವಳಿಯಲ್ಲಿ ಅಂತಾ ರಾಷ್ಟ್ರೀಯ ವಿಮಾನ ನಿಲ್ದಾಣ, ಬಂದರುಗಳಿದ್ದು, ಆರೋಗ್ಯ, ಶಿಕ್ಷಣ, ಧಾರ್ಮಿಕ ಪ್ರವಾಸೋದ್ಯಮಕ್ಕೆ ಅವಕಾಶವಿದೆ. ಆದರೆ ಸೌಹಾರ್ದತೆಗೆ ಒತ್ತು ಕೊಡುವ ಕೆಲಸವನ್ನು ಶಾಸಕರು, ನಾವು, ನೀವೆಲ್ಲಾ ಮಾಡಬೇಕು. ಜನರನ್ನು ಪ್ರೀತಿಯಿಂದ ಬರುವಂತೆ ಮಾಡಬೇಕು. ಭಯ ಪಡಿಸುವಂತಾ ಗಬಾರದು ಎಂದು ಸಲಹೆ ನೀಡಿದರು.

ಕರಾವಳಿಯಲ್ಲಿ 7 ಗಂಟೆ ನಂತರ ಚಟುವಟಿಕೆಗಳು ಸ್ಥಗಿತವಾಗುತ್ತವೆ. ಧಾರ್ಮಿಕ ಕಾರ್ಯಕ್ರಮಗಳು ಮಾತ್ರ ನಡೆಯುತ್ತವೆ. 2 ವರ್ಷದಿಂದ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಿದೆ. ಅತೀ ಹೆಚ್ಚು ಎಂಜಿನಿಯರ್ ಮತ್ತು ಮೆಡಿಕಲ್ ಕಾಲೇಜುಗಳಿವೆ. ಶಿಕ್ಷಣ ಪಡೆದವರು ಮುಂಬೈ, ಬೆಂಗಳೂರು ಕಡೆ ಹೋಗುತ್ತಿದ್ದಾರೆ. ಇದನ್ನು ಸರಿಪಡಿಸುವ ಸಂಬಂಧ ಸರಕಾರಕ್ಕೆ ಪ್ರಸ್ತಾವನೆ ಕೊಡಿ. ಕರಾವಳಿ ಭಾಗದ ಶಾಸಕರ ಜತೆ ಪ್ರತ್ಯೇಕ ಸಭೆ ನಡೆಸಲಾಗುವುದು.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲ

ವಿಧಾನಸಭೆ: ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲ, ಸಮಸ್ಯೆಯೂ ಇಲ್ಲ. ಕೃಷಿ ಪಂಪ್ ಸೆಟ್‌ಗಳಿಗೆ ಏಳು ಗಂಟೆ ವಿದ್ಯುತ್ ಪೂರೈಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

ಶೂನ್ಯ ವೇಳೆಯಲ್ಲಿ ಬಿಜೆಪಿಯ ಶಾಸಕ ಸಿದ್ದು ಸವದಿ, ವಿದ್ಯುತ್ ಕಡಿತದ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿ, ಪಂಪ್ ಸೆಟ್‌ಗಳಿಗೆ ಇಡೀ ರಾಜ್ಯದಲ್ಲಿ ವಿದ್ಯುತ್ ಕಡಿತವಿಲ್ಲ. ಏಳು ಗಂಟೆ ವಿದ್ಯುತ್ ನೀಡುತ್ತಿದ್ದೇವೆ. ದುರಸ್ತಿ ಸಂದರ್ಭದಲ್ಲಿ ವಿದ್ಯುತ್ ಕಡಿತವಾಗಬಹುದು. ಇತ್ತಿಚೆಗೆ ಎಸ್ಕಾಂಗಳ ಸಭೆ ನಡೆಸಿದಾಗ ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲ ಎಂದು ಹೇಳಿದ್ದಾರೆ ಎಂದರು. ದಿನದ 24 ಗಂಟೆ ವಿದ್ಯುತ್ ಪೂರೈಸುವ ನಿರಂತರ ಜ್ಯೋತಿ ಚಾಲ್ತಿಯಲ್ಲಿದೆ. ಕೃಷಿಗೆ ಏಳು ಗಂಟೆ ಪೂರೈಸುವ ವೇಳೆಯಲ್ಲಿ ನಿರಂತರ ಜ್ಯೋತಿಗೆ ಸಿಂಗಲ್ ಫೇಸ್ ನೀಡುವಂತೆ ಜನವರಿಯಲ್ಲೇ ಆದೇಶ ನೀಡಲಾಗಿದೆ. ಸಿಂಗಲ್ ಫೇಸ್ ಅನ್ನು ಬಲವಂತವಾಗಿ ತ್ರಿಫೇಸ್ ಮಾಡಿದರೆ ಒತ್ತಡ ಹೆಚ್ಚಾಗಿ ವಿದ್ಯುತ್ ಸಲಕರಣೆ ಸುಟ್ಟು ಹೋಗುತ್ತವೆ ಎಂದು ಎಚ್ಚರಿಸಿದರು. ಪ್ರತಿಯೊಬ್ಬ ಎಕ್ಸಿಕ್ಯೂಟ್ ಎಂಜಿನಿಯರ್‌ಗಳು ಶಾಸಕರ ಜೊತೆ ಕಾಲಕಾಲಕ್ಕೆ ಚರ್ಚೆ ಮಾಡಿ ಸಮಸ್ಯೆ ತಿಳಿದುಕೊಂಡು, ಬಗೆಹರಿಸುವಂತೆ ಆದೇಶ ನೀಡಿದ್ದೇನೆ ಎಂದು ಸಚಿವರು ತಿಳಿಸಿದರು.

ಪಿಡಿಒ ಮುಷ್ಕರ ವಾಪಸ್

ವಿಧಾನಸಭೆ: ರಾಜ್ಯದ ಗ್ರಾಮ ಆಡಳಿತ ಅಧಿಕಾರಿಗಳು ಮುಷ್ಕರ ವಾಪಸ್ಸು ಪಡೆದಿದ್ದಾರೆ. ಅವರಿಗೆ ಆಡಳಿತದ ಕರ್ತವ್ಯ ನಿರ್ವಹಿಸಲು ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು. ಟಿ.ಬಿ.ಜಯಚಂದ್ರ ಅವರು ರಾಜ್ಯದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ವಿವಿಧ ಸೌಲಭ್ಯಗಳ ಮಂಜೂರಾತಿ ಹಾಗೂ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ನಡೆಸುತ್ತಿರುವ ಬಗ್ಗೆ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, 4 ಸಾವಿರ ಲ್ಯಾಪ್‌ಟಾಪ್ ವಿತರಿಸಲಾಗಿದೆ.

ಸ್ಮಾರ್ಟ್‌ಸಿಟಿ ಯೋಜನೆ ಅವ್ಯವಹಾರಗಳ ಬಗ್ಗೆ ಕ್ರಮ

ವಿಧಾನ ಪರಿಷತ್: ಕೇಂದ್ರ ಹಾಗೂ ರಾಜ್ಯ ಸರಕಾರದ ಸಹಭಾಗಿತ್ವದ ಸ್ಮಾರ್ಟ್‌ಸಿಟಿ ಯೋಜನೆಯಲ್ಲಿ ಅವ್ಯವಹಾರಗಳ ಕುರಿತು ಯಾವುದೇ ದೂರುಗಳು ದಾಖಲಾಗಿಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಎಂ. ನಾಗರಾಜು ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಅವ್ಯವಹಾರಗಳು ನಡೆದಿರುವ ಬಗ್ಗೆ ಇಲ್ಲಿಯ ವರೆಗೂ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ. ದೂರುಗಳನ್ನು ಬಂದಲ್ಲಿ ಪರಿಶೀಲಿಸಿ ವರದಿಯನ್ನು ನೀಡಲು ಈಗಾಗಲೇ ಸಮಿತಿಯನ್ನು ಸಹ ರಚಿಸಲಾಗಿದೆ. ಸ್ಮಾರ್ಟ್‌ಸಿಟಿ ಅಭಿಯಾನದಡಿ ರಾಜ್ಯದ 07 ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ - ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು ಮತ್ತು ಬೆಂಗಳೂರು ನಗರಗಳು ಆಯ್ಕೆಯಾಗಿರುತ್ತದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಇಲ್ಲಿಯವರೆಗೂ ಬಿಡುಗಡೆಯಾದ 6854.5 ಕೋಟಿ ರು. ಅನುದಾನದಲ್ಲಿ 6472.08 ಕೋಟಿ ರು. ವೆಚ್ಚ ಮಾಡಲಾಗಿದೆ ಎಂದು ತಿಳಿಸಿದರು.

ಎಲೆಚುಕ್ಕೆ ರೋಗಕ್ಕೆ ಹೆಚ್ಚುವರಿ ಪರಿಹಾರ

ವಿಧಾನ ಪರಿಷತ್: ಎಲೆ ಚುಕ್ಕೆರೋಗ ಹಾಗೂ ಹಳದಿ ರೋಗಗಳಿಂದ ತೊಂದರೆಗೆ ಒಳಗಾದ ರೈತರಿಗೆ ಶೀಘ್ರವೇ ಪರಿಹಾರ ಬಿಡುಗಡೆ ಮಾಡಲಾಗುವುದು ಎಂದು ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದ ವೇಳೆ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, 2023-24ನೇ ಸಾಲಿನಲ್ಲಿ ರೈತರಿಗೆ ಪ್ರತಿ ಹೆಕ್ಟೇರ್‌ಗೆ 4 ಸಾವಿರ ರು.ನಂತೆ 1.5 ಹೆಕ್ಟೇರ್ ವರೆಗೆ ಪ್ರತಿ ಫಲಾನುಭವಿಗೆ ಗರಿಷ್ಠ ಆರು ಸಾವಿರ ರು. ಮೊತ್ತದ ಸಸ್ಯ ಸಂರಕ್ಷಣಾ ಔಷಧಿಗಳನ್ನು 6250 ಹೆಕ್ಟೇರ್ ಪ್ರದೇಶಕ್ಕೆ ವಿತರಿಸಿ 250 ಲಕ್ಷ ರು. ಅನುದಾನವನ್ನು 12,300 ಅಡಿಕೆ ಬೆಳೆಗಾರರಿಗೆ ನೀಡಲಾಗಿರುತ್ತದೆ. ಅಡಿಕೆ ಬೆಳೆಗಾರರಿಗೆ ಅಡಿಕೆ ಬೆಳೆಯ ಕಟಾವು ಹಾಗೂ ಸಂಪರಣೆಗಾಗಿ (ದೋಟಿ) ಖರೀದಿಸಲು ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದವರಿಗೆ ಶೇ. 40 ರಷ್ಟು ಹಾಗೂ ಪರಿಶಿಷ್ಟ ಜಾತಿ/ ಪಂಗಡದವರಿಗೆ ಶೇ.50 ರಂತೆ ಸಹಾಯಧನ ನೀಡಲಾಗುತ್ತಿದೆ. 2023-24ನೇ ಸಾಲಿನಲ್ಲಿ 1201 ಫಲಾನುಭವಿಗಳಿಗೆ 366.68 ಲಕ್ಷ ರು. ಸಹಾಯಧನ ನೀಡಲಾಗಿದೆ. ಅಡಿಕೆ ಎಲೆ ಚುಕ್ಕೆ ರೋಗದ ನಿಯಂತ್ರಣ ಕುರಿತು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ತಜ್ಞರ ಸಹಯೋಗದೊಂದಿಗೆ ತರಬೇತಿ ಕಾರ್ಯಾಗಾರ ಹಾಗೂ ಪ್ರಾತ್ಯಕ್ಷಿಕೆ ಏರ್ಪಡಿಸುವ ಮೂಲಕ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಅಡಿಕೆ ಎಲೆ ಚುಕ್ಕೆರೋಗದ ನಿಯಂತ್ರಣಕ್ಕಾಗಿ ಹೆಕ್ಸೋಕೊನೋಜೋಲ್, ಟೆಬುಕೊನೊಜೋಲ್, ಪ್ರೋಪಿಕೊನೊಜೋಲ್ ಮತ್ತು ಪ್ರೋಪಿನೇಬ್ ಎಂಬ ಸಸ್ಯ ಸಂರಕ್ಷಣಾ ಔಧಿಗಳನ್ನು ತಜ್ಞರ ಶಿಫಾರಸಿನನ್ವಯ ಹಾನಿಯಾದ ಪ್ರದೇಶದ ರೈತರಿಗೆ ವಿತರಿಸಲಾಗುತ್ತಿದೆ. ಅಡಿಕೆ ಎಲೆ ಚುಕ್ಕೆ ರೋಗ ಹಾಗೂ ಹಳದಿ ಎಲೆ ರೋಗಗಳ ನಿಯಂತ್ರಣಕ್ಕಾಗಿ ಕೇಂದ್ರ ಸರಕಾರ ನೇಮಿಸಿರುವ ವೈಜ್ಞಾನಿಕ ತಂಡದ ಸಮಿತಿಯು ಫೈಟೋಸ್ಯಾನಿಟರಿ ಕ್ರಮಗಳ ಅಳವಡಿಕೆ, ಪೋಷಕಾಂಶಗಳ ನಿರ್ವಹಣೆ, ಸಸ್ಯ ಸಂರಕ್ಷಣೆ ಔಷಧಿಗಳನ್ನು ತಜ್ಞರ ಶಿಫಾರಸ್ಸಿನನ್ವಯ ಹಾನಿಯಾದ ಪ್ರದೇಶದ ರೈತರಿಗೆ ವಿತರಿಸಲಾಗುತ್ತಿದೆ ಎಂದರು.

ಬಿ ಖಾತಾ: 55 ಲಕ್ಷ ಮನೆಗಳಿಗೆ ಲಾಭ

ವಿಧಾನ ಪರಿಷತ್: ನಗರ, ಪಟ್ಟಣ, ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಬಿ ಖಾತಾಗೆ ಸಮಾನಾಂತರವಾಗಿ ಬಿ ಖಾತಾ ಕೊಡಲಾಗಿದ್ದು, ಇದರಿಂದಾಗಿ ರಾಜ್ಯದಲ್ಲಿ 55 ಲಕ್ಷ ಮನೆಗಳಿಗೆ ಲಾಭವಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ತಿಳಿಸಿದರು.

ಬಿಜೆಪಿ ಸದಸ್ಯ ಪ್ರತಾಪ್‌ಸಿಂಹ ನಾಯಕ್ ಅವರ ಪ್ರಶ್ನೆಗೆ ಪೌರಾಡಳಿತ ಸಚಿವ ರಹೀಂ ಖಾನ್ ಅವರು ಉತ್ತರಿಸುತ್ತಿದ್ದ ವೇಳೆ ಮಧ್ಯ ಪ್ರವೇಶ ಮಾಡಿದ ಸಚಿವ ಸುರೇಶ್ ಅವರು, ಎ ಖಾತಾ, ಬಿ ಖಾತೆ ಎಂಬ ನಿಯಮ ಬೆಂಗಳೂರಿನಲ್ಲಿ ಮಾತ್ರ ಇತ್ತು. ಅನೇಕ ಕಡೆ ಅಧಿಕೃತ ಖಾತಾ ಇರಲಿಲ್ಲ. ನಾವು ನೀರು, ರಸ್ತೆ, ವಿದ್ಯುತ್ ಕೊಟ್ಟರೂ ತೆರಿಗೆ ಮಾತ್ರ ಸರಕಾರಕ್ಕೆ ಬರುತ್ತಿಲ್ಲ. ಈಗ ಬಿ ಖಾತಾ ಕೊಡಲು ತೀರ್ಮಾನಿಸಿದ ಪರಿಣಾಮ ರಾಜ್ಯದಲ್ಲಿ 55 ಲಕ್ಷ ಮನೆಗಳು ಇದರ ಲಾಭ ಪಡೆದುಕೊಂಡಿವೆ ಎಂದು ತಿಳಿಸಿದರು. ಸರಕಾರಕ್ಕೆ ಯಾವುದೇ ರೀತಿಯ ತೆರಿಗೆ ಬಾರದಿರುವ ಕಾರಣ, ಹೀಗಾಗಿ ನಮ್ಮ ಸರಕಾರ ಬಿ ಖಾತಾ ಕೊಡಲು ಮುಂದಾಗಿದೆ.

ಇದರಿಂದ ಜನ ನಮ್ಮ ಸರಕಾರದ ನಿರ್ಧಾರವನ್ನು ಸ್ವಾಗತಿಸಿದ್ದಾರೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಸಚಿವ ರಹೀಂ ಖಾನ್, ಬಿ ಖಾತಾ ಆರಂಭವಾಗಿದೆ. ನೀತಿ ಮತ್ತು ನಿಯಮಗಳನ್ನು ಈಗಾಗಲೇ ತಿಳಿಸಲಾಗಿದೆ. ಮೂರು ತಿಂಗಳು ಮಾತ್ರ ಕಾಲಾವಕಾಶ ನೀಡಲಾಗಿದೆ. ಇದು ಕಳೆದ 40 ವರ್ಷಗಳಿಂದ ಸಮಸ್ಯೆ ಇತ್ತು. ಇಷ್ಟು ದಿನ ಬಡವರು ಕಣ್ಣೀರು ಹಾಕುತ್ತಿದ್ದರು. ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಚಿವ ಸಂಪುಟ ಉಪ ಸಮಿತಿಯನ್ನು ಮಾಡಿದ್ದರು. ಈಗಾಗಲೇ ನೀತಿ ಮತ್ತು ನಿಯಮಗಳನ್ನು ಮಾಡಿ ಇ ಖಾತಾ ಮಾಡಲಾಗಿದೆ. ಜನರ ಬಳಿ ಯಾವುದೇ ದಾಖಲೆ ಇರಲಿಲ್ಲ. ಯಾವುದೇ ಮನೆಗೆ ಹೋದಾಗ ರಸ್ತೆ, ವಿದ್ಯುತ್ ಸಂಪರ್ಕ ಇರುತ್ತಿರಲಿಲ್ಲ. 40 ವರ್ಷಗಳಿಂದ ಅನೇಕ ಸರಕಾರ ಬಂದರೂ ತೀರ್ಮಾನ ಆಗಿರಲಿಲ್ಲ. ಈಗ ನಮ್ಮ ಸರಕಾರ ಈ ಗಟ್ಟಿ ನಿರ್ಧಾರ ತೆಗೆದುಕೊಂಡಿದೆ. ಇದು ಐತಿಹಾಸಿಕ ನಿರ್ಧಾರ ಎಂದರು.

ಆಗ ಉಪಪ್ರಶ್ನೆ ಮಾಡಿದ ಪ್ರತಾಪ್ ಸಿಂಹ ನಾಯಕ್, ಬೆಂಗಳೂರು ಗಮನದಲ್ಲಿಟ್ಟುಕೊಂಡು ಇಡೀ ರಾಜ್ಯಕ್ಕೆ ವಿಸ್ತರಿಸುವಂತೆ ಆಗ್ರಹಿಸಿದರು. ಸರಕಾರಕ್ಕೆ ತೆರಿಗೆ ಬಂದಿದೆ. ಆದರೆ, ಮನೆ ಕಟ್ಟಲು ಸಾಧ್ಯವಿಲ್ಲ. ಮನೆ ಸಾಲ ಕೂಡ ಸಿಗುತ್ತಿಲ್ಲ. ಎಲ್ಲಾ ದಾಖಲೆ ಇರುವವರಿಗೆ ರಿಯಾಯಿತಿ ನೀಬೇಕು ಎಂದು ಮನವಿ ಮಾಡಿದರು.

ಎತ್ತಿನಹೊಳೆ ಯೋಜನೆ ಅಗತ್ಯ ಅನುದಾನ: ಡಿ.ಕೆ.ಶಿವಕುಮಾರ್

ವಿಧಾನಸಭೆ: ಎತ್ತಿನಹೊಳೆ ಯೋಜನೆಯಲ್ಲಿ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಕುಡಿಯುವ ನೀರಿಗೆ ಆದ್ಯತೆ ನೀಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಪ್ರಶ್ನೋತ್ತರ ಅವಧಿ ಯಲ್ಲಿ ಜೆಡಿಎಸ್ ಶಾಸಕ ವೆಂಕಟ ಶಿವಾರೆಡ್ಡಿ ಅವರಿಗೆ ಉತ್ತರಿಸಿದ ಡಿಕೆಶಿ, ಎತ್ತಿನಹೊಳೆಯ 24 ಟಿಎಂಸಿ ಯಲ್ಲಿ 18 ಟಿಎಂಸಿ ನೀರು ಬರುತ್ತದೆ. 16 ಟಿಎಂಸಿಯನ್ನು ಕುಡಿಯುವ ನೀರಿಗೆ ಬಳಸಬೇಕಿದೆ. ಕೆಲವು ಭಾಗದಲ್ಲಿ ಅರಣ್ಯ ಇಲಾಖೆಯವರು ಕೆಲಸ ಮಾಡಲು ಬಿಟ್ಟರೆ ಕೆಲಸ ಮುಂದುವರಿಯುತ್ತದೆ. ತಿಪಟೂರು, ಕೊರಟಗೆರೆ, ಚಿಕ್ಕನಾಯಕನಹಳ್ಳಿ ಮತ್ತು ಮಧುಗಿರಿ ತಾಲೂಕು ಗಳ ಕೆರೆಗಳಿಗೆ ನೀರು ತುಂಬಿಸಲಾಗುತ್ತದೆ. ಚಿಕ್ಕ ಬಳ್ಳಾಪುರ-ಕೋಲಾರ ಜಿಲ್ಲೆಗಳಿಗೆ ನೀರು ಕೊಡುವು ದಿಲ್ಲ ಎಂಬ ಆತಂಕ ಆ ಭಾಗಕ್ಕಿದೆ. ಆದರೆ ಮುಖ್ಯ ಮಂತ್ರಿಯವರ ಸೂಚನೆ ಮೇರೆಗೆ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಹರಿಸಲು ಮೊದಲ ಆದ್ಯತೆ ನೀಡಲಾಗುವುದು ಎಂದರು.

ವರ್ಷಾಂತ್ಯಕ್ಕೆ ತುಮಕೂರಿನವರೆಗೆ ನೀರು

ಎತ್ತಿನಹೊಳೆಯಿಂದ ನೀರನ್ನು ಎತ್ತಿ ವಾಣಿವಿಲಾಸ ಸಾಗರದ ಕಡೆಗೆ ಹರಿಸಿದ್ದೇವೆ. ಅರಣ್ಯ ಇಲಾಖೆ ಸಮಸ್ಯೆ ಬಗೆಹರಿಸಲು 7ರಂದು ಸಭೆ ಕರೆದಿದ್ದೇನೆ. ಈ ಕೆಲಸ ಆದರೆ ಈ ವರ್ಷದ ಕೊನೆಗೆ ತುಮಕೂರಿನವರೆಗೂ ನೀರು ಹರಿಯಲಿದೆ. ಮೊದಲು ಚಿಕ್ಕಬಳ್ಳಾಪುರ ಹಾಗೂ ಕೋಲಾರಕ್ಕೆ ಮೊದಲು ಕುಡಿಯುವ ನೀರನ್ನು ಪೂರೈಸಿ ಬಳಿಕ ಅರಸೀಕೆರೆ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ಮಧುಗಿರಿ ಭಾಗದ ಕೆರೆ ತುಂಬಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಇದಕ್ಕೂ ಮೊದಲು ಮಾತನಾಡಿದ ವೆಂಕಟಶಿವಾರೆಡ್ಡಿ, ಎತ್ತಿನಹೊಳೆ ಹೊಳೆ ಯೋಜನೆ ಶುರುವಾ ಗಿದ್ದೇ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ನೀರು ಹರಿಸಲು. ಆದರೆ ತುಮಕೂರು ಜಿಲ್ಲೆಯ ತಾಲೂಕುಗಳ ಕೆರೆಗಳನ್ನು ತುಂಬಿಸಲಾಗುತ್ತಿದೆ. ಆ ಕಾರ್ಯಕ್ರಮವನ್ನೂ ಮುಂದೂಡಿ, ನಮ್ಮ ಭಾಗಕ್ಕೆ ಮೊದಲು ನೀರು ಹರಿಸಬೇಕು ಎಂದು ಮನವಿ ಮಾಡಿದರು.

ಅನುದಾನ ಬಿಡುಗಡೆ ಮನವಿ

ವಿಧಾನಸಭೆ: ಬಂಗಾರಪೇಟೆ ಕ್ಷೇತ್ರದ ಏಳು ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗೆ ಬಿಡುಗಡೆಯಾಗಿರುವ ಏಳು ಕೋಟಿಯಲ್ಲಿ ಮೂರುವರೆ ಕೋಟಿ ರು. ಮಾತ್ರ ಖರ್ಚಾಗಿದೆ. ಆದ್ದರಿಂದ ಈ ಬಗ್ಗೆ ಗಮನಹರಿಸಬೇಕು ಎಂದು ಕಾಂಗ್ರೆಸ್ ಶಾಸಕ ನಾರಾಯಣಸ್ವಾಮಿ ಮನವಿ ಮಾಡಿದರು.

ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ಸಣ್ಣ ನೀರಾವರಿ ಇಲಾಖೆಯಲ್ಲಿ ಏಳು ಕೋಟಿ ರು. ಮಾತ್ರ ಅನುದಾನ ಒದಗಿಸಲಾಗಿದೆ. ಖರ್ಚಾಗಿರುವುದು ಮಾತ್ರ 3.55 ಕೋಟಿ, 2021ರಿಂದ ಈವರೆಗೂ ಹಣ ಮಂಜೂರಾಗಿಲ್ಲ. ನಮ್ಮ ಭಾಗದಲ್ಲಿ ನದಿ ಮೂಲಗಳಿಲ್ಲ. ಕೆರೆಗಳೇ ಜಲಮೂಲಗಳು. ಹೀಗಾಗಿ ಹೆಚ್ಚಿನ ಅನುದಾನ ನೀಡಿ ಎಂದರು.

ಕೆಸಿ ವ್ಯಾಲಿ ಎರಡನೇ ಹಂತದಲ್ಲಿ ಬೆಂಗಳೂರಿನಿಂದ 400 ಎಂಎಲ್‌ಡಿ ನೀರನ್ನು ಹರಿಸಬೇಕು ಎಂದು ಒಪ್ಪಂದವಾಗಿತ್ತು. ಮೊದಲ ಹಂತದಲ್ಲೂ ಸಮರ್ಪಕವಾಗಿ ನೀರು ಹರಿಸಲಾಗಿದೆ. ಅದರಿಂದ ಬರ ನಿಗಿದೆ, ಅಂತರ್ ಜಲ ಸುಧಾರಣೆಯಾಗಿತ್ತು. ಎರಡು ವರ್ಷದಿಂದ 280 ಎಂಎಲ್‌ಡಿ ಮಾತ್ರ ನೀರು ಹರಿಸಲಾಗುತ್ತಿದೆ. ನೀರಿನ ಕೊರತೆಯಾಗಿದೆ. ಜಿಲ್ಲೆಯ ಕೊನೆಯ ಭಾಗವಾಗಿರುವ ತಮ ಬಂಗಾರಪೇಟೆ ಕ್ಷೇತ್ರಕ್ಕೆ ನೀರೆ ತಲುಪುತ್ತಿಲ್ಲ, ನಾಲ್ಕು ವರ್ಷದಿಂದ ನೀರು ಸಿಕ್ಕಿಲ್ಲ. ಕೆಸಿ ವ್ಯಾಲಿ ಯೋಜನೆಯ ಉದ್ದೇಶ ಈಡೇರಿಲ್ಲ ಎಂದು ವಿವರಿಸಿದರು.



ಇದಕ್ಕೆ ಉತ್ತರಿಸಿದ ಸಣ್ಣ ನೀರಾವರಿ ಸಚಿವ ಬೋಸರಾಜು, ಕೆ ಸಿ ವ್ಯಾಲಿ ಎರಡನೇ ಹಂತದ ಕಾಮಗಾರಿಯನ್ನು ಟರ್ನ್ ಕೀ ಆಧಾರದ ಮೇಲೆ 30 ತಿಂಗಳ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಒಪ್ಪಂದವಾಗಿದ್ದು, ಕಾಮಗಾರಿಯನ್ನು ನವೆಂಬರ್ 2024 ರೊಳಗೆ ಪೂರ್ಣಗೊಳಿಸಬೇಕಿದೆ. ಈ ಯೋಜನೆಯಡಿ ಒಟ್ಟು 9 ಸಂಖ್ಯೆ ಪಂಪ್‌ಹೌಸ್, 221 ಕಿಮೀ ಉದ್ದದ ರೈಸಿಂಗ್ ಮೈನ್ ಅಳವಡಿಸಿ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಒಟ್ಟು 272 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ ಎಂದರು. ಮಾರ್ಚ್ 2025ರ ಅಂತ್ಯದೊಳಗೆ ಪ್ರಾಯೋಗಿಕವಾಗಿ ಚಾಲನೆ ಮಾಡಲಾಗುವುದು. ಬಾಕಿ ಮೂರು ಪಂಪ್ ಹೌಸ್‌ಗಳನ್ನು ಶೇ.80ರಷ್ಟು ಪೂರ್ಣಗೊಳಿಸಲಾಗಿದೆ. ಒಟ್ಟಾರೆ ಕಾಮಗಾರಿಯನ್ನು ಈ ವರ್ಷದ ಸೆಪ್ಟೆಂಬರ್ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದರು.

ಚಾ. ನಗರ: ಕಾಲುವೆ ಹೂಳೆತ್ತಲು ಕ್ರಮ

ವಿಧಾನಸಭೆ: ಚಾಮರಾಜನಗರ ಜಿಲ್ಲೆಯ ಕಾಲುವೆಗಳಲ್ಲಿ ಹೂಳು ತುಂಬಿರುವುದರಿಂದ ಕಾಲುವೆಯ ಕೊನೆಗೆ ನೀರು ತಲುಪುತ್ತಿಲ್ಲ. ಆದ್ದರಿಂದ ಹೂಳೆತ್ತಲು ಅನುದಾನ ನೀಡುವಂತೆ ಶಾಸಕ ಪುಟ್ಟರಂಗಶೆಟ್ಟಿ ಮನವಿ ಮಾಡಿದರು.

ಪ್ರಶ್ನೋತ್ತರ ಅವಧಿಯಲ್ಲಿ ಮಾಡಿದ ಈ ಮನವಿ ಪ್ರಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇವಲ ಪುಟ್ಟರಂಗ ಶೆಟ್ಟಿ ಅವರ ಕ್ಷೇತ್ರ ಮಾತ್ರವಲ್ಲ, ಚಾಮರಾಜನಗರ ಜಿಲ್ಲೆ ನಂಜನಗೂಡು, ಕೊಳ್ಳೇಗಾಲ, ಹನೂರು, ಗುಂಡ್ಲುಪೇಟೆ ಶಾಸಕರ ಜತೆ ಸಭೆ ಮಾಡಿದ್ದೇನೆ. ಈ ವಿಚಾರವಾಗಿ ಗಮನ ಹರಿಸುತ್ತೇನೆ. ಕಳೆದ ವರ್ಷ ಅನುದಾನ ನೀಡಲು ಆಗಿರಲಿಲ್ಲ. ಈ ಬಾರಿ ಈ ಐದು ಕ್ಷೇತ್ರಗಳಿಗೂ ಅನುದಾನ ನೀಡಲು ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿದ್ದೇವೆ ಎಂದು ಭರವಸೆ ನೀಡಿದರು.

ಹಿರೇಕೇರೂರು ಕ್ಷೇತ್ರದ ಶಾಸಕ ಯು.ಬಿ ಬಣಕಾರ್ ಅವರು, ಕೆರೆಗೆ ನೀರು ತುಂಬಿಸುವ ಯೋಜನೆಯಲ್ಲಿ ಜಾಕ್‌ವೆಲ್ ನಿರ್ವಹಣೆಗೆ 3-4 ಕೋಟಿ ಮೊತ್ತದ ರಸ್ತೆ ಕಾಮಗಾರಿಯನ್ನು ಮಾಡಿಸಿಕೊಡಬೇಕು ಎಂದು ಕೇಳಿದ ಪ್ರಶ್ನೆಗೆ, ನಮ್ಮ ಸರಕಾರ ಬಂದ ನಂತರ ನೀರಾವರಿ ಇಲಾಖೆಯಲ್ಲಿ ರಸ್ತೆ ನಿರ್ಮಿಸುವುದು ಬೇಡ ಎಂದು ತೀರ್ಮಾನಕ್ಕೆ ಬಂದಿದ್ದೇವೆ. ಈ ಬಗ್ಗೆ ನಾನು ವರದಿ ತರಿಸಿಕೊಂಡಿದ್ದು, ಜಾಕ್‌ವೆಲ್‌ಗೆ ಹೋಗಲು ರಸ್ತೆ ಹದಗೆಟ್ಟಿದ್ದರೆ ಆದ್ಯತೆ ಮೇರೆಗೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಡಿಸಿಎಂ ತಿಳಿಸಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ 80 ಎಕರೆ ಭೂಮಿ

ವಿಧಾನ ಪರಿಷತ್: ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕನಿಷ್ಠ 60ರಿಂದ 80 ಎಕರೆ ಸರಕಾರಿ ಭೂಮಿಯನ್ನು ಉಚಿತವಾಗಿ ನೀಡಲು ಜಿಲ್ಲಾಧಿಕಾರಿಗೆ ಎಪಿಎಂಸಿ ಕಾರ್ಯದರ್ಶಿ ಪತ್ರ ಬರೆದಿದ್ದಾರೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ತಿಳಿಸಿದ್ದಾರೆ.

ಪ್ರಸ್ತುತ ಬೀದರ್ ಎಪಿಎಂಸಿ 39 ಎಕರೆ 28 ಗುಂಟೆ ಭೂಮಿ ಹೊಂದಿದ್ದು, ಈಗಾಗಲೇ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇನ್ನೂ ಎಪಿಎಂಸಿ ವಹಿವಾಟು ವಿಸ್ತರಣೆ ಮಾಡಲು ಸ್ಥಳಾವಕಾಶದ ಕೊರತೆ ಇರುವ ಕಾಣ ಬೀದರ್ ಸುತ್ತಮುತ್ತ 80 ಎಕರೆ ಸರಕಾರದ ಭೂಮಿ ಒದಗಿಸಲು ಕೋರಲಾಗಿದೆ ಎಂದು ಸಚಿವರು ಶಾಸಕ ಭೀಮರಾವ್ ಬಸವರಾಜ ಪಾಟೀಲ್ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರುಕಟ್ಟೆ ಪ್ರಾಂಗಣದ ವಿಸ್ತರಣೆಗಾಗಿ ಅನುಮೋದಿತ ದದ ಪ್ರತಿಶತ 50ರ ರಿಯಾಯಿತಿ ದರದಲ್ಲಿ ನೂರು ಎಕರೆ ಭೂಮಿ ಮಂಜೂರು ಮಾಡುವಂತೆ ಕೃಷಿ ಮಾರಾಟ ಇಲಾಖೆ ನಿರ್ದೇಶಕರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಕೋರಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ. ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಬೀದರ್, ಔರಾದ್ (ಬಾ), ಹುಮನಾಬಾದ್, ಬಸವಕಲ್ಯಾಣ ಮತ್ತು ಭಾಲ್ಕಿಯಲ್ಲಿ ಎಪಿಎಂಸಿಗಳು ಕಾರ್ಯನಿರ್ವಹಿಸುತ್ತಿವೆ. ಔರಾದ್ ಎಪಿಎಂಸಿ 45 ಎಕರೆ, ಹುಮನಾಬಾದ್ 16 ಎಕರೆ 15 ಗುಂಟೆ, ಬಸವಕಲ್ಯಾಣ 16 ಎಕರೆ 8 ಗುಂಟೆ ಹಾಗೂ ಭಾಲ್ಕಿ ಎಪಿಎಂಸಿ 36 ಎಕರೆ 37 ಗುಂಟೆ ಭೂಮಿ ಹೊಂದಿದ್ದು, ಈ ಮಾರುಕಟ್ಟೆಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸ್ಥಳಾವಕಾಶದ ಕೊರತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ವಿಷವೃಕ್ಷದ ಬೇರನ್ನು ಕತ್ತರಿಸಬೇಕಿದೆ

ಉತ್ತರ ಪ್ರದೇಶದ ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರದ ಮೇಲೆ ದಾಳಿ ನಡೆಸಿ ಸ್ಫೋಟಿಸಲೆಂದು ಸಂಚುಹೂಡಿದ್ದ ಅಬ್ದುಲ್ ರೆಹಮಾನ್ (19) ಎಂಬ ಉಗ್ರನನ್ನು ಹರಿಯಾಣದ ಫರಿದಾಬಾದ್‌ನಲ್ಲಿ ಭಾನುವಾರ ತಡರಾತ್ರಿ ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ ವಿಷಯ ಈಗಾಗಲೇ ಜಗಜ್ಜಾಹೀರು. ತೀವ್ರ ವಿಚಾರಣೆ ನಡೆಸಿದಾಗ ನಿಷೇಧಿತ ಉಗ್ರ ಸಂಘಟನೆಗಳ ಜತೆಗೆ ಈತನಿಗೆ ನಂಟಿದ್ದುದು, ಸಾಮಾಜಿಕ ಮಾಧ್ಯಮಗಳ ಮೂಲಕ ಈತ ಅವುಗಳೊಂದಿಗೆ ಸಂಪರ್ಕ ಸಾಧಿಸಿದ್ದ ಎಂಬುದು ತಿಳಿದು ಬಂದಿದೆ. ವಶಕ್ಕೆ ತೆಗೆದುಕೊಳ್ಳುವಾಗ ಈತನ ಬಳಿ ಒಂದಷ್ಟು ಗ್ರೆನೇಡುಗಳು, ಅನುಮಾನಾಸ್ಪದ ವಿಡಿಯೋಗಳೂ ಇದ್ದವೆಂಬುದು ಗಮನಿಸಬೇಕಾದ ಸಂಗತಿ. ಕೆಲ ವರ್ಷಗಳ ಹಿಂದೆ, ಮುಂಬೈನ ವಿವಿಧ ನೆಲೆಗಳ ಮೇಲೆ ನಡೆದ ಭಯೋತ್ಪಾದಕರ ಭೀಕರ ದಾಳಿಯನ್ನು ಈಗಲೂ ಮರೆಯಲಾಗದು. ಆ ವೇಳೆ ಸಿಕ್ಕಿಬಿದ್ದಿದ್ದ ಕಸಬ್ ಎಂಬ ಉಗ್ರ ಕೂಡ ಇದೇ ವಯಸ್ಸಿನ ಆಸುಪಾಸಿನವನು. ಭಾರತ-ವಿರೋಧಿ ಭಾವನೆಗಳನ್ನು ಇಂಥವರ ತಲೆಯಲ್ಲಿ ಎಷ್ಟು ವ್ಯವಸ್ಥಿತವಾಗಿ ತುಂಬಲಾಗುತ್ತಿದೆ ಮತ್ತು ಇದಕ್ಕೆಂದೇ ಮೀಸಲಾದ ಸಕ್ರಿಯ ಜಾಲವೊಂದಿದೆ ಎಂಬುದನ್ನು ಇಂಥ ಘಟನೆಗಳು ಸಾಬೀತುಪಡಿಸುತ್ತವೆ. ಜತೆಗೆ, ಭಯೋತ್ಪಾದನೆಯೆಂಬ ವಿಷವೃಕ್ಷವನ್ನು ಬೇರುಸಮೇತ ಉರುಳಿಸದೆ, ಕೇವಲ ಅದರ ರೆಂಬೆ-ಕೊಂಬೆಗಳನ್ನು ಕತ್ತರಿಸಿದರೆ ಪರಿಣಾಮ ಏನಾಗುತ್ತದೆ ಎಂಬುದನ್ನೂ ಇಂಥ ಘಟನೆಗಳು ಒತ್ತಿಹೇಳಬಲ್ಲವು. ಇಲ್ಲಿ ಗಂಭೀರವಾಗಿ ಪರಿಗಣಿಸಬೇಕಾದ ಮತ್ತೊಂದು ಅಂಶವೆಂದರೆ, ಹರಿಯಾಣದಲ್ಲಿ ಹೀಗೆ ಬಂಧಿತನಾದ ಉಗ್ರ ಅಬ್ದುಲ್ ರೆಹಮಾನ್, ಪಾಲಿ ಗ್ರಾಮದಲ್ಲಿ ನಕಲಿ ಹೆಸರು ಮತ್ತು ಗುರುತು ಹೇಳಿಕೊಂಡು ನೆಲೆಸಿದ್ದ ಎಂಬುದು. ಹುಡುಕುತ್ತ ಹೋದರೆ ಇಂಥ ಸಂಚುಕೋರರು ದೇಶದ ವಿವಿಧೆಡೆಗಳಲ್ಲಿ ಬೇರುಬಿಟ್ಟಿರಲಿಕ್ಕೂ ಸಾಕು. ಇಂಥವರನ್ನು ಹೆಕ್ಕಿ ಹೆಕ್ಕಿ ತೆಗೆದು ಹೆಡೆಮುರಿ ಕಟ್ಟುವ ಕೆಲಸಕ್ಕೆ ಆದ್ಯತೆ ನೀಡಬೇಕಾದ ಕಾಲ ಸನ್ನಿಹಿತವಾಗಿದೆ. ಕಾರಣ, ಜನದಟ್ಟಣೆಯಿರುವ ಅಯೋಧ್ಯೆಯ ರಾಮಮಂದಿರದ ಮೇಲೆ ದಾಳಿಮಾಡುವ ಸಂಚನ್ನು ಬಂಧಿತ ಉಗ್ರ ರೂಪಿಸಿದ್ದ ಎಂದಾದರೆ, ಇಂಥ ಜಾಯಮಾನದ ಮಿಕ್ಕವರೂ ಬಗೆಬಗೆಯ ಕುಕೃತ್ಯಗಳ ಕುರಿತು ಆಲೋಚನೆ ಹೊಂದಿರುವುದನ್ನು ತಳ್ಳಿಹಾಕಲಾಗದು.

ಸೊಂಪಾದಕೀಯ

ಹಕ್ಕಿಗೆ ಜ್ವರ, ಕೋಳಿಗೆ ಬರೆ

ಊರಲ್ಲಿ ಯಾವುದೇ ಕಾಯಿಲೆ ಬಂದ್ರೂ, ನಮ್ಮ ಜನ ಪ್ಯಾನಿಕ್ ಆಗುತ್ತಾರೆ ಮತ್ತು ಅದಕ್ಕೆ ಸಂಬಂಧಿಸಿದಂತೆ ತಮ್ಮದೇ ಆದ ತತ್ವಗಳನ್ನು ಮುಂದಿಡುತ್ತಾರೆ. ಆದರಲ್ಲೂ ಕೆಲವು ಕಾಯಿಲೆಗಳು ಬಂದ್ರೆ ನಮ್ಮ ಜನಗಳಿಗೆ ಅವುಗಳಿಗೆ ಮದ್ದು ಕಂಡುಹಿಡಿಯುವ ಖಯಾಲಿ ಬಂದುಬಿಡುತ್ತದೆ. ಹಕ್ಕಿ ಜ್ವರ ಬಂದಿದೆ ಅಂತ ಹೊರಗೆ ಸ್ವಲ್ಪ ಗದ್ದಲ ಆದ್ರೂ, ಜನಗಳಿಗೆ ಅದಕ್ಕೆ ಪರಿಹಾರ ಕಂಡುಹಿಡಿಯುವ ಹುಕಿ ಬರುತ್ತದೆ. ಈ ವಿಷಯದಲ್ಲಿ ಅವರು ಮಾಡುವ ಮೊದಲ ಕೆಲಸ ಅಂದ್ರೆ, ಕೋಳಿ ತಿನ್ನೋದನ್ನ ನಿಲ್ಲಿಸೋದು. ಅವರ ಪ್ರಕಾರ ಹಕ್ಕಿ ಅಂದ್ರೆ, ಮೊದಲು ಜ್ಞಾಪಕ ಬರೋದು ಕೋಳಿನೇ. ಹಂಗಾಗಿ ಹಕ್ಕಿ ಜ್ವರ ಬಂದ್ರೆ ಮೊದಲು ಕೋಳಿಗಳಿಗೆ ಇರೋ ಡಿಮ್ಯಾಂಡ್ ಕಮ್ಮಿ ಆಗುತ್ತದೆ. ಕೋಳಿ ಮಾಂಸದ ರೇಟೂ ಕಮ್ಮಿ ಆಗುತ್ತದೆ. ಆದರೆ ಪಾಪ ಕೋಳಿ ಮಾರಾಟಗಾರರ ಜೇಬಿಗೆ ಕತ್ತರಿ. ಈ ಸಮಯದಲ್ಲಿ ಲಾಟರಿ ಹೊಡೆಯೋದು ಮಟನ್‌ಗೆ. ಬೇರೆ ಸಮಯದಲ್ಲಿ ಬೆಲೆ ಜಾಸ್ತಿ ಅಂತ ಮಟನ್ ತಿನ್ನದ ಜನ, ಅನಿವಾರ್ಯವಾಗಿ ಬಾಯಿಚಪಲಕ್ಕೆ ಕೋಳಿ ಬಿಟ್ಟು ಕುರಿ ಬಲಿಗೆ ಸಿದ್ಧರಾಗುತ್ತಾರೆ ಮತ್ತು ಪ್ರತಿ ಬಾರಿ ಹೀಗಾದಾಗ ಆರೋಗ್ಯ ಇಲಾಖೆ ಸ್ಪಷ್ಟನೆ ನೀಡುತ್ತದೆ. ಈಗಲೂ ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಅದೆಷ್ಟನೇ ಬಾರಿಗೋ ಕೋಳಿ ಮಾಂಸ ಮತ್ತು ಕೋಳಿ ಮೊಟ್ಟೆ ಸೇವನೆ ಮಾಡೋದ್ರಿಂದ ಕೋಳಿ ಜ್ವರ ಬರಲ್ಲ ಅಂತ ಹೇಳಿದೆ. ಹಾಗೂ ಭಯ ಇದ್ರೆ, ಮೊಟ್ಟೆ ಮತ್ತು ಕೋಳಿಯನ್ನು ಚೆನ್ನಾಗಿ ಬೇಯಿಸಿ ತಿನ್ನಿ ಅಂತ ಹೇಳಿದೆ. ಅಂದಹಾಗೆ ಹಕ್ಕಿ ಜ್ವರ ಬಂದಾಗ ಈ ಗೊಂದಲ ಕಾಣಿಸಿಕೊಂಡರೆ ಓಕೆ. ಆದರೆ ಈ ಸಮಸ್ಯೆ ಚಿಕೂನ್ ಗುನ್ಯಾ ಕಾಲದಲ್ಲೂ ಕಾಡುತ್ತದೆ. ಆಗಲೂ ಆರೋಗ್ಯ ಇಲಾಖೆ ಚಿಕನ್ ತಿನ್ನೋದ್ರಿಂದ ಚಿಕೂನ್ ಗುನ್ಯಾ ಬರಲ್ಲ ಅಂತ ಹೇಳಿ ಜನರ ಭಯ ಹೋಗಲಾಡಿಸೋ ಕೆಲಸ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಇಂಥ ಜ್ವರಗಳು ಕಾಣಿಸಿಕೊಂಡಾಗ ಹಕ್ಕಿಗೆ ಜ್ವರ ಬಂದ್ರೆ, ಕೋಳಿಗೆ ಬರೆ ಹಾಕಿದಂತೆ ಅನ್ನೋ ಪರಿಸ್ಥಿತಿ ಸರ್ವೇಸಾಮಾನ್ಯ.

ಸಂಪಾದಕರ ಸದ್ಯಶೋಧನೆ

ಜಪಾನಿನ ಕಿಟ್ ಕ್ಯಾಟ್ ಚಾಕೊಲೇಟ್

ಇದು ಕೆಲ ದಿನಗಳ ಹಿಂದಿನ ಕಥೆ. ಜಪಾನಿನ ಕನ್ಸೈ ವಿಮಾನ ನಿಲ್ದಾಣದಲ್ಲಿ ಇಳಿದು ಡ್ಯೂಟಿ ಫ್ರೀ ಶಾಪ್ ಮುಂದೆ ನಿಂತಾಗ ನನ್ನ ಕಣ್ಣಿಗೆ ರಾಚಿದ್ದು 'ಕಿಟ್ ಕ್ಯಾಟ್' ಚಾಕೊಲೇಟ್‌ಗಳ ಬಹುದೊಡ್ಡ ಮಳಿಗೆ. ನನಗೆ ಅದರಲ್ಲಿ ಯಾವ ವಿಶೇಷವೂ ಕಾಣಲಿಲ್ಲ. ನಂತರ ಯಾವುದೇ ಊರಿಗೆ ಹೋದಾಗಲೂ, 'ಕಿಟ್ ಕ್ಯಾಟ್' ದೃಶ್ಯವನ್ನು ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ಅಲ್ಲಿಂದ ವಾಪಸ್ ಬರುವಾಗ, ಟೋಕಿಯೋದ ನರಿಟಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಂತೂ ಕಿಟ್ ಕ್ಯಾಟ್ ಚಾಕೊಲೇಟಿನ ಬಹುದೊಡ್ಡ ಮಳಿಗೆಯೇ ಕಂಡಿತು. ಅಲ್ಲಿನ ಡ್ಯೂಟಿ ಫ್ರೀ ಶಾಪ್‌ನಲ್ಲಿ ಏನಿಲ್ಲವೆಂದರೂ ಸುಮಾರು 50 ಬಗೆಯ ಕಿಟ್ ಕ್ಯಾಟ್ ಚಾಕೊಲೇಟ್‌ಗಳಿದ್ದವು. ಅಲ್ಲಿಯೇ ನಿಂತಿದ್ದ ಚಾಕೊಲೇಟ್ ಮಾರಾಟ ಪ್ರತಿನಿಧಿಯನ್ನು, 'ನಮ್ಮ ದೇಶದಲ್ಲೂ ಕಿಟ್ ಕ್ಯಾಟ್ ಚಾಕೊಲೇಟ್‌ಗಳಿವೆ. ನಾನು ಬಹಳ ವರ್ಷಗಳಿಂದ ಅದನ್ನು ಸೇವಿಸುತ್ತಾ ಬಂದಿದ್ದೇನೆ. ಆದರೆ ನಿಮ್ಮ ದೇಶದಲ್ಲಿನ ಈ ಚಾಕೊಲೇಟಿನ ವೈಶಿಷ್ಟ್ಯವೇನು?' ಎಂದು ಕೇಳಿದೆ. ಅದಕ್ಕೆ ಆತ, 'ನೀವು ಎಷ್ಟು ಸ್ವಾದದ, ಬಗೆಯ ಕಿಟ್ ಕ್ಯಾಟ್ ಚಾಕೊಲೇಟ್ ಸೇವಿಸಿದ್ದೀರಿ? ನೆನಪಿಸಿಕೊಳ್ಳಿ' ಎಂದು ಮರುಪ್ರಶ್ನಿಸಿದ. ನಾನು 'ಒಂದೋ, ಎರಡೋ ಬಗೆಯ ಚಾಕೊಲೇಟ್ ಸೇವಿಸಿರಬಹುದು' ಎಂದೆ. ಅದಕ್ಕೆ ಆತ, 'ಜಪಾನಿನಲ್ಲಿ ಏನಿಲ್ಲವೆಂದರೂ ಸುಮಾರು 300 ಸ್ವಾದದ ಕಿಟ್ ಕ್ಯಾಟ್ ಚಾಕೊಲೇಟುಗಳಿರಬಹುದು' ಎಂದ. ನನಗೆ ನಂಬಲಾಗಲಿಲ್ಲ. ಆದರೆ ಆತ ಪಕ್ಕದಲ್ಲಿದ್ದ ಕ್ಯಾಟಲಾಗ್ ತೋರಿಸಿದ. ಪ್ರಾಯಶಃ ಒಂದು ಚಾಕೊಲೇಟ್ ಕಂಪನಿ ಇಷ್ಟೊಂದು ಬಗೆಯ ಚಾಕೊಲೇಟುಗಳನ್ನು ತಯಾರಿಸಿದ ನಿದರ್ಶನ ಮತ್ತೆಲ್ಲೂ ಸಿಗಲಾರದು. 'ಕಿಟ್ ಕ್ಯಾಟ್' ತಯಾರಿಸುವ ನೆಸ್ಲೆ ಕಂಪನಿಯು ಜಪಾನಿನ ಅಂಚೆ ವಿಭಾಗದೊಂದಿಗೆ ಒಡಂಬಡಿಕೆ ಮಾಡಿಕೊಂಡು, ಅಲ್ಲಿನ ಸುಮಾರು 20,000 ಪೋಸ್ಟಾಫೀಸುಗಳಲ್ಲಿ ಕಿಟ್ ಕ್ಯಾಟ್ ದೊರಕುವ ವ್ಯವಸ್ಥೆ ಮಾಡಿತು. ಆ ಮಾರ್ಕೆಟಿಂಗ್ ಕ್ಯಾಂಪೇನ್ ಅದೆಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಜಪಾನಿನ ಯಾವುದೇ ಊರಿಗೆ ಹೋದರೂ, ಕಿಟ್ ಕ್ಯಾಟ್ ಲಭಿಸುವಂತಾಯಿತು. ಅಷ್ಟೇ ಅಲ್ಲ, ಕಿಟ್ ಕ್ಯಾಟ್ ಜಪಾನಿನ ಮನೆಮಾತಾಯಿತು. 2010ರಲ್ಲಿ ಆ ಕ್ಯಾಂಪೇನ್‌ಗೆ ಅತ್ಯುತ್ತಮ ಮಾರ್ಕೆಟಿಂಗ್ ತಂತ್ರಗಾರಿಕೆ ಎಂಬ ಪ್ರಶಸ್ತಿಯೂ ಲಭಿಸಿತು. ಅಲ್ಲಿ ಆ ಚಾಕೊಲೇಟ್ ಅಷ್ಟು ಜನಪ್ರಿಯವಾಗಲು ಬೇರೆ ಕಾರಣವಿದೆಯಾ? ಜಪಾನಿ ಭಾಷೆಯಲ್ಲಿ ಕಿಟ್ ಕ್ಯಾಟ್ ಪದ ಅವರಿಗೆ 'ಕಿಟೋ ಕಥ್ಸು' ಅಂತ (ಕಿಟ್ ಕಾಟ್ಸು ಅಥವಾ ಕಿಟೋ ಕಾಟೂ ಅಥವಾ ಕಿಟೋ ಕತ್ಸುಟೂ) ಕೇಳಿಸುತ್ತದೆ. 'ಕಿಟೋ ಕಥ್ಸು' ಅಂದರೆ You will surely win ಎಂದರ್ಥ. ಪರೀಕ್ಷೆಗಿಂತ ಮುನ್ನ ನೆಸ್ಲೆ ಕಂಪನಿಯು ಜಪಾನಿನಲ್ಲಿರುವ ವಿದ್ಯಾರ್ಥಿಗಳಿಗೆ You will surely win ಎಂಬ ಗುಡ್‌ಲಕ್ ಮೆಸೇಜುಗಳನ್ನು ಪೋಸ್ಟಿನಲ್ಲಿ ಕಳಿಸುತ್ತಿತ್ತು. ಇದನ್ನು ಸ್ವೀಕರಿಸಿದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆ ಕಂಪನಿ ಮತ್ತು ಕಿಟ್ ಕ್ಯಾಟ್ ಬಗ್ಗೆ ವಿಶೇಷ ಪ್ರೀತಿ ಬೆಳೆಯುವಂತಾಯಿತು. ಆ ಮೂಲಕ ಕಿಟ್ ಕ್ಯಾಟ್ ಜಪಾನಿನ ವಿದ್ಯಾರ್ಥಿಗಳ ಮನೆ-ಮನ ಗೆದ್ದಿತು. ಕಿಟ್ ಕ್ಯಾಟ್ ಜಾಗತಿಕ ಬ್ರ್ಯಾಂಡ್ ಆದರೂ, ಜಪಾನಿನಲ್ಲಿ ಅದು ವ್ಯಾಪಿಸಿರುವ ಬಗೆ ಅನನ್ಯ. ಚಾಕೊಲೇಟ್‌ಗಳನ್ನು ಇಷ್ಟಪಡುವ ದೇಶಗಳಲ್ಲೂ ಕಿಟ್ ಕ್ಯಾಟ್ ಹೆಸರಿನಲ್ಲಿ ಅತಿ ಹೆಚ್ಚೆಂದರೆ 10-20 ಸ್ವಾದಗಳ ಚಾಕೊಲೇಟ್‌ಗಳಿರಬಹುದು. ಆದರೆ ಜಪಾನಿನಲ್ಲಿ ಆಯಾ ಪ್ರದೇಶ, ರುಚಿಗೆ ಅನುಗುಣವಾಗಿ 300 ಸ್ವಾದಗಳ ಚಾಕೊಲೇಟ್‌ಗಳನ್ನು ನೆಸ್ಲೆ ಬಿಡುಗಡೆ ಮಾಡಿದೆ. ಜಪಾನಿನಲ್ಲಿ ವಿಶೇಷ ಉಡುಗೊರೆಯಾಗಿ ಚಾಕೊಲೇಟುಗಳನ್ನು ಕೊಡುವುದು ಸಂಪ್ರದಾಯ. ಅಷ್ಟೊಂದು ಬಗೆಯ ಚಾಕೊಲೇಟುಗಳಿರಲು ಇದೂ ಕಾರಣವಾಗಿರಬಹುದು. ನೆಸ್ಲೆ ಕಂಪನಿಯು ಇಷ್ಟೊಂದು ಬಗೆಯ ಚಾಕೊಲೇಟುಗಳನ್ನು ಜಗತ್ತಿನ ಬೇರಾವ ದೇಶದಲ್ಲೂ ತಯಾರಿಸುತ್ತಿಲ್ಲ. ಬೇರೆ ಕಂಪನಿಗಳೂ ಇಷ್ಟೊಂದು ಸ್ವಾದಗಳ ಚಾಕೊಲೇಟುಗಳನ್ನು ತಯಾರಿಸುತ್ತಿಲ್ಲ. ಟೋಕಿಯೋದ ಜನನಿಬಿಡ ಶಿಬುಯ ಪ್ರದೇಶದಲ್ಲಿ 'ಮೈ ಕಿಟ್ ಕ್ಯಾಟ್' ಎಂಬ ಬೃಹತ್ ಶೋರೂಮ್ ಇದೆ. ಅಲ್ಲಿ ಯಾರು ಬೇಕಾದರೂ ತಮ್ಮಿಷ್ಟದ ಸ್ವಾದದ ಚಾಕೊಲೇಟುಗಳನ್ನು ಕೈಯಾರೆ ಮಾಡಿ ಸೇವಿಸಬಹುದು. ಅಲ್ಲಿಗೆ ಹೋಗಿ ಕಿಟ್ ಕ್ಯಾಟ್ ಚಾಕೊಲೇಟ್ ಸೇವಿಸದೇ ಬಂದರೆ, ಅಷ್ಟರಮಟ್ಟಿಗೆ ಜಪಾನ್ ಪ್ರವಾಸ ಅಪೂರ್ಣ.

ವ್ಯಕ್ತಿತ್ವವನ್ನು ನಿರ್ಧರಿಸುವುದು ನಿಮ್ಮ ಹುಟ್ಟೋ ಅಥವಾ ಶಿಕ್ಷಣವೋ?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
vveditoped@gmail.com

ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುವ ಅಂಶಗಳು ಯಾವುವು? ಅದನ್ನು ಒಬ್ಬ ವ್ಯಕ್ತಿಯ ಹುಟ್ಟು ಅಂದರೆ ಅವನ ಆನುವಂಶಿಕತೆಯು ನಿರ್ಧರಿಸುತ್ತದೆಯೋ ಅಥವಾ ಅವನ ಕಲಿಕೆಯು ನಿರ್ಧರಿಸುತ್ತದೆಯೋ? ಇದನ್ನು ಇಂಗ್ಲಿಷಿನಲ್ಲಿ 'ನೇಚರ್ ಆರ್ ನರ್ಚರ್?' ಎಂದು ಪ್ರಶ್ನಿಸಿರುವುದುಂಟು. ನೇಚರ್ ಎಂದರೆ ಒಬ್ಬ ವ್ಯಕ್ತಿಯ ಹುಟ್ಟು ಅಥವಾ ಆನುವಂಶಿಕತೆ. ಇದನ್ನು ಪ್ರಕೃತಿ, ಸ್ವಭಾವ, ಹುಟ್ಟುಗುಣ, ನೈಸರ್ಗಿಕ ಗುಣ, ಸಹಜ ಗುಣ ಎಂದೆಲ್ಲ ವಿವರಿಸಬಹುದು. ನರ್ಚರ್ ಎಂದರೆ ಪಾಲನೆ ಅಥವಾ ಪೋಷಣೆ. ಆರೈಕೆಯನ್ನು ಮಾಡು, ಪೋಷಿಸು, ಬೆಳೆಸು, ಸಾಕು, ಪಾಲಿಸು, ಶಿಕ್ಷಣವನ್ನು ನೀಡು, ತರಬೇತಿ ನೀಡು, ಉತ್ತಮ ಪರಿಸರವನ್ನು ಸೃಜಿಸು ಎಂದೂ ಹೇಳಬಹುದು. ಈ ಅರ್ಥವನ್ನು ಹೊಮ್ಮಿಸುವ 'ಶಿಕ್ಷಣ' ಎಂಬ ಶಬ್ದವನ್ನು ನರ್ಚರ್ ಎನ್ನುವ ಶಬ್ದಕ್ಕೆ ಸಮನಾರ್ಥಕವಾಗಿ ಬಳಸೋಣ. ಒಬ್ಬನ ವ್ಯಕ್ತಿತ್ವವನ್ನು ವಂಶವಾಹಿಗಳು ನಿರ್ಧರಿಸುತ್ತವೆಯೋ ಅಥವಾ ಶಿಕ್ಷಣವು ನಿರ್ಮಿಸುತ್ತದೆಯೋ ಎನ್ನುವುದು ಇಂದಿನ ಚರ್ಚೆಯ ತಿರುಳು.

ಇದು ಅನಾದಿ ಕಾಲದ ಪ್ರಶ್ನೆ. ಈ ವಿಚಾರವನ್ನು ಕುರಿತು ಚರ್ಚೆಗಳು ಹಾಗೂ ವಾಗ್ವಾದಗಳು ಕನಿಷ್ಠ ಗ್ರೀಕರ ಕಾಲದಿಂದ ನಡೆದುಕೊಂಡು ಬಂದಿರುವುದನ್ನು ನಾವು ನೋಡಬಹುದು. ಈ ಪ್ರಶ್ನೆಯು ಜೀವವಿಜ್ಞಾನ, ತಳಿವಿಜ್ಞಾನ, ಮನೋವಿಜ್ಞಾನ, ಸಮಾಜ ವಿಜ್ಞಾನ, ಶಿಕ್ಷಣ ವಿಜ್ಞಾನ ಹಾಗೂ ದರ್ಶನ ವಿಜ್ಞಾನಗಳಿಗೆಲ್ಲ ಬಿಡಿಸಲಾಗದ ಕಗ್ಗಂಟಾಗಿದೆ. ಇದುವರೆಗೆ ನಡೆದ ಚರ್ಚೆಗಳೆಲ್ಲ ವಂಶವಾಹಿಗಳ ಕಡೆಗೆ ಇಲ್ಲವೇ ಶಿಕ್ಷಣದ ಕಡೆಗೆ ವಾಲಿರುವುದನ್ನು ನಾವು ನೋಡಬಹುದು. ಆದರೆ ಆಧುನಿಕ ವಿಜ್ಞಾನದ ಹಿನ್ನೆಲೆಯಲ್ಲಿ ಈ ವಿಚಾರವನ್ನು ವಿಶ್ಲೇಷಿಸಿದಾಗ, ಅದು ಆನುವಂಶಿಕತೆ ಅಥವಾ ಶಿಕ್ಷಣದ ಕಡೆಗೆ ಒಲವನ್ನು ತೋರದೆ, ಇವೆರಡರ ನಡುವೆ ಅತ್ಯಂತ ಸಂಕೀರ್ಣವಾದ ಸಂಬಂಧಗಳ ಜಾಲ ಇರುವುದನ್ನು ಎತ್ತಿ ತೋರಿಸುತ್ತದೆ.

● **ಗ್ರೀಕರು:** ಮನುಷ್ಯರ ವ್ಯಕ್ತಿತ್ವವನ್ನು ನಿರ್ಧರಿಸುವುದು ಆನುವಂಶಿಕತೆಯೋ ಇಲ್ಲ ಪರಿಸರವೋ ಎನ್ನುವ ಪ್ರಶ್ನೆಯು ಬಹುಶಃ ಮೊದಲ ಬಾರಿಗೆ ಗ್ರೀಕ್ ದಾರ್ಶನಿಕರನ್ನು ಕಾಡಿತು ಎಂದು ಕಾಣುತ್ತದೆ. ಪ್ಲೇಟೋ (ಕ್ರಿ.ಪೂ.428-ಕ್ರಿ.ಪೂ.423) ಮತ್ತು ಅವನ ಸಹಚರರು ಮನುಷ್ಯರ ಲಕ್ಷಣಗಳು ಆನುವಂಶಿಕವಾಗಿ ಹರಿದುಬರುವುದನ್ನು ತೋರಿಸುತ್ತಾ, ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಆನುವಂಶಿಕತೆಯೇ ನಿರ್ಧರಿಸುತ್ತದೆ ಎಂದು ವಾದಿಸಿದರು. ಇದಕ್ಕೆ ತದ್ವಿರುದ್ಧವಾದ ವಾದವನ್ನು ಅರಿಸ್ಟಾಟಲ್ ಹಾಗೂ ಅವನ ಸಂಗಡಿಗರು (ಕ್ರಿ.ಪೂ.384-ಕ್ರಿ.ಪೂ.322) ಮಂಡಿಸಿದರು. ಪ್ರತಿಯೊಂದು ಮಗುವು ಹುಟ್ಟುವಾಗ ಅದರ ಮನಸ್ಸು 'ಖಾಲಿ ಸ್ಲೇಟಿನ' ಹಾಗೆ ಇರುತ್ತದೆ ಎಂದರು. ಇದನ್ನು ಅವರು ತಮ್ಮದೇ ಆದ ಪರಿಭಾಷೆಯಲ್ಲಿ 'ಟ್ಯಾಬುಲ ರಾಸ' ಎಂದು ಕರೆದರು. ಆ ಮಗುವು ತಾನು ಬೆಳೆಯುತ್ತಿರುವ ಪರಿಸರಕ್ಕೆ, ಪಡೆಯುವ ಶಿಕ್ಷಣಕ್ಕೆ ಅನುಗುಣವಾಗಿ ಹೊಸ ಹೊಸ ವಿಷಯಗಳನ್ನು ಕಲಿಯುತ್ತಾ ಹೋಗುತ್ತದೆ. ಹಾಗಾಗಿ ಮಗುವು ಬೆಳೆಯುವ ಪರಿಸರವು ಹಾಗೂ ಪಡೆಯುವ ಶಿಕ್ಷಣವು ಮಗುವಿನ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ ಎನ್ನುವುದು ಅವರ ವಾದದ ತಿರುಳಾಗಿತ್ತು.

17 ಮತ್ತು 18ನೆಯ ಶತಮಾನಗಳು ನವೋದಯದ ಕಾಲ. ನಮ್ಮ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ವಿಚಾರಗಳು ಬೆಳಕಿಗೆ ಬಂದಂಥ ಕಾಲ. ಈ ವಿಷಯದಲ್ಲೂ ಚರ್ಚೆಯು ತೀವ್ರ ಸ್ಥಿತಿಯನ್ನು ತಲುಪಿತು. ರೆನೆ ಡೆಸ್ಕಾರ್ಟೆ (1596-1650) ಮತ್ತು ಅವನ ಅನುಯಾಯಿಗಳು ಪ್ಲೇಟೋವಿನ ವಾದವನ್ನು ಎತ್ತಿಹಿಡಿದರೆ ಜಾನ್ ಲೋಕೆ (1632-1704) ಮತ್ತು ಅವನ ಸಂಗಡಿಗರು ಅರಿಸ್ಟಾಟಲನ ವಿಚಾರವೇ ಸತ್ಯವೆಂದು ವಾದಿಸಿದರು. ಈ ಚರ್ಚೆಯು 19 ಮತ್ತು 20ನೆಯ ಶತಮಾನಗಳಲ್ಲೂ ಮುಂದುವರಿಯಿತು. ಈ 2 ಶತಮಾನಗಳ ವಾದವು ಭಾವನಾತ್ಮಕವಾಗಿರುವ ಬದಲು ಅಂದು ಲಭ್ಯವಿದ್ದ ವೈಜ್ಞಾನಿಕ ತತ್ತ್ವಗಳನ್ನು ಆಧರಿಸಿದ್ದವು. ಚಾರ್ಲ್ಸ್ ಡಾರ್ವಿನ್ (1809-1882) ತನ್ನ ವಿಕಾಸವಾದ (ಎವಲ್ಯೂಶನ್) ಹಾಗೂ ನೈಸರ್ಗಿಕ ಆಯ್ಕೆಯ (ನ್ಯಾಚುರಲ್ ಸೆಲೆಕ್ಷನ್) ತತ್ತ್ವವನ್ನು ಮಂಡಿಸಿದ ಹಾಗೂ 'ಆರಿಜಿನ್ ಆಫ್ ಸ್ಪೀಸೀಸ್' ಪುಸ್ತಕವನ್ನು ಪ್ರಕಟಿಸಿದ. ಇದು 'ಮನುಷ್ಯನು ತನ್ನ ಗುಣಲಕ್ಷಣಗಳನ್ನು ಆನುವಂಶಿಕವಾಗಿ ಪಡೆಯುತ್ತಾನೆ' ಎನ್ನುವ ವಾದಕ್ಕೆ ಪುರಾವೆಯನ್ನು ಒದಗಿಸಿತು. ಇದೇ ವೇಳೆಗೆ ಅವನ ಸೋದರ ಸಂಬಂಧಿ ಫ್ರಾನ್ಸಿಸ್ ಗಾಲ್ಟನ್ (1822-1911) 'ಸುಜನನ ವಿಜ್ಞಾನ'ದ (ಯೂಜೆನಿಕ್ಸ್) ಪರಿಕಲ್ಪನೆಯನ್ನು ಮಂಡಿಸಿದ್ದ. ಇದು ಉತ್ತಮ ಸಂತಾನವನ್ನು ಪಡೆಯುವುದಕ್ಕೆ ಸಂಬಂಧಿಸಿದ್ದ ಹೊಸ ವಿಜ್ಞಾನ ಶಾಖೆಯಾಗಿತ್ತು. ಇವನು ''ಆಯ್ದ ತಳಿಗಳ ನಡುವೆ ಸಂತಾನೋತ್ಪತ್ತಿಯನ್ನು ಮಾಡುವುದರ ಮೂಲಕ ಉತ್ತಮ ಸಂತಾನವನ್ನು ಪಡೆಯಲು ಸಾಧ್ಯ'' ಎಂದ. ಗಾಲ್ಟನ್‌ಗಿಂತಲೂ ಸಾವಿರಾರು ವರ್ಷಗಳ ಹಿಂದೆ ಪ್ಲೇಟೋ 'ಆಯ್ದ ಸಂತಾನೋತ್ಪತ್ತಿ' ಅಥವಾ 'ಸೆಲೆಕ್ಟಿವ್ ಬ್ರೀಡಿಂಗ್' ಬಗ್ಗೆ ತನ್ನ ರಿಪಬ್ಲಿಕ್ (ಕ್ರಿ.ಪೂ.375) ಕೃತಿಯಲ್ಲಿ ಬರೆದಿದ್ದ. 'ರಾಜ್ಯ ನಿರ್ವಹಿತ ಮಿಲನ' ಅಂದರೆ 'ಸ್ಟೇಟ್ ಮ್ಯಾನೇಜ್ಡ್ ಮೇಟಿಂಗ್' ಅಗತ್ಯವೆಂದ. ಅಂದರೆ 'ಸರಕಾರವೇ ಯಾವ ಗಂಡು ಮತ್ತು ಹೆಣ್ಣಿನ ನಡುವೆ ಸಂತಾನವರ್ಧನೆಯು ನಡೆಯಬೇಕು ಎನ್ನುವುದನ್ನು ನಿರ್ಧರಿಸಬೇಕು' ಎಂದ. ಹೀಗೆ ಆಯ್ದ ಸಂತಾನವರ್ಧನೆಯನ್ನು ಮಾಡಿದರೆ ಉತ್ತಮ ಸಂತಾನವು ಹುಟ್ಟುತ್ತದೆ, ಉತ್ತಮ ಸಮಾಜವು ನಿರ್ಮಾಣವಾಗುತ್ತದೆ ಎಂದ. 20ನೆಯ ಶತಮಾನದಲ್ಲಿ ವರ್ತನಾ ವಿಜ್ಞಾನಿಗಳಾದ ಜಾನ್ ಬಿ.ವ್ಯಾಟ್ಸನ್ (1878-1958) ಹಾಗೂ ಬಿ.ಎಫ್.ಸ್ಕಿನ್ನರ್ (1904-1990) 'ಒಬ್ಬ ಮನುಷ್ಯನ ವ್ಯಕ್ತಿತ್ವವನ್ನು ಅವನು ಗಳಿಸಿದ ವಿದ್ಯಾಭ್ಯಾಸದ ಮಟ್ಟ ಹಾಗೂ ಅವನು ಬೆಳೆದು ಬಂದಿರುವ ಪರಿಸರವು ನಿರ್ಧರಿಸುತ್ತದೆ' ಎಂದು ಪರಿಸರ ಹಾಗೂ ಶಿಕ್ಷಣಕ್ಕೆ ಒತ್ತನ್ನು ನೀಡಿದರು.

● **ಭಾರತದ ಕೊಡುಗೆ:** ಒಬ್ಬ ಮನುಷ್ಯನ ವ್ಯಕ್ತಿತ್ವವನ್ನು ನಿರ್ಧರಿಸುವ ವಿಚಾರದಲ್ಲಿ ನಮ್ಮ ಪ್ರಾಚೀನ ಭಾರತದ ಕೊಡುಗೆಯೂ ಇದೆ. ಭಗವದ್ಗೀತೆಯ 4ನೆಯ ಅಧ್ಯಾಯದ 13ನೆಯ ಶ್ಲೋಕವು 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ' ಎನ್ನುತ್ತದೆ. ಇಲ್ಲಿ ಎರಡು ಶಬ್ದಗಳನ್ನು ನಾವು ವಿವೇಚಿಸಬೇಕು. ಮೊದಲನೆಯದು 'ಗುಣ'. ಗುಣ ಎನ್ನುವುದು ಹುಟ್ಟಿನಿಂದ ಬರುವಂಥದ್ದು. 'ಕರ್ಮ' ಎನ್ನುವುದು ಒಬ್ಬ ವ್ಯಕ್ತಿಯು ತನ್ನ ಜೀವಮಾನದಲ್ಲಿ ಪಡೆದ ಶಿಕ್ಷಣದ ಮೂಲಕ ಕಲಿತದ್ದು. ಅಂದರೆ 'ಆನುವಂಶಿಕತೆ' ಹಾಗೂ 'ಶಿಕ್ಷಣ'ಗಳೆರಡೂ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ ಎಂದಾಯಿತು. ಭಗವದ್ಗೀತೆಯ 18ನೆಯ ಅಧ್ಯಾಯದ 41-44ನೆಯ ಶ್ಲೋಕಗಳು ಒಬ್ಬ ವ್ಯಕ್ತಿಯ 'ಸ್ವಭಾವ' ಮತ್ತು 'ಸ್ವಧರ್ಮ'ಗಳು ಅವನ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ ಎನ್ನುತ್ತವೆ. ಭಗವದ್ಗೀತೆಯು ಬಹುಶಃ ಕ್ರಿ.ಪೂ.500-ಕ್ರಿ.ಪೂ.200ರ ನಡುವೆ ರಚನೆಯಾಗಿರಬೇಕು ಎಂಬ ವಾದವಿದೆ. ಅಂದರೆ 'ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುವುದರಲ್ಲಿ ಆನುವಂಶಿಕತೆ ಹಾಗೂ ಶಿಕ್ಷಣಗಳೆರಡರ ಪಾತ್ರವಿದೆ' ಎಂದು ಸ್ಪಷ್ಟವಾಗಿ ಸಾರಿದ ಮೊದಲ ದಾಖಲೆಯು ಭಗವದ್ಗೀತೆಯದು ಎನ್ನಬಹುದು. ಆಯುರ್ವೇದವು 'ತ್ರಿದೋಷ'ಗಳು ಅಂದರೆ ವಾತ-ಪಿತ್ತ-ಕಫವು ಆನುವಂಶಿಕವಾಗಿ ಬರುವಂಥದ್ದು; ಆದರೆ ವ್ಯಕ್ತಿಯ ಆಹಾರ, ನಡೆಸುವ ಜೀವನಶೈಲಿ ಹಾಗೂ ಅವನು ಬೆಳೆಯುವ ಪರಿಸರವು ಅವನ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ ಎನ್ನುತ್ತದೆ. ಪತಂಜಲಿಯ ಯೋಗಸೂತ್ರವು (ಅಧ್ಯಾಯ 2: ಸಾಧನಾ ಪದ; ಸೂತ್ರ 2.3-2.4) ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಹಾಗೂ ಅವನ ಆಧ್ಯಾತ್ಮಿಕ ಬೆಳವಣಿಗೆಯನ್ನು ಅವನ 'ವಾಸನೆಗಳು' (ಹುಟ್ಟಿನಿಂದ ಬಂದ ಗುಣಗಳು) ಹಾಗೂ ಅವನ 'ಸಂಸ್ಕಾರಗಳು' (ಜೀವನದಲ್ಲಿ ಗಳಿಸಿದ ಅರಿವು) ನಿರ್ಧರಿಸುತ್ತವೆ ಎನ್ನುತ್ತದೆ. ಆದಿ ಶಂಕರಾಚಾರ್ಯರ 'ವಿವೇಕ ಚೂಡಾಮಣಿ'ಯು ಒಬ್ಬನ 'ಸ್ವಭಾವ'ವನ್ನು (ಅಂದರೆ ಹುಟ್ಟಿನಿಂದ ಬಂದಿರುವ ಗುಣಗಳನ್ನು) ಜ್ಞಾನ, ಶಿಸ್ತು ಮತ್ತು ಗುರುವಿನ ಮಾರ್ಗದರ್ಶನದಲ್ಲಿ ಪಡೆಯುವ ಶಿಕ್ಷಣದಿಂದ ಪರಿಷ್ಕರಿಸಬಹುದು ಎನ್ನುತ್ತದೆ.

● **ಮುಖ್ಯಾಂಶಗಳು:** ನಮ್ಮ ವ್ಯಕ್ತಿತ್ವವನ್ನು ಆನುವಂಶಿಕತೆಯು ನಿರ್ಧರಿಸುತ್ತದೆಯೋ ಅಥವಾ ನಾವು ಬೆಳೆಯುವ ಪರಿಸರ ಹಾಗೂ ಪಡೆದ ಶಿಕ್ಷಣವು ನಿರ್ಧರಿಸುತ್ತದೆಯೋ ಎಂಬ ಎರಡು ಪಂಥಗಳ ಮುಖ್ಯಾಂಶಗಳನ್ನು ಮೊದಲು ನೋಡೋಣ.

ತಂದೆ ಮತ್ತು ತಾಯಿಗಳಿಂದ ಮಗುವಿನ ದೇಹವನ್ನು ಪ್ರವೇಶಿಸುವ 23 ಜೊತೆ ಕ್ರೋಮೋಸೋಮುಗಳು ತಂದೆ ಮತ್ತು ತಾಯಿಯ ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಲಕ್ಷಣಗಳನ್ನು ಪಡೆಯುವುದರ ಜತೆಯಲ್ಲಿ ತಾತ ಮುತ್ತಾತಂದಿರ ಗುಣ ಲಕ್ಷಣಗಳನ್ನೂ ಪಡೆಯುವುದನ್ನು ನಾವು ನೋಡಿದ್ದೇವೆ. ಮಗುವಿನ ಮುಖ ಮತ್ತು ದೇಹ ಲಕ್ಷಣ, ಚರ್ಮ, ಕೂದಲು ಮತ್ತು ಕಣ್ಣಿನ ಬಣ್ಣಗಳೆಲ್ಲ ಆನುವಂಶಿಕವಾಗಿಯೇ ನಿರ್ಧಾರವಾಗುತ್ತವೆ. ಹಾಗೆಯೇ ಸ್ಕಿಝೋಫ್ರೀನಿಯ, ಆಟಿಸಂ, ಖಿನ್ನತೆ, ಕೆಲವು ಕ್ಯಾನ್ಸರ್ ಮುಂತಾದ ರೋಗಗಳು ಆನುವಂಶಿಕವಾಗಿಯೇ ಬರುವುದನ್ನು ನಾವು ನೋಡಿದ್ದೇವೆ. ಒಂದು ಮಗುವು ಬೆಳೆಯುವ ಮನೆಯ ಪರಿಸರವು ಅದರ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಮುಖ್ಯವಾಗಿ ಮನೆಯಲ್ಲಾಡುವ ಭಾಷೆಗಳನ್ನು ಮಗುವು ಕಲಿಯುತ್ತದೆ. ಮನೆಯಲ್ಲಿ ದೊರೆಯುವ ಶಿಕ್ಷಣ, ವರ್ತನೆ, ಸಂಸ್ಕಾರವನ್ನೇ ಮಗುವು ಕಲಿಯುತ್ತದೆ. ಇದರಲ್ಲಿ ಆನುವಂಶಿಕತೆಯ ಪಾಲಿಲ್ಲ. ಬಾಲ್ಯದಲ್ಲಿ ಮಗುವು ಅನುಭವಿಸಿದ ಆಘಾತಕರ ಘಟನೆಗಳು (ಉದಾ: ಲೈಂಗಿಕ ದುರ್ಬಳಕೆ-ಪೋಸ್ಟ್ ಟ್ರಮಾಟಿಕ್ ಸ್ಟ್ರೆಸ್ ಡಿಸಾರ್ಡರ್) ಮಗುವಿನ ಭವಿಷ್ಯ ಬದುಕಿನ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಒಂದು ಮಗುವು ದುರ್ವ್ಯಸನಕ್ಕೆ ತುತ್ತಾಗುವ ಸಾಧ್ಯತೆಯು (ಅದು ವಂಶವಾಹಿಗಳಲ್ಲಿ ಇದ್ದರೂ) ಅದು ಬೆಳೆಯುವ ಪರಿಸರವನ್ನು ಆಧರಿಸಿರುತ್ತದೆ ಎನ್ನಬಹುದು.

● **ಅಧ್ಯಯನಗಳು:** ಆನುವಂಶಿಕತೆ ಮತ್ತು ಶಿಕ್ಷಣದ ಪ್ರಾಮುಖ್ಯಕ್ಕೆ ಸಂಬಂಧಿಸಿದ ಹಾಗೆ ಕೆಲವು ಗಮನೀಯ ಅಧ್ಯಯನಗಳು ನಡೆದಿವೆ. ತದ್ರೂಪಿ ಅವಳಿಗಳು (ಐಡೆಂಟಿಕಲ್ ಟ್ವಿನ್ಸ್) 100ಕ್ಕೆ 100ರಷ್ಟು ವಂಶವಾಹಿಗಳನ್ನು ಹಂಚಿಕೊಂಡಿರುತ್ತವೆ. ಸೋದರ ಅವಳಿಗಳು (ಫ್ರೆಟರ್ನಲ್ ಟ್ವಿನ್ಸ್) ಶೇ.50ರಷ್ಟು ವಂಶವಾಹಿಗಳನ್ನು ಮಾತ್ರ ಹಂಚಿಕೊಂಡಿರುತ್ತವೆ. ಕೆಲವು ತದ್ರೂಪಿ ಅವಳಿಗಳನ್ನು ಒಟ್ಟಿಗೆ ಬೆಳೆಯಲು ಬಿಟ್ಟರು. ಕೆಲವು ತದ್ರೂಪಿಗಳನ್ನು ಭೌಗೋಳಿಕವಾಗಿ ವಿಭಿನ್ನ ಪ್ರದೇಶಗಳಲ್ಲಿ, ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯ ಪೋಷಕರ ಉಸ್ತುವಾರಿಯಲ್ಲಿ ಬೆಳೆಸಿದರು. ಹಾಗೆಯೇ ಸೋದರ ಅವಳಿಗಳ ವಿಷಯದಲ್ಲೂ ಅಧ್ಯಯನವನ್ನು ಕೈಗೊಂಡರು. 'ಮಿನೆಸೋಟ ಟ್ವಿನ್ ಸ್ಟಡಿ' ಎಂಬ ಅಧ್ಯಯನವು 1980ರಲ್ಲಿ ಹಾಗೂ 1990ರಲ್ಲಿ ನಡೆದವು. ಒಟ್ಟಿಗೆ ಬೆಳೆದ ತದ್ರೂಪಿಗಳು ಹಾಗೂ ದೂರ ದೂರ ಬೆಳೆದ ತದ್ರೂಪಿ ಅವಳಿಗಳ ಬುದ್ಧಿವಂತಿಕೆ ಹಾಗೂ ವ್ಯಕ್ತಿತ್ವವು ಬಹುಪಾಲು ಏಕರೂಪವಾಗಿರುವುದನ್ನು ಗಮನಿಸಿದರು. ಈ ಹಿನ್ನೆಲೆಯಲ್ಲಿ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುವುದರಲ್ಲಿ ಆನುವಂಶಿಕತೆಯ ಪಾಲಿದೆ ಎಂಬ ತೀರ್ಮಾನಕ್ಕೆ ಬಂದರು.

ದತ್ತು ಮಕ್ಕಳ ಅಧ್ಯಯನವನ್ನು ನಡೆಸಿದರು. ದತ್ತು ಮಕ್ಕಳು ಹೆತ್ತವರ ಬುದ್ಧಿವಂತಿಕೆ ಮತ್ತು ಮನೋಧರ್ಮ ಲಕ್ಷಣಗಳನ್ನು ಹೊತ್ತಿದ್ದರೆ, ದತ್ತು ತಂದೆ-ತಾಯಿಗಳ ಪ್ರಭಾವದಲ್ಲಿ ತಮ್ಮ ಸಾಮಾಜಿಕ ವರ್ತನೆ ಮತ್ತು ಜೀವನ ಮೌಲ್ಯಗಳನ್ನು ರೂಢಿಸಿಕೊಂಡಿದ್ದರು. ಹಾಗಾಗಿ ಮಕ್ಕಳು ಬೆಳೆಯುವ ಪರಿಸರವು ಹಾಗೂ ಪಡೆಯುವ ಶಿಕ್ಷಣವು ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತವೆ ಎನ್ನುವುದಕ್ಕೆ ಪುರಾವೆಯು ದೊರೆಯಿತು.

ಮಾನವನ ತಳಿವಿನ್ಯಾಸದ ಅನಾವರಣವು (ಹ್ಯೂಮನ್ ಜೀನೋಮ್ ಪ್ರಾಜೆಕ್ಟ್) ಮನುಷ್ಯನ ಗುಣಲಕ್ಷಣಗಳಿಗೆ ವಂಶವಾಹಿಗಳೇ ಕಾರಣ ಎನ್ನುವುದನ್ನು ನಿರೂಪಿಸಿದೆ. ಜತೆಗೆ ಕೆಲವು ಸಂಕೀರ್ಣ ಗುಣಲಕ್ಷಣಗಳನ್ನು ಒಂದಕ್ಕಿಂತ ಹೆಚ್ಚಿನ ವಂಶವಾಹಿಗಳು ಹಾಗೂ ಮಗುವು ಬೆಳೆಯುವ ಪರಿಸರವು ಒಟ್ಟಿಗೆ ನಿರ್ಧರಿಸುತ್ತವೆ ಎನ್ನುವ ವಿಚಾರವನ್ನೂ ಹೊರಹಾಕಿದೆ. ನಮ್ಮ ದೈನಂದಿನ ಆಹಾರ, ನಮ್ಮ ಒತ್ತಡಗಳು, ನಮ್ಮ ದೇಹವನ್ನು ಪ್ರವೇಶಿಸುವ ವಿಷವಸ್ತುಗಳು (ಟಾಕ್ಸಿನ್ಸ್) ವಂಶವಾಹಿಗಳ ಸಹಜ ಅಭಿವ್ಯಕ್ತಿಯನ್ನೇ (ಎಕ್ಸ್‌ಪ್ರೆಶನ್) ಬದಲಿಸುತ್ತದೆ ಎನ್ನುವ ವಿಚಾರವು ತಿಳಿದು ಬಂದಿದ್ದು 'ಊರ್ಧ್ವ ತಳಿವಿಜ್ಞಾನ' ಅಥವಾ 'ಎಪಿಜೆನೆಟಿಕ್' ಎಂಬ ಹೊಸ ವಿಜ್ಞಾನ ಶಾಖೆಯು ಹುಟ್ಟಲು ಕಾರಣವಾಗಿದೆ. ಡಿಎನ್‌ಎ ಮೆಥಿಲೇಶನ್ ಮತ್ತು ಹಿಸ್ಟೋನ್ ಮಾಡಿಫಿಕೇಶನ್ ವಿಧಾನಗಳು ವಂಶವಾಹಿಗಳ ಅಭಿವ್ಯಕ್ತಿ ಸಾಮರ್ಥ್ಯವನ್ನೇ (ಎಕ್ಸ್‌ಪ್ರೆಶನ್) ಬದಲಿಸುವುದನ್ನು ತೋರಿಸಿಕೊಟ್ಟವು. ಜರ್ಮನಿ ಹಾಗೂ ಜಪಾನಿನ ಜನಸಾಮಾನ್ಯರು ದ್ವಿತೀಯ ಮಹಾಯುದ್ಧಗಳಲ್ಲಿ ಅನುಭವಿಸಿದ ಆಘಾತಗಳು (ಟ್ರಮಾಟಿಕ್ ಎಕ್ಸ್‌ಪೀರಿಯನ್ಸ್) ಅವರ ಸಂತಾನದ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುವುದನ್ನು ಗಮನಿಸಲಾಗಿದೆ. 'ಡಚ್ ಹಂಗರ್ ವಿಂಟರ್ ಸ್ಟಡಿ'ಯು ಹೆತ್ತವರು ನ್ಯೂನಪೋಷಣೆಯಿಂದ (ಮಾಲ್‌ನ್ಯೂಟ್ರಿಷನ್) ನರಳಿದ್ದನ್ನು, ಆ ಹಿನ್ನೆಲೆಯಲ್ಲಿ ಅವರ ಮಕ್ಕಳು ಬೊಜ್ಜನ್ನು ಬೆಳೆಸಿಕೊಂಡು, ಮಧುಮೇಹ ಪೀಡಿತರಾದುದನ್ನು ಎತ್ತಿ ತೋರಿತು. ಹಸಿವು ಹೆತ್ತವರ ವಂಶವಾಹಿಗಳ ಮೇಲೆ ಪ್ರಭಾವವನ್ನು ಬೀರಿದ ಕಾರಣ, ಅವರ ಮಕ್ಕಳ ವಂಶವಾಹಿಗಳು ಹೆಚ್ಚು ಹೆಚ್ಚು ತಿನ್ನುವ ಗುಣವನ್ನು ಬೆಳೆಸಿಕೊಂಡವು.

ಒಬ್ಬ ಮನುಷ್ಯನ ವ್ಯಕ್ತಿತ್ವವನ್ನು ಆನುವಂಶಿಕತೆ ಹಾಗೂ ಪರಿಸರಗಳೆರಡೂ ಸೇರಿ ನಿರ್ಣಯಿಸುತ್ತವೆ ಎನ್ನುವುದು ಇಂದಿನ ವಿಜ್ಞಾನದ ನಿಲುವಾಗಿದೆ. ಪ್ರಕೃತಿಯಲ್ಲಿ ವಂಶವಾಹಿಗಳು ತಮ್ಮ ಗುಣಲಕ್ಷಣಗಳನ್ನು ಸುಪ್ತವಾಗಿ ಇಟ್ಟಿರುತ್ತವೆ. ಪರಿಸರವು ಆ ಸುಪ್ತವಾಗಿರುವ ಗುಣಲಕ್ಷಣಗಳನ್ನು ಜಾಗೃತಗೊಳಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಬಾಲ್ಯದಲ್ಲಿ ಮಕ್ಕಳು ಒಮ್ಮೆಲೇ ಒಂದಲ್ಲ ನಾಲ್ಕೈದು ಭಾಷೆಗಳನ್ನು ಒಟ್ಟಿಗೆ ಸುಲಭವಾಗಿ ಕಲಿಯಬಲ್ಲವು. ವಯಸ್ಸಾಗುತ್ತಾ ಹೋದ ಹಾಗೆ ಹೊಸ ಭಾಷೆಯನ್ನು ಕಲಿಯುವ ವೇಗವು ಕುಂಠಿತವಾಗುತ್ತಾ ಹೋಗುತ್ತದೆ. ಶಿಕ್ಷಣ, ಜೀವನ ಮೌಲ್ಯ, ಸಂಸ್ಕಾರ, ಸಂಸ್ಕೃತಿಗಳನ್ನು ನಮ್ಮ ಸಮಾಜ ಹಾಗೂ ನಮ್ಮ ಮನೆಯ, ಶಾಲೆಯ, ಸಮಾಜದ ಪರಿಸರ ನಿರ್ಧರಿಸುತ್ತವೆ. ಆಧುನಿಕ ವಿಜ್ಞಾನವು ಈ ಸತ್ಯವನ್ನು ತಿಳಿಯುವುದಕ್ಕೆ ಸಾವಿರಾರು ವರ್ಷಗಳ ಮೊದಲೇ ಭಗವದ್ಗೀತೆಯು ಗುಣ (ಆನುವಂಶಿಕತೆ) ಹಾಗೂ ಕರ್ಮ (ಶಿಕ್ಷಣ) ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ ಎಂದು ಸ್ಪಷ್ಟವಾಗಿ ಹೇಳಿದೆ. ತಳಿವಿಜ್ಞಾನ ಹಾಗೂ ನರವಿಜ್ಞಾನಗಳೆರಡೂ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುವಲ್ಲಿ ಆನುವಂಶಿಕತೆ ಹಾಗೂ ಪರಿಸರಗಳು ಹೇಗೆಲ್ಲ ಪರಸ್ಪರ ಪ್ರಭಾವಿಸುತ್ತವೆ ಎನ್ನುವುದನ್ನು ತಿಳಿಯುವತ್ತ ಹಲವು ಸಂಶೋಧನೆಗಳನ್ನು ನಡೆಸುತ್ತಿದೆ.



ಸೊರಗುತ್ತಿರುವ ವಿಕೇಂದ್ರೀಕೃತ ಯೋಜನೆಗಳು

ಸಮಗ್ರ ಅಭಿವೃದ್ಧಿಯ ವಿಮರ್ಶೆಗೆಂದೇ ನಡೆಸಬೇಕಾದ ಪಂಚಾಯತ್‌ಮಟ್ಟದ ಕೆಡಿಪಿ ಸಭೆಗಳು ಸಂಬಂಧಪಟ್ಟ ಜವಾಬ್ದಾರಿಯುತ ಅಧಿಕಾರಿಗಳು ಹಾಜರಾಗದೇ, ಅಭಿವೃದ್ಧಿಗಳ ಹಾಗೂ ಸಮಸ್ಯೆಗಳ ಕುರಿತಾದ ವಾಸ್ತವಿಕ ಚರ್ಚೆಯ ಅಗತ್ಯಗಳು ಅರ್ಥ ಕಳೆದುಕೊಂಡು, ನಿಗದಿತ ನಮೂನೆಯಲ್ಲಿ ಮಾತ್ರ ಅಂಕಿ-ಅಂಶಗಳನ್ನು ಭರ್ತಿಮಾಡಿ, ಕಾಟಾಚಾರಕ್ಕೆ ವರದಿ ಒಪ್ಪಿಸುವ ಸಭೆಗಳಾಗಿ ಮಾರ್ಪಟ್ಟಿವೆ.

ವಿಶ್ಲೇಷಣೆ
ಕೃಪಾ ಎಂ.ಎಂ.
vveditoped@gmail.com

ರಾಜ್ಯ ಸರಕಾರದ ಬಜೆಟ್ ಅಧಿವೇಶನ ಪ್ರಾರಂಭವಾಗಿದೆ. ಇದು ರಾಜ್ಯವೊಂದರ ಶಾಸಕಾಂಗ ಕ್ಯಾಲೆಂಡರ್‌ನಲ್ಲಿನ ಅತಿಪ್ರಮುಖ ಘಟನೆಗಳಲ್ಲಿ ಒಂದಾಗಿದೆ. ಬಜೆಟ್ ಅಧಿವೇಶನವಾದ್ದರಿಂದ ಯಾವ ಕ್ಷೇತ್ರಕ್ಕೆ ಎಷ್ಟು ಹಣಕಾಸು ಎಂಬುದರ ಲೆಕ್ಕಾಚಾರವು ಕಾನೂನಾತ್ಮಕವಾಗಿ ಇರುವ ಬದ್ಧತೆಗಳಿಗೆ ಅನುಗುಣವಾಗಿದೆಯೇ, ವಿಶೇಷವಾಗಿ ವಿಕೇಂದ್ರೀಕರಣದ ಆಶಯಕ್ಕೆ ಬದ್ಧವಾಗಿದೆಯೇ ಎಂಬುದರ ಪರಿಗಣನೆ ಅತ್ಯಂತ ಅಗತ್ಯ. ಕರ್ನಾಟಕದ ಗ್ರಾಮಸ್ವರಾಜ್ ಹಾಗೂ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ, ಗ್ರಾಮೀಣಾಭಿವೃದ್ಧಿಗಾಗಿ ರಾಜ್ಯ ಬಜೆಟ್ ಹಂಚಿಕೆ ಮತ್ತು ಪಂಚಾಯತ್ ಯೋಜನೆಗಳ ನಡುವೆ ಗಮನಾರ್ಹ ಸಂಬಂಧವಿದೆ. ಕಾಯಿದೆಯ ಆಶಯದಂತೆ, ಪಂಚಾಯತ್ ಯೋಜನೆಗಳ ತಯಾರಿಕೆ ಮತ್ತು ರಾಜ್ಯ ಬಜೆಟ್‌ನ ಲೆಕ್ಕಾಚಾರ ಹಾಗೂ ಹಂಚಿಕೆಯ ನಡುವಿನ ಸಂಬಂಧವು ಸ್ಥಳೀಯ ಸರಕಾರಗಳಿಗೆ (ಪಂಚಾಯತ್‌ಗಳಿಗೆ) ಸಂಪನ್ಮೂಲ ಹಂಚಿಕೆ ಮತ್ತು ಆರ್ಥಿಕ ವಿಕೇಂದ್ರೀಕರಣದ ಪ್ರಕ್ರಿಯೆಯಲ್ಲಿ ಬೇರೂರಿದೆ. ಈ ಅಧಿವೇಶನದಲ್ಲಿ ಮಂಡಿಸುವ ಬಜೆಟ್ ಹಾಗೂ ಅದರ ತಯಾರಿಕೆಯ ಪ್ರಕ್ರಿಯೆಯು ಇದನ್ನು ಪರಿಗಣಿಸಿದೆಯೇ; ಎತ್ತ ಸಾಗುತ್ತಿದೆ ಈ ರಾಜ್ಯ ಬಜೆಟ್‌ನ ಲೆಕ್ಕಾಚಾರ ಹಾಗೂ ಸ್ಥಳೀಯ ಸರಕಾರಗಳ ಯೋಜನೆಗಳ ಸಂಬಂಧ ಎಂಬುದನ್ನು ವಿಶ್ಲೇಷಿಸುವ ಅಗತ್ಯವಿದೆ.

ಪಂಚಾಯತ್‌ರಾಜ್ ವ್ಯವಸ್ಥೆಗೆ ಗಮನಾರ್ಹ ಬದಲಾವಣೆ ತರುವ ಆಶಯದೊಂದಿಗೆ 2016ರಲ್ಲಿ ಜಾರಿಯಾದ ಈ ಅಧಿನಿಯಮವು 'ಗ್ರಾಮಸ್ವರಾಜ್ಯದೆಡೆಗಿನ ಪಥ' ಎಂದೇ ಇಂದಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ನೇತೃತ್ವದ ಅಂದಿನ ಸರಕಾರ ಬಿಂಬಿಸಿತ್ತು. ಗ್ರಾಮಾಭಿವೃದ್ಧಿಯ ಕನಸು ಕಂಡಿರುವ, ಸಂವಿಧಾನದ ಆಶಯದಂತೆ ಗ್ರಾಮಸಭೆಗೇ ಪರಮಾಧಿಕಾರ ಎಂದು ನಂಬಿರುವ ಪ್ರತಿಯೊಬ್ಬರಲ್ಲಿಯೂ ಗ್ರಾಮ ಪಂಚಾಯತ್‌ಗಳು ಇನ್ನು ಮುಂದೆ ಸ್ಥಳೀಯ ಸ್ವಯಂಸರಕಾರಗಳಾಗಿ ಕಾರ್ಯನಿರ್ವಹಿಸುತ್ತವೆ ಎಂಬ ಆಶಾಭಾವನೆ ಮೂಡಿತ್ತು. ಕಾಯಿದೆಯ ಆಶಯದಂತೆ, ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದ 31 ವಿಷಯಗಳಿಗೆ ಗ್ರಾಮಸಭೆಯಿಂದ ಜಿಲ್ಲಾಹಂತದವರೆಗೂ ಸೂಕ್ತ, ಸ್ಪಷ್ಟ, ಜವಾಬ್ದಾರಿಯುತ ನಕ್ಷೆಯನ್ನು ರಮೇಶ್ ಕುಮಾರ್ ಅಧ್ಯಕ್ಷತೆಯ ಪಂಚಾಯತ್‌ರಾಜ್ ಕಾಯಿದೆ ತಿದ್ದುಪಡಿ ಸಮಿತಿಯು ನೀಡಿತ್ತು. ಪಂಚಾಯತ್‌ಗಳಿಗಾಗಿನ ವಿಕೇಂದ್ರೀಕರಣ ಯೋಜನೆಯಿಂದ ಮೊದಲ್ಗೊಂಡು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆಯವರೆಗೂ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿತ್ತು.

ಇಷ್ಟೆಲ್ಲದರ ನಡುವೆಯೂ, ಗ್ರಾಮೀಣಾಭಿವೃದ್ಧಿಯ ಪ್ರಕ್ರಿಯೆಗಳು ಸಮಗ್ರತೆಯನ್ನು ಪರಿಗಣಿಸದೇ ಭೌತಿಕ ಅಭಿವೃದ್ಧಿಯತ್ತ ಮಾತ್ರ ಏಕೆ ಕುಂಟುತ್ತ ಸಾಗುತ್ತಿವೆ? ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ '3 ಎಫ್'ಗಳ (Functions, Functionaries, Funds- ಹೊಣೆಗಳು, ಹೊಣೆಗಾರರು, ನಿಧಿಗಳು) ವಿಕೇಂದ್ರೀಕರಣ ಎತ್ತ ಸಾಗಿದೆ? ಪುಟ ತಿರುವಿ ವಿಶ್ಲೇಷಿಸಿದಾಗ ಕಂಡಿದ್ದು ಅಧಿಕಾರಶಾಹಿ ವ್ಯವಸ್ಥೆಯ ದಾಳದಲ್ಲಿ ಸೊರಗಿ ಹೋಗುತ್ತಿರುವ ವಿಕೇಂದ್ರೀಕರಣದ ಪರಿಕಲ್ಪನೆಗಳು, ಈ ದಾಳದಲ್ಲಿ ಅರಿತೋ ಅರಿಯದೆಯೋ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಸ್ವಯಂಸರಕಾರಗಳು. ಮಹದಾಶಯದೊಂದಿಗೆ ಜಾರಿಯಾಗಿರುವ ಗ್ರಾಮ ಸ್ವರಾಜ್ ಕಾಯಿದೆಯ ಅನುಷ್ಠಾನ ಈ ಹಂತಕ್ಕೆ ಬರಲು ಪ್ರಮುಖ ಕಾರಣವೆಂದರೆ, ಸ್ಥಳೀಯ ಸರಕಾರದ ಚುನಾಯಿತ ಪ್ರತಿನಿಧಿಗಳಲ್ಲಿರುವ ರಾಜಕೀಯ ಇಚ್ಛಾಶಕ್ತಿಯ ಕೊರತೆ, ಗ್ರಾಮಸಭಾದ ಸದಸ್ಯರಲ್ಲಿರುವ ಸಿನಿಕತನ, ಎಲ್ಲೆಡೆ ಆಳವಾಗಿ ಬೇರೂರುತ್ತಿರುವ ಅಧಿಕಾರಶಾಹಿ ವ್ಯವಸ್ಥೆಗಳು, ಅದಕ್ಕೆ ಎಡೆಮಾಡಿಕೊಡುತ್ತಿರುವ ಅಧಿಕಾರದ ದಾಹ.

ಕಾಯಿದೆ ಜಾರಿಯಾಗಿ 9 ವರ್ಷಗಳು ಕಳೆದರೂ ಅದಕ್ಕನುಗುಣವಾಗಿ ಎಲ್ಲ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನಿಯಮಗಳನ್ನು ಇತ್ತೀಚಿನವರೆಗೂ ಸರಕಾರ ರೂಪಿಸಿಯೇ ಇರಲಿಲ್ಲ. ಬದಲಾಗಿ ಅಧಿನಿಯಮದ ಅವಕಾಶಗಳೇನು ಎಂಬುದು ಮರೆಯುವಷ್ಟರ ಮಟ್ಟಿಗೆ ದಿನಕ್ಕೊಂದು ಸುತ್ತೋಲೆಗಳನ್ನು ನೀಡಿ ಗ್ರಾಮ ಪಂಚಾಯತ್ ಕಾರ್ಯನಿರ್ವಾಹಕರನ್ನು ಕಂಗಾಲಾಗಿಸಿದೆ. ತಾಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಯೋಜನಾ ಸಮಿತಿಗಳು 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತೆ ಕಾರ್ಯನಿರ್ವಹಿಸುತ್ತಿವೆ. ಇದರೊಂದಿಗೆ, ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುವ ಇಲಾಖೆಗಳು ತಮ್ಮದೇ ಆದ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ಒತ್ತುನೀಡುತ್ತಿವೆ. ಗ್ರಾಮೀಣಾಭಿವೃದ್ಧಿಗೆ ಪುಷ್ಟಿ ನೀಡುವ MGNREGA ನಂಥ ಕಾಯಿದೆಯ ಅನುಷ್ಠಾನದ ಪ್ರಕ್ರಿಯೆಯಲ್ಲಿ, ಗ್ರಾಮದ ಅಗತ್ಯವನ್ನು ಗ್ರಾಮಸಭಾದ ಸಭೆಗಳಲ್ಲಿ ಚರ್ಚಿಸಿ ಯೋಜಿಸುವ ಬದಲಾಗಿ, ಮೇಲುಹಂತದಿಂದ ನೀಡಲಾದ ಆದೇಶಗಳಿಗೆ ಅನುಗುಣವಾಗಿ ಯೋಜನೆಯನ್ನು ರೂಪಿಸುತ್ತಿವೆ.

ಇಷ್ಟಲ್ಲದೇ, ಅಧಿನಿಯಮದ ಪ್ರಮುಖ ಆಶಯವಾದ ಯೋಜನೆ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದಲ್ಲಿ ಗ್ರಾಮದ ಎಲ್ಲಾ ನಾಗರಿಕರ ನೇರ ಭಾಗವಹಿಸುವಿಕೆಯೊಂದಿಗೆ ಗ್ರಾಮಸಭಾದ ಸಭೆಗೆ ಪರಮಾಧಿಕಾರ, ಗ್ರಾಮಸಭಾದ ಸಭೆಯ ನಿರ್ಣಯವೇ ಅಂತಿಮ, ಎಲ್ಲಾ ಹಂತದ ಸರಕಾರಗಳು ಅದಕ್ಕೆ ಉತ್ತರದಾಯಿಗಳು, ಕಾಯಿದೆಯ ಚೌಕಟ್ಟಿನಲ್ಲಿರುವ ಗ್ರಾಮಸಭಾದ ಸಭೆಯ ಯೋಜನೆಗಳನ್ನು ಬದಲಾಯಿಸುವಂತಿಲ್ಲ- ಇತ್ಯಾದಿ ಅಧಿನಿಯಮದಲ್ಲಿ ಉಲ್ಲೇಖಿಸಿರುವ ಅಧಿಕಾರಗಳು, ಅವಕಾಶಗಳು ಕಾಯಿದೆಯ ಪುಸ್ತಕದಲ್ಲಿಯೇ ಉಳಿದಿವೆ. ಗ್ರಾಮಸಭೆಯ ಅಧಿಕಾರವನ್ನು ಮೊಟಕುಗೊಳಿಸುವಲ್ಲಿ ಮತ್ತು ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣದ ಸಾಕ್ಷಾತ್ಕಾರ ತಡೆಯುವಲ್ಲಿ ಅಧಿಕಾರಶಾಹಿ ನಡೆಗಳು ಹಾಸುಹೊಕ್ಕಾಗಿ ಬೆಳೆಯುತ್ತಿವೆ.

2017ರಿಂದ ಗ್ರಾಮ ಪಂಚಾಯತ್‌ಗಳಲ್ಲಿ ಹೊಸ ಹುದ್ದೆಗಾಗಲೀ ಅಥವಾ ತೆರವಾದ ಸ್ಥಾನಕ್ಕಾಗಲೀ ಯಾವುದೇ ಸಿಬ್ಬಂದಿಗಳ ನೇಮಕವಾಗಿಲ್ಲ. ಪಂಚಾಯತ್ ಸಿಬ್ಬಂದಿಗಳ ನೇಮಕಕ್ಕೂ ರಾಜ್ಯ ಸರಕಾರದ ಆದೇಶಕ್ಕಾಗಿ ಕಾಯುವಂಥ ಸ್ಥಿತಿ ಗ್ರಾಮ ಪಂಚಾಯತ್‌ಗಳದ್ದಾಗಿರುವಾಗ, ಗ್ರಾಮ ಪಂಚಾಯತ್‌ಗಳು ಸ್ಥಳೀಯ ಸರಕಾರವಾಗಿ ಸಮಗ್ರ ಗ್ರಾಮೀಣಾಭಿವೃದ್ಧಿಯತ್ತ ಗಮನ ಹರಿಸುವುದು ಪ್ರಶ್ನಾರ್ಥಕವಾಗಿದೆ.

ಸಮಗ್ರ ಅಭಿವೃದ್ಧಿಯ ವಿಮರ್ಶೆಗೆಂದೇ ನಡೆಸಬೇಕಾದ ಪಂಚಾಯತ್‌ಮಟ್ಟದ ಕೆಡಿಪಿ ಸಭೆಗಳು ಸಂಬಂಧಪಟ್ಟ ಜವಾಬ್ದಾರಿಯುತ ಅಧಿಕಾರಿಗಳು ಹಾಜರಾಗದೇ, ಅಭಿವೃದ್ಧಿಗಳ ಹಾಗೂ ಸಮಸ್ಯೆಗಳ ಕುರಿತಾದ ವಾಸ್ತವಿಕ ಚರ್ಚೆಯ ಅಗತ್ಯಗಳು ಅರ್ಥ ಕಳೆದುಕೊಂಡು, ನಿಗದಿತ ನಮೂನೆಯಲ್ಲಿ ಮಾತ್ರ ಅಂಕಿ-ಅಂಶಗಳನ್ನು ಭರ್ತಿಮಾಡಿ, ಕಾಟಾಚಾರಕ್ಕೆ ವರದಿ ಒಪ್ಪಿಸುವ ಸಭೆಗಳಾಗಿ ಮಾರ್ಪಟ್ಟಿವೆ. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ನಡೆಯುವ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದ ಯಾವುದೇ ಸಭೆಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಮಾತ್ರ ನಡೆಸಿ ತೀರ್ಮಾನಗಳಾಗುತ್ತಿರುವುದರಿಂದ ಗ್ರಾಮ ಪಂಚಾಯತ್‌ನ ವಾಸ್ತವ ಚಿತ್ರಣ ಸಿಗುವುದಿಲ್ಲವಾದ್ದರಿಂದ ಅಭಿವೃದ್ಧಿ ಕಾರ್ಯದಲ್ಲಿ ತೊಡಕುಂಟಾಗುತ್ತಿದೆ.

ಸ್ವಚ್ಛ ಭಾರತ್ ಮಿಷನ್ ಖಾತೆಯಿಂದ ಹಿಡಿದು ಆರೋಗ್ಯ ರಕ್ಷಾ ಸಮಿತಿ, ಗ್ರಾಮ ಆರೋಗ್ಯ, ನೈರ್ಮಲ್ಯ ಹಾಗೂ ಪೌಷ್ಟಿಕಾಂಶ ಸಮಿತಿಯ ಹಣಕಾಸು ನಿರ್ವಹಣೆಗೆ ಅಗತ್ಯವಾದಂಥ ಗ್ರಾಮ ಪಂಚಾಯತ್ ಅಧ್ಯಕ್ಷರ ಜಂಟಿ ಸಹಿ ತೆಗೆದುಹಾಕಿ, ಕೇವಲ ಅಧಿಕಾರ ವರ್ಗದವರಿಗೆ ಇದನ್ನು ಸೀಮಿತಗೊಳಿಸಲಾಗಿದೆ. ಗ್ರಾಮ ಪಂಚಾಯತ್ ವ್ಯಾಪಿಯಲ್ಲಿ ನಡೆಯುವ ಇತರ ಎಲ್ಲ ಇಲಾಖೆಗಳ ಕಾಮಗಾರಿಯ ಯೋಜನೆ ಮತ್ತು ಅಂದಾಜು ಪಟ್ಟಿಗಳನ್ನು ಕಾಮಗಾರಿ ಪ್ರಾರಂಭವಾಗುವ ಮೊದಲೇ ಪಂಚಾಯತ್ ಮಂಡಳಿಯ ಮುಂದೆ ಮಂಡಿಸುವಲ್ಲಿ ತಾತ್ಸಾರ ಭಾವನೆ ಎದ್ದುಕಾಣುತ್ತಿದೆ. ಅಲ್ಲದೇ, ಕಾಮಗಾರಿ ಮುಕ್ತಾಯವಾಗಿ ಹಸ್ತಾಂತರವಾಗುವ ಸಮಯದಲ್ಲಿ ಕೇವಲ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಹಿ ಮಾತ್ರ ಅಗತ್ಯ ಎನ್ನುವಂಥ ನಡೆಗಳು ಎಲ್ಲೆಡೆ ಅಧಿಕಾರಿಶಾಹಿತನವು ಮನೆಮಾಡಲು ಎಡೆಮಾಡಿಕೊಟ್ಟಿದೆ.

ಇವೆಲ್ಲದರೊಂದಿಗೆ ಸಮಗ್ರ ಗ್ರಾಮೀಣಾಭಿವೃದ್ಧಿಯೆಂದರೆ ಕೇವಲ ಭೌತಿಕ ಅಭಿವೃದ್ಧಿಯಷ್ಟೇ ಎಂಬ ಕಲ್ಪನೆ ಹೆಮ್ಮರವಾಗಿ ಬೆಳೆದು, ಆರ್ಥಿಕ, ಮಾನವ, ಸಾಮಾಜಿಕ ಹಾಗೂ ಪರಿಸರ ಅಭಿವೃದ್ಧಿಗಳು ಮನಃಪಟಲದಿಂದ ಅಳಿಸಿಹೋಗಿವೆ. ಗ್ರಾಮೀಣಾಭಿವೃದ್ಧಿ ಎಂದಾಗ ಮಕ್ಕಳು, ಅಂಗವಿಕಲರು, ಅಶಕ್ತರು, ವೃದ್ಧರು, ಮಹಿಳೆಯರು, ಪುರುಷರು, ಯುವಜನರು, ವಲಸಿಗರು ಇವರೆಲ್ಲರ ಅಭಿವೃದ್ಧಿಯೂ ಅಷ್ಟೇ ಪ್ರಮುಖವಾದುದು, ಅದರತ್ತಲೂ ಗಮನಹರಿಸಬೇಕು ಎಂಬುದು ಲೆಕ್ಕಕ್ಕೇ ಇಲ್ಲ. ಪರಿಸ್ಥಿತಿ ಹೀಗಿರುವಾಗ, ರಾಜ್ಯ ಬಜೆಟ್ ಮಂಡನೆಯಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿಗೆಂದು ಮೀಸಲಿಡುವ ಹಣಕಾಸು ಎಷ್ಟರಮಟ್ಟಿಗೆ ಗ್ರಾಮ ಪಂಚಾಯತ್‌ಗಳ ಅಗತ್ಯದ ಆಧಾರದ ಮೇಲೆ ಹಂಚಿಕೆಯಾಗಬಹುದು? ಹಂಚಿಕೆಯಾದ ಹಣಕಾಸು ಎಷ್ಟರ ಮಟ್ಟಿಗೆ ಮಕ್ಕಳು, ಅಂಗವಿಕಲರು, ಅಶಕ್ತರು, ವೃದ್ಧರು, ಮಹಿಳೆಯರನ್ನೂ ಗಮನದಲ್ಲಿಟ್ಟುಕೊಂಡು ಸಮಗ್ರ ಗ್ರಾಮೀಣಾಭಿವೃದ್ಧಿಗೆ ಉಪಯೋಗಿಸಲ್ಪಡಬಹುದು? ಇನ್ನಷ್ಟು ರಸ್ತೆಗಳು, ಚರಂಡಿಗಳು, ಕಟ್ಟಡಗಳು ಅಂತ ಭೌತಿಕ ಕಾಮಗಾರಿಗೆ ಮೀಸಲಿಟ್ಟು ಕಾಮಗಾರಿಗಳ ಕೊಂಡಿಗಳ ಸಂದಿಗಳಲ್ಲಿ ಸೋರಿಕೆಯಾಗಲು ದಾರಿಯಾಗಬಹುದು? ಅಧಿಕಾರಿಶಾಹಿ ವ್ಯವಸ್ಥೆಯ ಈ ಹಣಕಾಸನ್ನು ಎಷ್ಟರ ಮಟ್ಟಿಗೆ ಗ್ರಾಮೀಣ ಜನತೆಗೆ ಉಪಯೋಗವಾಗುವಂಥ ಯೋಜನೆಗಳಿಗೆ ಸದುಪಯೋಗಿಸಲು ಅನುವುಮಾಡಿಕೊಡ ಬಹುದು? ಎಂಬುದೆಲ್ಲ ಒಂದಷ್ಟು ಯಕ್ಷಪ್ರಶ್ನೆಗಳಾಗಿವೆ. ಆದಾಗ್ಯೂ, ಹೆಚ್ಚಿನ ಶಾಸನಬದ್ಧ ಅನುದಾನ ನೀಡುವುದರೊಂದಿಗೆ, ಈಗಾಗಲೇ ಗ್ರಾಮ ಪಂಚಾಯತ್‌ಗಳು ಗ್ರಾಮಸಭಾದ ಸಭೆಯಲ್ಲಿ ಚರ್ಚಿಸಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ತಯಾರಿಸಿ ನೀಡಿದ ಯೋಜನೆಗಳಿಗೆ ಅನುಗುಣವಾಗಿ ಹಣಕಾಸು ಹಂಚಿಕೆಯಾಗಬಹುದು ಎಂಬ ನಿರೀಕ್ಷೆಯಿದೆ.

ಗ್ರಾಮಸ್ವರಾಜ್ಯದ ಕನಸು ನನಸಾಗಬೇಕಾದರೆ, ಬಜೆಟ್ ತಯಾರಿ ಪ್ರಕ್ರಿಯೆಯಲ್ಲಿ ಈ ಎಲ್ಲವನ್ನೂ ಪರಿಗಣಿಸುವುದು ಅತ್ಯಂತ ಪ್ರಮುಖವಾದುದು. ಶಾಸನಸಭೆಗಳಲ್ಲಿ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಇಂಥ ಗಂಭೀರ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸುವುದು ಅಗತ್ಯ. ಸ್ಥಳೀಯಾಡಳಿತ ಸಂಸ್ಥೆಗಳಿಂದ ಆಯ್ಕೆಯಾಗಿರುವ, ಸ್ಥಳೀಯ ಸರಕಾರಗಳಿಗೆ ಬದ್ಧರಾಗಿರುವ ವಿಧಾನ ಪರಿಷತ್ತಿನ 25 ಶಾಸಕರು ಇಂಥ ವಿಷಯಗಳತ್ತ ಗಮನಹರಿಸಿ, ಬಜೆಟ್ ಅಧಿವೇಶನದಲ್ಲಿ ವಿಶ್ಲೇಷಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸಬೇಕು.

(ಲೇಖಕಿ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕಾರ್ಯಾಲಯದ ಸದಸ್ಯರು)

ಭಟ್ಟರ್ ಸ್ನ್ಯಾಕ್

- **ರೋಹಿತ್ ಮಹಿಷಿ, ತಿಂಡ್ಲು**
ಭಟ್ರೇ, ಅವಳನ್ನು ಕಂಡರೆ ಇಷ್ಟವಿಲ್ಲ, ಆದರೆ ರಕ್ತಾಕ್ಷರಗಳಲ್ಲಿ ಪ್ರೇಮ ನಿವೇದನೆ ಮಾಡ್ತೀನಿ ಅಂತಾಳಲ್ಲ?
– **ಒತ್ತಕ್ಷರ ಸರಿಯಿಲ್ಲ ಅಂತ ರಿಜೆಕ್ಟ್ ಮಾಡ್ತೀಯಾ ನೋಡು!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಮಸಾಲೆ ದೋಸೆಯಲ್ಲಿ ಪಲ್ಯ ಮಾತ್ರ ಇತ್ತು, ಮಸಾಲೆ ಇರಲಿಲ್ಲವಲ್ಲ?
– **ಅದೇ ವಾಸಿ, ಮೈಸೂರು ಪಾಕಿನಲ್ಲಿ ಮೈಸೂರೂ ಇಲ್ಲ, ಪಾಕೂ (ಪಾಕಿಸ್ತಾನ) ಇಲ್ಲ!**

- **ಉಮೇಶ್ ಎಂ.ಶಿರಾ, ರಾಮನಗರ**
ಭಟ್ರೇ, ಜಪಾನಿನಲ್ಲಿ ಗೂಬೇನ ಪೂಜೆ ಮಾಡ್ತಾರಂತೆ, ನಿಜಾನಾ?
– **ಅವರು ಅದನ್ನು ನಮ್ಮಿಂದ ಕಲಿತಿರಬಹುದು!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಬಡತನಕ್ಕೆ ಜಾತಿ ಇದೆಯಾ?
– **ನಮ್ಮಲ್ಲಿ ಜಾತಿಗೂ ಬಡತನವಿಲ್ಲ!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಸಿಕ್ಕಿಹಾಕಿಕೊಂಡ್ರೆ ಮಾತ್ರ ಕಳ್ಳನಾ?
– **ಸಿಕ್ಕಿಹಾಕಿಕೊಂಡ ಎಷ್ಟು ಜನರನ್ನು ಕಳ್ಳ ಎಂದು ಒಪ್ಪಿಕೊಂಡಿದ್ದೇವೆ, ಮೊದಲು ಹೇಳು!**

- **ವೀರೇಶ ಮಂಗಸೂಳಿ, ಖಾನಾಪುರ**
ಭಟ್ಟರು ಊರಲ್ಲಿದ್ದರೆ ಉಪಸ್ಥಿತಿ, ಹೊರಗೆ ಹೋದರೆ ಅನುಪಸ್ಥಿತಿ. ಆಫೀಸ್‌ನ ಸ್ಥಿತಿ?
– **ಯಥಾಸ್ಥಿತಿ!**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ಟರು ಮಸ್ಕತ್‌ಗೆ ಹೋಗಿದ್ದು ಮಾತ್ರ ಸುದ್ದಿಯಾಯ್ತು. ಅಲ್ಲಿ ಅವರು ಏನು ಹೇಳಿದ್ರು ಅನ್ನುವುದು ಯಾಕೆ ಸುದ್ದಿಯಾಗಲಿಲ್ಲ?
– **ಹೇಳಿದ್ದು ಸುದ್ದಿಯಲ್ಲ, ಮಾಡಿದ್ದಷ್ಟೇ!**

- **ಸರಿತಾ ರವಿ, ಬೆಂಗಳೂರು**
ಭಟ್ರೇ, ಹೆಂಗಸರ ಜೀವನ ಅಡುಗೆಮನೆಯಲ್ಲಿ ಕಳೆದುಹೋಗುತ್ತದಲ್ಲ?
– **ಅದು ನಿಜವಾದರೆ, ಗಂಡಸರ ಜೀವನ ಅಲ್ಲಿ ಉಂಡೇ ಕಳೆದುಹೋಗುತ್ತದೆ!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ನೀವು ಆಗಾಗ ವಿದೇಶ ಸುತ್ತುತ್ತಾ ಇರುತ್ತೀರಲ್ಲ?
– **ಸುಳ್ಳು.. ನಾನು ಆಗಾಗ ಭಾರತಕ್ಕೆ ಬರುತ್ತಿರುತ್ತೇನೆ!**

ಕೊಬ್ಬಿನ ಸಮಸ್ಯೆ ಕೊಬ್ಬಿದ ನಮ್ಮ ವ್ಯವಸ್ಥೆಯಲ್ಲಿದೆ!

ಲೋಕಮತ

ಲೋಕೇಶ್ ಕಾಯರ್ಗ
kaayarga@gmail.com

ಮಾರ್ಚ್ 4 ವಿಶ್ವ ಸ್ಥೂಲಕಾಯ ದಿನ. ಮಾರ್ಚ್ 8 ಅಂತಾರಾಷ್ಟ್ರೀಯ ಮಹಿಳಾ ದಿನ. ಈ ಎರಡೂ ದಿನಗಳ ಮಧ್ಯೆ ಇರುವುದು ಕೇವಲ 4 ದಿನಗಳ ಅಂತರ. ಮಹಿಳೆಯರ ದಿನದಂದು ಚರ್ಚಿಸುವ ಮಹಿಳೆಯರ ಪ್ರಮುಖ ಸಮಸ್ಯೆಗಳಲ್ಲಿ ಬೊಜ್ಜು ಮತ್ತು ಅದರಿಂದ ಕಾಣಿಸಿಕೊಳ್ಳುವ ಇತರ ಸಮಸ್ಯೆಗಳೇ ಪ್ರಧಾನ. ಎರಡು ವರ್ಷಗಳ ಹಿಂದಿನ ಅಧ್ಯಯನದ ಪ್ರಕಾರ ಶೇಕಡಾ 40ರಷ್ಟು ಭಾರತೀಯ ಮಹಿಳೆಯರು ಬೊಜ್ಜಿನ ಸಮಸ್ಯೆ ಎದುರಿಸುತ್ತಿದ್ದಾರೆ. 30ರಿಂದ 49 ವಯಸ್ಸಿನ ಪ್ರತಿ 10 ಮಹಿಳೆಯರಲ್ಲಿ 5ರಿಂದ 6 ಜನರು ಸ್ಥೂಲ ಕಾಯದ ಸಮಸ್ಯೆ ಹೊಂದಿದ್ದಾರೆ. ಹಾಗೆಂದು ಪುರುಷರ ಕೊಬ್ಬಿನ ಪ್ರಮಾಣವೇನೂ ಕಡಿಮೆ ಇಲ್ಲ. ದೇಶದ ಶೇ. 12ರಷ್ಟು ಪುರುಷರು ಬೊಜ್ಜಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಧಡೂತಿ ಪುರುಷರ ಪ್ರಮಾಣ ಸೆನ್ಸೆಕ್ಸ್‌ಗಿಂತ ಹೆಚ್ಚು ವೇಗದಲ್ಲಿ ಏರುತ್ತಿದೆ. ಲಾನ್ಸೆಟ್ ನಿಯತಕಾಲಿಕದ ಹೊಸ ವರದಿ ಪ್ರಕಾರ ಇನ್ನು 25 ವರ್ಷಗಳಲ್ಲಿ ಭಾರತದಲ್ಲಿ ಸ್ಥೂಲಕಾಯರ ಸಂಖ್ಯೆ 45 ಕೋಟಿ ಮೀರಲಿದೆ.

ಧಡೂತಿಗಳ ದಿನದ ಪೂರ್ವಭಾವಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದ 119ನೇ ಸಂಚಿಕೆಯಲ್ಲಿ ಭಾರತೀಯರಲ್ಲಿ ಹೆಚ್ಚುತ್ತಿರುವ ಬೊಜ್ಜಿನ ಸಮಸ್ಯೆ ಬಗ್ಗೆ ಉಲ್ಲೇಖಿಸಿದ್ದಾರೆ. ಭಾರತೀಯರು ಪ್ರತಿ ತಿಂಗಳು ಶೇ. 10ರಷ್ಟು ಕಡಿಮೆ ಅಡುಗೆ ಎಣ್ಣೆಯನ್ನು ಬಳಸಬೇಕೆಂದು ಪ್ರಧಾನಿ ಕರೆ ನೀಡಿದ್ದಾರೆ. ಈ ಸಂಬಂಧ ಜಾಗೃತಿ ಮೂಡಿಸಲು ಇನ್ಫೋಸಿಸ್ ಸಹ-ಸಂಸ್ಥಾಪಕ ನಂದನ್ ನಿಲೇಕಣಿ, ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ, ಸಂಸದೆ ಸುಧಾ ಮೂರ್ತಿ ಸೇರಿದಂತೆ ನಾನಾ ಕ್ಷೇತ್ರಗಳ ಗಣ್ಯರ ತಂಡವೊಂದನ್ನು ಪ್ರಧಾನಿ ಹೆಸರಿಸಿದ್ದಾರೆ.

ಸ್ವತ: ಪ್ರಧಾನಿ ಈ ಸಮಸ್ಯೆ ಪ್ರಸ್ತಾಪಿಸಿದ್ದರಿಂದ ಕಳೆದ ನಾಲ್ಕೈದು ದಿನಗಳಿಂದ ಈ ಬಗ್ಗೆ ಹೆಚ್ಚು ಹೆಚ್ಚು ಚರ್ಚೆಯಾಗುತ್ತಿದೆ. ನಾಲ್ಕು ದಶಕಗಳ ಹಿಂದೆ ಒಂದಂಕಿಯಲ್ಲಿದ್ದ ಭಾರತೀಯರ ಸರಾಸರಿ ಬೊಜ್ಜಿನ ಪ್ರಮಾಣ ಈಗ ಎರಡಂಕಿ ದಾಟಿದೆ. ಅದರಲ್ಲೂ ಮಹಿಳೆಯರಲ್ಲಿ ಬೊಜ್ಜಿನ ಪ್ರಮಾಣ ಶೇ. 10ಕ್ಕೆ ಏರಿದೆ. ಪುರುಷರಲ್ಲಿ ಶೇಕಡಾ 0.5 ರಿಂದ ಶೇಕಡಾ 6 ಕ್ಕೆ ಏರಿದೆ. ಇದೇ ಪ್ರಮಾಣದಲ್ಲಿ ದೇಶದಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರ ಸಂಖ್ಯೆಯೂ ಹೆಚ್ಚಾಗಿದೆ.

ಕೇವಲ ಎರಡು ದಶಕಗಳ ಹಿಂದೆ ಶ್ರೀಮಂತರ ಕಾಯಿಲೆ ಎನ್ನಲಾಗುತ್ತಿದ್ದ ಮಧುಮೇಹ, ರಕ್ತದೊತ್ತಡ, ಕೊಲೆಸ್ಟ್ರಾಲ್, ಹೃದ್ರೋಗ ಈಗ ಹಳ್ಳಿ- ಪಟ್ಟಣಗಳೆಂಬ ಭೇದವಿಲ್ಲದೆ ಸಾರ್ವತ್ರಿಕವಾಗಿ ಕಾಣಿಸಿಕೊಳ್ಳುತ್ತಿದೆ. ಮೊದಲು 60 ವರ್ಷ ದಾಟಿದವರಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುತ್ತಿತ್ತು. ಈಗ ಎಲ್‌ಕೆಜಿ ಮಕ್ಕಳಲ್ಲೂ ಹೃದ್ರೋಗ ಕಾಣಿಸಿಕೊಳ್ಳುತ್ತಿದೆ. ಶಾಲಾ ಮಕ್ಕಳು ಆಟದ ಮೈದಾನದಲ್ಲಿ, ಶಾಲಾ ಕೊಠಡಿಗಳಲ್ಲಿ ಕುಸಿದು ಬಿದ್ದು ಮೃತಪಟ್ಟ ವರದಿಗಳು ಆಗಾಗ ಬರುತ್ತಿವೆ.

ಭಾರತೀಯರಲ್ಲಿ ಹೆಚ್ಚುತ್ತಿರುವ ಸ್ಥೂಲಕಾಯದ ವಿಷಯ ಬಂದಾಗ ಪ್ರಮುಖವಾಗಿ ಚರ್ಚೆಯಾಗುವುದು ಬದಲಾದ ನಮ್ಮ ಆಹಾರ ಪದ್ಧತಿ ಮತ್ತು ಜೀವನ ಶೈಲಿ. ಎಣ್ಣೆ ಬಳಸದೆ ಅಥವಾ ತೀರಾ ಕಡಿಮೆ ಎಣ್ಣೆ ಬಳಸಿದ ನಮ್ಮ ಸಾಂಪ್ರದಾಯಿಕ ಆಹಾರ ಪದ್ಧತಿಯನ್ನು ತೊರೆದು ಹೆಚ್ಚು ಕೊಬ್ಬು, ಸಕ್ಕರೆ ಅಂಶಗಳುಳ್ಳ ಆಹಾರ ಪದ್ಧತಿಯತ್ತ ವಾಲಿರುವುದು ಸಮಸ್ಯೆಯ ಮೂಲ ಎಂದು ವಿಶ್ಲೇಷಿಸಲಾಗುತ್ತದೆ. ಪ್ರಧಾನಿ ಮೋದಿಯವರೂ ಇದನ್ನೇ ಉಲ್ಲೇಖಿಸಿದ್ದಾರೆ.

ಹಾಗೆಂದು ಅಡುಗೆ ಎಣ್ಣೆ ಪದಾರ್ಥಗಳನ್ನು, ಕೊಬ್ಬು ಜಾಸ್ತಿ ಇರುವ ಪದಾರ್ಥಗಳನ್ನು ತೀರಾ ಕಡಿಮೆ ಪ್ರಮಾಣದಲ್ಲಿ ಸೇವಿಸಿದವರೂ ಬೊಜ್ಜಿನ ಸಮಸ್ಯೆಯಿಂದ ಹೊರತಾಗಿಲ್ಲ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಿದ ಬಳಿಕವೂ ಹಲವರಲ್ಲಿ ಕೊಲೆಸ್ಟ್ರಾಲ್ ಪ್ರಮಾಣ ನಿಯಂತ್ರಣ ಮೀರುತ್ತಿದೆ. ಇದರ ನಿಯಂತ್ರಣಕ್ಕೆ ಚಿಕ್ಕ ವಯಸ್ಸಿನಲ್ಲಿಯೇ ಮಾತ್ರೆಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗುತ್ತಿದೆ. ಇದರ ಮೂಲ ಹುಡುಕಿದರೆ ನಮ್ಮ ಜೀವನ ಶೈಲಿ ಬದಲಾಗಿರುವುದು ಮಾತ್ರವಲ್ಲ, ನಮ್ಮ ವ್ಯವಸ್ಥೆಯ ಬದಲಾವಣೆಯೂ ಬೊಜ್ಜುತನಕ್ಕೆ ಪ್ರಧಾನ ಕೊಡುಗೆ ನೀಡಿದೆ. ಅದರಲ್ಲೂ ಬದಲಾದ ನಮ್ಮ ಶಿಕ್ಷಣ ವ್ಯವಸ್ಥೆ ಬಾಲ್ಯಾವಸ್ಥೆಯಲ್ಲಿಯೇ ಮಕ್ಕಳನ್ನು ಧಡೂತಿಗಳನ್ನಾಗಿ ಮಾಡುತ್ತಿದೆ.

ಹೊಸ ವ್ಯವಸ್ಥೆ, ಹೊಸ ಸಮಸ್ಯೆ

90ರ ದಶಕಕ್ಕಿಂತ ಮೊದಲಿನ ನಮ್ಮ ಶಾಲಾ ಮಕ್ಕಳ ಚಿತ್ರಣವನ್ನು ಒಮ್ಮೆ ಕಣ್ಮುಂದೆ ತಂದುಕೊಳ್ಳಿ. ಈ ಮಕ್ಕಳಲ್ಲಿ ಬಹುತೇಕರು ಮನೆಗೆ ಹತ್ತಿರ ಇರುವ ಸರಕಾರಿ ಇಲ್ಲವೇ ಖಾಸಗಿ ಶಾಲೆಗಳಲ್ಲಿ ಓದಿದವರು. ಪಟ್ಟಣಗಳಲ್ಲಿ ಮನೆಯಿಂದ ಮೂರ್ನಾಲ್ಕು ಕಿ.ಮೀ. ದೂರದ ಶಾಲೆಗೆ ಹೋಗಲು ಮಕ್ಕಳು ಸೈಕಲ್ ಬಳಸುತ್ತಿದ್ದರು. ಹಳ್ಳಿಗಳಲ್ಲಿ ಮಣಭಾರದ ಪುಸ್ತಕ ಮೂಟೆ ಹೊತ್ತು ನಡೆದುಕೊಂಡೇ ಸಾಗುತ್ತಿದ್ದರು. ಹಾಗೆಯೇ ಸದ್ಯದ ಚಿತ್ರಣವನ್ನು ಊಹಿಸಿಕೊಳ್ಳಿ. ಹಳ್ಳಿಯ ಕೆಲವೇ ಕೆಲವು ಬಡ ಮಕ್ಕಳು ಅನಿವಾರ್ಯ ಕಾರಣಕ್ಕೆ ಸರಕಾರಿ ಶಾಲೆಗಳಲ್ಲಿ ಉಳಿದುಕೊಂಡಿದ್ದಾರೆ. ಇನ್ನುಳಿದಂತೆ ಕೆಳ ಮಧ್ಯಮ ವರ್ಗದ ಮಕ್ಕಳೂ ಖಾಸಗಿ ಶಾಲೆ ಸೇರಿಕೊಂಡಿದ್ದಾರೆ. ಬಹುತೇಕ ಖಾಸಗಿ ಶಾಲೆಗಳು ತಮ್ಮದೇ ಸಾರಿಗೆ ವ್ಯವಸ್ಥೆ ಕಲ್ಪಿಸಿವೆ. ಬಸ್ ವ್ಯವಸ್ಥೆ ಇಲ್ಲದ ಕಡೆ ವ್ಯಾನ್, ಆಟೋಗಳಂತೂ ಇದ್ದೇ ಇರುತ್ತವೆ. ಎಲ್‌ಕೆಜಿಯಿಂದ ಹಿಡಿದು ಹೈಸ್ಕೂಲ್ ವರೆಗೆ ಮಕ್ಕಳಿಗೆ ಮನೆ ಗೇಟ್ ಮುಂದೆ ನಿಂತ ವಾಹನ ಹತ್ತುವುದಷ್ಟೇ ಕೆಲಸ. ಕೆಲವು ವಿದ್ಯಾರ್ಥಿಗಳ ತಾಯಂದಿರು ಪುಸ್ತಕದ ಮೂಟೆಯನ್ನು ವ್ಯಾನ್‌ಗೆ ಏರಿಸುವ, ಇಳಿಸುವ ಕೆಲಸವನ್ನೂ ನಿರ್ವಹಿಸುತ್ತಾರೆ.

ಈ ಮಕ್ಕಳಿಗೆ ಪಿ.ಟಿ. ಪೀರಿಯಡ್ ಎಂದು ಕ್ಲಾಸ್ ರೂಮಿನಿಂದ ಹೊರಗೆ ಬಿಟ್ಟರೆ ಸರಿ, ಇಲ್ಲವಾದರೆ ಸೂರ್ಯನ ಬೆಳಕಿನಲ್ಲಿ ದಿನಕ್ಕೆ ಅರ್ಧ ಗಂಟೆಯಷ್ಟು ಕಾಲ ಕಳೆಯುವ ಅವಕಾಶವೂ ಇರುವುದಿಲ್ಲ. ನಗರದ ಬಹುತೇಕ ಖಾಸಗಿ ಶಾಲೆಗಳು ಕ್ರೀಡಾಂಗಣಕ್ಕೆ ಮೀಸಲಾದ ಜಾಗದಲ್ಲೂ ಬಹುಮಹಡಿ ಕಟ್ಟಡಗಳನ್ನು ಕಟ್ಟಿ ಮಕ್ಕಳ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸಿಕೊಂಡಿವೆ. ಸಾವಿರಾರು ಮಕ್ಕಳು ಓದುವ ಶಾಲೆಗಳಲ್ಲಿ ವಾರಕ್ಕೆ ಒಂದು ಅಥವಾ ಎರಡು ದೈಹಿಕ ತರಬೇತಿ ಅವಧಿಗಳಿದ್ದರೆ ಹೆಚ್ಚು. ಬಹುತೇಕ ಮಕ್ಕಳ ದಿನಚರಿ ವಾರಗಟ್ಟಲೆ ಮನೆಯಿಂದ ಕ್ಲಾಸ್ ರೂಮ್, ಕ್ಲಾಸ್ ರೂಮ್‌ನಿಂದ ಎಂಬಂತಾಗಿರುತ್ತದೆ. ಇನ್ನು ನಮ್ಮ ನಗರಗಳಲ್ಲಿ ಒತ್ತೊತ್ತಾಗಿರುವ ಬಹು ಅಂತಸ್ತಿನ ಕಟ್ಟಡಗಳ ನಡುವೆ ಸೂರ್ಯನ ಕಿರಣ ನೆಲವನ್ನು ಸ್ಪರ್ಶಿಸುವುದೇ ಕಷ್ಟ. ಹೆಚ್ಚಿನ ಮಕ್ಕಳು ಸೂರ್ಯನ ತಾಪವನ್ನು, ಚಂದ್ರನ ಬೆಳದಿಂಗಳನ್ನು ಅನುಭವಿಸದೆ ಪಠ್ಯಗಳಲ್ಲಷ್ಟೇ ಓದಿ ಬೆಳೆಯುತ್ತಿದ್ದಾರೆ.



ತಜ್ಞ ವೈದ್ಯರೊಬ್ಬರ ಪ್ರಕಾರ ಮಕ್ಕಳು ಸೂರ್ಯನ ಬೆಳಕಿಗೆ ತಮ್ಮ ದೇಹವನ್ನು ಒಡ್ಡಿಕೊಳ್ಳದ ಕಾರಣಕ್ಕೆ ತೀರಾ ಸಣ್ಣ ವಯಸ್ಸಿಗೆ ವಿಟಮಿನ್ ಡಿ ಕೊರತೆ ಕಂಡು ಬರುತ್ತಿದೆ. ಇದು ನಾವು ಪ್ರಕೃತಿಯಿಂದ ದೂರವಾಗಿ ಕೃತಕ ಬದುಕನ್ನು ಕಟ್ಟಿಕೊಂಡಿರುವುದರ ಫಲ. ಸಹಜವಾಗಿ ಸಿಗುತ್ತಿದ್ದ ಆರೋಗ್ಯ ಭಾಗ್ಯವನ್ನು ದೂರ ತಳ್ಳಿ ಕಾಂಪ್ಲಾನ್, ಬೋರ್ನ್‌ವಿಟಾಗಳ ಮೂಲಕ ಮಕ್ಕಳ ದೇಹ ಮತ್ತು ಬುದ್ಧಿ ಶಕ್ತಿಯನ್ನು ಹೆಚ್ಚಿಸಲು ಮುಂದಾಗಿರುವುದರ ಪರಿಣಾಮ. ವಿಟಮಿನ್ ಡಿ ಕೊರತೆ ಕಾಣಿಸಿಕೊಂಡರೆ ನಮ್ಮ ದೇಹ ಇನ್ನುಳಿದ ವಿಟಮಿನ್ ಸತ್ವಗಳನ್ನು ಹೀರಿಕೊಳ್ಳಲು ವಿಫಲವಾಗುತ್ತದೆ. ಉಳಿದ ಎಲ್ಲ ಆರೋಗ್ಯ ಸಮಸ್ಯೆಗಳಿಗೆ ಹೆಬ್ಬಾಗಿಲು ತೆರೆದಂತಾಗುತ್ತದೆ.

ಡಿಗ್ರಿಗಳಷ್ಟೇ ಮುಖ್ಯ

ಒಂದೆಡೆ ದೇಶ ಒಲಿಂಪಿಕ್ ಆತಿಥ್ಯ ವಹಿಸುವ ತುಡಿತದಲ್ಲಿದ್ದರೆ, ನಗರ ಪ್ರದೇಶದ ನಮ್ಮ ಮಕ್ಕಳು ಯಾವುದೇ ಪ್ರಮುಖ ದೈಹಿಕ ಕಸರತ್ತುಗಳಿಲ್ಲದೆಯೇ ತಮ್ಮ ಇಡೀ ಶಿಕ್ಷಣವನ್ನು ಮುಗಿಸಿ ಉದ್ಯೋಗ ಪ್ರಪಂಚಕ್ಕೆ ಕಾಲಿಡುತ್ತಿದ್ದಾರೆ. ನೀಟ್, ಜೆಇಇ ಎಂದು ಮಾರ್ಕ್ಸ್‌ಗಳ ಮೇಲೆ ಕಣ್ಣಿಟ್ಟ ಪೋಷಕರು ಶಾಲೆ, ಕಾಲೇಜು, ಟ್ಯೂಷನ್ ಬಿಟ್ಟರೆ ಮತ್ತೆಲ್ಲೂ ತಮ್ಮ ಮಕ್ಕಳನ್ನು ಕಳುಹಿಸುತ್ತಿಲ್ಲ. ವಾರಕ್ಕೊಂದು ಸಲವಾದರೂ ಮನೆಯಿಂದ ಹೊರಗೆ ಹೋಗಿ ಆಟವಾಡಿಕೊಂಡು ಬರಲು ಮಕ್ಕಳಿಗೆ ಅವಕಾಶವೇ ಸಿಗುತ್ತಿಲ್ಲ. ದುಬಾರಿ ಹಣ ಕೊಟ್ಟು ಖರೀದಿಸಿದ ಸೈಕಲ್‌ಗಳು ಮನೆ ವರಾಂಡದಲ್ಲಿ ಸುತ್ತು ಹೊಡೆಯಲು ಸೀಮಿತವಾಗುತ್ತಿವೆ. ಹೈಸ್ಕೂಲ್, ಕಾಲೇಜುಗಳಲ್ಲಿ ಸ್ಪೋರ್ಟ್ಸ್, ಎನ್‌ಸಿಸಿ, ಎನ್ನೆಸ್ಸೆಸ್ ಸೇರುವ ವಿದ್ಯಾರ್ಥಿಗಳನ್ನು ಬದುಕಿನಲ್ಲಿ ಯಾವುದೇ ಗುರಿ ಇಲ್ಲದವರೆಂಬಂತೆ ನೋಡಲಾಗುತ್ತಿದೆ.

ತಮ್ಮ ಮಕ್ಕಳ ಸರ್ವಾಂಗೀಣ ಬೆಳವಣಿಗೆಯನ್ನು ಬಯಸುವ ಪೋಷಕರು ಇಲ್ಲ ಎಂದಲ್ಲ, ಆದರೆ ನಗರದ ಒತ್ತಡದ ಬದುಕಿನಲ್ಲಿ ಮಕ್ಕಳಿಗೆ ಪ್ರತ್ಯೇಕವಾಗಿ ಕ್ರೀಡಾ ಕೋಚಿಂಗ್ ಕೊಡಿಸಲು ಅವರಿಗೆ ಸಮಯವಿಲ್ಲ. ಕ್ರಿಕೆಟ್, ಟೆನಿಸ್, ಬ್ಯಾಡ್ಮಿಂಟನ್ ನಂತಹ ಆಟಗಳಿಗೆ ಮಕ್ಕಳನ್ನು ಸೇರಿಸಬೇಕಾದರೆ ದುಬಾರಿ ಫೀಸು ಭರಿಸಬೇಕು. ದುಡ್ಡಿಲ್ಲದೆ ಆಡಬಹುದಾದ ಕಬಡ್ಡಿ, ಖೋಖೋ, ಲಗೋರಿ ಮುಂತಾದ ಆಟಗಳಿಗೆ ನಗರದ ಶಾಲೆಗಳಲ್ಲಿ ಅವಕಾಶವೇ ಇಲ್ಲ. ಇದರಿಂದ ತಿನ್ನು, ಓದು, ಮಲಗು ಎಂಬಲ್ಲಿಗೆ ಸೀಮಿತವಾದ ಯುವ ಪೀಳಿಗೆ ದೊಡ್ಡ ಸಂಬಳದ ನೌಕರಿ ಹಿಡಿದರೂ ಏರು ಜವ್ವನದಲ್ಲಿರುವಾಗಲೇ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳ ಎಚ್.ಆರ್. ವಿಭಾಗದ ಸಿಬ್ಬಂದಿಯೊಬ್ಬರ ಪ್ರಕಾರ, 40 ವರ್ಷ ದಾಟಿದವರಿಗಿಂತಲೂ ಹೊಸದಾಗಿ ಸೇರಿದ ಉದ್ಯೋಗಿಗಳು ಅನಾರೋಗ್ಯ ನೆಪದಡಿ ರಜೆ ಪಡೆದುಕೊಳ್ಳುತ್ತಿದ್ದಾರೆ. ಇದು ನಮ್ಮ ನೌಕರಿ ಹಿಡಿಯಲಷ್ಟೇ ಸೀಮಿತವಾದ ನಮ್ಮ ಶಿಕ್ಷಣ ವ್ಯವಸ್ಥೆಯ ಪ್ರತಿಫಲನವೂ ಹೌದು.

ನಾಲ್ಕು ದಶಕಗಳ ಹಿಂದೆ ಈ ದೇಶದಲ್ಲಿ ಹುಟ್ಟಿದ ಬಹುತೇಕರಿಗೆ ಬಾಲ್ಯದಲ್ಲಿ ತಾಯಿ ಅಥವಾ ಮನೆಯ ಹಿರಿಯರು ತಟ್ಟೆಗೆ ಬಡಿಸಿದ್ದನ್ನು ತಿನ್ನುವುದು ಬಿಟ್ಟರೆ ಬೆಳಗ್ಗಿನ ತಿಂಡಿಗೆ, ಮಧ್ಯಾಹ್ನ ಮತ್ತು ರಾತ್ರಿಯ ಊಟಕ್ಕೆ ಹೆಚ್ಚೇನೂ ಆಯ್ಕೆಗಳಿರಲಿಲ್ಲ. ಐಸ್‌ಕ್ರೀಮ್‌ಗಿಂತ ನಾಲ್ಕಾಣೆಗೆ ಸಿಗುತ್ತಿದ್ದ ಐಸ್ ಕ್ಯಾಂಡಿ ಹೆಚ್ಚು ಜನಪ್ರಿಯವಾಗಿತ್ತು. ಸಿಹಿ ಎಂದರೆ ಪಾಯಸ, ಹೋಳಿಗೆಗೆ ಸೀಮಿತವಾಗಿರುತ್ತಿತ್ತು. ಮದುವೆ ಮನೆಗಳಲ್ಲಿ ಮೂರ್ನಾಲ್ಕು ಬಗೆಯ ಪಾಯಸ ಸವಿದ ಬಳಿಕವೂ ನಮ್ಮ ಹೊಟ್ಟೆ ಸಪಾಟಾಗಿಯೇ ಇರುತ್ತಿತ್ತು. ಚಾಕಲೇಟ್ ಎಂದರೆ 5 ಪೈಸೆ, 10 ಪೈಸೆಗೆ ಸಿಗುತ್ತಿದ್ದ ಅಕ್ಲೇರ್ಸ್ ಎಂದಷ್ಟೇ ಗೊತ್ತಿತ್ತು. ಬರ್ತ್ ಡೇ ಆಚರಣೆ ಶ್ರೀಮಂತ ಗೆಳೆಯ, ಗೆಳತಿಯರಿಗಷ್ಟೇ ಸೀಮಿತವಾಗಿತ್ತು. ಅದೂ ಕೇಕ್ ಕಟ್ಟಿಂಗ್ ಇಲ್ಲದೆ ಚಾಕಲೇಟ್ ಇಲ್ಲವೇ ಬಿಸ್ಕತ್ ಹಂಚಿಕೆಯಲ್ಲಿ ಮುಗಿಯುತ್ತಿತ್ತು.

ಅಂದು ಕೈಯಲ್ಲಿ ಹೆಚ್ಚು ದುಡ್ಡಿರಲಿಲ್ಲ. ಹಾಗೆಂದು ಯಾರೂ ಹೊಟ್ಟೆ ಹಸಿದುಕೊಂಡು ಇರುತ್ತಿರಲಿಲ್ಲ. ಮನೆಯ ಅಂಗಳಕ್ಕೆ ಕಾಲಿಟ್ಟರೆ ಪೇರಳೆ, ಪಪ್ಪಾಯ, ಅನಾನಸು, ಗೆಣಸು, ಸೌತೆಕಾಯಿ..ಹೀಗೆ ಯಾವುದಾದರೊಂದು ತಿನ್ನಲು ಸಿಗುತ್ತಿತ್ತು. ಬೇಸಿಗೆ ಬಂತೆಂದರೆ ತರಾವರಿ ಮಾವಿನ ಹಣ್ಣುಗಳನ್ನು, ಗೇರು ಹಣ್ಣಿನ ಘಮಲನ್ನು ಆಸ್ವಾದಿಸಲು ಅವಕಾಶವಿತ್ತು. ಮನೆ ಹಿಂದಿನ ಹಿತ್ತಲಲ್ಲಿ ಸಿಗುತ್ತಿದ್ದ ಬಿಂಬುಳ, ಚಳ್ಳೆ, ಅರಮದ್ದು, ಗೊಂಬಳೆ, ಕವಳಿ, ಅಮಟೆ ಕಾಯಿಗಳಿಗೆ ಸ್ವಲ್ಪ ಉಪ್ಪು ಬೆರೆಸಿ ತಿಂದರೆ ದೇಹಕ್ಕೆ ಹೊಸ ಚೈತನ್ಯವೇ ಸಿಗುತ್ತಿತ್ತು. ಗುಡ್ಡ ಹತ್ತಿ ಸಾಗಿದರೆ ಮುಳ್ಳುಕಾಯಿ, ಸರೋಳಿಕಾಯಿ, ಅಬ್ಲುಂಕ, ಅತ್ತಿಹಣ್ಣು, ಜಂಬುನೇರಳೆ ನೆಲ್ಲಿಕಾಯಿ, ಜಾರಿಗೆ ಕಾಯಿ, ಮುರುಗಲ, ನೇರಳೆ, ಪನ್ನೇರಳೆ, ಕುಂಟನೇರಳೆ, ಬೋರೆ, ಇಳ್ಳಿ, ಸಕ್ಕರೆ ಕಂಚಿ ಹೀಗೆ ಯಾವುದಾದರೂ ಒಂದು ಹಣ್ಣು ಸಿಕ್ಕೇ ಸಿಗುತ್ತಿತ್ತು. ಮಳೆಗಾಲದಲ್ಲಿ ಹಲಸಿನ ಹಪ್ಪಳ, ಸಂಡಿಗೆ, ಮಾವಿನ ರಸಾಯನ ರೆಡಿ ಇರುತ್ತಿತ್ತು. ಏನಿಲ್ಲವೆಂದರೂ ಹಲಸಿನ ಬೀಜ, ಹುಣಿಸೆ ಬೀಜ, ಒಣ ಗೇರು ಬೀಜಗಳನ್ನು ಒಲೆಯಲ್ಲಿ ಹಾಕಿ ಸುಟ್ಟು ತಿನ್ನಬಹುದಿತ್ತು.

ಈ ವಾತಾವರಣ ಈಗ ಪೇಟೆ ಬಿಡಿ, ಹಳ್ಳಿಗಳಲ್ಲೂ ಇಲ್ಲ. ಬಹುತೇಕ ಕಾಡು ಹಣ್ಣುಗಳು ಹೇಳಹೆಸರಿಲ್ಲದೆ ಮಾಯವಾಗಿವೆ. ಹಳ್ಳಿಗಳಲ್ಲೂ ಈಗ ಲಗೋರಿ, ಕುಂಟಾಬಿಲ್ಲೆ ಆಡುವವರಿಲ್ಲ. ಗ್ರಾಮೀಣರ ಮಕ್ಕಳೂ ಟಿ.ವಿ. ಜಾಹೀರಾತಿನ ಅಮ್ಮ ಹೇಳುವ 'ಪೌಷ್ಟಿಕ ಡ್ರಿಂಕ್' ಸೇವಿಸಿ ಬೆಳೆಯುತ್ತಿದ್ದಾರೆ. ಹಳ್ಳಿಗರ ಹಟ್ಟಿ, ಕೊಟ್ಟಿಗೆಗಳು ಖಾಲಿಯಾಗಿವೆ. ಎಲ್ಲೆಡೆ ನಂದಿನಿ ಹಾಲು, ತುಪ್ಪ ಸಿಗುವುದರಿಂದ ಹಾಲಿನ ಸೇವನೆಗೆ ಯಾವ ಕೊರತೆಯೂ ಇಲ್ಲ, ಆದರೆ ಹಳ್ಳಿ ಮತ್ತು ಪೇಟೆಯ ಬಹುತೇಕ ಮಕ್ಕಳಿಗೆ ತಿನ್ನಲು ಸಮಯವಿಲ್ಲ. ಬೆಳಗ್ಗೆ ಏಳರೊಳಗೆ ಮನೆ ಬಿಡುವ ಹೆಚ್ಚಿನ ಮಕ್ಕಳು ಏನನ್ನೂ ತಿನ್ನುವ ಮೂಡ್‌ನಲ್ಲಿರುವುದಿಲ್ಲ. ಅಮ್ಮ ತಿನ್ನಲೇಬೇಕೆಂದು ಒತ್ತಾಯಿಸಿದರೆ 'ಮ್ಯಾಗಿ' ಮಾಡಮ್ಮ ಎನ್ನುವವರೇ ಹೆಚ್ಚು. ನೂಡಲ್ಸ್, ಗೋಬಿ, ಬರ್ಗರ್, ಪಿಜ್ಜಾ, ಸ್ಯಾಂಡ್‌ವಿಚ್, ಪಾಪ್‌ಕಾರ್ನ್, ದುಬಾರಿ ಚಾಕಲೇಟ್, ದುಬಾರಿ ಕೇಕ್ ಮತ್ತು ಐಸ್ ಕ್ರೀಂಗಳಿಗೆ ಮನಸೋತ ನಮ್ಮ ಮಕ್ಕಳ ನಾಲಿಗೆ ಈಗ ರಾಗಿ ಮುದ್ದೆ, ರಾಗಿ ಮಾಲ್ಟ್, ಅನ್ನ, ಅಕ್ಕಿ ರೊಟ್ಟಿ, ದೋಸೆಗಳಿಗೆ ಸುಲಭದಲ್ಲಿ ಮಾರು ಹೋಗುವುದಿಲ್ಲ.

ಇದರ ಒಟ್ಟಾರೆ ಪರಿಣಾಮ ಎಂದರೆ ಲಾನ್ಸೆಟ್ ನಿಯತಕಾಲಿಕ ವರದಿಯಂತೆ, ಇನ್ನು 25 ವರ್ಷಗಳಲ್ಲಿ ಭಾರತದ ಮೂರನೇ ಒಂದರಷ್ಟು ಜನರು ಸ್ಥೂಲಕಾಯ ಸಮಸ್ಯೆಯಿಂದ ಬಳಲಲಿದ್ದಾರೆ. ಬೊಜ್ಜುತನದಲ್ಲಿ ಚೀನಾ ಮತ್ತು ಅಮೆರಿಕವನ್ನು ಹಿಂದಿಕ್ಕಿ ನಾವು ಒಂದನೇ ಸ್ಥಾನ ಏರಲಿದ್ದೇವೆ. ಅಂದರೆ ಕೊಬ್ಬಿನ ಸಮಸ್ಯೆ ಕೊಬ್ಬಿದ ನಮ್ಮ ವ್ಯವಸ್ಥೆಯಲ್ಲಿದೆ ! ಇದರಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯೂ ಸೇರಿದಂತೆ ಇಡೀ ವ್ಯವಸ್ಥೆಯ ಪಾಲಿದೆ. ಈ ವ್ಯವಸ್ಥೆ ನಮ್ಮನ್ನು ಅಧಿಕ ತೂಕ, ಬೊಜ್ಜು, ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯಾಘಾತ, ಪಾರ್ಶ್ವವಾಯು, ಕ್ಯಾನ್ಸರ್ ಮತ್ತು ಅಕಾಲಿಕ ಮರಣದ ಅಪಾಯದತ್ತ ದೂಡುತ್ತಿದೆ.

ಸಂಕುಚಿತ ಭಾವವು ಸಮಗ್ರತೆಯನ್ನು ಕಟ್ಟದೆ ವಿಭಜನೆಯನ್ನೇ ಮಾಡುತ್ತದೆ

ಬಸವ ಮಂಟಪ

ರವಿ ಹಂಜ್
vveditoped@gmail.com

ಭಾಗ-2

ಜಾಗತಿಕ ಲಿಂಗಾಯತ ಮಹಾಸಭಾದ ಜಾಮದಾರರು ತಮ್ಮ 'ವೀರಶೈವ ಪಂಚಾಚಾರ್ಯ ಮಿಥ್ಯ ಮತ್ತು ಸತ್ಯ' ಕೃತಿಯಲ್ಲಿ, ''ರೇಣುಕನು ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟನೆ?'' ಎಂದು ಪ್ರಶ್ನಿಸುತ್ತ, ''ಚಂದ್ರಮೌಳೀಶ್ವರ ಶೃಂಗೇರಿ, ದ್ವಾರಕ, ಪುರಿ ಮತ್ತು ಬದರಿ ಶಂಕರಮಠಗಳಲ್ಲಿ ಪೂಜಿಸಲ್ಪಡುತ್ತಿರುವ ಲಿಂಗ. ಈ 4 ಮಠಗಳಲ್ಲಿ ರೇವಣಸಿದ್ಧ ಅಥವಾ ರೇಣುಕ ಶೃಂಗೇರಿ ಮಠಕ್ಕೆ ಶಿವಲಿಂಗ ಕೊಟ್ಟ ದಾಖಲೆಯಿಲ್ಲ. ಕಾಶಿ ಲಕ್ಷ್ಮಣಶಾಸ್ತ್ರಿ ಎಂಬುವರು 1735ರಲ್ಲಿ ಬರೆದು, 1966ರಲ್ಲಿ ಶೃಂಗೇರಿ ಮಠದಿಂದ ಪ್ರಕಟಗೊಂಡಿರುವ 'ಗುರುವಂಶ ಕಾವ್ಯ'ದ 41ನೆಯ ಪುಟದಲ್ಲಿ, ವಿದ್ಯಾರಣ್ಯರ ಆಶೀರ್ವಾದ ಪಡೆಯಲು ಮತ್ತು ಚಂದ್ರಮೌಳೀಶ್ವರ ಲಿಂಗವನ್ನು ಪೂಜಿಸಲು ವಿಜಯನಗರದ ರಾಜ ಹರಿಹರನಿಗೆ ಸಲಹೆ ಮಾಡಿದನೆಂದು ಹೇಳಲಾಗಿದೆ. ಇದು ಚಂದ್ರಮೌಳೀಶ್ವರ ಲಿಂಗವು 12ನೆಯ ಶತಮಾನಕ್ಕಿಂತ ಮುಂಚೆಯೇ ಇತ್ತೆಂಬುದನ್ನು ತಿಳಿಸುತ್ತದೆಯೇ ಹೊರತು ರೇಣುಕ ಅಥವಾ ರೇವಣಸಿದ್ಧನು ಶಂಕರಾಚಾರ್ಯರಿಗೆ ಕೊಟ್ಟದ್ದು ಸುಳ್ಳು'' ಎನ್ನುತ್ತಾರೆ. ಹಾಗೆಯೇ ಮುಂದುವರಿದು, ''...ಇದುವರೆಗಿನ ನಿರೂಪಣೆಯಿಂದ 12ನೆಯ ಶತಮಾನದ ರೇವಣಸಿದ್ಧನನ್ನು ವೀರಶೈವ ವಿದ್ವಾಂಸರು ಪೌರಾಣಿಕ ಕಥೆಗಳೊಡನೆ ಬೆಸೆದಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಈ ಕಲ್ಪಿತ ಕಥೆಗಳೇ ಅಂತಿಮ ಸತ್ಯವೆಂದು ಪಂಚಾಚಾರ್ಯರು ತರ್ಕ ಮತ್ತು ಸತ್ಯಸಂಗತಿಗಳ ನಿಯಮಗಳಿಗೆ ವಿರುದ್ಧವಾಗಿ ಪ್ರಚಾರ ಮಾಡುತ್ತಿದ್ದಾರೆ; ಸತ್ಯಸಂಗತಿ ತಿಳಿಯದವರು ಅದನ್ನು ನಂಬುತ್ತಿದ್ದಾರೆ. ಚಾರಿತ್ರಿಕ ಸತ್ಯಗಳನ್ನು ಪೌರಾಣಿಕ ಪಾತ್ರಗಳೊಂದಿಗೆ ಬೆರೆಸಿ ತಿರುಚಿರುವುದಕ್ಕೆ ಮುಮ್ಮುಖ ಉದ್ದೇಶವಿದೆ. ಒಂದು ಪಂಚಾಚಾರ್ಯರನ್ನು ಪವಿತ್ರರು, ದಿವ್ಯಪುರುಷರು, ಅಪೌರುಷೇಯರು ಎಂಬಂತೆ ತೋರಿಸುವುದು; ಎರಡು, ಅವರ ಕಾಲವನ್ನು ಯುಗಯುಗಗಳ ಹಿಂದಕ್ಕೆ ಒಯ್ದು, ಅವರು ಅತ್ಯಂತ ಪ್ರಾಚೀನರೆಂದು ಕಾಣುವಂತೆ ಮಾಡುವುದು ಮತ್ತು ಮೂರು, ವೀರಶೈವವು ಬಸವಯುಗಕ್ಕಿಂತ ಹಿಂದಿನದು ಎಂದು ಹೇಳಿ, ತಮ್ಮ ಧರ್ಮಕ್ಕೆ ಮೂಲ ಮತ್ತು ಹಿರಿಯ ಸ್ಥಾನದ ಹಕ್ಕು ಸಾಧಿಸುವುದು. ರೇವಣಸಿದ್ಧನು 12ನೆಯ ಶತಮಾನದ ಪ್ರಸಿದ್ಧ ಪಾಶುಪತ ಸಿದ್ಧ ಮತ್ತು ಬಸವಣ್ಣನವರ ಸಮಕಾಲೀನ ಎನ್ನುವುದು ಸ್ಪಷ್ಟವಾಗಿದೆ. ಅದು ಐತಿಹಾಸಿಕ ಸತ್ಯಸಂಗತಿ. ಈ ವಾಸ್ತವಾಂಶವನ್ನು ಹತ್ತಾರು ಶರಣರ ಅನೇಕ ವಚನಗಳೇ ಖಚಿತಪಡಿಸುತ್ತವೆ. ಅವನು ಯಾವುದೇ ಧರ್ಮವನ್ನು ಸ್ಥಾಪಿಸಿರುವುದು ಎಲ್ಲೂ ತಿಳಿದುಬಂದಿಲ್ಲ. ಸಾಂಪ್ರದಾಯಿಕ ಶಕ್ತಿಗಳು ಅವನನ್ನು ಪುರಾಣಗಳ ರೇಣುಕನನ್ನಾಗಿ ಮಾಡಿವೆ ಅಷ್ಟೆ'' ಎನ್ನುತ್ತಾರೆ (ಗ್ರಂಥ: ವೀರಶೈವ ಪಂಚಾಚಾರ್ಯ ಮಿಥ್ಯ ಮತ್ತು ಸತ್ಯ; ಲೇಖಕರು: ಡಾ.ಎಸ್.ಎಂ.ಜಾಮದಾರ, ಅನುವಾದಕರು: ಡಾ. ಗೊ.ರು.ಚನ್ನಬಸಪ್ಪ. 2020. Published by: Jagathika Lingayat Mahasabha, No. 53, 2nd Main Road, 3rd cross, Chakravarthi Layout, Palace road, Bangalore-560020).

ಇವರು ಉಲ್ಲೇಖಿಸಿದ 'ಗುರುವಂಶ ಕಾವ್ಯ'ವನ್ನು ನಾನೂ ಓದಿದ್ದೇನೆ. ನನ್ನ ಬಳಿ ಅದರ ಪ್ರತಿಯೂ ಇದೆ. ಇದರಲ್ಲಿ ರೇವಣಸಿದ್ಧರು ಶಂಕರಾಚಾರ್ಯರಿಗೆ ಚಂದ್ರಮೌಳಿ ಲಿಂಗವನ್ನು ಕೊಟ್ಟರು ಎಂಬುದಕ್ಕೆ ಪುರಾವೆ ಸಹ ಇದೆ. ಆದರೆ ಜಾಮದಾರರು ತಮ್ಮ ಸಂಶೋಧಕ ಪಿತಾಮಹ, ವಿಶ್ವವಿದ್ಯಾಲಯದ ಕುಲಪತಿ ಅಹಮ್ಮಿನ ದಿವಂಗತ ಎಂ.ಎಂ.ಕಲಬುರ್ಗಿಯವರಂತೆಯೇ ತಾವು ಉಲ್ಲೇಖಿಸುವ ಗ್ರಂಥವನ್ನೂ ಓದದೆ ತಮ್ಮ ಐಎಎಸ್ ಗತ್ತಿನಲ್ಲಿ ತಾವು ಹೇಳಿದ್ದೇ ಶಾಸನ ಎಂಬಂತೆ ಇದು ಸುಳ್ಳೆಂದು ಘೋಷಣೆ ಮಾಡಿಬಿಟ್ಟಿದ್ದಾರೆ! ಇವರ ಸುಳ್ಳನ್ನು ನಾಡಿನ ಸಾಕ್ಷಿಪ್ರಜ್ಞೆ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗೊರುಚರವರೂ ಅನುವಾದಿಸಿ ರಸ್ಸೆ ಒತ್ತಿ ಅಧಿಕೃತಗೊಳಿಸಿದ್ದಾರೆ!

ಇರಲಿ, ಶೃಂಗೇರಿ ಪೀಠದ ಆಸ್ಥಾನ ವಿದ್ವಾನರಾಗಿದ್ದ ಕಾಶಿ ಲಕ್ಷ್ಮಣಶಾಸ್ತ್ರಿಗಳು ಕ್ರಿ.ಶ. 1735ರಲ್ಲಿ ಸಂಸ್ಕೃತದಲ್ಲಿ ರಚಿಸಿದ್ದ ಮತ್ತು ವಿದ್ಯಾ ವಿಶಾರದ, ವಿದ್ವತ್ ಶಿರೋಭೂಷಣ ಮೈಸೂರು ರಾಜ್ಯದ ಧರ್ಮಾಧಿಕಾರಿ ಎನ್ನಲಾಗಿರುವ ಕುಣಿಗಲ್ ರಾಮಶಾಸ್ತ್ರಿಗಳು 2 ಶತಮಾನಗಳ ನಂತರ ಸಂಪಾದಿಸಿ ಪ್ರಕಟಿಸಿರುವ 'ಗುರುವಂಶ ಕಾವ್ಯ' ಸಂಪುಟ 1, ಭಾಗ 1-7, ತೃತೀಯ ಸರ್ಗ ಪುಟ 109 ಮತ್ತು 110ರಲ್ಲಿ ಈ ಕೆಳಗಿನ ವಿವರಣೆಗಳಿವೆ:

''... ಶ್ರೀತಿ । ಸ ಆಚಾರ್ಯಃ ಅಸ್ಮೈ ವಿಶ್ವರೂಪಾಚಾರ್ಯಾಯ ಸುಸಿದ್ಧದತ್ತೇ ಸುಭಿದೇನ ರೇವಣಾಸಿದ್ಧಮಹಾಯೋಗಿನಾ ದತ್ತಂ ಶ್ರೀ ಚಂದ್ರಮೌಳೀಶ್ವರಲಿಂಗಂ ಸದ್ರತ್ನ ಗರ್ಭೇ ಸತ್ವರಾಭಿ ಸತ್ವರಂ ಮಾಣಿಕ್ಯಂ ಗರ್ಭೇ ಯಸ್ಯ ಸ ತಥೋಕ್ತಸ್ತಂ ಗಣನಾಯಕಂ ವಿಶ್ವೇಶ್ವರಂ ಚ ದತ್ವಾ ಚಿರಂ ಬಹುಕಾಲಂ ಅಚಿಂತ್ಯ ಪೂಜ್ಯ ಇತಿ ನ್ಯಯಾದೀತ್ । ಅಬೋಚತ್ ॥ ಸುರೇಶ್ವರಾಚಾರ್ಯೇ ಸರಸ್ವತೀ ತ್ವಂ ಸಂಪೂಜಯಾಮಾಸ ಚಿರಾದಿದೃತಿಃ । ದತ್ವಾ ಭೃತ್ಯಣಾಂ ಚಿಂತಾಯ ತಸ್ಮೈ ಶಿಷ್ಯೈಃ ಸಮಸ್ತೈಃ ಸ ಜಗಾಮಕಾಶ್ಮೀಮ್ ॥34॥''- ಇಲ್ಲಿ ಸ್ಪಷ್ಟವಾಗಿ ಶಂಕರಾಚಾರ್ಯರಿಗೆ ರೇವಣಸಿದ್ಧರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರು ಎಂದು ತಿಳಿದುಬರುತ್ತದೆ. ಅಲ್ಲದೇ ಶಂಕರರ ನಂತರದ ಆಚಾರ್ಯರಾದ ಸುರೇಶ್ವರಾಚಾರ್ಯರು ಈ ಲಿಂಗವನ್ನು ಶ್ರದ್ಧೆಯಿಂದ ಪೂಜಿಸುತ್ತಿದ್ದರು ಎಂದೂ ತಿಳಿದುಬರುತ್ತದೆ. ಶಂಕರರು ಕಾಲವಾದದ್ದು ಕ್ರಿ.ಶ. 820ರಲ್ಲಿ ಎನ್ನಲಾಗಿದೆ. ಅವರ ನಂತರದ ಗುರುಗಳು ಸುರೇಶ್ವರಾಚಾರ್ಯರು ಎಂದು ಶೃಂಗೇರಿ ಶಂಕರಾಚಾರ್ಯ ಪೀಠದಲ್ಲಿರುವ ದಾಖಲೆಗಳು ತಿಳಿಸುತ್ತವೆ. ಶಂಕರಮಠದಲ್ಲಿ ಇಂದಿಗೂ ಚಂದ್ರಮೌಳೀಶ್ವರ ಲಿಂಗದ ಪೂಜಾ ಪರಂಪರೆ ಮುಂದುವರಿದಿದೆ ಎಂದು ಜಾಮದಾರರೇ ಹೇಳಿದ್ದಾರೆ. ಆಸಕ್ತರು ಈ ಗ್ರಂಥವನ್ನು ಮೈಸೂರು ಓರಿಯೆಂಟಲ್ ಲೈಬ್ರರಿಯಿಂದ ಪಡೆದು ಪರಾಂಬರಿಸಬಹುದು. ಅಂದ ಹಾಗೆ ಈ ಗ್ರಂಥವು ಸದರಿ ಲೈಬ್ರರಿಯನ್ನು ಸೇರಿದ್ದು ಏಪ್ರಿಲ್ 1936ರಲ್ಲಿಯೇ ಎಂಬ ಅಧಿಕೃತ ಮುದ್ರೆಯೂ ಈ ಪ್ರತಿಯ ಮೇಲಿದೆ.

ಇರಲಿ, ರೇವಣಸಿದ್ಧ ಎಂಬುದು ವೀರಶೈವರಲ್ಲಿ ಹೆಚ್ಚು ಪ್ರಚಲಿತವಿರುವ ಒಂದು ಹೆಸರು. ಹರಿಹರನು 'ರೇವಣಸಿದ್ಧೇಶ್ವರ ರಗಳೆ'ಯನ್ನೇ ರಚಿಸಿದ್ದಾನೆ. ಈ ರೇವಣಸಿದ್ಧನ ಕಾಲ 11ನೇ ಶತಮಾನ ಎಂದು ಬಹಳಷ್ಟು ಸಂಶೋಧಕರು ಊಹಿಸಿದ್ದಾರೆ. ಈ 11ನೇ ಶತಮಾನದ ರೇವಣಸಿದ್ಧನು 2 ಶತಮಾನಗಳ ಹಿಂದಿನ ಶಂಕರರ ಕಾಲದಲ್ಲಿ ಇರುವ ಸಾಧ್ಯತೆ ಇದೆಯೇ?!

ವೈಜ್ಞಾನಿಕವಾಗಿ ಒಬ್ಬ ವ್ಯಕ್ತಿ 2 ಶತಮಾನಗಳ ಕಾಲ ಬದುಕಿದ ನಿದರ್ಶನ ಇಲ್ಲ. ಆದರೆ ಭಾರತವಲ್ಲದೆ ಯುರೋಪಿನಲ್ಲಿಯೂ ಒಂದೇ ಹೆಸರನ್ನು ಪಾರಂಪರಿಕವಾಗಿ ಇಮ್ಮಡಿ, ಮುಮ್ಮಡಿ, ನಾಲ್ವಡಿ ಎನ್ನುವ prefix ಒಂದಿಗೆ ಇಟ್ಟುಕೊಂಡಿರುವ ಉದಾಹರಣೆಗಳು ಇತಿಹಾಸದುದ್ದಕ್ಕೂ ಧಾಳಾಗಿ ಇವೆ. ಅದರಲ್ಲೂ ಕಾಳಾಮುಖ ವೀರಶೈವ ಮಠಗಳ ಪರಂಪರೆಯಲ್ಲಿ ಒಂದು ಪೀಠದ ಸ್ವಾಮಿಗಳು ಪರಂಪರಾಗತವಾಗಿ ಒಂದೇ ಹೆಸರನ್ನು ಮುಂದುವರಿಸಿಕೊಂಡು ಹೋಗಿರುವುದನ್ನು ಇತಿಹಾಸ ಬಲ್ಲದು. 'ಶಕ್ತಿವಿಶಿಷ್ಟಾದ್ವೈತ' (ಶ್ರೀಕರ ಭಾಷ್ಯ, ಎಂ.ಜಿ.ನಂಜುಂಡಾರಾಧ್ಯ) ಕೃತಿಯಲ್ಲಿ 4 ರೇಣುಕರನ್ನು ಗುರುತಿಸಲಾಗಿದೆ. ಅಲ್ಲದೆ, ಶೂನ್ಯಪೀಠದ ಮುರುಗಿಸ್ವಾಮಿಗಳು ಎನ್ನುವ ಹೆಸರು ಬಿಚ್ಚುಗತ್ತಿ ಭರಮಣ್ಣನ ಕಾಲದಿಂದ ಇಂದಿಗೂ ಆ ಪೀಠದ ಸ್ವಾಮಿಗಳು ಮುರುಗಿಸ್ವಾಮಿಗಳು ಎಂದೇ ಜನಸಾಮಾನ್ಯರಲ್ಲಿ, ಲೇಖನಗಳಲ್ಲಿ, ಕೃತಿಗಳಲ್ಲಿ ದಾಖಲಾಗಿರುವುದನ್ನು ಕಾಣಬಹುದು. ಇದೇ ಶಂಕರಮಠದಲ್ಲಿ ಸಹ ಕೆಲವಾರು ಶಂಕರರು ಆಗಿಹೋಗಿದ್ದಾರೆ. ಅದರಲ್ಲೂ ಆದಿಶಂಕರರೇ ಬೇರೆ, 8ನೇ ಶತಮಾನದ ಶಂಕರರೇ ಬೇರೆ ಎಂಬ ವಾದವೂ ಪ್ರಬಲವಾಗಿದೆ. ಒಂದು ವೇಳೆ ಆದಿಶಂಕರರು 8ನೇ ಶತಮಾನದ ಶಂಕರರಿಗಿಂತ ಹಲವಾರು ಶತಮಾನಗಳ ಮುಂಚೆಯೇ ಇದ್ದರು ಎಂದರೆ ರೇವಣಸಿದ್ಧಯೋಗಿಯೂ ಅಷ್ಟೇ ಶತಮಾನಗಳ ಹಿಂದಕ್ಕೆ ಹೋಗುತ್ತಾನೆ! ಸದ್ಯಕ್ಕೆ ಐತಿಹಾಸಿಕ ದಾಖಲೆಗಳ ಪ್ರಕಾರ 8ನೇ ಶತಮಾನದ ಶಂಕರರೇ ಆದಿಯೆಂದು ಪರಿಗಣಿಸಬೇಕಾಗುತ್ತದೆ. ಈ ವಾಸ್ತವ ತರ್ಕದ ಪ್ರಕಾರ ರೇವಣಸಿದ್ಧ ಎನ್ನುವ ಕಾಳಾಮುಖ ವೀರಶೈವ ಯೋಗಿಯನ್ನು ಆದಿಶಂಕರರು ಏಕೆ ಸಂಧಿಸಿರಬಾರದು ಮತ್ತು ಅವರಿಂದ ಚಂದ್ರಮೌಳೀಶ್ವರ ಲಿಂಗವನ್ನು ಏಕೆ ಪಡೆದುಕೊಂಡಿರಬಾರದು?

ಇದು ಕಟ್ಟುಕತೆಯೆಂದು ಶೃಂಗೇರಿ ಪೀಠದ ಭಕ್ತರು ಸಹ ಸಾಧಿಸುತ್ತಾ ಬಂದಿದ್ದಾರೆ. ಆ ಹಿನ್ನೆಲೆಯಲ್ಲಿ ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ ಅವರು 'ರೇವಣಸಿದ್ಧರು-ಚಂದ್ರಮೌಳೀಶ್ವರ: ಒಂದು ಕಟ್ಟುಕತೆ' ಎಂಬ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಶಾಸ್ತ್ರಿಗಳು, ''ಈ ಕಾವ್ಯಕ್ಕೆ ಕಾಶಿ ಲಕ್ಷ್ಮಣಶಾಸ್ತ್ರಿಗಳೇ ರಚಿಸಿದ ವ್ಯಾಖ್ಯಾನವೊಂದಿದ್ದು ಅದರಲ್ಲಿ 'ಸುಸಿದ್ಧದತ್ತಂ' ಎಂಬ ಪದ ಪುಂಜಕ್ಕೆ 'ರೇವಣಸಿದ್ಧಯೋಗಿನಾ ದತ್ತಂ' ಎಂಬ ವ್ಯಾಖ್ಯಾನವಿದೆ. ಈ ರೇವಣಸಿದ್ಧಯೋಗಿಯು ಬಾಳೇಹೊನ್ನೂರು ಮಠದ ರೇಣುಕರೇ ಎಂದು ಕೆಲವು ವೀರಶೈವ ಲೇಖಕರು ಭಾವಿಸಿಕೊಂಡಿದ್ದಾರೆ. ಅದೇ ಭಾವನೆಯಿಂದ ಶಂಕರಾಚಾರ್ಯರೂ, ಅವರ ಪರಂಪರೆಯಲ್ಲಿ ಬಂದಿರುವ ಆಚಾರ್ಯರೆಲ್ಲರೂ ರೇವಣಸಿದ್ಧ ಸಂಪ್ರದಾಯಕ್ಕೆ ಸೇರಿದವರೆಂದು ಲೇಖನ, ಭಾಷಣಗಳ ಮೂಲಕ ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ಇಲ್ಲಿ ರೇವಣಸಿದ್ಧರು ಎಂದರೆ ಶಂಕರರ ಗುರುಗಳಾಗಿದ್ದ ಗೋವಿಂದ ಯೋಗೀಂದ್ರ ಭಗವತ್ಪಾದರು. ಅವರು ಮಧ್ಯಪ್ರದೇಶದ ನರ್ಮದಾ ತೀರವಾಸಿಯಾಗಿದ್ದರು. ಮಧ್ಯಪ್ರದೇಶದಲ್ಲಿ ನರ್ಮದಾ ನದಿಗೆ 'ರೇವಾ' ಎಂಬ ಹೆಸರೇ ಪ್ರಸಿದ್ಧವಾಗಿದ್ದು ಗೋವಿಂದ ಭಗವತ್ಪಾದರನ್ನೇ ರೇವಣಸಿದ್ಧ ಯೋಗಿಯೆಂದು ಅವರು ಉಲ್ಲೇಖಿಸಿದ್ದಾರೆ. ಕನ್ನಡ ಸೀಮೆಯಲ್ಲಿ 'ರೇವಾ' ಎಂಬ ಹೆಸರು ಸಾಕಷ್ಟು ಬಳಕೆಯಲ್ಲಿಲ್ಲದ ಕಾರಣ ಜನಪದವು ಬಾಳೇಹಳ್ಳಿಯ ರೇಣುಕರನ್ನು ರೇವಣರೆಂದು ಕರೆದಿರಲು ಸಾಧ್ಯ. ಶಂಕರರ ಕಾಲದಲ್ಲಿ ಕಾಳಾಮುಖರು ಅಸ್ತಿತ್ವದಲ್ಲಿಯೇ ಇರಲಿಲ್ಲ'' ಎನ್ನುತ್ತಾರೆ.

ಶಂಕರರಿಗಿಂತ ಒಂದು ಶತಮಾನಕ್ಕೂ ಮೊದಲು ಭಾರತದಲ್ಲಿ ಹಲವು ಕಾಲ ವಾಸವಿದ್ದ ಚೀನೀ ಯಾತ್ರಿಕ ಹುಯೆನ್ ತ್ಸಾಂಗ್, ಸವಾಲುವಾದಕ್ಕೆ ಖ್ಯಾತರಾದ ಕಾಳಾಮುಖ ಶೈವನೊಬ್ಬನೊಂದಿಗೆ ಸವಾಲುವಾದದಲ್ಲಿ ಗೆದ್ದೆ ಎಂದು ದಾಖಲಿಸಿದ್ದಾನೆ. ಕ್ರಿ.ಶ. 1ನೇ ಶತಮಾನದಲ್ಲಿಯೇ ಪಾಶುಪತ, ಕಾಳಾಮುಖ, ಕಾಪಾಲಿಕ ಎಂಬ ವರ್ಗಗಳಿದ್ದವು ಎಂದು ಬ್ರಿಟಿಷ್ ಸಂಶೋಧಕ ಗ್ಯಾವಿನ್ ಫ್ಲಡ್ ತನ್ನ An Introduction to Hinduism ಕೃತಿಯಲ್ಲಿ ಸಾಕ್ಷಿ ಸಮೇತ ವಿವರಿಸಿದ್ದಾನೆ. ಕ್ರಿಸ್ತಪೂರ್ವದಲ್ಲಿಯೇ ಕೊರಳು, ತೋಳಿಗೆ ಕಟ್ಟಿಕೊಳ್ಳುತ್ತಿದ್ದ ಲಿಂಗಗಳು ಹರಪ್ಪಾ ಉತ್ಖನನದಲ್ಲಿ ಸಿಕ್ಕಿವೆ ಕೂಡ. ಮಠಗಳನ್ನು ಕಟ್ಟುವ ಪದ್ಧತಿಯನ್ನು ಬೌದ್ಧರು ಮತ್ತು ಶೈವರು ಶಂಕರರಿಗಿಂತ ಮೊದಲೇ ಆರಂಭಿಸಿದ್ದರು ಸಹ. ಹೀಗೆ ಶಂಕರರ ಕಾಲದಲ್ಲಿ ಕಾಳಾಮುಖರು ಅಸ್ತಿತ್ವದಲ್ಲಿಯೇ ಇರಲಿಲ್ಲ ಎನ್ನುವ ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳ ಅಭಿಪ್ರಾಯ ತಪ್ಪು ಎಂದು ಸಾಬೀತಾಗುತ್ತದೆ. ಅಲ್ಲದೆ ರೇವಣಸಿದ್ಧ ಎಂಬ ಕಾಳಾಮುಖ ಯೋಗಿಯೊಬ್ಬ ಶಂಕರರ ಕಾಲದಲ್ಲಿ ಏಕಿರಬಾರದು ಮತ್ತು ಶಂಕರರು ಏಕೆ ಶೈವ ಆಚಾರ್ಯ ಪರಂಪರೆಗೆ ಸೇರಿರಬಾರದು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ.

ಉಳಿದಂತೆ ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಹೇಳುವಂತೆ ನರ್ಮದಾ ನದಿಗೆ ರೇವಾ ಎಂಬ ಹೆಸರಿರುವುದು ನಿಜ. ಆದರೆ ಗೋವಿಂದ ಭಗವತ್ಪಾದರನ್ನು ರೇವಣಸಿದ್ಧ ಎಂದಿರುವುದು ಅಸಹಜ ಮತ್ತು ಅತಾರ್ಕಿಕ ಎಂದು ಸ್ವಲ್ಪ ವಿವೇಚಿಸಿದರೆ ಯಾರಾದರೂ ಹೇಳಬಹುದು. ತತ್ವಜ್ಞಾನಿ ಗೋವಿಂದ ಭಗವತ್ಪಾದರನ್ನು ಮಹಾಯೋಗಿ ಎಂದಾಗಲಿ ರೇವಣಸಿದ್ಧ ಎಂದಾಗಲಿ ಎಲ್ಲೂ ಕರೆದ ನಿದರ್ಶನವಿಲ್ಲ. ಹಾಗೊಮ್ಮೆ ಇದ್ದಿದ್ದರೆ 'ಗುರುವಂಶಕಾವ್ಯ'ದಲ್ಲಿ ಅದರ ಉಲ್ಲೇಖ ಖಂಡಿತವಾಗಿ ಇರುತ್ತಿತ್ತು. ಆದರೆ ಅಲ್ಲಿಯೂ ಹಾಗೆ ಹೇಳಿಲ್ಲ.

ಗೋವಿಂದ ಭಗವತ್ಪಾದರನ್ನು ರೇವಣಸಿದ್ಧ ಎಂದಿರುವ ಕುರಿತು ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಯಾವುದೇ ಪುರಾವೆ ಕೊಡದೆ ನೇರವಾಗಿ ತಮ್ಮ ವಾದದಂತೆ ಕಟ್ಟುಕತೆ ಎನ್ನಲಷ್ಟೇ ಬಳಸಿದ್ದಾರೆ. ಅಲ್ಲದೆ ಇವರ ವಾದಕ್ಕೆ ಸಂಪೂರ್ಣ ಬೆಂಬಲವಾಗಿ ಕೇವಲ 11ನೇ ಶತಮಾನದ ರೇವಣಸಿದ್ಧನು 9ನೇ ಶತಮಾನದ ಶಂಕರರ ಕಾಲದಲ್ಲಿ ಹೇಗಿರಲು ಸಾಧ್ಯ ಎನ್ನುವುದು ಬಿಟ್ಟರೆ ಒಂದೇ ಹೆಸರಿನ ಇಬ್ಬರು ಯತಿಗಳು ಏಕಿರಬಾರದು ಎಂಬ ಆಯಾಮವನ್ನೇ ಪರಿಗಣಿಸಿಲ್ಲ. ಏಕೆಂದರೆ ಅವರ ಈ ಗ್ರಂಥರಚನೆಯ ಮೂಲೋದ್ದೇಶವೇ ಪೂರ್ವೋದ್ದೇಶದಿಂದ ಕೂಡಿದೆ ಎಂದು ಕೃತಿಯಾದ್ಯಂತ ಸಾಕ್ಷಿ ಹೇಳುತ್ತದೆ.

ಏಕೆಂದರೆ ಅವರ ಕೃತಿಯ ಒಂದು ಆಯಾಮ ಹೀಗಿದೆ, ''... ಶಿವತತ್ವ ರತ್ನಾಕರಕ್ಕೆ ಆಂಗ್ಲಭಾಷೆಯಲ್ಲಿ ಪೀಠಿಕೆ ಬರೆದಿರುವ ರಾವ್ ಬಹದ್ದೂರ್ ಹೊಸಕೋಟೆ ಕೃಷ್ಣಶಾಸ್ತ್ರಿಗಳು ಭಾರಿ ಅಚಾತುರ್ಯ ತೋರಿಬಿಟ್ಟಿದ್ದಾರೆ. ಶಿವತತ್ವ ರತ್ನಾಕರಕ್ಕೆ ಅವರು ಬರೆದಿರುವ ಮುನ್ನುಡಿಯ ಭಾಗ ಹೀಗಿದೆ, "The linga of Chandramoulishwara which is still worshipped as the deity of Sringeri Math is also said to have been presented to Vidyaranya by his direct Guru Revanasiddha whom we know is, a well known Shaiva teacher whom Veerashaivas still claim as one of their earliest acharyas. The Keladi Chiefs who were mostly followers of Veerashaiva religion were devout adherents of the Sringeri Shankaracharya math, perhaps for the same reason, viz. that Shankaracharyaru were the followers of Revansiddha sampradaya. This explains why in the Advaita peetha of Sringeri there is still a greater bias towards Shaivaism and Shiva worship, than Vaishnavism and Krishna worship'. ಕೃಷ್ಣಶಾಸ್ತ್ರಿಗಳಂಥ ಸಂಶೋಧಕ ವಿದ್ವಾಂಸರಿಗೆ ವಿದ್ಯಾರಣ್ಯರ ಗುರು ರೇವಣಸಿದ್ಧರಲ್ಲ, ಅವರ ಸಮಕಾಲೀನರೇ ಅಲ್ಲ, ಶೃಂಗೇರಿ ಸಂಪ್ರದಾಯ, ರೇವಣಸಿದ್ಧ ಸಂಪ್ರದಾಯವಲ್ಲ ಎಂಬುದು ತಿಳಿಯದಿದ್ದುದು ಆಶ್ಚರ್ಯಕರವಾಗಿದೆ''. ಇಲ್ಲಿ 'direct guru' ಅಷ್ಟನ್ನೇ ಹಿಡಿಯದೇ ಸಂಪೂರ್ಣ ಪ್ಯಾರಾವನ್ನು ಓದಿದಾಗ ರೇವಣಸಿದ್ಧ ಪರಂಪರೆಯ ಗುರುವರ್ಗ ಎಂಬ ತಾತ್ಪರ್ಯ ಸಿಗುತ್ತದೆ. ಆದರೆ ಶಾಸ್ತ್ರಿಗಳು ಅದನ್ನೆಲ್ಲಾ ಪರಿಗಣಿಸದೆ ತಮ್ಮ ಮೂಗಿನ ನೇರಕ್ಕೆ 'ಕೃಷ್ಣಶಾಸ್ತ್ರಿಗಳಂಥ ಸಂಶೋಧಕ ವಿದ್ವಾಂಸರಿಗೆ ತಿಳಿಯದಿದ್ದುದು' ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿರುವುದು ಅವರ ಈ ಕೃತಿಯ ಉದ್ದೇಶಪೂರ್ವಕ ಕುದುರೆಯ ಕಣ್ಪಟ್ಟಿಯನ್ನು ಸುಸ್ಪಷ್ಟವಾಗಿ ತೋರುತ್ತದಷ್ಟೇ.

ಅಂದ ಹಾಗೆ ಗುರುವಂಶ ಕಾವ್ಯಕ್ಕೂ ಹಲವಾರು ಶತಮಾನಗಳ ಹಿಂದೆಯೇ ಶೃಂಗೇರಿ ಶಂಕರಮಠದ ಪೋಷಕರಾಗಿದ್ದ ಕೆಳದಿ ರಾಣಿ ವೀರಚೆನ್ನಮ್ಮಾಜಿಯ ದತ್ತುಪುತ್ರ, ಸಂಸ್ಕೃತ ವಿದ್ವಾನ್ ಅರಸು, ಶ್ರೀ ಬಸವಪ್ಪ ನಾಯಕ ರಚಿಸಿರುವ 'ಶಿವತತ್ವ ರತ್ನಾಕರ' ಗ್ರಂಥದಲ್ಲಿ 'ತತಃ ಸ ರೇವಣಾಸಿದ್ಧ। ಸಂಪ್ರದಾಯ ಪ್ರವರ್ತಿನಾಂ। ಶಂಕರಾಚಾರ್ಯ ವರ್ಯಾಣಾಂ। ಪಾರಂಪರ್ಯ ಕ್ರಮಾಗತಂ' ಎಂದಿದೆ. ಅಂದರೆ, 'ಆದಿ ಶ್ರೀ ಶಂಕರಾಚಾರ್ಯರನ್ನು ಮೊದಲು ಮಾಡಿ ಅದರ ಗುರು ಪರಂಪರೆಯಲ್ಲಿ ಅನೂಚಾನವಾಗಿ ಮುಂದುವರಿಯುವ ಸಮಸ್ತ ಪೂಜ್ಯ ಆಚಾರ್ಯ ಮಹೋದಯರು ಶ್ರೀ ಆದಿ ಜಗದ್ಗುರು ರೇವಣಸಿದ್ಧ ಮಹಾ ಶಿವಯೋಗಿ ಶಿವಾಚಾರ್ಯರ ಘನ ಸಂಪ್ರದಾಯಾನುವರ್ತಿಗಳು' ಎಂದಾಗುತ್ತದೆ. ಇದನ್ನು ಅಂದಿನ ಶಂಕರಮಠದ ಯತಿಗಳು ನಿರಾಕರಿಸಿರಲಿಲ್ಲ ಎಂಬುದು ಗಮನಾರ್ಹ. ಎರಡೂ ಪೀಠಗಳಲ್ಲಿದ್ದ ಇಂಥ ನಿಕಟ ಸಂಬಂಧಗಳ ಕಾರಣವೇ ಧಾರ್ಮಿಕ ಪ್ರಾಚೀನ ಗ್ರಂಥಗಳಲ್ಲಿ ಪ್ರಶಂಸನೀಯವಾದ ಅಂಶಗಳು ಉಲ್ಲೇಖವಾಗಿದ್ದವು ಎಂದು ಆಸ್ಥಾನ ವಿದ್ವಾನ್ ಎಂ.ಜಿ.ನಂಜುಂಡಾರಾಧ್ಯರು ಈ ವಿಷಯದ ಬಗ್ಗೆ ಆಕರ ಸಹಿತವಾಗಿ ಸ್ಪಷ್ಟನೆ ನೀಡುತ್ತ, ''ರೇವಣ ಪದಕ್ಕೆ ಮಾಡಿರುವ ವ್ಯಾಖ್ಯಾನವು ಅತಿವಿಚಿತ್ರ! ಇಲ್ಲಿ ಈ ಟಿಪ್ಪಣಿಕಾರರು ರೇವಣ ಪದವು ನರ್ಮದಾನದಿಗೆ ಪರ್ಯಾಯ ವಾಚಕವಾದ ರೇವಾ ಶಬ್ದದಿಂದ ವ್ಯಾಕರಣ ಸೂತ್ರಗಳನ್ನಿತ್ತು ರೇವಣ ಪದವನ್ನು ಸಿದ್ಧ ಮಾಡಿರುವುದು ಮತ್ತು ಗೋವಿಂದ ಭಗವತ್ಪಾದರು ರೇವಾನದೀ ತೀರದಲ್ಲಿ ವಾಸಮಾಡಿದ್ದರಿಂದ ಅವರಿಗೆ ರೇವಣ ಎಂದು ಹೆಸರಾಯಿತೆಂದು ಸಾಧಿಸಿರುವುದು ವ್ಯರ್ಥಪ್ರಯಾಸ! ಏಕೆಂದರೆ ಹಾಗೆ ಗೋವಿಂದ ಭಗವತ್ಪಾದರೇ ಆದಿಶಂಕರರಿಗೆ ಶ್ರೀ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟಿದ್ದ ಪಕ್ಷದಲ್ಲಿ ಕಾಶೀ ಲಕ್ಷ್ಮಣ ಶಾಸ್ತ್ರಿಗಳಿಗೆ ಅದನ್ನು ಛಂದಸ್ಸುಬದ್ಧವಾಗಿ ಕಾವ್ಯದಲ್ಲಿಯೇ ಸೂಚಿಸಲು ಕಷ್ಟವಾಗಿರಲಿಲ್ಲ; ಅಥವಾ ಆ ವಿಷಯವನ್ನು ನಂತರ ತಮ್ಮ ವ್ಯಾಖ್ಯಾನದಲ್ಲಾದರೂ ಹೇಳದೇ ಇರಲು ಕಾರಣವೂ ಇಲ್ಲ'' ಎಂದಿದ್ದಾರೆ.

ಪಂಥಪಂಥ್ಯಗಳ ನಡುವೆ ಇರುವ ಸೌಹಾರ್ದದ ಸಂಕೇತವಾಗಿರುವ ಈ ಐತಿಹಾಸಿಕ ಮಾದರಿಯನ್ನು ಇದೇ ಪಂಥಗಳು ಮುಂದೆ ಪರಸ್ಪರ ದೂಷಣೆಯಲ್ಲಿ ತೊಡಗಿಸಿರುವುದು ಹಿಂದೂ ಪ್ರಭೇದದ ಧಾರ್ಮಿಕತೆಯ ವಿಪರ್ಯಾಸ. ಒಟ್ಟಾರೆ ಇಂಥ ಶ್ರೇಷ್ಠತೆಯ ಚಪಲದ ಹೂರಣವೇ ಭಾರತದ ಸನಾತನ ಮತಧರ್ಮಗಳ ವೈಫಲ್ಯ! ಪರಸ್ಪರ ಪಂಥ ಶ್ರೇಷ್ಠತೆಯ ವ್ಯಸನದಲ್ಲಿ ಸಿಲುಕಿ ಹೇಗೆ ಭಾರತೀಯ ತತ್ವಜ್ಞಾನ, ಮತಧರ್ಮಗಳು ನಶಿಸುತ್ತಿವೆ ಎಂಬುದಕ್ಕಿರುವ ಐತಿಹಾಸಿಕ ಮತ್ತು ವರ್ತಮಾನ ವಾಸ್ತವಿಕ ಸಾಕ್ಷಿ. ಗುರುವನ್ನು ಶಿಷ್ಯ ಮೀರಿಸಬೇಕೆಂಬುದೇ ಗುರುವಿನ ಉದ್ದೇಶ. ಅದನ್ನು ಶಂಕರರು ಸಾಧಿಸಿರಬಹುದು. ಆದರೆ ಅದನ್ನು ಒಪ್ಪಿದರೆ ನಮ್ಮದು ಕೀಳ್ಮೆ, ನಿರಾಕರಿಸಿದರೆ ನಮ್ಮದು ಮೇಲ್ಮೆ ಎಂಬ ಪಂಥ ಶ್ರೇಷ್ಠತೆಯೇ ಸನಾತನದಲ್ಲಿನ ತನಾತನವಾಗಿದೆ.

ಇದೇ ರೀತಿ ಜಾಮದಾರರ ವಿವಿಧೋ-ಪೂರ್ವೋದ್ದೇಶ ಮತ್ತು ಬಹುಉದ್ದೇಶಪೂರ್ವದ ಕುದುರೆಯ ಕಣ್ಪಟ್ಟಿ ಬರಹ ಸಹ. ಒಟ್ಟಾರೆ, ನಿಖರ ವಿಷಯಸೂಚಿಯ ಆಳಕ್ಕಿಳಿಯದೆ, ಭಾವನಾತ್ಮಕವಾಗಿ ವಚನಗಳನ್ನು ಹೇಗೆ ಬೇಕೋ ಹಾಗೆ ವ್ಯಾಖ್ಯಾನಿಸಿ ತೇಲ್ಮೇಲ್ ಸಂಶೋಧನೆಯ ಲಿಂಗಾಯತ ಪ್ರತ್ಯೇಕವಾದ ಅಷ್ಟೇ ತೇಲ್ಮೇಲ್ ಆಗಿ ಕಾಣುತ್ತದೆ.

ಈಗ ಜಾಮದಾರರ ಶೈಲಿಯಲ್ಲೇ, ''ಜಾಮದಾರರೇ, ನೀವು ಪುರಾವೆಯಾಗಿ ಕೊಟ್ಟ ಗುರುವಂಶ ಕಾವ್ಯದಲ್ಲಿಯೇ ರೇವಣಸಿದ್ಧ ಶಂಕರರ ಕಾಲಮಾನದವನು ಎಂದಾಯಿತಲ್ಲ! ಈಗೇನೆನ್ನುವಿರಿ?'' ಎಂಬ ತಿರುಗುಬಾಣವು ಜಮಾದಾರರ ಜಮಾವಣೆಯನ್ನು ನಗಣ್ಯವಾಗಿಸಿ ಋಣಾತ್ಮಕ ಶಿಲ್ಕು ಬಾಕಿ ಎಂದು ತೋರಿಸುತ್ತದೆ. ಅದೇ ರೀತಿ ಸತ್ಯದ ನೆತ್ತಿಯ ಮೇಲೆ ಹೊಡೆದಂತೆ ಲಿಂಗಾಯತ ಪ್ರತ್ಯೇಕ ಧರ್ಮ ಎನ್ನುವ ಸುಳ್ಳಿನ ಲೋಕವನ್ನೇ ಕಟ್ಟಿರುವ ಕಲಬುರ್ಗಿ, ದರ್ಗಾ, ಜಾಮದಾರ ಮತ್ತಿತರ ಚಪ್ಪನ್ನೈವತ್ತಾರು ಶ್ವೇತ/ಖಾವಿಧಾರಿಗಳ ಗೋಬೆಲ್ಸ್ ತಂತ್ರ ನಿಶೂನ್ಯವಾಗಿ ಮಾಯವಾಗುತ್ತದೆ. ಸಂಕುಚಿತ ಮನೋಭಾವವು ಸಮಗ್ರತೆಯನ್ನು ಕಟ್ಟದೆ ವಿಭಜನೆಯನ್ನೇ ಮಾಡುವುದು. ಅಂದಹಾಗೆ 'ವಿಭಜಿಸಿ ಆಳು' ಎಂಬುದು ಬ್ರಿಟಿಷ್ ನೀತಿಯೇ?!

(ಲೇಖಕರು ಶಿಕಾಗೊ ನಿವಾಸಿ ಹಾಗೂ ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue:300

ಸಮಾಚಾರ ಸಣ್ಣದಲ್ಲ

ಸೆಬಿ ಮಾಜಿ ಮುಖ್ಯಸ್ಥೆ ಎಫ್‌ಐಆರ್‌ಗೆ ಹೈ ತಡೆ

ಮುಂಬೈ: ಷೇರು ಮಾರುಕಟ್ಟೆ ವಂಚನೆ ಪ್ರಕರಣ ಸಂಬಂಧ 'ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ'(ಸೆಬಿ) ಮಾಜಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಇತರೆ ಐವರು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ವಿಶೇಷ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ಬಾಂಬೆ ಹೈಕೋರ್ಟ್ 4 ವಾರಗಳ ತಡೆ ನೀಡಿದೆ. ಅರ್ಜಿ ವಿಚಾರಣೆ ಮಂಗಳವಾರ ನಡೆಸಿದ ನ್ಯಾಯಾಧೀಶ ಶಿವಕುಮಾರ್, ಪ್ರಕರಣದ ವಿವರಗಳನ್ನು ವಿಶೇಷ ನ್ಯಾಯಾಲಯ ನೋಡಿಲ್ಲ. ಆರೋಪಿಗಳ ವಿರುದ್ಧ ನಿರ್ದಿಷ್ಟ ಆರೋಪ ಹೊರಿಸಿಲ್ಲ. ಬಹಳ ಯಾಂತ್ರಿಕವಾಗಿ ಆದೇಶ ಹೊರಡಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ವಿಶೇಷ ನ್ಯಾಯಾಲಯದ ಎಫ್‌ಐಆರ್ ದಾಖಲು ಆದೇಶವನ್ನು ತಡೆಹಿಡಿದಿದ್ದಾರೆ.

ಜಾರ್ಖಂಡ್ ರಾಜ್ಯದಲ್ಲಿ 7930 ಏಕ ಶಿಕ್ಷಕ ಶಾಲೆ

ರಾಂಚಿ: ಜಾರ್ಖಂಡ್ ರಾಜ್ಯದಲ್ಲಿ 7,930 ಸರಕಾರಿ ಶಾಲೆಗಳು ಏಕಶಿಕ್ಷಕ ಶಾಲೆಗಳಾಗಿವೆ. ಈ ಏಕ ಶಿಕ್ಷಕ ಶಾಲೆಗಳಲ್ಲಿ 3.81 ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದಾರೆ ಎಂದು ಶಿಕ್ಷಣ ಸಚಿವ ರಾಮದಾಸ್ ಸೊರೆನ್ ಅವರು ಮಂಗಳವಾರ ವಿಧಾನಸಭೆಗೆ ತಿಳಿಸಿದ್ದಾರೆ. 103 ಶಾಲೆಗಳಲ್ಲಿಯಂತೂ ಒಬ್ಬ ವಿದ್ಯಾರ್ಥಿಯೂ ಇಲ್ಲ. ಆದರೆ, ಅದರಲ್ಲಿ 17 ಶಾಲೆಗಳಲ್ಲಿ ಶಿಕ್ಷಕರು ಇದ್ದಾರೆ. ವಿದ್ಯಾರ್ಥಿಗಳನ್ನು ಮರಳಿ ಶಾಲೆಗೆ ಕರೆತರಲು ಆ ಭಾಗದಲ್ಲಿ 'ಶಾಲಾ ಚಲೋ ಅಭಿಯಾನ' ನಡೆಸಲಾಗುತ್ತಿದೆ. 26,000 ಸಹಾಯಕ ಶಿಕ್ಷಕರ ನೇಮಕ ಪ್ರಕ್ರಿಯೆಯೂ ನಡೆದಿದೆ ಎಂದು ಸಚಿವರು ಸದನಕ್ಕೆ ತಿಳಿಸಿದರು.

ಶ್ರೀ ರಾಮ ಮಂದಿರ ದರ್ಶನ ವೇಳೆ ವಿಸ್ತರಣೆ

ಅಯೋಧ್ಯೆ: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಭಕ್ತರಿಗೆ ದೇವರ ದರ್ಶನ ಸಮಯವನ್ನು ವಿಸ್ತರಿಸಲಾಗಿದೆ. ಒಂದು ಗಂಟೆ ಮುಂಚಿತವಾಗಿಯೇ ದೇವಾಲಯದ ಬಾಗಿಲು ತೆರೆಯಲಾಗುತ್ತದೆ. ಈವರೆಗೆ ಬೆಳಗ್ಗೆ 7 ಗಂಟೆಗೆ ಬಾಗಿಲು ತೆರೆಯಲಾಗುತ್ತಿತ್ತು. ಇನ್ನು ಮುಂದೆ ದೇವಸ್ಥಾನ ಬೆಳಗ್ಗೆ 6 ಗಂಟೆಗೇ ಬಾಗಿಲು ತೆರೆಯುತ್ತದೆ. ಶ್ರೀರಾಮ ಮಂದಿರ ದರ್ಶನಕ್ಕೆ ಹೊಸ ವೇಳಾಪಟ್ಟಿ ಸಿದ್ಧಪಡಿಸಲಾಗಿದೆ. ಶೃಂಗಾರ ಆರತಿ ನಂತರ ಭಕ್ತರು ಬೆಳಗ್ಗೆ 6.30ರಿಂದ 11.50ರವರೆಗೆ ದೇವಾಲಯ ಪ್ರವೇಶಿಸಬಹುದು. ನಂತರ ರಾಜಭೋಗ ಆರತಿಗಾಗಿ ಮಧ್ಯಾಹ್ನ 12 ಗಂಟೆಗೆ ದೇವಾಲಯ ಮುಚ್ಚಲಾಗುತ್ತದೆ. ದರ್ಶನ ಸಮಯ ಮಧ್ಯಾಹ್ನ 1ರಿಂದ ಸಂಜೆ 6.50ರವರೆಗೆ ಇರುತ್ತದೆ. ಬಳಿಕ ಸಂಜೆ 7 ಗಂಟೆಗೆ ಆರತಿ. ನಂತರ ರಾತ್ರಿ 9.45ರವರೆಗೂ ಭಕ್ತರಿಗೆ ದರ್ಶನಕ್ಕೆ ಅವಕಾಶ ವಿರಲಿದೆ. ರಾತ್ರಿ 10 ಗಂಟೆಗೆ ಶಯನ ಆರತಿ(ಕೊನೆ ಆರತಿ). ನಂತರ, ಬೆಳಗ್ಗೆವರೆಗೂ ದೇವಾಲಯ ಬಾಗಿಲು ಬಂದ್ ಆಗುತ್ತದೆ ಎಂದು ರಾಮ ಮಂದಿರ ಟ್ರಸ್ಟ್ ಮಾಧ್ಯಮ ವಿಭಾಗ ತಿಳಿಸಿದೆ.

ಮಹತ್ವದ ಹುದ್ದೆ ರೇಸ್‌ನಲ್ಲಿ ದಕ್ಷಿಣ ಭಾರತೀಯರು | ಕಿಶನ್ ರೆಡ್ಡಿ, ಪ್ರಹ್ಲಾದ್ ಜೋಷಿ | ಪುರಂದೇಶ್ವರಿ, ತ.ನಾಡು ವನತಿ ಶ್ರೀನಿವಾಸನ್

ಹೋಳಿ ಬಳಿಕ ಕಮಲ ಪಕ್ಷಕ್ಕೆ ಹೊಸ ಅಧ್ಯಕ್ಷರು

ದೆಹಲಿ: ಏಕ ವ್ಯಕ್ತಿ ಏಕ ಹುದ್ದೆ ಪಕ್ಷದ ನಿಯಮವೂ ಆಗಿರುವ ಕಾರಣ ಜಗತ್ ಪ್ರಕಾಶ್(ಜೆ.ಪಿ) ನಡ್ಡಾ ಅವರು ಕೇಂದ್ರ ಸಚಿವರಾದ ಬಳಿಕ ಬಿಜೆಪಿ ಅಧ್ಯಕ್ಷ ಹುದ್ದೆ ಬಿಡಲಿದ್ದಾರೆ. ಹೊಸಬರ ನೇಮಕವಾಗಲಿದೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ, ಹಲವು ರಾಜ್ಯಗಳಲ್ಲಿನ ವಿಧಾನಸಭೆ ಚುನಾವಣೆಗಳು ಎದುರಾದ ಹಿನ್ನೆಲೆ ಹಾಗೂ ಜೆ.ಪಿ.ನಡ್ಡಾ ಅವರ ನಿಗದಿತ ಅಧಿಕಾರವಧಿ ಪೂರ್ಣಗೊಳ್ಳದ ಕಾರಣ ಹೊಸ ಅಧ್ಯಕ್ಷರ ಆಯ್ಕೆ ಮುಂದೆ ಹೋಯಿತು. ಈಗ ಮತ್ತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ವಿಚಾರ ಮುನ್ನೆಲೆಗೆ ಬಂದಿದೆ. ಹೋಳಿ ಹಬ್ಬದ ಬಳಿಕ ಕಮಲ ಪಕ್ಷಕ್ಕೆ ಹೊಸ ಅಧ್ಯಕ್ಷರ ನೇಮಕವಾಗಲಿದೆ ಎನ್ನಲಾಗುತ್ತಿದೆ.

ಈ ಮಧ್ಯೆ, ಮಾ.21-23 ಅವಧಿಯಲ್ಲಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಅತ್ಯುನ್ನತ ಸಮಿತಿಯಾದ 'ಅಖಿಲ ಭಾರತ ಪ್ರತಿನಿಧಿ ಸಭೆ' ನಡೆಯಲಿದೆ. ಅದಕ್ಕೂ ಮುಂಚಿತವಾಗಿ ಬಿಜೆಪಿಗೆ ಹೊಸ ರಾಷ್ಟ್ರೀಯ ಅಧ್ಯಕ್ಷರ ನೇಮಕವಾಗಲಿದೆ ಎಂಬ ಮಾತುಗಳು ಕೇಳಿಬಂದಿವೆ.

ಹೋಳಿ ಹಬ್ಬದ(ಮಾ.14) ನಂತರ ಹಾಗೂ ಮಾ.21ಕ್ಕೆ ಮುನ್ನ ಭಾರತೀಯ ಜನತಾ ಪಕ್ಷಕ್ಕೆ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇದರೊಂದಿಗೇ ಬಿಜೆಪಿಯ ಮುಂದಿನ ಅಧ್ಯಕ್ಷರ ಯಾರು? ಎಂಬ ಪ್ರಶ್ನೆ ಗರಿಗೆದರಿದೆ.

ಬಿಜೆಪಿ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಜಯ ಗಳಿಸಿ ಅಧಿಕಾರಕ್ಕೇರಿದೆ. ಆನಂತರದಲ್ಲಿ ದೇಶದಲ್ಲಿನ ಅರ್ಧದಷ್ಟು ರಾಜ್ಯಗಳಲ್ಲಿ ಪಕ್ಷದ ಸಾಂಸ್ಥಿಕ ಚುನಾವಣೆ ಬಗ್ಗೆ ನಿರ್ಧಾರ ತಗೆದುಕೊಳ್ಳುತ್ತಿದೆ. ಪೂರ್ಣಾವಧಿಗೆ ಹೊಸ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೆ ಈ ಕ್ರಮ ಅವಶ್ಯಕವಾಗಿದೆ. ಆದಕ್ಕಾಗಿ ಆಯ್ದ ರಾಜ್ಯಗಳಿಗೆ ಮಾ.14ರೊಳಗೆ ಸಾಂಸ್ಥಿಕ ಚುನಾವಣೆಗಳನ್ನು ನಡೆಸುವಂತೆ ಬಿಜೆಪಿ ಹೈಕಮಾಂಡ್ ಸ್ಪಷ್ಟ ಸೂಚನೆ ನೀಡಿದೆ.

ಈ ಶೇ.50ರ ಮಾನದಂಡ ಪೂರ್ಣಗೊಳಿಸಲು 18 ರಾಜ್ಯಗಳಲ್ಲಿ ಪಕ್ಷದ ಸಾಂಸ್ಥಿಕ ಚುನಾವಣೆ ನಡೆಸಬೇಕಿದೆ. ಈವರೆಗೆ 12 ರಾಜ್ಯಗಳಲ್ಲಿ ಸಾಂಸ್ಥಿಕ ಚುನಾವಣೆಗಳನ್ನು ನಡೆಸಲಾಗಿದೆ. ಉಳಿದ 6 ರಾಜ್ಯಗಳಲ್ಲಿನ ಸಾಂಸ್ಥಿಕ ಚುನಾವಣೆಯನ್ನು ಮುಂದಿನ ಕೆಲವೇ ದಿನಗಳಲ್ಲಿ ಪೂರ್ಣಗೊಳಿಸಲು ಪಕ್ಷದ ಚುನಾವಣಾ ಘಟಕ ತ್ವರಿತಗತಿ ಕಾರ್ಯನಿರ್ವಹಿಸುತ್ತಿದೆ. ಆ ಪ್ರಕಾರವೇ ನಡೆದಲ್ಲಿ ಇಡೀ ಸಾಂಸ್ಥಿಕ ಚುನಾವಣಾ ಪ್ರಕ್ರಿಯೆ ವಾರದೊಳಗೆ ಪೂರ್ಣಗೊಳ್ಳುವ ವಿಶ್ವಾಸವಿದೆ ಎಂದು ಬಿಜೆಪಿಯ ಉನ್ನತ ಮೂಲಗಳು ಮಾಧ್ಯಮಗಳಿಗೆ ತಿಳಿಸಿವೆ. ಅದಕ್ಕಾಗಿ ಯುದ್ಧೋಪಾದಿಯಲ್ಲಿ ಸಾಂಸ್ಥಿಕ ಚುನಾವಣೆ ಕೆಲಸ ನಡೆಯುತ್ತಿದೆ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ಪ್ರಹ್ಲಾದ್ ಜೋಷಿ

ಧರ್ಮೇಂದ್ರ ಪ್ರಧಾನ್

ಕಿಶನ್ ರೆಡ್ಡಿ

ವನತಿ ಶ್ರೀನಿವಾಸನ್

ವಿನೋದ್ ತಾವ್ಡೆ

ಪುರಂದೇಶ್ವರಿ

ಪೂರ್ಣಾವಧಿಗೆ 12ನೇ ಬಿಜೆಪಿ ಅಧ್ಯಕ್ಷ

ಕೇಂದ್ರದಲ್ಲಿ ಸತತ 3ನೇ ಅವಧಿಗೆ ಆಡಳಿತ, ಅತ್ಯಧಿಕ ರಾಜ್ಯಗಳಲ್ಲಿ ಸ್ವಂತ ಬಲ ಹಾಗೂ ಮಿತ್ರಪಕ್ಷಗಳ ಜತೆಗೂಡಿ ಎನ್‌ಡಿಎ ಸರಕಾರ ರಚನೆ ಮಾಡಿ ಭಾರತದಲ್ಲೇ ಅತಿದೊಡ್ಡ ಪಕ್ಷ, ಆರ್ಥಿಕವಾಗಿ-ಕಾರ್ಯಕರ್ತರ ಪಡೆ- ಸ್ವಂತ ಕಟ್ಟಡ ಮೊದಲಾದ ಅಂಶಗಳಿಂದಾಗಿ ಬಲಾಢ್ಯ ರಾಜಕೀಯ ಪಕ್ಷವಾಗಿರುವ 'ಭಾರತೀಯ ಜನತಾ ಪಕ್ಷ'(ಬಿಜೆಪಿ) ರಾಷ್ಟ್ರೀಯ ಅಧ್ಯಕ್ಷರಾಗು ವುದು ಎಂದರೆ ಅದೊಂದು ಬಹು ದೊಡ್ಡ ಗೌರವ, ಅಷ್ಟೇ ಕಠಿಣ ಜವಾಬ್ದಾರಿ. ಸದ್ಯ ಜೆ.ಪಿ.ನಡ್ಡಾ ಅವರ ಅವಧಿ ಪೂರ್ಣಗೊಂಡಿ ದೆ. ಅಲ್ಲದೇ ಅವರು ಕೇಂದ್ರ ಸಚಿವರೂ ಆಗಿರುವುದರಿಂದ ಆಡಳಿತದ ಕಡೆ ಹೆಚ್ಚು ಗಮನ ಹರಿಸಬೇಕಿದೆ. ಹಾಗಾಗಿ ಪಕ್ಷಕ್ಕೀಗ ಪೂರ್ಣಾವಧಿ ಅಧ್ಯಕ್ಷರ ಅಗತ್ಯವಿದೆ. ಆದರೆ, ಬಿಜೆಪಿಗೆ 12ನೇ ಅಧ್ಯಕ್ಷರು ಯಾರಾಗಲಿದ್ದಾರೆ? ಎಂಬುದೇ ದೊಡ್ಡ ಪ್ರಶ್ನೆಯಾಗಿದೆ.

ತ.ನಾಡಿನತ್ತ ವಾರೆನೋಟ

ತಮಿಳುನಾಡಿನಲ್ಲಿ ರಾಜಕೀಯವಾಗಿ ನೆಲೆಯೂರಲು ಬಿಜೆಪಿ, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಹೆಚ್ಚಿನ ಕ್ಷೇತ್ರಗಳಲ್ಲಿ ಗೆಲ್ಲಬೇಕಾದ ಒತ್ತಡದಲ್ಲಿದೆ. ಅದಕ್ಕಾಗಿ ಬಲವಾದ ಮೈತ್ರಿಕೂಟ ರಚಿಸಲು ಸಿದ್ಧತೆ ನಡೆಸುತ್ತಿದೆ. ಈ ಮಧ್ಯೆ ಎನ್‌ಡಿಎ ಮೈತ್ರಿಕೂಟದಿಂದ ಎಐಎಡಿಎಂಕೆ ಹೊರ ಹೋಗಿದೆ. ಎಐಎಡಿಎಂಕೆ ಮತ್ತೆ ಮೈತ್ರಿಕೂಟಕ್ಕೆ ಸೇರಿಸಿಕೊಳ್ಳಲು ಬಿಜೆಪಿ ನಾಯಕತ್ವ ಯತ್ನಿಸುತ್ತಿದೆ.

ಸಾಂಸ್ಥಿಕ ಚುನಾವಣೆ ಶೇ.50 ಪೂರ್ಣ

ಅರುಣಾಚಲ ಪ್ರದೇಶ, ಛತ್ತೀಸ್‌ಗಢ, ಸಿಕ್ಕಿಂ, ನಾಗಾಲ್ಯಾಂಡ್, ರಾಜಸ್ಥಾನ, ಅಸ್ಸಾಂ, ಚಂಡೀಗಢ, ಗೋವಾ, ಮೇಘಾಲಯ ಹಾಗೂ ಜಮ್ಮು-ಕಾಶ್ಮೀರ, ಲಡಾಖ್, ಲಕ್ಷದ್ವೀಪದಲ್ಲಿ ಬಿಜೆಪಿಯ ಸಾಂಸ್ಥಿಕ ಚುನಾವಣೆಗಳು ಪೂರ್ಣಗೊಂಡಿವೆ. ಆದರೆ ಪಶ್ಚಿಮ ಬಂಗಾಳದಲ್ಲಿನ ಸಾಂಸ್ಥಿಕ ಚುನಾವಣೆ ಆರ್‌ಜಿ ಕರ್ ಆಸ್ಪತ್ರೆ ಹತ್ಯಾಚಾರ ಘಟನೆ ಖಂಡಿಸಿ ಪಕ್ಷದ ರಾಜ್ಯ ಘಟಕ ಸರಣಿ ಪ್ರತಿಭಟನೆ ನಡೆಸುತ್ತಿದ್ದುದರಿಂದಾಗಿ ವಿಳಂಬವಾಗಿದೆ. ಬಿಜೆಪಿ ಪಶ್ಚಿಮ ಬಂಗಾಳ ಘಟಕಕ್ಕೆ ಹೊಸ ಅಧ್ಯಕ್ಷರ ಆಯ್ಕೆ ಬಗ್ಗೆ ಇನ್ನೂ ಒಮ್ಮತವೂ ಮೂಡಿಲ್ಲ. ಪ್ರಸ್ತುತ ಅಧ್ಯಕ್ಷರಾಗಿರುವ ಸುಕಾಂತ ಮಜುಂದಾರ್ ಕೇಂದ್ರ ಸಚಿವರೂ ಆಗಿದ್ದಾರೆ. ಕರ್ನಾಟಕದಲ್ಲಿ ಪಕ್ಷದಲ್ಲಿ ಚುನಾವಣೆ ನಡೆಯುವ ಕುರಿತು ಯಾವುದೇ ಸ್ಪಷ್ಟತೆ ಇಲ್ಲವಾಗಿದೆ. ದೆಹಲಿ, ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್, ಜಮ್ಮು-ಕಾಶ್ಮೀರದಲ್ಲಿನ ವಿಧಾನಸಭೆ ಚುನಾವಣೆ ಕಾರಣದಿಂದಾಗಿ ಪಕ್ಷದ ಸಾಂಸ್ಥಿಕ ಚುನಾವಣೆ ವಿಳಂಬವಾಯಿತು.

ಬಿಜೆಪಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ 2024ರ ಡಿಸೆಂಬರ್‌ನಲ್ಲೇ ಪ್ರಾರಂಭವಾಗಬೇಕಿತ್ತು. ಆದರೆ, ಪ್ರಯಾಗ್‌ರಾಜ್‌ನಲ್ಲಿನ ಜ.13ರಿಂದ ಫೆ.26ರವರೆಗೆ ನಡೆದ ಮಹಾ ಕುಂಭಮೇಳದತ್ತ ಬಿಜೆಪಿ ನಾಯಕರು ಗಮನ ಕೇಂದ್ರೀಕರಿಸಿದ್ದರಿಂದಲೂ ಕೆಲ ರಾಜ್ಯಗಳಲ್ಲಿನ ಪಕ್ಷದ ಸಾಂಸ್ಥಿಕ ಚುನಾವಣೆ ಮುಂದೂಡಿಕೆಯಾಯಿತು.

ಈ ಬಾರಿ ದಕ್ಷಿಣ ಭಾರತದತ್ತಲೇ ಹೆಚ್ಚು ಗಮನ

ಮುಂಬರುವ ವರ್ಷಗಳಲ್ಲಿ ಬಿಜೆಪಿ ದಕ್ಷಿಣ ಭಾರತದತ್ತ ಹೆಚ್ಚು ಗಮನ ಹರಿಸಲಿದೆ. ಬಿಜೆಪಿಗೆ ಹೊಸ ಅಧ್ಯಕ್ಷರು ವಿಂಧ್ಯಪ್ರದೇಶ ಅಥವಾ ದಕ್ಷಿಣ ಭಾರತದವರಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹುದ್ದೆಗೆ ದಕ್ಷಿಣ ಭಾರತದಿಂದ ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಜಿ.ಕಿಶನ್ ರೆಡ್ಡಿ, ಕೇಂದ್ರ ಸಚಿವರಾದ ಕರ್ನಾಟಕದ ಪ್ರಹ್ಲಾದ್ ಜೋಶಿ, ಆಂಧ್ರಪ್ರದೇಶ ಬಿಜೆಪಿ ಘಟಕ ಅಧ್ಯಕ್ಷೆಯಾದ ದಗ್ಗುಬಾಟಿ ಪುರಂದೇಶ್ವರಿ, ತಮಿಳುನಾಡಿನ ವನತಿ ಶ್ರೀನಿವಾಸನ್ ಹೆಸರುಗಳು ಕೇಳಿಬರುತ್ತಿವೆ. ಆಂಧ್ರದ ಮಾಜಿ ಸಿಎಂ ಎನ್.ಟಿ.ರಾಮರಾವ್ ಅವರ ಪುತ್ರಿ, ಪುರಂದೇಶ್ವತಿ ಅವರಿಗೆ ತೆಲುಗು ದೇಶಂ ಪಕ್ಷದ(ಟಿಡಿಪಿ) ಮುಖ್ಯಸ್ಥ ಎನ್ ಚಂದ್ರಬಾಬು ನಾಯ್ಡು ಅವರ ಕಾರಣದಿಂದ ಹುದ್ದೆ ತಪ್ಪಬಹುದು ಎಂಬ ಮಾತುಗಳೂ ಇವೆ.

ಬಿಜೆಪಿ ಮಹಿಳಾ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷೆ, ಕೊಯಮತ್ತೂರು ಶಾಸಕಿ ವನತಿ ಶ್ರೀನಿವಾಸನ್ ಅವರ ಹೆಸರೂ ಹೆಚ್ಚು ಚರ್ಚೆಯಲ್ಲಿದೆ. ತಮಿಳುನಾಡಿನಲ್ಲಿ ಪಕ್ಷವನ್ನು ನೆಲೆಯೂರಿಸಲು ಹಾಗೂ ಮುಂದಿನ ವರ್ಷವೇ ವಿಧಾನಸಭೆ ಇರುವುದರಿಂದ ತಮಿಳುನಾಡಿನವರನ್ನು ಪಕ್ಷದ ಪ್ರಮುಖ ಹುದ್ದೆಗೇರಿಸಿದರೆ ಅನುಕೂಲವಾಗಲಿದೆ ಎಂಬ ಮಾತುಗಳಿವೆ. ಉಳಿದಂತೆ ಉತ್ತರ ಭಾರತದ ಕಡೆಯಿಂದ ಹಿರಿಯ ನಾಯಕರಾದ ಧರ್ಮೇಂದ್ರ ಪ್ರಧಾನ್, ವಿನೋದ್ ತಾವ್ಡೆ ಮತ್ತು ಭೂಪೇಂದ್ರ ಯಾದವ್ ಹೆಸರು ಪ್ರಮುಖವಾಗಿ ಕೇಳಿ ಬರುತ್ತಿವೆ. ಸಂಘಟನಾ ಸಾಮರ್ಥ್ಯ ಮತ್ತು ತಂಡವಾಗಿ ಕೆಲಸ ಮಾಡುವ ಮನಸ್ಥಿತಿಯಿಂದಾಗಿ ಈ ಮೂವರ ಹೆಸರು ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿದೆ ಎನ್ನಲಾಗಿದೆ. ಅಷ್ಟೇ ಅಲ್ಲದೇ, ಮಾಜಿ ಸಚಿವೆ ಸ್ಮೃತಿ ಇರಾನಿ, ಅನುರಾಗ್ ಠಾಕೂರ್, ಶಿವರಾಜ್ ಸಿಂಗ್ ಚೌಹಾಣ್ ಹೆಸರು ಸಹ ಕೇಳಿ ಬರುತ್ತಿವೆ. ಈ ಮೊದಲು ದೇವೇಂದ್ರ ಫಡ್ನವೀಸ್ ಹೆಸರು ಕೇಳಿಬರುತ್ತಿತ್ತು. ಅವರು ಸದ್ಯ ಮಹಾರಾಷ್ಟ್ರ ಮುಖ್ಯಮಂತ್ರಿ ಹುದ್ದೆಗೇರಿರುವುದರಿಂದ ಆ ಸಾಧ್ಯತೆ ಇಲ್ಲ ಎನ್ನಲಾಗಿದೆ.

ರಿಲಯನ್ಸ್‌ಗೆ ಕೇಂದ್ರದಿಂದ ₹24,500 ಕೋಟಿ ನೋಟಿಸ್

ಮುಂಬೈ: ಭಾರತದ ಸಿರಿವಂತ ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಕಂಪನಿಗೆ ಕೇಂದ್ರ ಸರಕಾರ ದೊಡ್ಡ ಶಾಕ್ ನೀಡಿದೆ. ನೈಸರ್ಗಿಕ ಅನಿಲ ನಿಕ್ಷೇಪ ಬಳಕೆಗೆ ಸಂಬಂಧಿಸಿದಂತೆ ಸರಕಾರದ ಪಾಲು 24,500 ಕೋಟಿ ರು.ಗಳನ್ನು ಪಾವತಿಸುವಂತೆ ಮಂಗಳವಾರ ಡಿಮ್ಯಾಂಡ್ ನೋಟಿಸ್ ನೀಡಲಾಗಿದೆ.



ಕೇಂದ್ರ ಸರಕಾರದ ಒಡೆತನದ 'ಆಯಿಲ್ ಅಂಡ್ ನ್ಯಾಚರಲ್ ಗ್ಯಾಸ್'(ಒಎನ್‌ಜಿಸಿ)ಗೆ ಸೇರಿದ ನೈಸರ್ಗಿಕ ಅನಿಲ ನಿಕ್ಷೇಪದ ಭಾಗದಿಂದ ಹರಿದುಹೋಗಿರಬಹುದಾದ ನೈಸರ್ಗಿಕ ಅನಿಲವನ್ನು ರಿಲಯನ್ಸ್ ಸಂಗ್ರಹಿಸಿ ಮಾರಾಟ ಮಾಡಿದೆ. ಅದರಿಂದ ಬಂದ ಲಾಭದಲ್ಲಿ ಸರಕಾರಿ ಸಂಸ್ಥೆಯಾದ 'ಒಎನ್‌ಜಿಸಿ'ಗೂ ಪಾಲಿದೆ. ಅದಕ್ಕಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿ. ಮತ್ತು ಪಾಲುದಾರ ಸಂಸ್ಥೆಗಳು ಸರಕಾರಕ್ಕೆ 281 ಕೋಟಿ ಅಮೆರಿಕನ್ ಡಾಲರ್(24,500 ಕೋಟಿ ರು.) ಪಾವತಿಸತಕ್ಕದ್ದು ಎಂದು ರಿಲ ಯನ್ಸ್‌ಗೆ ಒಎನ್‌ಜಿಸಿ ಸಂಸ್ಥೆಯ ಪರವಾಗಿ ಡಿಮ್ಯಾಂಡ್ ನೋಟಿಸ್ ನೀಡಲಾಗಿದೆ. ಅಕ್ಕಪಕ್ಕದಲ್ಲೇ ಇರುವ ಅನಿಲ ನಿಕ್ಷೇಪಗಳಿಂದ ಸ್ಥಳಾಂತರಗೊಂಡಿರಬಹುದಾದ ಅನಿಲ ವನ್ನು ಸಂಗ್ರಹಿಸಿ ಮಾರಾಟ ಮಾಡಿ ಲಾಭ ಗಳಿಸಿದ್ದಕ್ಕಾಗಿ ಪಕ್ಕದ ನಿಕ್ಷೇಪದ ಕಂಪನಿಗೆ ಯಾವುದೇ ಪರಿಹಾರ ಪಾವತಿಸಬೇಕಿಲ್ಲ. ಈ ವಿಚಾರದಲ್ಲಿ ಎರಡೂ ಕಡೆಯವರೂ ಜವಾಬ್ದಾರರಲ್ಲ ಎಂಬ ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ನ್ಯಾಯಮಂಡಳಿಯ ತೀರ್ಪನ್ನು ದೆಹಲಿ ಹೈಕೋರ್ಟ್ ಫೆ.14ರಂದು ರದ್ದುಗೊಳಿಸಿದೆ. ಆ ಬಳಿಕವಷ್ಟೇ ಕೇಂದ್ರದ ಅನಿಲ ಮತ್ತು ತೈಲೋತ್ಪನ್ನಗಳ ಸಚಿವಾಲಯ ಈ ಕ್ರಮಕ್ಕೆ ಮುಂದಾಗಿದೆ.

ಯುವ ವಿತ್ತ ಸಚಿವ ಚೌಧರಿ ವಿಶಿಷ್ಟ ಸಾಧನೆ

ಛತ್ತೀಸ್‌ಗಢದಲ್ಲಿ 100 ಪುಟಗಳ ಕೈಬರಹ ಮುಂಗಡಪತ್ರ ಮಂಡನೆ

ರಾಯಪುರ: ಬಿಜೆಪಿ ಆಡಳಿತದ ಛತ್ತೀಸ್‌ಗಢ ರಾಜ್ಯದಲ್ಲಿನ ಹಣಕಾಸು ಸಚಿವ ಒ.ಪಿ.ಚೌಧರಿ ಹೊಸ ದಾಖಲೆ ಬರೆದಿದ್ದಾರೆ.

ಚೌಧರಿ ತಮ್ಮದೇ ಕೈಬರಹದಲ್ಲಿ 100 ಪುಟಗಳ ಬಜೆಟ್ ಸಿದ್ಧಪಡಿಸಿ ವಿಧಾನಸಭೆಯಲ್ಲಿ ಮಂಡಿಸಿದ್ದಾರೆ. ಇದು ಛತ್ತೀಸ್‌ಗಢ ಇತಿಹಾಸದಲ್ಲೇ ಮೊದಲ ಪ್ರಯತ್ನವಾಗಿದೆ. ಡಿಜಿಟಲ್ ಯುಗದಲ್ಲೂ ಅವರ ಕೈಬರಹದ ಬಜೆಟ್ ವಿಶಿಷ್ಟ ಸಾಧನೆಯೆನಿಸಿ ಕೊಂಡಿದ್ದು, ಭಾರೀ ಪ್ರಶಂಸೆ ವ್ಯಕ್ತವಾಗುತ್ತಿದೆ. ಕೈಬರಹ ಸೃಜನಶೀಲತೆ ಮತ್ತು ಸ್ಮರಣ ಶಕ್ತಿ ಹೆಚ್ಚಿಸುತ್ತದೆ ಎಂದು ಸಂಶೋಧನೆಗಳು ಹೇಳುತ್ತವೆ. ಹಾಗಾಗಿಯೇ, ಕಂಪ್ಯೂಟರ್ ಕೀಬೋರ್ಡ್‌ನಲ್ಲಿ ಸರಾಗ ಟೈಪ್ ಮಾಡಿ ಅತ್ಯಾಧುನಿಕ ಮುದ್ರಣ ಯಂತ್ರದಲ್ಲಿ ಮುದ್ರಿಸುವುದಕ್ಕಿಂತಲೂ ಚೌಧರಿ ಅವರಿಗೆ ಅವರದೇ ಕೈಯಿಂದ ಬರೆದ ಬಜೆಟ್ ಮಂಡಿಸಬೇಕೆಂಬ ಹಂಬಲ. ಮಾಜಿ ಐಎಎಸ್ ಅಧಿಕಾರಿಯೂ ಆಗಿರುವ ಚೌಧರಿ ಅವರ 3 ರಾತ್ರಿ ಪಟ್ಟುಹಿಡಿದು ಕೂತು 100 ಪುಟಗಳ ಮುಂಗಡಪತ್ರ ಬರೆದೇ ಸಿದ್ಧಪಡಿಸಿ ಸೈ ಎನಿಸಿಕೊಂಡಿದ್ದಾರೆ. ಸಂಪ್ರದಾಯಕ್ಕೆ ಮರಳುವ, ಸ್ವಂತಿಕೆ ಉತ್ತೇಜಿಸು ವುದೇ ನನ್ನ ಪ್ರಯತ್ನ. ಡಿಜಿಟಲ್ ಯುಗದಲ್ಲೂ ಕೈಬರಹದ ಬಜೆಟ್ ಸಾಧ್ಯವಾಗಿಸುವ ಪ್ರಕ್ರಿಯೆ ವಿಶಿಷ್ಟ ಗುರುತು ಮತ್ತು ಐತಿಹಾಸಿಕ ಮಹತ್ವದ್ದಾಗಿದೆ. ಇದು ದೃಢತೆ-ಪಾರದರ್ಶಕತೆ ಉತ್ತೇಜಿಸುತ್ತದೆ ಎಂದಿದ್ದಾರೆ.



ಐಎಎಸ್ ಬಿಟ್ಟು ರಾಜಕೀಯಕ್ಕೆ!

2005ರ ಬ್ಯಾಚ್ ಐಎಎಸ್ ಅಧಿಕಾರಿಯಾದ ಚೌಧರಿ 2019ರಲ್ಲಿ ರಾಯಪುರ ಜಿಲ್ಲಾ ಕಲೆಕ್ಟರ್ ಹುದ್ದೆಗೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರು. ಯುಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಮಾಡಿಕೊಳ್ಳುತ್ತಿದ್ದಾಗ ಹಿಂದಿ ವಿಷಯದ ಮೇಲಿನ ಒಲವು ಹೆಚ್ಚಿಸಿತು. ಭಾಷೆ ಮೇಲಿನ ಬಲವಾದ ಹಿಡಿತ ಅವರಿಗೆ ಬಜೆಟ್ ಬರೆದು ಮಂಡಿಸಲು ನೆರವಾಗಿದೆ.

ಗೇಮಿಂಗ್ ವಿರೋಧಿಸಿದ್ದಕ್ಕೆ ತಲೆ ಜಜ್ಜಿದ ಪಾಪಿ

ಅಪ್ಪ-ಅಮ್ಮ-ಸೋದರಿ ಕೊಂದ ಆನ್‌ಲೈನ್ ಗೇಮಿಂಗ್ ವ್ಯಸನಿ!

ಒಡಿಶಾ: ಆನ್‌ಲೈನ್ ಗೇಮಿಂಗ್ ವ್ಯಸನಿಯಾಗಿದ್ದ ಒಡಿಶಾದ ಜಗತ್‌ಸಿಂಗಪುರ ಜಿಲ್ಲೆಯ 21 ವರ್ಷದ ಯುವಕ, ತನ್ನ ಚಟಕ್ಕೆ ವಿರೋಧ ವ್ಯಕ್ತಪಡಿಸಿದ ಕಾರಣಕ್ಕೆ ಅಪ್ಪ-ಅಮ್ಮ ಮತ್ತು ಸೋದರಿಯನ್ನು ಬರ್ಬರವಾಗಿ ಕೊಲೆ ಮಾಡಿದ್ದಾನೆ.

ಜಗತ್‌ಸಿಂಗಪುರ ಪೊಲೀಸ್ ಠಾಣೆ ವ್ಯಾಪ್ತಿಯ ಜಯಬಾದ ಸೇಥಿ ಸಾಹಿಯ ನಿವಾಸಿಯಾದ ಆರೋಪಿ ಸೂರ್ಯಕಾಂತ್ ಸೇಥಿ ಕಾಲೇಜಲ್ಲಿ ಪದವಿ ವಿದ್ಯಾರ್ಥಿಯಾಗಿದ್ದಾನೆ. ತಡರಾತ್ರಿವರೆಗೂ ಮೊಬೈಲ್ ಫೋನ್‌ನಲ್ಲಿ ಆನ್‌ಲೈನ್ ಗೇಮ್ಸ್ ಆಡುತ್ತಾ, ವ್ಯಸನಿಯಾಗಿದ್ದ. ನಿದ್ರೆಗೆಟ್ಟು, ಓದುಬಿಟ್ಟು ಮಗ ಆನ್‌ಲೈನ್ ಗೇಮ್ ಆಡುತ್ತಾ ಬದುಕು ಹಾಳು ಮಾಡಿಕೊಳ್ಳುತ್ತಿದ್ದಾನೆ ಎಂಬ ಕಾರಣಕ್ಕೆ ಪೋಷಕರು ಅವನ ಚಟಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದರು. ಸೋಮವಾರ ರಾತ್ರಿಯೂ ಗೇಮಿಂಗ್‌ನಲ್ಲೇ ಮುಳುಗಿದ್ದ ಮಗನ ನಡೆಗೆ ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಅಷ್ಟಕ್ಕೇ ಸಿಟ್ಟಿಗೆದ್ದ ಸೂರ್ಯಕಾಂತ್, ಅಪ್ಪ-ಅಮ್ಮನನ್ನು ಚೆನ್ನಾಗಿ ಥಳಿಸಿದ. ತಡೆಯಲು ಬಂದ ಸೋದರಿಗೂ ಥಳಿಸಿ ಬಳಿಕ ದಪ್ಪ ಕಲ್ಲು ತಂದು ಮೂವರ ತಲೆಯನ್ನೂ ಜಜ್ಜಿ ಕೊಂದಿದ್ದಾನೆ. ಮಂಗಳವಾರ ನಸುಕಿನ 3 ಗಂಟೆಯಲ್ಲಿ ಅಪರಾಧ ಕೃತ್ಯ ನಡೆದಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಭವಾನಿ ಶಂಕರ್ ಉದ್ಗಟಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ತಂದೆ ಪ್ರಶಾಂತ್ ಸೇಥಿ ಅಲಿಯಾಸ್ ಕಾಲಿಯಾ (65), ತಾಯಿ ಕನಕಲತಾ (62) ಮತ್ತು ಸೋದರಿ ರೋಸಲಿನ್(25) ಅವರೇ ಆನ್‌ಲೈನ್ ಗೇಮಿಂಗ್ ವ್ಯಸನಿ ಸೂರ್ಯಕಾಂತ್‌ನಿಂದ ಹತರಾದವರು. ತಾನೇ ಅಪ್ಪ-ಅಮ್ಮ, ಸೋದರಿಯನ್ನು ಕೊಂದಿದ್ದಾಗಿ ಸೂರ್ಯಕಾಂತ್ ತಮ್ಮ ಬಳಿ ಹೇಳಿದ ಎಂದು ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.



ಘಟನೆ ನಂತರ ಸೂರ್ಯಕಾಂತ್ ತಲೆಮರೆಸಿಕೊಂಡಿದ್ದ. ನಂತರ ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಆರೋಪಿಯನ್ನು ಮಂಗಳವಾರ ಬೆಳಗ್ಗೆ ಬಂಧಿಸಿದ್ದಾರೆ. ಯುವಕ ವಿಚಿತ್ರವಾಗಿ ವರ್ತಿಸುತ್ತಿದ್ದಾನೆ. ಆತನಿಗೆ ಮಾನಸಿಕ ಸಮಸ್ಯೆ ಇದೆ ಎನಿಸುತ್ತದೆ ಎಂದು ಎಸ್‌ಪಿ ಉದ್ಗಟಾ ಹೇಳಿದ್ದಾರೆ.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/50/2024-25 ದಿನಾಂಕ: 03-03-2025
ಸಾರ್ವಜನಿಕ ಪ್ರಕಟಣೆ
ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.
ಮಾಲೀಕರಾದ **ಶ್ರೀ ಆರಿಫ್ ಖಾನ್ ಮತ್ತು ಶ್ರೀ ಆಸಿಫ್ ಖಾನ್ ಬಿನ್ ಹಫೀಜ್ ಖಾನ್ @ ಚಾಂದ್ ಪಾಷ** ಇವರುಗಳು ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ಬಂಡಹಳ್ಳಿ ಗ್ರಾಮದ ಸ.ನಂ. 11/3 ರಲ್ಲಿನ 33 1/4 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ಕೈಗಾರಿಕಾ (ವೇರ್‌ಹೌಸ್) ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ಕೈಗಾರಿಕೆ ಬೆಳವಣಿಗೆಗಳು ಬಂದಿದ್ದು / ಬರುತ್ತಲಿದ್ದು, "ಉದ್ದೇಶಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ಕೈಗಾರಿಕಾ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.
ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/5423/ಅಡ್ವಟೋರ್/2024-25

ಕೊಲೆ ಪ್ರಕರಣದಲ್ಲಿ ಆಪ್ತ ಸಹಾಯಕ ಸೆರೆ

ಸಚಿವ ಧನಂಜಯ್ ಮುಂಡೆ ರಾಜೀನಾಮೆ

ಮುಂಬೈ: ಮಹಾರಾಷ್ಟ್ರದಲ್ಲಿನ ಮಹಾಯುತಿ ಮೈತ್ರಿಕೂಟ ಸರಕಾರದಲ್ಲಿನ ಆಹಾರ-ನಾಗರಿಕ ಸರಬರಾಜು ಸಚಿವ, ಎನ್‌ಸಿಪಿ ನಾಯಕ ಧನಂಜಯ್ ಮುಂಡೆ ಮಂಗಳವಾರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಸಿಎಂ ಫಡ್ನವೀಸ್ ಅಧಿಕೃತ ನಿವಾಸಕ್ಕೆ ತೆರಳಿದ ಧನಂಜಯ್ ಆಪ್ತ ಸಹಾಯಕ ಪ್ರಶಾಂತ್ ಜೋಶಿ, ರಾಜೀನಾಮೆ ಪತ್ರ ಹಸ್ತಾಂತರಿಸಿದರು. ಈ ಬಗ್ಗೆ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ಬೀಡ್ ಜಿಲ್ಲೆಯ ಪಾರ್ಲಿ ಕ್ಷೇತ್ರದ ಎನ್‌ಸಿಪಿ ಶಾಸಕ ಮುಂಡೆ ಅವರ ಸಹಚರ ವಾಲ್ಮೀಕ್ ಕರಾಡ್ ಮತ್ತು 6 ಸಹಾಯಕರನ್ನು ರಾಜ್ಯ ಪೊಲೀಸರು ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆಯಡಿ ಜನವರಿ ಯಲ್ಲಿ ಬಂಧಿಸಿದ್ದರು. ಒಬ್ಬ ಆರೋಪಿ ಇನ್ನೂ ತಲೆಮರೆಸಿಕೊಂಡಿದ್ದಾನೆ. ದೇಶಮುಖ್ ಹತ್ಯೆಗೆ ಸಂಬಂಧಿಸಿದ 2 ಪ್ರಕರಣಗಳಲ್ಲಿ ಫೆ.27ರಂದು ಸಿಐಡಿ ಬೀಡ್ ಜಿಲ್ಲೆಯ ನ್ಯಾಯಾಲಯದಲ್ಲಿ 1,200 ಪುಟಗಳ ಆರೋಪಪಟ್ಟಿ ಸಲ್ಲಿಸಿದೆ. ಇದೆಲ್ಲಾ ಬೆಳವಣಿಗೆಗಳ ಬಳಿಕವೇ, ಸಿಎಂ ಫಡ್ನವೀಸ್ ಅವರು ಧನಂಜಯ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ ಎಂದು ಅಜಿತ್ ಪವಾರ್ ಮತ್ತು ಪ್ರಫುಲ್ ಪಟೇಲ್ ಅವರಿಗೆ ಪತ್ರ ಬರೆದಿದ್ದರು ಎನ್ನಲಾಗಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಎನ್.ಸಿ.ಡಿ ಕೋಶ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ದೂ.ಸಂಖ್ಯೆ:- 08194-200388, E-mail:ncdcta2019@gmail.com
ಸಂಖ್ಯೆ:ಜಿ.ಸ.ಫ.ಚಿ/408/2024-25 ದಿನಾಂಕ: 01.03.2025
ಟೆಂಡರ್ ಪ್ರಕಟಣೆ
ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿನ ಎಲ್ಲಾ ಉಪಕೇಂದ್ರಗಳು ಹಾಗೂ ಪ್ರಾ.ಆ.ಕೇಂದ್ರಗಳಿಗೆ ಅಗತ್ಯವಿರುವ ರೋಗ ಪತ್ತೆ ಕಿಟ್‌ಗಳನ್ನು, ರಾಸಾಯನಿಕಗಳನ್ನು ಮತ್ತು ಪರಿಕರಗಳಿಗೆ ಈ-ಟೆಂಡರ್ ಕರೆದಿದ್ದು, ಬಿಡ್ ಸಲ್ಲಿಸಲು ದಿನಾಂಕ:-15-03-2025 ಕೊನೆಯ ದಿನಾಂಕವಾಗಿರುತ್ತದೆ. ಆದ್ದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿಯಲ್ಲಿ ಪಡೆಯಬಹುದು ಅಥವಾ ಅಂತರ್ಜಾಲದಲ್ಲಿ (www.kppp.karnataka.gov.in) ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಸಂಗ್ರಹಿಸಬಹುದು.
DIPR/CTA/KSMCA/655/2024-25
ಸಹಿ/- ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಜಿಲ್ಲಾ ಸರ್ವೇಕ್ಷಣಾ ಘಟಕ, ಚಿತ್ರದುರ್ಗ

ಲಡಾಕ್‌ನ ಪ್ಯಾಂಗಾಂಗ್ ಸರೋವರದ ದಕ್ಷಿಣ ದಂಡೆ ಬಳಿ 91 ಮನೆ-ರಸ್ತೆ ನಿರ್ಮಾಣ

ಮತ್ತೆ ಚೀನಾ ಗಡಿ ತಂಟೆ: ಎಲ್‌ಎಸಿ ಬಳಿ ವಸತಿಗುಚ್ಛ

ಲಡಾಕ್: ನೆರೆಯ ಕಮ್ಯುನಿಸ್ಟ್ ದೇಶ ಚೀನಾ ಮತ್ತೊಮ್ಮೆ ದುಸ್ಸಾಹಸ ಮೆರೆದಿದೆ. ಲಡಾಕ್ ಭಾಗದಲ್ಲಿನ ಪ್ಯಾಂಗಾಂಗ್ ಸರೋವರದ ದಕ್ಷಿಣ ದಂಡೆಯಲ ಸಮೀಪದಲ್ಲಿನ ವಾಸ್ತವ ಗಡಿ ರೇಖೆ ಬಳಿಯೇ ಹೊಸದಾಗಿ ವಸತಿ ಕಟ್ಟಡಗಳನ್ನು ನಿರ್ಮಿಸಿದೆ. ಅಲ್ಲಿಗೆ ವಾಹನಗಳಲ್ಲಿ ಸಂಚರಿಸುವುದಕ್ಕೆ ಅನುಕೂಲವಾಗುವಂತೆ ಅಚ್ಚುಕಟ್ಟಾದ ರಸ್ತೆಗಳನ್ನೂ ಅಭಿವೃದ್ಧಿಪಡಿಸಿದೆ. ಒಟ್ಟು 91 ವಸತಿ ಕಟ್ಟಡಗಳ ನಿರ್ಮಾಣವಾಗಿದೆ. ಅವಕ್ಕೆ ಆ ಭಾಗದಲ್ಲಿನ ಹವಾಗುಣವನ್ನು ಸಮರ್ಥವಾಗಿ ಎದುರಿಸಬಲ್ಲಂತಹ ಬಲವಾದ ಛಾವಣಿಯನ್ನೂ ರಚಿಸಲಾಗಿದೆ. ಜನವರಿ 25ರಂದು ತೆಗೆದಿರುವ ಉಪಗ್ರಹ ಚಿತ್ರದಲ್ಲಿ ಇದೆಲ್ಲವೂ ಗೋಚರಿಸಿವೆ.

1962ರಲ್ಲಿ ಭಾರತ-ಚೀನಾ ಸಮರದ ಬಳಿಕ ರಚಿಸಲಾದ ವಾಸ್ತವ ಗಡಿ ರೇಖೆ ಬಳಿಯೇ ಚೀನಾ ಭಾಗದಲ್ಲಿ ಈ ಹೊಸ ವಸತಿ ಪ್ರದೇಶ ರಚನೆಯಾಗಿರುವುದು ಭಾರತದ ಮಟ್ಟಿಗೆ ಕಳವಳಕಾರಿ ಸಂಗತಿಯೇ ಆಗಿದೆ.

2025ರ ಜನವರಿ 25ರಂದು ಮ್ಯಾಕ್ಸರ್ ಟೆಕ್ನಾಲಜೀಸ್ ಮುದ್ರಿಸಿರುವ ಈ ಉಪಗ್ರಹ ಚಿತ್ರದಲ್ಲಿ ಈ ವಸತಿ ಭಾಗವನ್ನು ಚೀನಾದ ನೂತನ ಸೆಟಲ್‌ಮೆಂಟ್ ಏರಿಯಾ ಎಂದೇ ಗುರುತಿಸಲಾಗಿದೆ. ಗಡಿ ಭಾಗದಲ್ಲಿನ ವಾಹನ ಸಂಚಾರದ ಮೂಲ ಸೌಕರ್ಯ ವೃದ್ಧಿಗಾಗಿ ಈ ವಸತಿ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು 'ಎನ್‌ಡಿಟಿವಿ' ಮಾಧ್ಯಮದಲ್ಲಿ ಚಿತ್ರ ಸಹಿತ ವಿವರಿಸಲಾಗಿದೆ.

2025ರ ಜನವರಿ 25ರಲ್ಲಿ ತೆಗೆದ ಉಪಗ್ರಹ ಚಿತ್ರ.

ಉಕ್ರೇನ್‌ಗೆ ಸೇನಾಪಡೆ ನೆರವು ನಿಲ್ಲಿಸಿದ ಟ್ರಂಪ್

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಕ್ರೇನ್ ಈ ಮೊದಲಿನಿಂದ ನೀಡಲಾಗುತ್ತಿದ್ದ ಸೇನಾ ನೆರವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಪೂರ್ಣವಾಗಿ ಸ್ಥಗಿತಗೊಳಿಸಿದ್ದಾರೆ. ಈ ಕುರಿತು ಶ್ವೇತಭವನದ ಅಧಿಕಾರಿ ಸುದ್ದಿಸಂಸ್ಥೆಗೆ ಮಂಗಳವಾರ ಮಾಹಿತಿ ನೀಡಿದ್ದಾರೆ. ಟ್ರಂಪ್ ಕೈಗೊಂಡಿರುವ ಈ ಕಠಿಣ ಕ್ರಮವು, ರಷ್ಯಾ ಜತೆ ಶಾಂತಿ ಮಾತುಕತೆ ನಡೆಸಲು, ಕದನ ವಿರಾಮ ಒಪ್ಪಂದ ಮಾಡಿಕೊಳ್ಳಲು ಉಕ್ರೇನ್ ದೇಶದ ಸರಕಾರದ ಮೇಲೆ ಒತ್ತಡ ಹೆಚ್ಚಿಸಲಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಮತ್ತು ಯುದ್ಧಕ್ಕೆ ತ್ವರಿತ ಅಂತ್ಯ ಹಾಡಲು ಪ್ರಯತ್ನಿಸುತ್ತಿರುವ ಅಮೆರಿಕ ಅಧ್ಯಕ್ಷ ಟ್ರಂಪ್ ನಡುವೆ ಶ್ವೇತಭವನದ ಓವಲ್ ಕಚೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಸಂಘರ್ಷ ಉಂಟಾದ ಬೆನ್ನಲ್ಲೇ ಟ್ರಂಪ್ ಆಡಳಿತದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಅಮೆರಿಕದ ಈ ನಿರ್ಧಾರ ಉಕ್ರೇನ್‌ಗೆ ಸಂಕಷ್ಟ ತಂದೊಡ್ಡಿದ್ದು, ರಷ್ಯಾ ಆಕ್ರಮಣ ಹಿಮ್ಮೆಟ್ಟಿಸುವುದು ಕಷ್ಟವಾಗಲಿದೆ.

ಎಸ್‌ಡಿಪಿಐ ಅಧ್ಯಕ್ಷ ಎಂ.ಕೆ.ಫೈಝಿ ಬಂಧಿಸಿದ ಜಾರಿ ನಿರ್ದೇಶನಾಲಯ

ದೆಹಲಿ: ನಿಷೇಧಿತ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯ (ಪಿಎಫ್‌ಐ)ನ ರಾಜಕೀಯ ವಿಭಾಗವಾದ 'ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯ' (ಎಸ್‌ಡಿಪಿಐ)ದ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ. ಫೈಝಿಯನ್ನು ಜಾರಿ ನಿರ್ದೇಶನಾಲಯದ(ಇ.ಡಿ) ಅಧಿಕಾರಿಗಳು ಬಂಧಿಸಿದ್ದಾರೆ. ಫೈಝಿಯನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಸೋಮವಾರ ರಾತ್ರಿ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ, ಪಿಎಂಎಲ್ ಕಾಯಿದೆಯಡಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಇದಕ್ಕೂ ಮುನ್ನ ಫೆ.28ರಂದು ಇ.ಡಿ ಅಧಿಕಾರಿಗಳ ತಂಡ ಕೇರಳದಲ್ಲಿನ ಫೈಝಿ ನಿವಾಸದ ಮೇಲೆ ದಾಳಿ ನಡೆಸಿ ಮಹತ್ವದ ದಾಖಲೆ ಗಳನ್ನು ವಶಪಡಿಸಿಕೊಂಡಿತ್ತು.

ಇದೇ ಪ್ರಕರಣದಲ್ಲಿ 2021ರಿಂದ ಈವರೆಗೆ 'ಪಿಎಫ್‌ಐ' ನಿಷೇಧಿತ ಸಂಘಟನೆಯ ಉನ್ನತ ಪದಾಧಿಕಾರಿಗಳು ಸೇರಿದಂತೆ 26 ಮಂದಿಯನ್ನು ಜಾರಿ ನಿರ್ದೇಶನಾಲಯ(ಇ.ಡಿ) ಬಂಧಿಸಿದೆ. ಜತೆಗೆ 9 ಬಾರಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಗಳನ್ನೂ ಸಲ್ಲಿಸಿದೆ. ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದ್ದ ಆರೋಪದಡಿ 'ಪಿಎಫ್‌ಐ' ಮತ್ತು ಅದರ 8 ವಿವಿಧ ವಿಭಾಗಗಳು ಮತ್ತು ಸಂಘಟನೆಗಳನ್ನು 2022ರ ಸೆ.28ರಂದು ಕೇಂದ್ರ ಗೃಹ ಸಚಿವಾಲಯ 'ಯುಎಪಿಎ' ಅನ್ವಯ ನಿಷೇಧಿಸಿ ಆದೇಶ ಹೊರಡಿಸಿದೆ.

ಸಮಾಚಾರ ಸಣ್ಣದಲ್ಲ

ಸುಪ್ರೀಂ ಕೋರ್ಟ್‌ನಲ್ಲಿ ಚರಂತಿಮಠಗೆ ಗೆಲುವು

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಲ್ಲಿ ಮುಳಗಡೆಯಾಗಿದ್ದ ಚರಂತಿಮಠ ಆಯಿಲ್ ಮೀಲ್‌ಗೆ ಒಂದು ಎಕರೆ ಮೂವತ್ತು ಮೂರು ಗುಂಟೆ (1:33) ಜಮೀನು ನೀಡಬೇಕು ಎಂದು ಸರ್ವೋಚ್ಚ ನ್ಯಾಯಾಲಯವು ಆದೇಶಿದೆ, ತನ್ಮೂಲಕ ಉದ್ಯಮಿ ಮಲ್ಲಿಕಾರ್ಜುನ ಚರಂತಿಮಠ ಅವರಿಗೆ ಜಯ ಸಿಕ್ಕಿದೆ.

ಮುಳಗಡೆಯಾಗಿದ್ದ ಆಯಲ್ ಮೀಲ್‌ಗೆ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಈ ಹಿಂದಿನ ಆಡಳಿತ ಮಂಡಳಿಯು ಜಮೀನು ನೀಡಲು ನಿರಾಕರಿಸಿತ್ತು. ಮೀಲ್ ಮಾಲೀಕರಾದ ಮಲ್ಲಿಕಾರ್ಜುನ ಚರಂತಿಮಠ ಹೈಕೋರ್ಟ್ ಮೊರೆ ಹೋಗಿದ್ದರು. ವಾದ-ಪ್ರತಿವಾದ ಆಲಿಸಿದ್ದ ಹೈಕೋರ್ಟ್ ಚರಂತಿಮಠ ಆಯಿಲ್ ಮೀಲ್‌ಗೆ ಒಂದು ಎಕರೆ ಮೂವತ್ತು ಮೂರು ಗುಂಟೆ ಜಮೀನು ನೀಡಬೇಕು ಅಂತ ತೀರ್ಪು ನೀಡಿ ಅಂದಿನ ಆಡಳಿತ ಮಂಡಳಿಗೆ ಆದೇಶಿಸಿತ್ತು. ಆದರು ಸಹ ಬಿಟಿಡಿಎ ಆಡಳಿತ ಮಂಡಳಿ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿತ್ತು. ಇದಕ್ಕೆ ಪ್ರತಿಯಾಗಿ ಮಲ್ಲಿಕಾರ್ಜುನ ಚರಂತಿಮಠ ಅವರು ತಮಗೆ ಸೀಗಬೇಕಾದ ಆಸ್ತಿ ಹಕ್ಕುಗಳ ಬಗ್ಗೆ ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ಸಲ್ಲಿಸಿದ್ದರು. ಇದನ್ನು ಗಮನಿಸಿದ ಸುಪ್ರೀಂ ಕೋರ್ಟ್ ಹೈಕೋರ್ಟ್ ತೀರ್ಪನ್ನು ಎತ್ತಿ ಹಿಡಿದು ಒಂದು ಎಕರೇ ಮೂವತ್ತು ಮೂರು ಗುಂಟೆ ಜಮೀನು 90 ದಿನಗಳ ಒಳಗಾಗಿ ಮಂಜೂರು ಮಾಡುವಂತೆ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಆದೇಶಿಸಲಾಗಿದೆ.

ಶಿಕ್ಷಣಕ್ಕೆ ಆದ್ಯತೆ ನೀಡಿ ರಾಮಯ್ಯ ಶ್ರೀಗಳು

ಮುಧೋಳ: ಮೊಬೈಲ್ ಯುಗದಲ್ಲಿ ಮಕ್ಕಳ ಶಿಕ್ಷಣದ ಕಾಳಜಿಗೆ ಪಾಲಕರು ಮೊದಲ ಆದ್ಯತೆ ನೀಡುವಂತೆ ಆಗಬೇಕು ಎಂದು ರಾಮಯ್ಯ ಶ್ರೀಗಳು ಹೇಳಿದರು. ತಾಲೂಕಿನ ಮುಗಳಖೋಡ ಗ್ರಾಮದ ಗುರುಪಾದೇಶ್ವರ ಮೆಮೋರಿಯಲ್ ಶಿಕ್ಷಣ ಸಂಸ್ಥೆಯ 14 ನೇ ವಾರ್ಷಿಕೋತ್ಸಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಹಿತವನ್ನು ಶಿಕ್ಷಕರು, ಪಾಲಕರು ಕಾಳಜಿ ಅಗತ್ಯವಾಗಿ ಇರಬೇಕಾಗಿದೆ. ಮಕ್ಕಳನ್ನು ನಿರ್ಲಕ್ಷ್ಯತನ ಮಾಡಿದರೇ ಅವರು ಪೋಷಕರನ್ನು ನಿರ್ಲಕ್ಷ್ಯತನ ಮಾಡುವ ಕಾಲ ಬಹಳ ದಿನಗಳು ಉಳಿದಿಲ್ಲ, ಈಗಿಂದಲೇ ಸಂಸ್ಕಾರದ ಜತೆ ಉತ್ತಮ ಶಿಕ್ಷಣ ಕೊಡಿಸಬೇಕಾಗಿದೆ ಎಂದರು. ನಿರ್ದೇಶಕ ಬಿಳ್ಯಾನಪ್ಪ ಒಡೆಯರ ಮಾತನಾಡಿ, ಈ ಶಿಕ್ಷಣ ಸಂಸ್ಥೆಯು ಒಂದು ಸಾಮಾಜಿಕ ಕಳಕಳಿಯಿಂದ ಬೆಳೆದು ಬಂದಿದೆ. ಮಠದ ಪೀಠಾಧಿಪತಿಗಳ ಮಾರ್ಗದರ್ಶನದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇರಿಸಲಿದೆ ಎಂದರು. ಪ್ರಮೂಖರಾದ ವಿಠ್ಠಲ್ ನಾವಿ, ಬಸಯ್ಯ ಹಿರೇಮಠ, ವಕೀಲ ಶಿವಾನಂದ ಮುಳ್ಳೂರು, ಮುಖ್ಯಗುರು ಆರ್.ಎಂ. ಬಾಗವಾನ, ಶಿವಯ್ಯ ಹಿರೇಮಠ ಇತರರು ಇದ್ದರು.

ಸರಣಿ ಅಪಘಾತ, ಅಪಾಯದಿಂದ ಪಾರು

ರಬಕವಿ-ಬನಹಟ್ಟಿ: ಜಮಖಂಡಿ-ಕುಡಚಿ ರಾಜ್ಯ ಹೆದ್ದಾರಿಯಾದ ಬನಹಟ್ಟಿಯ ಸಂಗೋಳ್ಳಿ ರಾಯಣ್ಣ ವೃತ್ತದ ಬಳಿ ಮಂಗಳವಾರ ಮಧ್ಯಾಹ್ನ ಬಸ್, ಕಬ್ಬಿನ ಟ್ರ್ಯಾಕ್ಟರ್ ಹಾಗು ಶಾಲಾವಾಹನದ ನಡುವೆ ನಡೆದ ಸರಣಿ ಅಪಘಾತದಲ್ಲಿ ಶಾಲಾ ವಾಹನ ಮತ್ತೊಂದೆಡೆ ಸಾರಿಗೆ ಬಸ್ ಜಖಂಗೊಂಡಿದ್ದು, ಶಾಲಾ ವಾಹನದಲ್ಲಿದ್ದ ಕೆಲ ವಿದ್ಯಾರ್ಥಿಗಳಿಗೆ ಸಣ್ಣ ಪುಟ್ಟ ಗಾಯಗಳಾಗಿವೆ.

ರಾಯಣ್ಣ ವೃತ್ತದ ಬಳಿ ಮಕ್ಕಳನ್ನು ಇಳಿಸಲು ನಿಂತಿದ್ದ ಬಸ್‌ಗೆ ಹಿಂಬದಿಯಿಂದ ರಬಕವಿ ಕಡೆಗೆ ಸಾಗುತ್ತಿದ್ದ ಟ್ರ್ಯಾಲಿಯಲ್ಲಿ ಕಬ್ಬು ತುಂಬಿದ ಟ್ರ್ಯಾಕ್ಟರ್ ಓವರ್ ಟೇಕ್ ಮಾಡುವ ಸಂದರ್ಭ ಸಾರಿಗೆ ಬಸ್‌ವೊಂದು ಜಮಖಂಡಿ ಕಡೆಗೆ ತೆರಳುತ್ತಿರುವಾಗ ಮಧ್ಯದಲ್ಲಿ ಸಿಲುಕಿದ ಟ್ರ್ಯಾಕ್ಟರ್ ಚಾಲಕನ ನಿಯಂತ್ರಣಕ್ಕೆ ಬಾರದ ಕಾರಣ ಎರಡೂ ಬಸ್‌ಗಳ ಮಧ್ಯ ಸಿಲುಕಿಕೊಂಡ ಪರಿಣಾಮ ಎರಡೂ ಬಸ್‌ಗಳ ಹಿಂಬದಿ ಜಖಂಗೊಂಡ ಪರಿಣಾಮ ಶಾಲಾ ವಾಹನದಲ್ಲಿನ ಕೆಲ ಮಕ್ಕಳಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಯಾವದೇ ವಾಹನಗಳು ವೇಗ ವಿಲ್ಲದ ಕಾರಣ ಅಪಘಾತವಾದ ಕಾರಣ ಅದೃಷ್ಟವ ಶಾತ್ ಯಾವದೇ ಹಾನಿ ಸಂಭವಿಸಿಲ್ಲ. ಸ್ಥಳಕ್ಕೆ ಬನಹಟ್ಟಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿರಾಮ
ಪ್ರತಿ ಭಾನುವಾರ

{ ಬಿ ವೈ ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ

ನಟ್ಟು, ಬೋಲ್ಟ್ ಹೇಳಿಕೆ ಒಳ್ಳೆಯದಲ್ಲ. ಡಿಕೆ ಶಿವಕುಮಾರ್ ಅವರಿಗೆ ವಿನಮ್ರವಾಗಿ ಹೇಳುತ್ತಿದ್ದೇನೆ, ಅಧಿಕಾರ ಶಾಶ್ವತ ಅಲ್ಲ. ಯಾರೂ ನಿಮ್ಮ ಗುಲಾಮರಲ್ಲ. ಅಧಿಕಾರ ಶಾಶ್ವತ ಎಂಬ ವರ್ತನೆ ಸರಿಯಲ್ಲ. ಭಂಡತನ ಬಿಟ್ಟು ನಿಮ್ಮ ತಪ್ಪಿಗೆ ಕ್ಷಮೆಯಾಚಿಸಿ.

ಅಸ್ಪೃಶ್ಯತೆ ನಿವಾರಣೆಗೆ ಆರ್‌ಎಸ್‌ಎಸ್ ಶ್ರಮ

ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಭೇಂಡೆ ಅಭಿಮತ | ಸಂಘಮಿತ್ರ ಕಟ್ಟಡ ಉದ್ಘಾಟನೆ

ಬಾಗಲಕೋಟೆ: ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪ್ರತಿ ಮನೆ, ಮನದಲ್ಲಿ ಅಸ್ಪೃಶ್ಯತೆ ಹೋಗಲಾಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಶ್ರಮಿಸುತ್ತಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಹೇಳಿದರು.

ನಗರದ ದೀಪಂ ಕಾಲೋನಿಯಲ್ಲಿ ಸೇವಾ ಭಾರತಿ ಟ್ರಸ್ಟ್ ಅಡಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಆಶ್ರಧಾಮ ಹಾಗೂ ಆರ್‌ಎಸ್‌ಎಸ್ ಕಾರ್ಯಾಲಯ ಸಂಘಮಿತ್ರ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದುಗಳಲ್ಲಿನ ದೋಷ ತೆಗೆದು ಹಾಕಿ ಎಲ್ಲರೂ ಒಂದು ಎಂದು ಸಾರಲು ಪ್ರಾರಂಭವಾದ ಆರ್‌ಎಸ್‌ಎಸ್ ಇಂದು 70 ಸಾವಿರ ಹಳ್ಳಿಗಳಲ್ಲಿ ತನ್ನ ಕಾರ್ಯಚಟುವಟಿಕೆ ಮಾಡುತ್ತಿದೆ. ಬ್ರಿಟಿಷರು, ಮುಸ್ಲಿಂಮರು ಸೇರಿದಂತೆ ಅನೇಕರು ದೇಶದ ಮೇಲೆ ದಾಳಿ ಮಾಡಿದರು. ಏಕೆ ದಾಳಿ ಮಾಡಿದರು ಎಂದು ತಿಳಿದುಕೊಂಡ ಡಾ. ಕೇಶವ ಹೆಗಡೆವಾರ್ ಅವರು ಆರ್‌ಎಸ್‌ಎಸ್‌ನ್ನು ಪ್ರಾರಂಭಿಸಿದರು. ಇಂದು ಆರ್‌ಎಸ್‌ಎಸ್ ದೇಶವ್ಯಾಪಿ ತನ್ನ ಕಾರ್ಯವನ್ನು ಮಾಡುವ ಮೂಲಕ ಜಗತ್ತಿನ ಅತಿ ದೊಡ್ಡ ಸಂಘಟನೆಯಾಗಿದೆ ಎಂದು ಹೇಳಿದರು.

ಅಸ್ಪಶ್ಯತೆ ತೊಲಗಿಸಲು, ಮನೆಗಳಲ್ಲಿ ಸ್ವದೇಶಿ ವಸ್ತುಗಳ ಉಪಯೋಗ, ಪರ್ಯಾವರಣವನ್ನು ಶೋಷಣೆಯಿಂದ ರಕ್ಷಿಸಲು, ನಾಗರಿಕ ಕರ್ತವ್ಯ ಹಾಗೂ ಕುಟುಂಬ ವ್ಯವಸ್ಥೆ, ಈ 5 ಕೆಲಸಗಳನ್ನು

ಬಾಗಲಕೋಟೆಯ ದೀಪಂ ಕಾಲೋನಿಯಲ್ಲಿ ಸೇವಾ ಭಾರತಿ ಟ್ರಸ್ಟ್ ಅಡಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಆಶ್ರಧಾಮ ಹಾಗೂ ಆರ್‌ಎಸ್‌ಎಸ್ ಕಾರ್ಯಾಲಯ ಸಂಘದ ಮಿತ್ರ ಉದ್ಘಾಟನಾ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು. ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ , ಪ್ರಭು ಸ್ವಾಮೀಜಿ ದೀಪ ಬೆಳಗಿಸಿದರು. ಆರ್‌ಎಸ್‌ಎಸ್ ಪ್ರಮುಖರಾದ ರಘು ಅಕಮುಂಜಿ, ಚಂದ್ರಶೇಖರ ದೊಡ್ಡಮನಿ ಇತರರು ಇದ್ದರು.

ಮಾಡುವ ಮೂಲಕ ಮನೆಯನ್ನು ಆದರ್ಶ ಮನೆಯನ್ನಾಗಿಸುವ ಮೂಲಕ ಪರಿಸರದಲ್ಲಿ ಪರಿವರ್ತನೆಯ ಗಾಳಿ ಬೀಸುವ ಹಾಗೆ ಮಾಡುವುದು ಸ್ವಯಂ ಸೇವಕರ ಜವಾಬ್ದಾರಿ ಎಂದರು.

ನಮ್ಮ ಸಮಾಜದಲ್ಲಿ ಇಂಗ್ಲೀಷ್ ಭ್ರಮೆ ಇದೆ. ಅದು ಹೋಗಬೇಕು. ಅಂಬೇಡ್ಕರ, ಬಸವಾದಿ ಶರಣಗಳ ವಿಚಾರವಾದಂತೆ ಸಮಾಜದಲ್ಲಿ ಸಮ ಭಾವನೆ ಇರಬೇಕು. ಜಾತಿ, ಮತ, ಪಂಥಗಳ ಬೇಧ ಭಾವ ಇರಬಾರದು ಎನ್ನುವುದು ಸಂಘದ ಆಶಯ. ಪರಿವಾರದ ಕಾರ್ಯಕರ್ತರು ಪ್ರಚಾರಕ ಬಂದಾಗ ಮಾತ್ರ ತೋರಿಸುವುದು ಮುಖ್ಯವಲ್ಲ. ಬದುಕಿನಲ್ಲಿ ನಿತ್ಯ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಪೂಜ್ಯನೀಯ ಹೆಗಡೆವಾರು ಹುಟ್ಟುತ್ತಲೆ ದೇಶಭಕ್ತರಾಗಿದ್ದರು. 11 ನೇ ವಯಸ್ಸಿಗೆ ತಂದೆ,

> **ಸಂಘಕ್ಕೆ ನೂರು ವರ್ಷ ಪೂರೈಸುವ ಸುಸಂದರ್ಭದಲ್ಲಿ ಬಾಗಲಕೋಟೆಯಲ್ಲಿ ಭವ್ಯ ಕಟ್ಟಡ ಉದ್ಘಾಟನೆಯಾಗಿದೆ. ಈ ಕಟ್ಟಡದ ಉದ್ಘಾಟನೆಯ ಜತೆಗೆ ಪ್ರತಿಯೊಬ್ಬ ಸ್ವಯಂ ಸೇವಕನ ಮೇಲೆ ಜವಾಬ್ದಾರಿ ಹೆಚ್ಚಾಗುತ್ತಿದೆ.**
>
> **- ಮಂಗೇಶ ಭೇಂಡೆ,**
> **ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ**

ತಾಯಿ ಕಳೆದುಕೊಂಡರು ತಮ್ಮ ಸಿದ್ಧಾಂತದಲ್ಲಿ ಬದಲಾವಣೆ ಮಾಡಿಕೊಳ್ಳಲಿಲ್ಲ. ಗುಣದಿಂದ ತುಂಬುತ್ತದೆ. ದೋಷವು ಗುಲಾಮಗಿರಿಯನ್ನು ಬೆಳೆಸುತ್ತದೆ. ನಾಗಪುರದ ಮಣ್ಣು ಬಾಗಲಕೋಟೆ ತಲುಪುವ ಹಾಗೇ ಮಾಡಿದೆ. ಸಂಘದ ಕಾರ್ಯಕರ್ತರನ್ನು ಮಹಾತ್ಮ ಗಾಂಧಿಜೀ ಅವರನ್ನು ಕೊಂದವರು ಅಂತ ಅಪಪ್ರಚಾರ ಮಾಡಿದರು. ಅನೇಕ ಸ್ವಯಂ ಸೇವಾ ಕಾರ್ಯಕರ್ತರನ್ನು ಕೊಂದು ಹಾಕಲಾಯಿತು. ಬಾಗಲಕೋಟೆಯಲ್ಲಿ ಸಂಘವು ಬೆಳೆಯಲು ಜ್ಯೋತಿ ಪ್ರಕಾಶ ಸಾಳುಂಕೆ, ಶಂಕರ ಮೇಲ್ನಾಡ, ಕಾಶಿನಾಥ ನಾವಲಗಿ ಸೇರಿದಂತೆ ಅನೇಕರು ಶ್ರಮ ವಹಿಸಿದ್ದಾರೆ ಎಂದು ತಿಳಿಸಿದರು.

ಚರಂತಿಮಠದ ಪ್ರಭು ಸ್ವಾಮೀಜಿ ಮಾತನಾಡಿ, ಸಂಘವು ನೂರೆಂಟು ಸವಾಲು, ಸಂಕಟ ಎದುರಿಸಿ ಬೆಳೆದು ನಿಂತಿದೆ. ಶತಮಾನ ಇತಿಹಾಸ ಹಿಂದೆ ಸಾವಿರಾರು ಜನರ ಶ್ರಮ, ಪರಿಶ್ರಮ, ತ್ಯಾಗ ಅಡಗಿದೆ. ಸಮಾಜದಲ್ಲಿ ಸಂಘವು ಹೇಳಿಕೊಟ್ಟ ಆದರ್ಶ ಪಾಲನೆ, ಪೋಷಣೆ, ಆಚರಣೆ ಮಾಡಬೇಕಿದೆ. ಮನೆಗಳಲ್ಲಿ ಶಾಂತಿ, ನೆಮ್ಮದಿ, ಬಂಧುತ್ವ ನೆಲಸಬೇಕಿದೆ. ಸ್ವದೇಶಿ ಪದ್ಧತಿ ನಿತ್ಯವು ಬದುಕಾಗಬೇಕು. ಎಲ್ಲರು ಸಂಘದ ಆಶಯಕ್ಕೆ ಅನುಗುಣವಾಗಿ ಹೆಜ್ಜೆ ಇಡಬೇಕು ಎಂದು ಸಲಹೆ ನೀಡಿದರು.

ಗುಳೇದಗುಡ್ಡ ಅಮರೇಶ್ವರ ಮಠದ ಡಾ. ನೀಲಕಂಠ ಶಿವಾಚಾರ್ಯ ಸ್ವಾಮೀಜಿ, ಹಂಸನೂರಿನ ಶಿವಾನಂದ ಮಠದ ಅಭಿನವ ಬಸವರಾಜೇಂದ್ರ ಸ್ವಾಮೀಜಿ, ಆಳಂದದ ಶ್ರೀಶೈಲ ಶಿವಾಚಾರ್ಯ ಸ್ವಾಮೀಜಿ, ಆರ್‌ಎಸ್‌ಎಸ್ ಪ್ರಮುಖರಾದ ರಘು ಅಕಮುಂಜಿ, ಚಂದ್ರಶೇಖರ ದೊಡ್ಡಮನಿ, ಡಾ. ಸುಭಾಸ ಪಾಟೀಲ ಇದ್ದರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ, ದೊಡ್ಡನಗೌಡ ಪಾಟೀಲ, ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ್ ಶಹಾಪುರ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಉಪಾಧ್ಯಕ್ಷೆ ಶೋಭಾ ರಾವ್, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ.ಪಾಟೀಲ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ್, ದಿನೇಶ ಕಾಮತ, ರಾಘವೇಂದ್ರ ಕಾಗವಾಡ ಸೇರಿದಂತೆ ಇತರರಿದ್ದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ವೆಂಕಪ್ಪ ಅಂಬಾಜಿ ಸುಗತೇಕರ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮಹೇಶ ಅಂಗಡಿ ಅವರನ್ನು ಚರಂತಿಮಠ ಹಾಗೂ ವಸ್ತ್ರದ ಫೌಂಡೇಶನ್ ಅಧ್ಯಕ್ಷ ಮಲ್ಲಿಕಾರ್ಜುನ ಚರಂತಿಮಠ ಸತ್ಕರಿಸಿದರು. ಮುಖಂಡರಾದ ವಿಜಯ ಸುಲಾಖೆ, ಶಿವಕುಮಾರ ಮೇಲ್ನಾಡ, ನಗರಸಭೆ ಸದಸ್ಯ ಚನ್ನವೀರ ಅಂಗಡಿ, ಕಳಕಪ್ಪ ಬಾದೋಡಗಿ, ದುಂಡಪ್ಪ ಎಳೆಮ್ಮಿ, ಗುರು ಅನಗವಾಡಿ, ಪ್ರಶಾಂತ ಸೋನಕನಾಳ, ಮುರಿಗೆಪ್ಪ ಸೋರಗಾಂವಿ, ಎಸ್.ವಿ.ಶೆಟ್ಟರ, ಮೃತ್ಯುಂಜಯ ಬಳುಲಮಠ, ನಿಂಗಪ್ಪ ಮೋಕಾಶಿ, ರಮೇಶ ಕೊಣ್ಣೂರ, ಅಶೋಕ ಮಹೇಂದ್ರಕರ, ಶ್ರೀಶೈಲ ಅಂಗಡಿ ಸೇರಿ ಇತರರಿದ್ದರು.

ಬಸ್ ನಿಲ್ದಾಣದಲ್ಲಿ ನವಜಾತ ಶಿಶು ಪತ್ತೆ

ಕಲಾದಗಿ: ಬಸ್ ನಿಲ್ದಾಣದ ಹಿಂಬಾಗದಲ್ಲಿರುವ ಶೌಚಾಲಯದಲ್ಲಿ ನವಜಾತ ಶಿಶುವೊಂದನ್ನು ತುರುಕಿರುವ ಅಮಾನವೀಯ ಘಟನೆಯೊಂದು ಸೋಮವಾರ ಸಂಜೆ 4ಗಂಟೆ ಹೊತ್ತಿಗೆ ಬೆಳಕಿಗೆ ಬಂದಿದೆ. ಕೆಲವೇ ಗಂಟೆಗಳ ಹಿಂದೆ ಜನಿಸಿತ್ತು ಎಂದು ಹೇಳಲಾಗುವ ಹೆಣ್ಣು ನವಜಾತ ಶಿಶು ಸಾವನ್ನಪ್ಪಿದೆ. ಹಾಳಾದ ಶೌಚಾಲಯದ ಬಾಯಿಯೊಳಗೆ ಮಗುವನ್ನು ತುರುಕುವ ಪ್ರಯತ್ನ ಮಾಡಲಾಗಿದೆ. ಆದರೆ ಅದು ಪೂರ್ಣ ಸಾದ್ಯವಾಗದೇ ಮಗುವಿನ ತಲೆ ಭಾಗ ಒಳಗೆ ಹೋಗಿದ್ದು ಅದರ ಕಾಲೊಂದು ಹೊರಗೆ ಕಂಡಿದೆ. ಸಂಜೆ ನಾಲ್ಕು ಗಂಟೆಗೆ ಇದನ್ನು ಗಮನಿಸಿರುವ ಸಾರ್ವಜನಿಕರು ಸ್ಥಳೀಯ ಪೊಲೀಸ್ ಸ್ಟೇಷನಗೆ ಸುದ್ದಿ ಮುಟ್ಟಿಸಿದ್ದಾರೆ. ಸಾವನ್ನಪ್ಪಿರುವ ಶಿಶುವನ್ನು ಪೊಲೀಸ್ ಸ್ಟೇಷನಗೆ ತರಲಾಗಿದ್ದು ಮುಂದಿನ ಕ್ರಮ ನಡೆದಿದೆ ಎಂದು ಕಲಾದಗಿ ಪಿಎಸ್‌ಐ ಚಂದ್ರಶೇಖರ ಹೆರಕಲ್ ತಿಳಿಸಿದ್ದಾರೆ.

ಸಮಾಜದ ಎಲ್ಲ ವರ್ಗದವರಿಗೆ ಹಣಕಾಸಿನ ಸೌಲಭ್ಯ ದೊರಕಿಸಿ

ಬಾದಾಮಿ: ರೈತರಿಗೆ, ಜನರಿಗೆ ಅನುಕೂಲವಾಗುವಂತೆ ನೂತನ ಕಟ್ಟಡ ಗೊಡಾವನ ಕಟ್ಟಿಸುವುದು ಸಂತಸ ತಂದಿದೆ. ಸಹಕಾರಿ ಸಂಘಗಳು ರೈತರಿಗೆ ಸಾಲ ಕೊಡುವುದರ ಜತೆಗೆ ಎಲ್ಲ ಸೌಲಭ್ಯ ತಲುಪಿಸಬೇಕು. ಹಣಕಾಸಿನ ನೆರವು ಪಡಿತರ, ರಸಗೊಬ್ಬರ ಕೊಡಬೇಕು. ಉತ್ತಮ ಕೆಲಸ ನಡೆಯಬೇಕು. ಸಮಾಜದ ಎಲ್ಲ ವರ್ಗದವರಿಗೆ ಸಣ್ಣ ವ್ಯಾಪಾರ, ಮಹಿಳೆ, ಕೂಲಿ ಮಾಡುವ ಜನರಿಗೆ ಸಹಾಯ ಮಾಡಬೇಕು ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ತಾಲೂಕಿನ ನಂದಿಕೇಶ್ವರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸುವರ್ಣ ಮಹೋತ್ಸವ ಹಾಗೂ ಕಾರ್ಯಾಲ ಯದ ನೂತನ ಕಟ್ಟಡ ಗೋಡಾವನ ಉದ್ಘಾಟನಾ ಸಮಾರಂಭದಲ್ಲಿ ಸಹಕಾರ ಧ್ವಜಾರೋಹಣ ನೆರವೇರಿ ಸಿ ಮಾತನಾಡಿದರು.

> **ನಂದಿಕೇಶ್ವರ ಪಿಕೆಪಿಎಸ್ ನೂತನ ಕಟ್ಟಡ, ಗೋಡಾವನ ಉದ್ಘಾಟನೆ**

ದುಡಿಯುವ ಕೈಗಳಿಗೆ ಸಹಾಯ ಮಾಡೋಣ. ಸರಕಾರದ ಅನುದಾನದ ಜೊತೆಗೆ ಡಿಪಾಸಿಟ್ ಮೂಲಕ ಅಭಿವೃದ್ಧಿ ಪಡಿಸೋಣ. ಜನರ ವಿಶ್ವಾಸ ಗಳಿಸಬೇಕಿದೆ. ಸಂಘದ ನಿರ್ದೇಶಕರು, ಸಿಬ್ಬಂದಿಗಳು ಸೇರಿದಂತೆ ಎಲ್ಲರೂ ಜನರಿಗೆ ಉತ್ತಮ ಸೇವೆ ನೀಡಬೇಕು ಎಂದು ಹೇಳಿದರು.

ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಮಾತನಾಡಿ, 50 ವರ್ಷಗಳ ಕಾಲ ಅಭಿವೃದ್ಧಿ ಯತ್ತ ಸಾಗುವುದಲ್ಲದೆ. 1.70 ಕೋಟಿ ರು. ವೆಚ್ಚದಲ್ಲಿ ಕಟ್ಟಡ ಗೋದಾಮು ನಿರ್ಮಾಣ ಮಾಡಿದ್ದು ಹೆಮ್ಮೆಯ ವಿಷಯ. ರಾಜಕೀಯವನ್ನು ಸಹಕಾರ ಕ್ಷೇತ್ರದಲ್ಲಿ ಬೆರೆಸದೆ ಇದ್ದರೆ ಮಾತ್ರ ಬೆಳೆಯಲು ಸಾಧ್ಯ ಎಂದು ಹೇಳಿದರು.

ಮಾಜಿ ಸಚಿವ ಎಸ್.ಆರ್.ಪಾಟೀಲ ಸಂಘದ ಶಿಲಾ ಫಲಕ ಅನಾವರಣಗೊಳಿಸಿ ಮಾತನಾಡಿದರು.

ನಂದಿಕೇಶ್ವರ ಪಿಕೆಪಿಎಸ್ ಅಧ್ಯಕ್ಷ ಕುಮಾರಗೌಡ ಜನಾಲಿ ಮಾತನಾಡಿ, ಎಲ್ಲ ಸಹಕಾರಿ ಸಂಘಗಳು ನಬಾರ್ಡ ಸಹಾಯಧನದಿಂದ ಹೊಸ ಕಟ್ಟಡ ನಿರ್ಮಾಣ ಮಾಡಿಕೊಳ್ಳಬಹುದಾಗಿದೆ. ಇದನ್ನು ಸದ್ಬಳ ಮಾಡಿಕೊಳ್ಳಿ. ತಾಲೂಕಿನಲ್ಲಿ 15 ಸಹಕಾರಿ ಸಂಘಗಳು ನೂತನ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ ಎಂದು ಹೇಳಿದರು.

ಶಿವಯೋಗಮಂದಿರ ಸಂಸ್ಥೆಯ ಉಪಾಧ್ಯಕ್ಷ ಶ್ರೀ ಸದಾಶಿವ ಮಹಾಸ್ವಾಮಿಗಳು, ಗುಳೇದಗುಡ್ಡದ ಶ್ರೀ ಕಾಶಿನಾಥ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಮುರುಗೇಶ ಕಡ್ಲಿಮಟ್ಟಿ, ಪಿಎಲ್‌ಡಿ ಬ್ಯಾಂಕ ಅಧ್ಯಕ್ಷ ಮಹಾಂತೇಶ ಮಮದಾಪೂರ, ಟಿಪಿಸಿಎಂಎಸ್ ಅಧ್ಯಕ್ಷ ಎಸ್.ಆರ್. ಮೆಳ್ಳಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಶಾಂತಗೌಡ ಪಾಟೀಲ, ಜಿ.ಪಂ.ಮಾಜಿ ಸದಸ್ಯ ಎಂ.ಬಿ.ಹಂಗರಗಿ ಬ್ಯಾಂಕ್ ಕೌಂಟರ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಸಿದ್ದನಗೌಡ ಪಾಟೀಲ, ಬಸವರಾಜ ಪಾಟೀಲ, ಪಿ.ಆರ್.ಗೌಡರ, ಮುತ್ತಣ್ಣ ಕಳ್ಳಿಗುಡ್ಡ, ರಾಜಮಹ್ಮದ ಬಾಗವಾನ, ಹೊನ್ನಯ್ಯ ಹಿರೇಮಠ, ಸೇರಿದಂತೆ ಪಿಕೆಪಿಎಸ್ ನಿರ್ದೇಶಕರು, ಸಹಕಾರಿ ಗಣ್ಯರು ಹಾಜರಿದ್ದರು.



ನಂದಿಕೇಶ್ವರ ಪಿಕೆಪಿಎಸ್ ನೂತನ ಕಟ್ಟಡ ಗೋಡಾವನ ಉದ್ಘಾಟನಾ ಸಮಾರಂಭವನ್ನು ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಮತ್ತು ಗಣ್ಯರು ಉದ್ಘಾಟಿಸಿದರು.

ಶಾಂತಿ, ಸಂಭ್ರಮದಿಂದ ಹೋಳಿ ಹಬ್ಬ ಆಚರಿಸಿ

14 ರಿಂದ ಮೂರು ದಿನ ಹೋಳಿ ರಂಗು | ಜಿಲ್ಲಾಧಿಕಾರಿ ಜಾನಕಿ ಮನವಿ

ಬಾಗಲಕೋಟೆ: ಪ್ರತಿವರ್ಷದಂತೆ ಈ ವರ್ಷವೂ ಜಿಲ್ಲೆಯಲ್ಲಿ ಮಾರ್ಚ್ 14 ರಿಂದ 16ರ ವರೆಗೆ ನಡೆಯಲಿರುವ ಹೋಳಿ ಸಂಭ್ರಮದ ಗತವೈಭವ ಮರುಕಳುಹಿಸುವ ನಿಟ್ಟಿನಲ್ಲಿ ಶಾಂತಿ ಹಾಗೂ ಸಂಭ್ರದಿಂದ ಆಚರಿಸುವಂತೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹೇಳಿದರು.

ಇಲ್ಲಿನ ಜಿಲ್ಲಾಡಳಿತ ಭವನದಲ್ಲಿ ಹಮ್ಮಿಕೊಂಡಿದ್ದ ಹೋಳಿ ಹಬ್ಬದ ಕುರಿತು ಜರುಗಿದ ಶಾಂತತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಬ್ಬಗಳು ಇರುವುದು ಸಂಭ್ರಮ ಆಚರಣೆಗಾಗಿ. ಆದ್ದರಿಂದ ದೇಶದಲ್ಲಿಯೇ 2ನೇ ಸ್ಥಾನ ಪಡೆದಿರುವ ಬಾಗಲಕೋಟೆ ಹಬ್ಬ ಶಿಸ್ತಿನಿಂದ ಅಚ್ಚುಕಟ್ಟಾಗಿ ನಡೆಬೇಕಿದೆ. ನಗರದ ಅನೇಕ ಹೋಳಿ ಹಬ್ಬ ಸಂಘಟನೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸ್ವತಃ ಸ್ವಯಂ ಸೇವಕರಾಗಿ ಕೆಲಸ ಮಾಡಿ ಶಾಂತಿ ಕಾಪಾಡುವ ಜತೆಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ಜೊತೆ ಸಹಕರಿಸಬೇಕು ಎಂದರು.

ಅದೇಷ್ಟೋ ಸಂಭ್ರಮದಿಂದ ಹಬ್ಬ ಆಚರಿಸಿದರೂ ಖುಷಿ ಪಡೆಯದೇ ಸಣ್ಣದೊಂದು ಘಟನೆಯನ್ನು ದೊಡ್ಡದನ್ನಾಗಿ ಬಿಂಬಿಸುವ ಕಾರ್ಯವಾಗಬಾರದು. ಸಂತೋಷದಿಂದ ಪರಸ್ಪರ ಸೌಹಾರ್ದತೆಯಿಂದ ಹೋಳಿ ಹಬ್ಬ ಆಚರಿಸುವಂತೆ ಹೋಳಿ ಸಮಿತಿಗೆ ಕರೆ ನೀಡಿದರ ಲ್ಲದೇ ಈ ಸಮಯದಲ್ಲಿ ಪಿಯುಸಿ ಪರೀಕ್ಷೆಗಳು ನಡೆಯುತ್ತಿರುವುದರಿಂದ ಪರೀಕ್ಷಾರ್ಥಿಗಳಿಗೆ ತೊಂದರೆ ಯಾಗದಂತೆ ಹೋಳಿ ಸಮಿತಿಯರು ನಿಗಾವಹಿಸಬೇಕು. ಆಚರಣೆಯಲ್ಲಿ ಸಮಸ್ಯೆ ಉಂಟಾದಲ್ಲಿ ನೇರವಾಗಿ ಪೊಲೀಸ್ ಇಲಾಖೆ ಸಂಪರ್ಕಿಸಬೇಕು. ಹೋಳಿ ಆಚರಣೆ ಬಿಡುಗಡೆಯಾದ ಅನುದಾನ ಮರಳಿ ತರಲು ಕ್ರಮವಹಿಸುವುದಾಗಿ ತಿಳಿಸಿದರು.

ಬಾಗಲಕೋಟೆಯ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅಧ್ಯಕ್ಷತೆಯಲ್ಲಿ ಹೋಳೆ ಶಾಂತತಾ ಸಭೆ ಜರುಗಿತು.

ಎಸ್ಪಿ ಅಮರನಾಥ ರೆಡ್ಡಿ ಮಾತನಾಡಿ, ಹಬ್ಬಗಳೆಂದರೆ ಸಂಭ್ರಮಿಸುವುದು ಸಹಜ. ಆದರೆ, ಸಂಭ್ರಮಾಚರಣೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗೆ ಅವಕಾಶ ಕೊಡಬಾರದು. ಹಬ್ಬದ ಆಚರಣೆಗೆ ಪೊಲೀಸ್ ಇಲಾಖೆ ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದೆ. ಸಿಬ್ಬಂದಿಗಳೊಂದಿಗೆ ಸಹಕರಿಸಿಕೊಂ ಡು ಹಬ್ಬದ ಯಶಸ್ವಿಗೆ ಸಹಕರಿಸಲು ತಿಳಿಸಿದರು.

ಎ.ಎ.ದಂಡಿಯಾ ಮತ್ತು ಟಂಕಸಾಲಿ ಮಾತನಾಡಿದರು.

ಅಪರ ಪೊಲೀಸ್ ವರಿಷ್ಠಾಧಿಕಾರಿ ಮಹಾಂತೇಶ್ವರ ಜಿದ್ದಿ, ನವನಗರ ಸಿಪಿಐ ಗುರುನಾಥ ಚವ್ಹಾಣ್ ಸೇರಿದಂತೆ ಹೋಳಿ ಸಮಿತಿಯ ಪ್ರತಿನಿಧಿಗಳಾದ ಕಳಕಪ್ಪ ಬಾದವಾಡಗಿ, ಅಶೋಕ ಲಿಂಬಾವಳಿ, ಸಂಚುವಾಡಕರ, ನಾಗರಾಜ ಹದ್ಲಿ, ಶ್ರಣವ ಖಾತೇದಾರ, ಬಸವರಾಜ ಧರ್ಮಂತಿ, ಶಿವುಕುಮಾರ ನಂದಿಕೋಳ ಮಠ, ವಿವೇಕಾನಂದ ಗರಸಂಗಿ ಇತರರಿದ್ದರು.

> **10 ಲಕ್ಷ ರು. ಅನುದಾನ ಪಡೆಯಿರಿ**
>
> **ಮಾರ್ಚ್13ರಂದು ಕಾಮದಹನವಾಗುತ್ತದೆ. ಮಾರ್ಚ್ 14 ರಿಂದ 16ರ ವರೆಗೆ ಮೂರು ದಿನಗಳ ಕಾಲ ಬಣ್ಣದೋಕುಳಿ ಜರುಗಲಿದೆ. 14 ರಂದು ಕಿಲ್ಲಾ, ನವನಗರ ಹಾಗೂ ವಿದ್ಯಾಗಿರಿ, 15 ರಂದು ಹಳಪೇಟೆ, ಜೈನ ಪೇಟೆ ಹಾಗೂ ವೆಂಕಟಪೇಟೆ, 16 ರಂದು ಹೊಸಪೇಟೆ ಓಣಿಯಲ್ಲಿ ಬಣ್ಣದೋಕುಳಿ ನಡೆಯಲಿದೆ. ಜತೆಗೆ ಸೋಗಿನ ಬಂಡಿ ಮೆರವಣಿಗೆ ಕೂಡಾ ಜರುಗಲಿದ್ದು, 13 ಕಿಲ್ಲಾ, 14 ಹಳಪೇಟೆ, 15 ಹೊಸಪೇಟೆ, 16 ಜೈನ ಪೇಟೆ, 17 ವೆಂಕಟಪೇಟೆ ಹಾಗೂ ವಿದ್ಯಾಗಿರಿಯಲ್ಲಿ ನಡೆಯಲಿದೆ. ನಗರದ ಬಸವೇಶ್ವರ ವೃತ್ತದ ಬಳಿ ಇರುವ ಹೊಳೆ ಆಂಜನೇಯ ದೇವಸ್ಥಾನದ ಆವರಣ ಹಾಗೂ ಕಿಲ್ಲಾ ಅಂಬಾಭವಾನಿ ದೇವಸ್ಥಾನದ ಬಳಿ ರೇನ್‌ಡ್ಯಾನ್ಸ್ ನಡೆಯಲಿದೆ. ಈ ಹಿಂದೆ ಹೋಳಿ ಆಚರಣೆಗೆ ಜಿಲ್ಲೆಗೆ ನೀಡಲಾದ 10 ಲಕ್ಷ ರು.ಗಳ ಅನುದಾನ ಮರಳಿ ಪಡೆಯುವಂತೆ ಜಿಲ್ಲಾಧಿಕಾರಿಗಳಿಗೆ ಹೋಳಿ ಸಮಿತಿಯ ಮಹಾಬಳೇಶ ಮಹಾಬಳೇಶ್ವರ ಮನವಿ ಮಾಡಿಕೊಂಡರು.**

ಜನಪದ ಕಲೆಯನ್ನು ಉಳಿಸಿ, ಬೆಳೆಸಿ

ಇಳಕಲ್ಲ: ನಾಡಿನಾದ್ಯಂತ ಜನಪದ ಕಲೆ ಯನ್ನು ಉಳಿಸಿ ಬೆಳೆಸಿ ಪೋಷಿಸಿ ಬೆಳೆಸುವ ನಿಟ್ಟಿನಲ್ಲಿ ಪರಿಷತ್ತಿನ ಡಾ. ಎಸ್ ಬಾಲಾಜಿ ಮತ್ತವರ ತಂಡದವರು ಜನಪದಕ್ಕಾಗಿ ನಿರಂತರ ಶ್ರಮಿಸುತ್ತಿರುವುದು ಪವಿತ್ರಕಾ ರ್ಯ ಎಂದು ನಗರದ ಹಿರಿಯ ಲೇಖಕ ರಾಜಶೇಖರ ಕಲ್ಮಠ ಅಭಿಪ್ರಾಯ ವ್ಯಕ್ತಪಡಿಸಿದರು.

ವಿಜಯಮಹಾಂತೇಶ ದಾಸೋಹ ಭವನದಲ್ಲಿ ಕನ್ನಡ ಜಾನಪದ ಪರಿಷತ್ತು ತಾಲೂಕು ಘಟಕ ಹಾಗೂ ಕನ್ನಡ ಜಾನಪದ ಪರಿಷತ್ತು ಮಹಿಳಾ ಘಟಕದ ಸಯೋಗದಲ್ಲಿ ಕನ್ನಡ ಜಾನಪದ ಪರಿಷತ್ತಿನ ಸಂಸ್ಥಾಪನಾ ದಶಮಾನೋತ್ಸವ ಸಂಭ್ರಮ ಹಾಗೂ ಜನಪದ ಬುಡ-ಬುಡಕಿ ಕಲೆಯ ಪ್ರದರ್ಶ ನದ ಸಮಾರಂಭವನ್ನು ಡಮರುಗ ಬಾರಿಸು ವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಇದು ಸತ್ಯದ ನೆಲ ಮೂಲ ಸಂಸ್ಕೃತಿಯ ಅನಾವರಣದ ಪುಣ್ಯದ ತಾಣ ಎಂದು ಹೇಳಿದರು.

ಬಂಡಾಯ ಸಾಹಿತಿ ಡಾ. ಎಂ.ಬಿ.ಒಂಟಿ ಮಾತನಾಡಿದರು.ಕನ್ನಡ ಜಾನಪದ ಪರಿಷತ್ ತಾಲೂಕಾಧ್ಯಕ್ಷರ ಚನ್ನಬಸಪ್ಪ ಲೆಕ್ಕಿಹಾಳ ಅಧ್ಯಕ್ಷತೆ ವಹಿಸಿದ್ದರು.

ಸಂದರ್ಭದಲಿ ಇಳಕಲ್ಲ ಪಿ.ಕೆ.ಪಿಎಸ್. ಅಧ್ಯಕ್ಷರ ಮಹಾಂತೇಶ ಹೊಳಿ ನಿರ್ದೇಶಕರಾದ ಗುರು ಗಾಣಿಗೇರ, ಬಸವರಾಜ ಬಾದವಾಡಗಿ, ವಿನೋದ ಬಾರಿಗಿಡದ, ಎಸ್.ಆರ್.ಕಂಠಿ ಶಿಕ್ಷಣ ಮಹಾವಿದ್ಯಾಲ ಯದ ಉಪನ್ಯಾಸಕಿ ಶ್ರವಣಾ ಶಿಕ್ಕೇರಿಮಠ ನೇಕಾರ ಸೊಸಾಯಿಟಿ ಸದಸ್ಯೆ ಅಂಜಲಾ ಮಾರಾ ಹುನಗುಂದ ವಿ.ಮ ಬ್ಯಾಂಕ್ ನಿರ್ದೇಶಕಿ ಶಕುಂತಲಾ ಬೆಲ್ಲದ ಸೇರಿದಂತೆ ಇತರರನ್ನು ಗೌರವ ಸನ್ಮಾನ ಸ್ವೀಕರಿಸಿದರು.

ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಮಾಟೂರ, ಸಾಹಿತಿ ಎಚ್.ಭೀಮರಾವ ವಾಷ್ಠರ, ಹಿರಿಯ ಪತ್ರಕರ್ತ ಮಹಾಂತೇಶ ಗೊರಜನಾಳ, ಮೋತಿಲಾಲ ಕಾಮಬಳೇಕರ, ಕಳಕಪ್ಪ ಅಂಗಡಿ, ಚಂದ್ರಶೇಖರ ಮಾಗಿ, ಸೂಗಪ್ಪ ಪತ್ತಾರ, ಯುವ ಲೇಖಕ ವಿಜಯದಾಸ ರಾಕಿ ಪಡ್ನೇಕರ್, ಮಲ್ಲಯ್ಯ ಗಣಾಚಾರಿ, ಸಂಗಣ್ಣ ಗದ್ದಿ, ವೈಶಾಲಿ ಘಂಟಿ, ವಿಜಯಲಕ್ಷ್ಮಿ ಹರಿಹರ ಇದ್ದರು.

ನೇಕಾರ ಸೊಸಾಯಿಟಿ ಸದಸ್ಯೆ ಅಂಜಲಾ ಮಾರಾ ಹುನಗುಂದ ವಿ.ಮ ಬ್ಯಾಂಕ್ ನಿರ್ದೇಶಕಿ ಶಕುಂತಲಾ ಬೆಲ್ಲದ ಸೇರಿದಂತೆ ಇತರರನ್ನು ಗೌರವ ಸನ್ಮಾನಿಸಲಾಯಿತು.

ಗುಳೇದಗುಡ್ಡ: ಕಚೇರಿಗಳೇ ಇಲ್ಲ, ಹೆಸರಿಗಷ್ಟೇ ನಾಮಫಲಕಗಳು

ಹುಚ್ಚೇಶ ಯಂಡಿಗೇರಿ, ಗುಳೇದಗುಡ್ಡ

ಯಾರಾದರೂ ಬೋರ್ಡ್ ನೋಡಿ ಕಚೇರಿ ಎಲ್ಲಿದೆ ಎಂದು ಹುಡುಕಾಡಿದರೆ ಅದು ಸಿಗುವುದೇ ಇಲ್ಲ, ಏಕೆಂದರೆ ಇಲ್ಲಿ ಬೋರ್ಡ್‌ಗಳಿವೆ, ಕಚೇರಿಗಳೇ ಇಲ್ಲ..!

ಹೌದು, ಇದು ಗುಳೇದಗುಡ್ಡ ತಾಲೂಕಿನ ಸ್ಪೆಷಲ್. ಹೊಸಬರು ಬೋರ್ಡ್ ನೋಡಿ ಕಚೇರಿಯಿದೆ ಎಂದು ಗಂಟೆಗಟ್ಟಲೇ ಹುಡುಕಾಡಿದ ಪ್ರಸಂಗಗಳಿವೆ. ಏಕೆಂದರೆ ಪಟ್ಟಣದಲ್ಲಿ ಹತ್ತಾರು ಕಡೆ ನಾಮಫಲಕಗಳನ್ನು ಇಲಾಖೆಗಳು ಹಾಕಿವೆ. ಆದರೆ, ಅಲ್ಲಿ ಕಚೇರಿಗಳೇ ಇರುವುದಿಲ್ಲ. ಹೆಸರಿಗಷ್ಟೇ ನಾಮಫಲಕಳು ರಾರಾಜಿಸುತ್ತವೆ. ಕಚೇರಿಗಳು ಇಲ್ಲ.

ನೂತನ ತಾಲೂಕು ಕೇಂದ್ರವಾದಾಗ ಬಾದಾಮಿಯಲ್ಲಿದ್ದ ಇಲಾಖೆಯ ನಾಮಫಲಕಗಳನ್ನು ತರಾತುರಿಯಲ್ಲಿ ತಂದು ಗುಳೇದಗುಡ್ಡ ಪಟ್ಟಣದ ಹಲವಾರು ಕಡೆ ಹಾಕಿ ಹೋಗಿದ್ದಷ್ಟೇ. ಆದರೆ, ಅಲ್ಲಿ ಕಚೇರಿಗಳೇ ಪ್ರಾರಂಭವಾಗಲಿಲ್ಲ. ಜನ ಮಾತ್ರ ನಾಮಫಲಕ ನೋಡಿ ಕಚೇರಿ ಹುಡುಕುವುದೇ ಒಂದು ಕೆಲಸವಾಗಿ ಬಿಟ್ಟಿದೆ. ಇದಕ್ಕೆ ಹೊಣೆ ಯಾರು?

ಪ್ರಾರಂಭವಾದ ಇಲಾಖೆಗಳು:

2018ರಲ್ಲಿ ನೂತನ ತಾಲೂಕೇನೋ ಆಯಿತು. ಸುಮಾರು 8 ವರ್ಷ ಗತಿಸಿದರೂ ಕಚೇರಿಗಳು ಪ್ರಾರಂಭವಾಗಿಲ್ಲ. ಕಚೇರಿಗಳೆಂದರೇ ತಹಸೀಲ್ದಾರ್ ಕಚೇರಿ, ತಾಪಂ ಇಒ ಕಾರ್ಯಾಲಯ, ಸ.ಕಾ.ನಿ.ಎಂಜಿನಿಯರ್ ಹೆಸ್ಕಾಂ. ಎಂ.ಎಲ್.ಬಿ.ಸಿ ಕಚೇರಿ, ಉಪ ನೋಂದಣಾಧಿಕಾರಿ, ಖಜಾನೆ ಕಚೇರಿ, ಹೀಗೆ ಕೇವಲ 6 ಕಚೇರಿಗಳು ಮಾತ್ರ ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಗುಳೇದಗುಡ್ಡ ಪಟ್ಟಣದಲ್ಲಿ ಕಚೇರಿ ಇಲ್ಲದೇ ಕೇವಲ ನಾಮಫಲಕ ಕಾಣುತ್ತಿರುವುದು.

ಬರಬೇಕಾದ ಇಲಾಖೆಗಳು:

ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಸಹಾಯಕ ಕಾರ್ಯಪಾಲಕರು ಗ್ರಾ.ಕು.ನೀ.ಸ. ಇಲಾಖೆ, ಎಇಇ ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಸಹಾಯಕ ಕೃಷಿ ನಿರ್ದೇಶಕರು, ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಭೂ ಮಾಪನ ವಿಭಾಗ, ಹಿರಿಯ ಸಹಾಯಕ ತೋಟಗಾರಿಕೆ, ಲೋಕೋಪಯೋಗಿ ಇಲಾಖೆ ವಿಭಾಗ, ವಲಯ ಅರಣ್ಯ ಇಲಾಖೆ, ಸಮಾಜ ಕಲ್ಯಾಣ ಅಧಿಕಾರಿಗಳು, ತಾಲೂಕು ವೈದ್ಯಾಧಿಕಾರಿಗಳು, ಪಶುಸಂಗೋಪನಾ ಇಲಾಖೆ, ಬಿಸಿಎಂ ಇಲಾಖೆ, ಆರಕ್ಷಕ ವೃತ್ತ ಅಧಿಕಾರಿಗಳು, ಶಿಶು ಅಭಿವೃದ್ಧಿ ಅಧಿಕಾರಿಗಳು, ಅಕ್ಷರ ದಾಸೋಹ ಅಧಿಕಾರಿ, ಅಬಕಾರಿ ನಿರೀಕ್ಷಕರು, ಮೀನುಗಾರಿಕೆ ಇಲಾಖೆ, ಕಾರ್ಮಿಕ ನಿರೀಕ್ಷಕರು ಸೇರಿ ಒಟ್ಟು 23 ಇಲಾಖಾ ಕಚೇರಿಗಳು ಇಲ್ಲಿ ಆರಂಭವಾಗಬೇಕಿದೆ. ಇವು ಇಲ್ಲದ ಕಾರಣ ಗುಳೇದಗುಡ್ಡ ತಾಲೂಕಿನ 38 ಗ್ರಾಮಗಳ ಜನರು ಮತ್ತೆ ಬಾದಾಮಿಗೆ ಅಲೆದಾಡುವಂತಾಗಿದೆ.

ಕಚೇರಿಗಳು ಶುರುವಾಗಲಿ :

ಶಿಕ್ಷಕರು, ರೈತರು, ವಿದ್ಯಾರ್ಥಿಗಳು, ಕಾರ್ಮಿಕರು, ಸಾರ್ವಜನಿಕರು ಪ್ರತಿಯೊಂದು ಕೆಲಸ-ಕಾರ್ಯಗಳಿಗೂ ಬಾದಾಮಿಗೆ ಹೋಗಬೇಕಿದೆ. ಯಾಕಾದರೂ ಗುಳೇದಗುಡ್ಡ ತಾಲೂಕು ಕೇಂದ್ರವಾಗಿದೆ ಎಂದು ಜನತೆ ಹಿಡಿಶಾಪ ಹಾಕುವಂತಾಗಿದೆ. ಶಾಸಕರು ತಕ್ಷಣ ಎಲ್ಲ ಕಚೇರಿಗಳನ್ನು ಪ್ರಾರಂಭಿಸಲು ಕ್ರಮಕ್ಕೆ ಮುಂದಾಗಬೇಕು ಎನ್ನುತ್ತಾರೆ ತಾಲೂಕಿನ ಜನತೆ.

> **ಅಂದಾಜು 25 ಕಚೇರಿಗಳಿರಬೇಕಾದ ತಾಲೂಕು ಕೇಂದ್ರ ಗುಳೇದಗುಡ್ಡದಲ್ಲಿರುವದು ಕೇವಲ ಐದು ಕಚೇರಿಗಳು ಮಾತ್ರ. 38 ಗ್ರಾಮಗಳ ಶಾಲಾ ಮುಖ್ಯಸ್ಥರು ತಮ್ಮ ಶೈಕ್ಷಣಿಕ ಕೆಲಸಗಳಿಗಾಗಿ ಬದಾಮಿಗೆ ಅಲೆದಾಡುವುದು ಇನ್ನೂ ತಪ್ಪಿಲ್ಲ.ಎರಡು ವರ್ಷಗಳ ಹಿಂದೆ ವ್ಯಕ್ತಿಯೊಬ್ಬರು ಹೈಕೋರ್ಟ್ ಮೊರೆ ಹೋಗಿದ್ದರು. ಪೂರ್ಣ ಪ್ರಮಾಣದ ಕಚೇರಿಗಳು ಸ್ಥಾಪನೆಯಾಗದಿದ್ದರೆ, ಹೊಸ ತಾಲೂಕುಗಳನ್ನೇ ರದ್ದುಪಡಿಸಿಬಿಡಿ ಎಂದು ಹೈಕೋರ್ಟ್ ಚಾಟಿ ಬೀಸಿತ್ತು. ಸರಕಾರ ಈಗಲಾದರೂ ಎಚ್ಚೆತ್ತು ಬಜೆಟ್‌ನಲ್ಲಿ ಹಣ ತೆಗೆದಿರಿಸಬೇಕು.**
>
> **-ಅಶೋಕ ಹೆಗಡೆ,**
> **ತಾಲೂಕು ಹೋರಾಟ ಸಮಿತಿ, ಗುಳೇದಗುಡ್ಡ,**

> **ಗುಳೇದಗುಡ್ಡ ತಾಲೂಕಿಗೆ ನಮ್ಮ ಹಳ್ಳಿ ಸೇರಿಸಿದ್ದಾರೆ. ಆದರೆ ಕೆಲಸಗಳು ಮಾತ್ರ ಇನ್ನೂ ಬಾದಾಮಿ ತಾಲೂಕಿನಲ್ಲಿಯೇ ನಡೆಯುತ್ತವೆ. ಇಂತಹ ಗೊಂದಲ ನಮಗೆ ಬೇಡ, ಗುಳೇದಗುಡ್ಡದಲ್ಲಿ ಅದಷ್ಟು ಬೇಗ ಕಚೇರಿಗಳು ಪ್ರಾರಂಭವಾಗಬೇಕು.**
>
> **-ಶರಣಪ್ಪ ಗೊರವರ,**
> **ಜಾನ್ ಗೌಡರ, ಕಟಗಿನಹಳ್ಳಿ**

ಪುಸ್ತಕ ಮೇಳಕ್ಕೆ ಕಾಶಪ್ಪನವರ ಭೇಟಿ

ಇಳಕಲ್ಲ: ಕರ್ನಾಟಕ ರಾಜ್ಯ ಸರಕಾರದ ವತಿಯಿಂದ ವಿಧಾನಸೌಧದಲ್ಲಿ ಆಯೋಜಿಸಿ ದ್ದ ಪುಸ್ತಕ ಮೇಳದಲ್ಲಿ ಹುನಗುಂದ ಮತಕ್ಷೇ ತ್ರದ ಶಾಸಕ ವಿಜಯಾನಂದ ಕಾಶಪ್ಪನವರ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿ ಹಲವಾರು ಕನ್ನಡ ಪುಸ್ತಕಗಳನ್ನು ಖರೀದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಕನ್ನಡ ಭಾಷೆ ಹೃದಯದಿಂದ ಆಡುವ ಭಾಷೆಯಾಗಿದೆ. ಎಂಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡ ಭಾಷೆಗೆ ಸಿಕ್ಕಿದೆ ಎಂದರೆ ಕನ್ನಡ ಭಾಷೆ ಎಷ್ಟು ಸಾಹಿತ್ಯಮಯವಾಗಿದೆ ಎಂದು ತಿಳಿಯುತ್ತದೆ. ಕನ್ನಡ ನಾಡು ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ತಿಳಿಯಬೇಕು ನಾವು ಪ್ರಬುದ್ಧರಾಗಬೇಕು ಎಂದರೆ ಕನ್ನಡ ಪುಸ್ತಕಗಳನ್ನು ಓದಬೇಕು.ಕನ್ನಡ ಸಾಹಿತ್ಯ ಉಳಿಯಬೇಕು ಎಂದರೆ ಪ್ರತಿಯೊಬ್ಬರು ಪುಸ್ತಕಗಳನ್ನು ಖರೀದಿಸಿ ಓದಬೇಕು ಎಂದು ಹೇಳಿದರು.

ಚಿತ್ತವಿಹಾರ

ಆಲಿಸುವುದನ್ನು ಕಲಿಯಿರಿ

● ನಿಂಗಮ್ಮ ಭಾವಿಕಟ್ಟಿ ಹುನಗುಂದ

ನಮ್ಮ ದೇಹದ ರಚನೆಯನ್ನು ಒಮ್ಮೆ ಅವಲೋಕಿಸಿಕೊಳ್ಳೋಣ. ಪುಟ್ಟ ಕಣ್ಣುಗಳಿಂದ ಇಡೀ ಪ್ರಪಂಚವನ್ನೇ ಕಣ್ತುಂಬಿಕೊಳ್ಳಬಹುದಾದ ಅದ್ಭುತ ರಚನೆ ಒಂದು ಬಾಯಿ ಎರಡು ಕಿವಿ ಯಾಕಿರಬಹುದು? ಹಾಡುವ ಎರಡು ಪಟ್ಟು ಆಲಿಸಲಿ ಎಂದಿರಬಹುದಲ್ಲವೇ? ಆಲಿಸುವಿಕೆಯು ಒಬ್ಬ ಉತ್ತಮ ಮಾತುಗಾರಿಕೆಯನ್ನು ಬೆಳೆಸಬಲ್ಲದು ಮಾತಾಡುವುದು ಅದರಲ್ಲೂ ಸ್ವರತಿ ಮಾನವನ ಅತ್ಯಂತ ಆಸಕ್ತಿದಾಯಕ ಮತ್ತು ಸಂತಸ ಕೊಡುವ ಅಭ್ಯಾಸ. ಆಲಿಸುವವರಾರು ಅವರಿಗೆ ತನ್ನ ಮಾತುಗಳಿಂದ ಆಗುವ ಪ್ರಯೋಜನವೇನು ಪರಿಣಾಮವೇನು ಅಲೋಚಿಸಬೇಕು.

ಶ್ರೀ ಸಿದ್ದೇಶ್ವರ ಶ್ರೀಗಳ ಪ್ರವಚನವನ್ನು ಇಲ್ಲಿ ನೆನೆಯಬೇಕು. ಅವರು ತೂಕದ ಮಾತುಗಳನ್ನು ಆಡುವ ಮುನ್ನ ತುಂಬಾ ಅಂದ್ರೆ ತುಂಬಾ ಮೆಲ್ಲಗೆ ಮಾತು ಆರಂಭಿಸುತ್ತಾರೆ. ಅವರೇನು ಹೇಳುತ್ತಾರೆ ಎಂದು ಕುಳಿತವರೆಲ್ಲ ಮೈಯಲ್ಲ ಕಿವಿಯಾಗಿಸಿಕೊಂಡು ಆಲಿಸಲು ತಮ್ಮನ್ನು ಇಡಿಯಾಗಿ ಸಿದ್ದಪಡಿಸಿಕೊಂಡಾಗ ಶ್ರೀಗಳ ಮಾತಿನ ತೀವ್ರತೆ ಹೆಚ್ಚಾಗುತ್ತದೆ. ಹೇಳಿದ್ದನ್ನು ಹೇಳಿದ ನಂತರ, ಮತ್ತೆ ಹರಿವು ನಿಧಾನವಾಗಿ ನಿಂತುಬಿಡುತ್ತದೆ. ಅಲ್ಲಿಗೆ ನೆರೆದವರೆಲ್ಲರ ಜೀವ ಭಾವ ಪರಿಶುದ್ಧ ಸಾರ್ಥಕವಾಗುತ್ತದೆ.

ಆಲಿಸುವುದರ ಅಗತ್ಯಗಳನ್ನು ಹೀಗಿ ಪಟ್ಟಿ ಮಾಡಬಹುದು.

- ಹೆಚ್ಚು ಸೂಕ್ಷ್ಮ ಮತಿಗಳಾಗುತ್ತೇವೆ ಮತ್ತು ತೀಕ್ಷ್ಣ ಮತಿಗಳಾಗುತ್ತವೆ
- ಕೆಲವೊಮ್ಮೆ ಆಲಿಸುವಿಕೆಯಿಂದ ಇನ್ನೊಬ್ಬರಿಗೆ ಎಷ್ಟು ಆರಾಮ ಮತ್ತು ನೆಮ್ಮದಿ ಕೊಡಬಲ್ಲೆವೆಂದರೆ ಅವರಿಗೆ ಎಲ್ಲಿಂದಲೋ ದುಡ್ಡು ಬಂದರೂ ಅಷ್ಟು ಆನಂದವಾಗಿರುವುದಿಲ್ಲ.
- ಮೊದಲು ನಮ್ಮೆದೆ ಬಡಿತ, ಉಸಿರಾಟದ ಏರಿಳಿತಗಳನಾಲಿಸಿ ನಂತರ ಪ್ರಕೃತಿಯ ಮಾತು ಅರ್ಥವಾಗುತ್ತದೆ.

ಬೇರೆಯವರ ಮಾತುಗಳನ್ನು, ನೋವುಗಳನ್ನು ಬೇಗುದಿಗಳನ್ನು ತಾಳ್ಮೆಯಿಂದ ಆಲಿಸುವುದು ಒಂದು ಕಲೆ, ಒಂದು ಕರ್ತವ್ಯ. ತಾಳ್ಮೆಯ ಆಲಿಸುವಿಕೆಯು ಒಂದು ಅದ್ಭುತ ಚಿಕಿತ್ಸೆಯಂತೆ ಕೆಲಸ ಮಾಡುತ್ತದೆ. ನೋವಿನ ಒಂದು ಜೀವದ ಕೆಲವು ಮಾತುಗಳನ್ನು ನಾವು ಆಲಿಸಿದರೆ, ಆ ವ್ಯಕ್ತಿಯ ನೋವು ಕಡಿಮೆಮಾಡಿದಂತೆ. ಆಪ್ತ ಸಮಾಲೋಚಕರ ಮೊದಲ ಮಂತ್ರವೇ ಆಲಿಸುವಿಕೆ. ಅಂದ ಹಾಗೆ ನಾವು ಅದೆಷ್ಟು ಜನರ ಮನಸುಗಳನ್ನು ನೋವುಗಳನ್ನು ಆಲಿಸಿಕೊಂಡಿದ್ದೇವೆ? ಬೇರೆಯವರ ಮಾತುಗಳಿಗೆ ನಿಮ್ಮ ಕಿವಿಯನ್ನು ಕೊಡಿ, ತಾಳ್ಮೆಯಿಂದ ಕೇಳಿಸಿಕೊಳ್ಳಿ. ಅದೊಂದು ಸಂಜೀವಿನಿಯಂತೆ ಕೆಲಸಮಾಡಬಲ್ಲದು.

ಪುಸ್ತಕ ಲೋಕ

ಬೆರಕೆ ಸೊಪ್ಪು

ಕನ್ನಡದ ಪ್ರಸಿದ್ಧ ಕಥೆಗಾರರಾದ ಕೇಶವ ರೆಡ್ಡಿ ಹಂದ್ರಾಳ ಅವರ ಪ್ರಬಂಧ ಸಂಕಲನ, 'ಬೆರಕೆ ಸೊಪ್ಪು' ಇದನ್ನು ನಾಡಿನ ಪ್ರಸಿದ್ಧ ಪ್ರಕಾಶಕರಾದ ಸಪ್ನ ಬುಕ್ ಹೌಸ್ ಇವರು ಪ್ರಕಟಿಸಿದ್ದಾರೆ. ಗ್ರಾಮೀಣ ಬದುಕಿನ ಅನುಭವಗಳು, ಸಂವೇದನೆಗಳು ಮತ್ತು ಆ ಮೂಲಕ ಸರಳ ಬದುಕಿನ ಮೌಲ್ಯಗಳನ್ನು ಕಟ್ಟಿಕೊಡುವ ಈ ಪ್ರಬಂಧಗಳು ಒಂದು ಆಪ್ತ ಓದನ್ನು ನೀಡಬಲ್ಲವು. ಸಪ್ನ ಆನ್ ಲೈನ್ ಮೂಲಕ ಈ ಪ್ರಬಂಧ ಸಂಕಲನವು ರಿಯಾಯತಿ ದರದಲ್ಲೂ ಲಭ್ಯವಿದೆ.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್,
ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಅಯ್ಯೋ ಇದನ್ನೇನು ಮಾಡಲಿ?

● ಸಹನಾ ಪ್ರಸಾದ್

ಅಯ್ಯೋ, ಮನೆ ತುಂಬಾ ಸಾಮಾನು. ಯುಗಾದಿ ಹಬ್ಬದ ಮುನ್ನ ಬೇಡವಾದದ್ದನ್ನೆಲ್ಲ ದಾನ ಕೊಟ್ಟು ಅಥವಾ ಎಸೆದು ಮನೆಯನ್ನು ತೆರವು ಮಾಡಲೇಬೇಕು ಎಂದು ಪಣ ತೊಟ್ಟಿರುತ್ತೀರಿ. ಆದರೆ ಶುರು ಮಾಡಿದಾಗಲೇ ಅರಿವಾಗುತ್ತದೆ ಇದು ಕಷ್ಟದ ಕೆಲಸ ಎಂದು. ಯಾವುದನ್ನು ಇಟ್ಟುಕೊಳ್ಳಲಿ, ಯಾವುದು ಕೊಟ್ಟುಬಿಡಲಿ? ಎಂಬ ನಿರ್ಧಾರ ತೆಗೆದುಕೊಳ್ಳುವಷ್ಟರಲ್ಲಿ ಸುಸ್ತಾಗುತ್ತದೆ.

ಒಂಚೂರು ಬ್ರೇಕ್ ತೊಗೊಳ್ಳೋಣ ಎಂದು ಕಾಫಿ ಕಪ್ ಹಿಡಿದು ರೀಲ್ಸ್ ನೋಡಲು ಪ್ರಾರಂಭ ಮಾಡಿದರೆ, ಅಲ್ಲಿಗೆ ಅವತ್ತಿನ ಕೆಲಸ ನಿಂತಂತೆಯೇ ಸರಿ; ರೀಲ್ಸ್‌ಗಳ ಓಟ ನಿಲ್ಲುವುದಿಲ್ಲ, ಕೆಲಸ ಮುಂದುವರಿಸಲು ಮನಸ್ಸು ಬರುವುದಿಲ್ಲ! ಮುರಿದು ಹೋದ ಅಥವಾ ಈಗ ಉಪಯೋಗಕ್ಕೆ ಬಾರದ ವಸ್ತುಗಳಾದರೆ ತ್ಯಜಿಸುವುದು ಸುಲಭ. ಕಳೆದ ಮೂರು ವರ್ಷಗಳಿಂದ ಇನ್ನೂ ಬಳಸದ ಚಿತ್ರಕಲೆ ಅಥವಾ ಕಸೂತಿ ಕಿಟ್? ಸ್ವಲ್ಪ ಕಠಿಣ. ಯಾರೋ ಕೊಟ್ಟ ಉಡುಗೊರೆ? ಬೇರೆ ಎಲ್ಲಿಗೋ ದಾಟಿಸಬಹುದು. ಆದರೆ ಅಮ್ಮ ಕೊಟ್ಟ, ಈಗ ಬಣ್ಣ ಹೋಗಿರುವ ಬಾಣಂತನದ ಸ್ವೆಟರ್? ಉಹೂ, ಅದು ಇಟ್ಟುಕೊಳ್ಳಲೇ ಬೇಕು. ಪ್ರತಿ ಯೊಬ್ಬರಿಗೂ ಸ್ವಚ್ಛಗೊಳಿಸುವಿಕೆ ಬಗ್ಗೆ ಆಲಸ್ಯ ಹಾಗೂ ಭಾವನಾತ್ಮಕ ಯೋಚನೆಗಳು ಇರುತ್ತವೆ. ಅದರಿಂದ ಹೊರ ಬಂದು ಯೋಚಿಸಿದಾಗ ಈ ಕೆಲಸ ಸುಲಭವಾಗುತ್ತದೆ. ಇವನ್ನು ಈ ರೀತಿ ವಿಂಗಡಿಸಬಹುದು:

ಮಧುರ ನೆನಪಿನ ವಸ್ತು

10 ವರುಷದ ಹಿಂದೆ ಆಸೆ ಪಟ್ಟು ಹೊಲೆಸಿಕೊಂಡಿದ್ದ ಬ್ಲೌಸ್, ನಿಮ್ಮ ಮಗುವಿಗೆ ನೀವು ಕೊಂಡ ಮೊದಲ ಡ್ರೆಸ್, ಅಮ್ಮನ ಮನೆಯಲ್ಲಿ ಇದ್ದ ಆದರೆ ಈಗ ಕೆಟ್ಟು ಹೋಗಿರುವ ಟೇಪ್ ರೆಕಾರ್ಡರ್, ಹೀಗೆ ಹತ್ತು ಹಲವಾರು ವಸ್ತುಗಳ ಬಗ್ಗೆ ವ್ಯಾಮೋಹ. ನೀವು ಆ ಕಾಲದ ಜೀವನಶೈಲಿಯನ್ನು ಇಂದಿಗಿಂತ ಹೆಚ್ಚು ಇಷ್ಟಪಡುತ್ತಿದ್ದೀರಿ ಎಂಬ ಸಂದೇಶವನ್ನು ನೀಡುತ್ತದೆ. ಆದರೆ ಗಟ್ಟಿ ಮನಸ್ಸು ಮಾಡಿ, ಮುಂದೆ ಅವು ಖಂಡಿತ ಬಳಸಲು ಯೋಗ್ಯವಲ್ಲ ಎಂದು ನಿರ್ಧಾರ ತೆಗೆದುಕೊಳ್ಳಿ.

ದುಬಾರಿ ವಸ್ತುಗಳು

ನೀವು ದುಬಾರಿಬೆಲೆ ತೆತ್ತ ಡಿಸೈನರ್ ಬಟ್ಟೆಗಳು ಅಥವಾ ಬ್ಯಾಗ್‌ಗಳು, ಹಳೆಯದಾಗಿರುವ ಆದರೆ ವಿದೇಶದಿಂದ ತಂದ ಮೇಕ್‌ಅಪ್ ಅಥವಾ ಸುಗಂಧ ದ್ರವ್ಯ, ಇವೆಲ್ಲವೂ ನಿಮ್ಮ ಅಭಿರುಚಿಯ ಬಗ್ಗೆ ಹೇಳುತ್ತವೆ ಎಂದು ಅನಿಸಿ ದಾ ಗ, ಅವನ್ನು ಬೇಡವೆಂದು ಎಸೆಯುವುದು ಕಷ್ಟ. ಕೆಲವೊ ಮ್ಮೆ ಸಂಗ್ರಹಿಸುಟ್ಟುಕೊಳ್ಳುವ ಹವ್ಯಾಸವೇ ನಿಮಗೆ ತೃಪ್ತಿ ನೀಡುತ್ತದೆ. ಆದರೆ ಉಪಯೋಗಿಸಲಾಗದ ವಸ್ತುಗಳು ನಿಮ್ಮ ಮನೆಯಲ್ಲಿ ಇರುವುದು ಸರಿಯಲ್ಲ, ಅಲ್ಲವೆ?

ಸಂಗ್ರಹಿಸುವ ಮುನ್ನ ಯೋಚಿಸಿ

ನೀವು ಬದುಕುತ್ತಿರುವ ಜೀವನಕ್ಕಿಂತ, ಬದುಕಬೇಕು ಎಂದುಕೊಳ್ಳುವ ಜೀವನಕ್ಕಾಗಿ ವಸ್ತುಗಳನ್ನು ಸಂಗ್ರಹಿಸುವ ಅಥವಾ ಖರೀದಿಸುವ ಮುನ್ನ ಯೋಚಿಸಿ. ಹೊಸ ಹವ್ಯಾಸ ಶುರು ಮಾಡುವ ಮೊದಲೇ ಬೇಕಿದ್ದು, ಬೇಡವಾದದ್ದು ಖರೀದಿ ಮಾಡಬೇಡಿ. ಅವು ಹೇಗೆ ನಿಮ್ಮ ಕೈ ಹಿಡಿಯುತ್ತದೆ ಎಂದು ಅರಿಯಲು ಕೊಂಚ ಸಮಯ ಕೊಡಿ.

ಒಮ್ಮೆ ನಿಮ್ಮ ಮನೆಯಲ್ಲಿ ಕಣ್ಣಾಡಿಸಿ; ಕಪಾಟಿನ ಮೂಲೆಯನ್ನು ನೋಡಿ. ಬೇಡವಾದ ಅದೆಷ್ಟೋ ವಸ್ತುಗಳು, ಸೀರೆಗಳು, ಉಡುಗೊರೆ ವಸ್ತುಗಳು ದೂಳು ತಿನ್ನುತ್ತಾ ಬಿದ್ದಿರುತ್ತವೆ! ಗಟ್ಟಿ ನಿರ್ಧಾರ ಮಾಡಿ, ಅವುಗಳನ್ನು ತ್ಯಜಿಸಿ ಬಿಡಿ, ಬೇರೆಯವರಿಗೆ ಕೊಡಿ. ಮನಸ್ಸು ನಿರಾಳವಾಗುತ್ತದೆ!

ಬೆಲೆ ಬಾಳುವ ವಿಶಿಷ್ಟ ವಸ್ತುಗಳು

ಹೊಸ ಟೀ ಸೆಟ್, ಮೈದುನನ ಮದುವೆಗೆ ಕೊಂಡ ಎಂಬ್ರಾಯಿಡರಿ ಗಾಗ್ರಾ, ಚೋಲಿ, ಹಾಕಲೇ ಆಗದ ಆದರೆ ದುಬಾರಿ ಹೀಲ್ಸ್ ಚಪ್ಪಲಿ ಇತ್ಯಾದಿ ವಸ್ತುಗಳು ಬಳಕೆಯಾಗದೆ ಹೋದರೆ, ಅವುಗಳ ಸಾರ್ಥಕತೆಯೇನು? ನೀವು ಅವುಗಳನ್ನು ಬಳಸಿಕೊಳ್ಳಿ, ಇಲ್ಲವಾದರೆ ಮನೆಯ ಹೊರಗೆ ರವಾನಿಸಿ.

ಉಡುಗೊರೆಗಳು

ಆ ಗಾಢ ಕೆಂಪು ಸೀರೆ, ನಿಮ್ಮ ಅತ್ತೆಯ ತಂಗಿ ಕೊಟ್ಟಿದ್ದು ಉಡಲು ಸಾಧ್ಯವೇ ಇಲ್ಲದ ಇಲ್ಲ ಅಥವಾ ದೊಡ್ಡಮ್ಮ ಕೊಟ್ಟ ನಿಮ್ಮ ಹಾಸಿಗೆಗೆ ಸಾಕಾಗದ ಬೆಡ್‌ಶೀಟ್? ಇಟ್ಟುಕೊಳ್ಳುವುದು ಅಸಾಧ್ಯ: ಅಂಥಹವುಗಳನ್ನು ಬೇಕಾದವರಿಗೆ ಕೊಟ್ಟುಬಿಡಿ!

ಟೋಪಿ ಹಾಕಿಸಿದ ವಸ್ತುಗಳು

ಮನೆಯ ಮುಂದೆ ಬಂದ ಗಾಡಿಯಲ್ಲಿ ಒಂದಕ್ಕೆರಡು ಬೆಲೆ ಕೊಟ್ಟು ತೊಗೊಂಡ ಸಣ್ಣ ಸ್ಟ್ಯಾಂಡ್, ಎಕ್ಸಿಬಿಷನ್‌ಗೆ ಹೋದಾಗ ಕೊಂಡ ಆಲಂಕಾರಿಕ ವಸ್ತುಗಳು, ದುಬಾರಿ ಬೆಲೆ ತೆತ್ತ ಡಬ್ಬಾ ಸೀರೆ – ಹೀಗೆ ನಮ್ಮ ಮೂರ್ಖತನ ಎತ್ತಿ ತೋರುವ ವಸ್ತುಗಳಿಗೆ ಮನೆಯಾಚೆಯ ದಾರಿ ತೋರಿಸಿ.

ನಿಮ್ಮ ಮನೆಯಲ್ಲೇ ಸುತ್ತ ಒಮ್ಮೆ ಕಣ್ಣು ಹಾಯಿಸಿ; ಬೇಡವಾದ ವಸ್ತುಗಳಲ್ಲಿ ಅಲ್ಲಲ್ಲಿ, ಕಪಾಟಿನ ಒಳಗೆ ದೂಳು ತಿನ್ನುತ್ತಾ ಕುಳಿತಿರುತ್ತವೆ. ಅವುಗಳನ್ನು ವ್ಯವಸ್ಥಿತವಾಗಿರಿಸಬ ೇಕೆಂದುಕೊಂಡರೂ ಆಗುತ್ತಿಲ್ಲ! ಆದರೆ ಅವುಗಳನ್ನು ಅಲಕ್ಷ್ಯ ಮಾಡುವುದು, ಎಸೆಯುವುದಕ್ಕಿಂತ ಸುಲಭ. ಆದರೆ ಅವೆಲ್ಲವೂ ಸೇರಿ ನಿಮ್ಮ ತಲೆ ಕೆಡಿಸುವ ದಿನಗಳು ಬೇಗ ಬರುತ್ತದೆ! ಅದಕ್ಕೂ ಮುಂಚೆ, ಯಾವುದು ಬೇಕು, ಯಾವುದು ಬೇಡ ಎಂದು ಯೋಚಿಸಿ, ಗಟ್ಟಿ ನಿರ್ಧಾರ ತೆಗೆದುಕೊಂಡು, ಬೇಡವಾದವುಗಳನ್ನು ಎಸೆಯುವುದು ಅಥವಾ ಬೇರೆಯವರಿಗೆ ಕೊಟ್ಟುಬಿಡುವುದು ಕ್ಷೇಮ.

ಬೇಡದ ವಸ್ತುವನ್ನು ತ್ಯಜಿಸಿ ಬಿಡಿ!

ಮೂರು ಕ್ಷೇತ್ರಗಳ ದರ್ಶನ

● ಎ.ಕಳಸೇಶ್ವರ

ಹೊಸ ವರ್ಷ ಪ್ರಾರಂಭವಾಗುತ್ತಿದ್ದಂತೆ, ಮಹಾಕುಂಭ ಮೇಳದ ಕುಂಭ ತಲೆಯಲ್ಲಿ ಓಡಾಡಲು ಶುರು. ಹೊರಡೋಣ ಎಂದು ನಿರ್ಧರಿಸಿ, ರೈಲಿನ ಏಸಿ ಕೋಚ್ ನಲ್ಲಿ ಬುಕ್ ಮಾಡಿದಾಗ ವೆಯ್ಟಿಂಗ್ ಲಿಸ್ಟ್! ಮೈಸೂರಿನಿಂದ ವಾರಣಾಸಿಗೆ ಬೆಳಗಿನ 7.30 ಸಮಯಕ್ಕೆ ರೈಲು ಹೊರಡುವುದಾದರೆ ಆ ದಿನ ಬೆಳಿಗ್ಗೆ 4 ಗಂಟೆಗೆ ಚಾರ್ಟ್ ಹಾಕಿದಾಗಲೇ ಸೀಟಿನ ವಿಚಾರ ಗೊತ್ತಾಗುವುದು! ಕೊನೆಗೂ ಸೀಟ್ ಕನ್ಫರ್ಮ ಆಯಿತು!

ಎರಡು ದಿನದ ರೈಲು ಪ್ರಯಾಣ ಹೇಗೆ ಕಳೆಯಿತೆಂದೇ ಗೊತ್ತಾಗ್ಲಿಲ್ಲ. ಎಲ್ಲಿ ನೋಡಿದರೂ ಮೇಳಕ್ಕೆ ಹೋಗುವ ಹಲವಾರು ಗುಂಪು, ಮಂಡಳಿ, ಸಂಸ್ಥೆಯ ತಂಡಗಳು. ದಾರಿಯುದ್ದಕ್ಕೂ ವಿಚಾರ ವಿನಿಮಯ, ತೊಂದರೆಯಾದಲ್ಲಿ ನಮ್ಮಲ್ಲಿಗೆ ಬನ್ನಿ ಎಂಬ ಆತ್ಮೀಯ ಆಹ್ವಾನ. ವಾರಣಾಸಿಯಲ್ಲಿಳಿದು ನಗರದಿಂದ ಹೊರ ವಲಯದ ಹೋಟೆಲ್ ವಾಸ್ತವ್ಯ. ಕಾಶಿ ವಿಶ್ವನಾಥ, ವಿಶಾಲಾಕ್ಷಿಯರ ದರ್ಶನ ಅಷ್ಟು ಸುಲಭವಾಗಿರಲಿಲ್ಲ. ಯಾವ ಗಲ್ಲಿ ನೋಡಿದರೂ ಎಲ್ಲ ಕಡೆ ಸರತಿ ಸಾಲುಗಳೇ. ಹೊಸದಾಗಿ ನಿರ್ಮಿಸಿದ ಕಾಶಿ ಕಾರಿಡಾರ್ ನಿಂದ ಪ್ರವೇಶಿಸುತ್ತೇನೆಂದರೆ ಅಲ್ಲಿ ರಾತ್ರಿಯೇ ಬಂದು ಟೋಕನ್ ತೆಗೆದುಕೊಂಡು ಕಾಯುತ್ತಿರುವವರ ಸಾಲು. ಕೊನೆಗೆ ಸಂಜೆಯ ಗಂಗಾರತಿಯನ್ನಾದರೂ ನೋಡೋಣವೆಂದು ದೋಣಿ ಏರಿದೆವು. ಈ ಗಂಗಾ ನದಿಯ ಹರಿವಿನಲ್ಲಿ ಲೆಕ್ಕವಿಲ್ಲದಷ್ಟು ದೋಣಿ, ಅಷ್ಟೇ ನೀರಿನಲ್ಲಿ ಹರಿಯ ಬಿಟ್ಟ ದೀಪ ರಾಶಿ.

ಅಂತೂ ವಿಶ್ವನಾಥನ ದರ್ಶನವಂತೂ ಆಯಿತು. ಎರಡು ದಿನಗಳ ಕಾಶಿವಾಸದ ನಂತರ ಪ್ರಯಾಗ್ ರಾಜ್‌ಗೆ ಪ್ರಯಾಣಿಸಿ ಅಲ್ಲಿನ ವಾಹನ ನಿಲುಗಡೆ ಜಾಗ ತಲುಪುವಾಗ ಸಂಜೆ ನಾಲ್ಕಾಗಿತ್ತು. ಮುಂದೆ ಇ-ರಿಕ್ಷಾ ಅಥವ ಬೈಕ್ ಟ್ಯಾಕ್ಸಿ. ಅದೂ ಕೂಡ ಕೆಲವು ಸೀಮಿತ ಜಾಗದವರೆಗೆ. ಮತ್ತೆ ಕಾಲ್ನಡಿಗೆಯೇ.

ಗಂಗೆಯಲ್ಲಿ ಸ್ನಾನ

ನಾವು ಗಂಗಾಸ್ನಾನಕ್ಕೆ ಆರಿಸಿಕೊಂಡ ತಟ ಅಷ್ಟೇನೂ ಜನನಿಬಿಡವಾಗಿರಲಿಲ್ಲ. ಎಲ್ಲ ಕಡೆಗಳಲ್ಲು ಜಾಸ್ತಿ ಆಳಕ್ಕೆ ಹೋಗದಂತೆ ಪ್ಲಾಸ್ಟಿಕ್ ತುಂಡುಗಳ ತಡೆಗೋಡೆ. ಬಟ್ಟೆ ಬದಲಾಯಿಸಲು ಸೂಕ್ತ ವ್ಯವಸ್ಥೆ. ಆ ಜನಸಾಗರದಲ್ಲಿ ಯಾರನ್ನೇ ನೋಡುವ, ಯಾವುದೇ ಆಶ್ರಮ, ಸಾಧು ಸನ್ಯಾಸಿ, ಸತ್ಸಂಗ, ಅವರ ಆಶ್ರಮಗಳನ್ನು ಸಂದರ್ಶಿಸುವ ತಾಳ್ಮೆಯೂ ಇರುವುದಿಲ್ಲ. ಅದಕ್ಕೆಲ್ಲಾ ನಾಲ್ಕಾರು ದಿನ ಉಳಿಯುವ ನಿರ್ಧಾರ ಮೊದಲೇ ಮಾಡಿಕೊಂಡು ಬಂದರೆ ಸಾಧ್ಯ. ಒಂದೆರಡು ಗಂಟೆಗಳಲ್ಲೆ ನಮ್ಮ ಗಂಗಾಸ್ನಾನ ಕಾರ್ಯ ಮುಗಿದು ಪುನಃ ನಮ್ಮ ವಾಹನ ಹುಡುಕಾಟ. ಕೊನೆಗೊಮ್ಮೆ ಊರಾಚೆಯ ಹೋಟೆಲ್‌ನಲ್ಲಿ ಊಟ ಮಾಡಿ ಇರಿಕ್ಷಾದಲ್ಲಿ ಪ್ರಯಾಗ್ ರಾಜ್ ರೈಲ್ವೇ ಸ್ಟೇಷನ್‌ಗೆ ಪ್ರಯಾಣ.

ಯಾವುದೊ ವಿಶೇಷ ರೈಲು ಅಯೋಧ್ಯೆಗೆ ತೆರಳುತ್ತಿದೆಯೆಂದು ಕೂಡಲೇ ಟಿಕೆಟ್ ಕೊಂಡು ಹೋದರೆ ಅಲ್ಲಿ ಕಾಲಿಡಲೂ ಜಾಗವಿಲ್ಲವೆಂಬಷ್ಟು ರಶ್. ಅಂತೂ ಕೊನೆಗೊಮ್ಮೆ ಹೇಗೊ ನುಗ್ಗಿ ಅರ್ಧ ದೂರದ ನಂತರ ಸೀಟೂ ಸಿಕ್ತು. ಆದರೆ 4 ಗಂಟೆಗಳ ಪ್ರಯಾಣ 7 ಗಂಟೆ ಆಯಿತು. ಬೆಳಿಗ್ಗೆ 9.30 ಕ್ಕೆ ಅಯೋಧ್ಯೆ ತಲುಪಿ ಶ್ರೀರಾಮನ ದರ್ಶನ ಅಷ್ಟು ಸುಲಭವಲ್ಲವೆಂದೆನಿಸಿದರೂ ಸಾಧ್ಯವಾಯಿತು. ಅಲ್ಲಿಂದ ನಮ್ಮ ಮುಂದಿನ ಗಮ್ಯಸ್ಥಾನ ನಾಗ್ಪುರಕ್ಕೆ ಹೋಗೋಣವೆಂದು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ದೇವರ ಮೇಲೆ ಭಾರ ಹಾಕಿ ದುಡ್ಡು ಕೊಟ್ಟು ವಾಪಸ್ ಇನ್ಯಾರೊ ಬಂಧುಮಿತ್ರರ ಸಹಾಯದಿಂದ ಒಂದು ರಾತ್ರಿಯ ಮಟ್ಟಿಗೆ ಅಯೋಧ್ಯೆಯಲ್ಲುಳಿದು, ಮರುದಿನ ವಿಶದವಾಗಿ ಶ್ರೀರಾಮ, ಹನುಮನ ದರ್ಶನ ಮಾಡಿ ಎಷ್ಟು ಬೇಗ ಹೊರಡೋಣವೆಂದರೂ ಕಾಲ್ನಡಿಗೆಯಲ್ಲೇ ಸಮಯ ಕಳೆಯುತ್ತದೆ. ಅಷ್ಟರಲ್ಲಿ ಗೊತ್ತಾಯ್ತು ಸುಮಾರು 300 ಕಿ.ಮೀ.ನಷ್ಟು ಟ್ರಾಫಿಕ್ ಜ್ಂ ಅಂತೆ!ಅಯೋಧ್ಯೆಯಿಂದ ಟ್ಯಾಕ್ಸಿ ಹಿಡಿದೆವು; 65 ಕಿ.ಮೀ.ಪ್ರಯಾಣಕ್ಕೆ 4 ಗಂಟೆ ತಗುಲಿತು. ಸುಲ್ತಾನ್ ಪುರದ ನಮ್ಮ ಬಸ್ಸಿನ ಕಛೇರಿಯಲ್ಲಿ ಕೇಳಿದರೆ, ಬಸ್ ಈಗ ಬರುತ್ತೆ...ಈಗ ಬರುತ್ತೆ ಎಂದರು. ಆ ಬಸ್ಸಿಗಾಗಿ ಕಾಯುತ್ತಿರುವಾಗ ಆ ಬಸ್ ಕಛೇರಿಯ ಸಹೃದಯಿ ಸಿಬ್ಬಂದಿಯೋರ್ವ ಎಲ್ಲರಿಗೂ ಊಟ ತಂದುಕೊಟ್ಟ, ಹೊಟ್ಟೆ ತುಂಬ ಊಟ ಮಾಡಿ ಮಲಗಿ, ಬೆಳಿಗ್ಗೆ ನೋಡೋಣವೆಂದ.

ಬಸ್ ಇಲ್ಲೇ ಇದೆಯಂತೆ!

ಬೆಳಿಗ್ಗೆ ಮತ್ತದೇ ಉತ್ತರ....ಬಸ್ ಇಲ್ಲೇ ಇದೆ, ಬರ್ತಾ ಇದೆ. ಇಷ್ಟೆಲ್ಲ ತಾಳ್ಮೆಯಿಂದ ಕಾಯಿದ್ದಕ್ಕೆ ಹಿಂದಿನ ದಿನ ಸಂಜೆ 7 ಗಂಟೆಗೆ ಬರಬೇಕಾದ ಬಸ್ ಮರುದಿನ ಮಧ್ಯಾಹ್ನ 12 ಗಂಟೆಗೆ ಬಂತು. ಸ್ಲೀಪರ್ ಬಸ್ ಆದ್ದರಿಂದ ಮಲಗಿದ್ದುಮಾತ್ರ ಗೊತ್ತು. ಮತ್ತೊಮ್ಮೆ ಬೆಳಿಗ್ಗೆಯ 6.30 ಕ್ಕೆ ನಾಗಪುರ ಬಂದಾಗ ಹೋದ ಜೀವ ಬಂದಂತಾಯ್ತು.

ಅದೇ ದಿನ ಸಂಜೆ ನಾಗ್ಪುರದಿಂದ ಮೈಸೂರಿಗೆ ವಾಪಸ್ ಬರುವ ರೈಲು. ಸಂಜೆ 5 ಗಂಟೆಯ ರೈಲು 7 ಗಂಟೆಗೆ ಬಂತು. ರೈಲು ಪಯಣ ಸುಗಮವಾಯಿತು.

ಕುಂಭಮೇಳದ ಜತೆಯಲ್ಲೇ, ಕಾಶಿ, ಅಯೋಧ್ಯೆಯನ್ನೂ ನೋಡಿದಾಗ, ಮನದಲ್ಲಿ ದೊರಕಿದ ಸಂತೃಪ್ತ ಭಾವವನ್ನು ಪದಗಳಲ್ಲಿ ಹೇಳಲು ಅಸಾಧ್ಯ.

ಕೋಟ್ಯಂತರ ಮಂದಿ ಸೇರುವ ಈ ಅಭೂತಪೂರ್ವ ಮೇಳವನ್ನು, ಯಾವುದೇ ಕುಂದುಕೊರತೆಯಿಲ್ಲದೆ ಏರ್ಪಡಿಸಿರುವುದು ಕಲ್ಪನೆಗೂ ನಿಲುಕಲಾರದ್ದು. ಪೋಲೀಸರಂತೂ ಯಾವುದೇ ರೀತಿಯ ತಾಳ್ಮೆ ಕಳೆದುಕೊಳ್ಳುತ್ತಿರಲಿಲ್ಲ. ಎಲ್ಲರಿಗೂ ಬೇಗ ದರ್ಶನ ಪಡೆದು ಮುಂದಿನ ಗಮ್ಯ ಸೇರುವ ಒಂದೇ ತುಡಿತ, ಮುಖ್ಯ ಉದ್ದೇಶ, ಪ್ರಯಾಗ್ ನಲ್ಲಿ ಗಂಗಾಸ್ನಾನವಾದರೂ, ಹತ್ತಿರದಲ್ಲೇ ಕಾಶಿ, ಅಯೋಧ್ಯ ಇದ್ದುದರಿಂದ ಅವೆರಡೂ ಕ್ಷೇತ್ರ ದರ್ಶನ ಎಲ್ಲರ ಚಿತ್ತ. ಈ ಅಪೂರ್ವ ಘಟನೆಗೆ ಸಂಬಂಧಿಸಿದ ಎಲ್ಲ ಜನತೆಯೂ ಅಭಿನಂದಾರ್ಹರು. ನಾವೂ ಅಷ್ಟೆ, ಯಾವುದೇ ನಿರ್ದಿಷ್ಟ ಪೂರ್ವ ತಯಾರಿ ಇಲ್ಲದೇ, ಎಲ್ಲೂ ಯಾವುದೇ ರೀತಿಯ ಹೆಚ್ಚಿನ ತೊಂದರೆಯಲ್ಲದೆ ಮೂರೂ ಕ್ಷೇತ್ರಗಳನ್ನು ಸಂದರ್ಶಿಸಿದೆವಲ್ಲ ಎಂಬ ಸಂತೃಪ್ತಿ. ಶತಮಾನದಲ್ಲೊಮ್ಮೆ ನಡೆಯುವ ಈ ಅಭೂತಪೂರ್ವ ಜನಸಾಗರಸಂಗಮದ ಐತಿಹಾಸಿಕ ಮೇಳಕ್ಕೊಂದು ಸಾಕ್ಷಿಯಾದೆವಲ್ಲ ಎಂಬ ಧನ್ಯತಾಭಾವ. ಇದೇ ಸಂತಸದಲ್ಲಿ, ಊರು ತಲುಪಿದ್ದೇ ಗೊತ್ತಾಗ್ಲಿಲ್ಲ.

ವಿಮೋಚನೆಗೊಂಡ ಆತ್ಮಗಳ ಮಾರ್ಗಗಳು

ನಿತ್ಯಜೀವನದಲ್ಲಿ ಭಗವದ್ಗೀತೆ

● ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಕೃಷ್ಣ ತನಗೆ ಯಾವ ಕ್ರಿಯೆಯೂ ಕಳಂಕ ಉಂಟು ಮಾಡುವುದಿಲ್ಲ ಹಾಗೂ ತನಗೆ ಕರ್ಮ ಫಲದ ಯಾವ ಆಸೆಯೂ ಇಲ್ಲ ಎಂದು ಹೇಳುತ್ತಾನೆ. ಅಲ್ಲದೆ ಅವನನ್ನು ಸಾಕ್ಷಾತ್ಕಾರ ಮಾಡಿಕೊಂಡವರಿಗೆ ಯಾವ ಕರ್ಮ ಬಂಧನವೂ ಇರುವುದಿಲ್ಲ ವೆಂದು ತಿಳಿಸುತ್ತಾನೆ. ನಮಗೆ ಕರ್ಮ ಮಾಡುವ ಹಕ್ಕು ಇದೇ ಹೊರತು ಕರ್ಮಫಲದ ಬಗ್ಗೆ ಯಾವ ಹಕ್ಕೂ ಇಲ್ಲ ಎನ್ನುವ ಅವನ ಹಿಂದಿನ ಹೇಳಿಕೆಗೆ ಇದು ಬಲ ನೀಡುತ್ತದೆ.(2.47)

ಪರಮಾತ್ಮನಾಗಿಯು ಕೂಡ ಅವನು ಇದನ್ನೇ ಅನುಸರಿಸುತ್ತಾನೆ. ಅವನು ತಾನು ಮಾನವರಲ್ಲಿ ವಿಭಜನೆ ಮಾಡಿದ್ದರೂ ತಾನು ಕರ್ತು ಅಲ್ಲ ಎಂದು ಹೇಳುತ್ತಾನೆ. ಕರ್ತತ್ವ ಅಲ್ಲಿ ಇರುವುದಿಲ್ಲವೆಂದು ಇದು ಸೂಚಿಸುತ್ತದೆ. (4.13)

ಪ್ರಾಚೀನ ಕಾಲದಲ್ಲಿ ವಿಮೋಚನೆಗೊಂಡ ಆತ್ಮಗಳು ಅವನ ಈ ತರ್ಕಾತೀತ ಗುಣವನ್ನು ತಿಳಿದು ಕೊಂಡು ವ್ಯವಹರಿಸುತ್ತಿದ್ದವು ಎಂದು ಹೇಳುತ್ತಾನೆ. ಅದರಂತೆಯೇ ನಾವು ಕೂಡ ನಡೆದು ಕೊಳ್ಳಬೇ ಕೆಂದು ಸೂಚಿಸುತ್ತಾನೆ. (4.15) ಮಾಮೂಲಾಗಿ ನಮ್ಮ ಜೀವನದಲ್ಲಿ ನಾವು ಕರ್ಮಫಲದ ಆಸೆಯನ್ನು ಇಟ್ಟುಕೊಂಡು ಕರ್ಮಗಳನ್ನು ಮಾಡುತ್ತೇವೆ. ನಮಗೆ ಕರ್ಮಫಲ ಬಿಡಬೇಕೆಂದು ಹೇಳಿದರೆ ಕರ್ಮವನ್ನೂ ಬಿಟ್ಟುಬಿಡು ತ್ತೇವೆ. ಇಲ್ಲಿ ಕೃಷ್ಣ ಸಂಪೂರ್ಣವಾಗಿ ತ್ಯಾಗಕ್ಕೆ ಭಿನ್ನವಾಗಿರುವ ನಿದರ್ಶನವನ್ನೇ ಕೊಡುತ್ತಾನೆ. ಇಲ್ಲಿ ನಾವು ಕರ್ಮ ಮಾಡುವುದನ್ನು ಮುಂದುವರಿಸಬೇಕೆಂದು ತಿಳಿಸುತ್ತಾನೆ ಹಾಗೂ ಕರ್ಮಫಲ ಮತ್ತು ಕರ್ತೃತ್ವದ ಭಾವನೆಯನ್ನು ಬಿಟ್ಟುಬಿಡಬೇಕೆಂದು ಹೇಳುತ್ತಾನೆ. ಅರ್ಜುನನ ಇನ್ನೊಂದು ಕರ್ಮವಾದ ಯುದ್ಧ ಮಾಡುವುದನ್ನು ಅವನು ಮಾಡಬೇಕೆಂದು ಕೃಷ್ಣ ಹೇಳಿದ್ದು ಈ ಅರ್ಥದಲ್ಲಿ.

ನಮ್ಮ ಕರ್ಮಗಳಲ್ಲಿಯ ನಮ್ಮ ಕರ್ತೃತ್ವ ಭಾವನೆಯನ್ನು ಪ್ರಜ್ಞಾ ಪೂರ್ವಕವಾಗಿ ಬಿಡುವುದು ತುಂಬಾ ಕಷ್ಟ. ನೃತ್ಯ, ಚಿತ್ರಕಲೆ, ಓದುವುದು, ಬೋಧನೆ, ತೋಟಗಾರಿಕೆ, ಅಡುಗೆ ಮಾಡುವುದು, ಕ್ರೀಡೆ ಹಾಗೂ ಶಸ್ತ್ರಚಿಕಿತ್ಸೆ ಯಂತಹ ವಿವಿಧ ಕಾರ್ಯಗಳಲ್ಲಿ ನಾವು ಆಳವಾಗಿ ತೊಡಗಿಕೊಂಡಾಗ ನಮ್ಮಲ್ಲಿ ಕರ್ತೃತ್ವದ ಭಾವನೆ ಇರುವುದಿಲ್ಲ. ಆಧುನಿಕ ಮನ:ಶಾಸ್ತ್ರದಲ್ಲಿ ಇದನ್ನು 'ಪ್ರವಹಿಸುವಿಕೆ' ಎಂದು ಕರೆಯುತ್ತಾರೆ. ಇದರ ಮಧುರ ಸಾರವೆಂದರೆ ಅಂತಹ ಮಧುರ ಕ್ಷಣಗಳನ್ನು ಅರಿತು ಅವುಗಳನ್ನು ನಮ್ಮ ಜೀವನದ ಎಲ್ಲಾ ಕ್ಷೇತ್ರಗಳಿಗೆ ವಿಸ್ತರಿಸಿಕೊಳ್ಳುವುದು. ವಿಶ್ವವು ನಮ್ಮ ಪ್ರಯತ್ನಗಳಿಗೆ ಸ್ಪಂದಿಸುತ್ತದೆ ಎಂದು ತಿಳಿಯಬೇಕು.

ಜೀವನವೇ ಒಂದು ಆನಂದ ಹಾಗೂ ಪವಾಡ. ಇದನ್ನು ಪೂರ್ಣಗೊಳಿಸಲು ಕರ್ತೃತ್ವದ ಭಾವನೆ ಅಥವಾ ಕರ್ಮಫಲದ ಅವಶ್ಯಕತೆ ಇಲ್ಲ. ನಾವು ಕರ್ತೃತ್ವದ ಭಾವನೆ ಹಾಗೂ ಕರ್ಮಫಲ ವನ್ನು ಬಿಟ್ಟು ಪರಮಾತ್ಮನೊಡನೆ ಒಂದಾದಾಗ ಕರ್ಮ ಬಂಧನ ದಿಂದ ಮುಕ್ತರಾಗುತ್ತೇವೆ.

ಹೀಗೂ ಮಾಡಬಹುದೇ?

● ಲಕ್ಷ್ಮಣ್ ಗೊರ್ಲಕಟ್ಟೆ

ಈಗ ಪಾಶ್ಚಾತ್ಯ ಪದ್ಧತಿಯ ಟಾಯ್ಲೆಟ್‌ಗಳ ಬಳಕೆ ನಮ್ಮ ದೇಶದಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿದೆ. ಟಾಯ್ಲೆಟ್ ಬಳಸಿದ ನಂತರ ಫ್ಲಶ್ ಟ್ಯಾಂಕಿನ ಫ್ಲಶ್ ಬಟನ್ ಬೇಗ ಒತ್ತಿ ಹೊರಬರುತ್ತೇವೆ, ಆಗ ಫ್ಲಶ್ ಟ್ಯಾಂಕ್ ಪೂರ ಖಾಲಿ. ಸ್ವಲ್ಪ ಯೋಚಿಸಿ, ಪ್ರತಿ ಸಾರಿಯೂ ಫ್ಲಶ್ ಟ್ಯಾಂಕ್ ನೀರನ್ನು ಪೂರ್ಣವಾಗಿ ಖಾಲಿ ಮಾಡುವುದು ಅವಶ್ಯವೇ? ನಿತ್ಯವೂ ಒಂದೆರಡು ಸಲವಾದರೂ ಫ್ಲಶ್‌ಟ್ಯಾಂಕ್‌ನ ಅರ್ಧ ಅಥವಾ ಕಾಲು ಭಾಗವನ್ನಷ್ಟೇ ಖಾಲಿ ಮಾಡಿದರೂ ಸಾಕಲ್ಲವೇ? ಬಟನ್ ಅನ್ನು ಸ್ವಲ್ಪವೇ ಒತ್ತಿ ಮೇಲೆತ್ತಿದರೆ ಸಾಕಲ್ಲವೇ?



ಬೇಸಗೆ ಬಂತು; ನೀರಿಗಾಗಿ ಹಾಹಾಕಾರ ಇನ್ನೇನು ಆರಂಭವಾಗಲಿದೆ. ಬಳಸುವ ನೀರನ್ನು ಉಳಿಸುವ ಜೀವನಪದ್ಧತಿಯನ್ನು ನಾವು ಜಾರಿಗೊಳಿಸಿಕೊಳ್ಳಬೇಕು; ಇದು ನಮ್ಮ ಭವಿಷ್ಯದ ದೃಷ್ಟಿಯಿಂದ ಮುಖ್ಯ.

ಹೀಗೇ ಸುಮ್ಮನೆ ಒಂದು ಅಂದಾಜು ಮಾಡಿ ನೋಡೋಣವೇ? ಬೆಂಗಳೂರಿನಲ್ಲಿ ಕನಿಷ್ಠ ಹತ್ತುಲಕ್ಷ ಜನ ದಿನದಲ್ಲಿ ಎರಡು ಸಾರಿ ಫ್ಲಶ್ ಟ್ಯಾಂಕಿನ ಅರ್ಧ ಅಥವಾ ಕಾಲು ಭಾಗ ಮಾತ್ರ ನೀರನ್ನು ಉಪಯೋಗಿಸಿದರೆ, ಇಪ್ಪತ್ತು ಲಕ್ಷ ಬಾರಿ ಫ್ಲಶ್ ಔಟ್ ಆಗುತ್ತವೆ. ಪ್ರತಿ ಬಾರಿಯೂ ಸುಮಾರು ಐದು ಲೀಟರ್ ನೀರು ಉಳಿತಾಯ ಎಂದು ಅಂದಾಜು ಆದರೂ ಒಂದು ಕೋಟಿ ಲೀಟರ್ ನೀರು ಉಳಿತಾಯವಾಗುತ್ತದೆ. ಒಬ್ಬ ವ್ಯಕ್ತಿಯ ನಿತ್ಯ ಬಳಕೆಗೆ ಸುಮಾರು 100 ಲೀಟರ್ ಸಾಕಾಗುತ್ತದೆ(ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡದಲ್ಲಿ): ಅಂದರೆ ಸರಿಸುಮಾರು ಒಂದು ಲಕ್ಷ ಜನಕ್ಕೆ ಸಾಕಾಗುವಷ್ಟು ನೀರು ಉಳಿತಾಯ! ಇದನ್ನು ಒಂದು ದೊಡ್ಡ ಅಭಿಯಾನವೆಂದೇ ಮಾಡಬಾರದೇಕೆ? ಗಣ್ಯರು ಸೆಲೆಬ್ರಿಟಿ ಗಳು ಗಮನಿಸಬೇಕು. ಇನ್ನು ಬೇರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಈ ರೀತಿ ಉಳಿತಾಯ ಮಾಡಿದರೆ? ಅಗಾಧ ಪ್ರಮಾಣದ ನೀರು ಪೋಲಾಗುವುದನ್ನು ಸುಲಭವಾಗಿ ತಪ್ಪಿಸಬಹುದಲ್ಲವೇ? ಅದು ನಮ್ಮ ಕೈ ಬೆರಳಿನಲ್ಲೇ ಇದೆಯಲ್ಲವೇ? ದಿನೇ ದಿನೇ ಅಂತರ್ಜಲ ಮಟ್ಟ ಕುಸಿಯುತ್ತಿರುವಾಗ ಈ ಒಂದು ಪುಟ್ಟ ಕೆಲಸ ಮಾಡಿ ದೊಡ್ಡ ಪುಣ್ಯ ಕಟ್ಟಿಕೊಳ್ಳೋಣವೇ?

ಇಲ್ಲಿ ಇನ್ನೂ ಒಂದು ವಿಚಾರವಿದೆ. ಫ್ಲಶ್ ಟಾಯ್ಲೆಟ್‌ಗಳು ಸ್ವಚ್ಛತೆಯ ದೃಷ್ಟಿಯಿಂದ ಉತ್ತಮ ಎಂದು ಹೆಚ್ಚು ಹೆಚ್ಚು ಬಳಕೆಯಾಗುತ್ತಿವೆ; ಅದರಲ್ಲಿ ಹೆಚ್ಚು ನೀರು ಫ್ಲಶ್ ಆಗುವ ಬದಲು, ಕಡಿಮೆ ನೀರು ಫ್ಲಶ್ ಮಾಡುವ ವ್ಯವಸ್ಥೆ ಮಾಡಬಹುದು. ಅಂತಹ ಉಪಕರಣಗಳನ್ನು ತಯಾರಿಸುವ ಕಂಪೆನಿಗಳು ಇದನ್ನು ಯೋಚಿಸಬಹುದು. ಕಡಿಮೆ ನೀರು ಬೇಕೆನಿಸಿದಾಗ, ಒಂದು ಬಟನ್, ಜಾಸ್ತಿ ನೀರು ಫ್ಲಶ್ ಮಾಡಬೇಕು ಎನಿಸಿದಾಗ, ಇನ್ನೊಂದು ಬಟನ್ : ಈ ರೀತಿ ವಿನ್ಯಾಸ ಮಾಡಿದರೆ, ಸಾಕಷ್ಟು ನೀರು ಉಳಿಸಬಹುದು. ಈಗಾಗಲೇ ಇಂತಹ, ಅಂದರೆ, ಎರಡು ರೀತಿ ನೀರನ್ನು ಫ್ಲಶ್ ಮಾಡುವ ಟಾಯ್ಲೆಟ್‌ಗಳ ಬಳಕೆ ಅಲ್ಲಲ್ಲಿ ಆರಂಭವಾಗಿದೆ. ಇದನ್ನು ಎಲ್ಲಾ ಕಡೆ ಬಳಸುವಂತೆ ಸರಕಾರವೇ ಕಾನೂನು ಮಾಡಬೇಕು. ಶುದ್ಧಿಕರಿಸಿದ, ರಿಸೈಕಲ್ಡ್ ನೀರನ್ನು ಮಾತ್ರ ಈ ರೀತಿ ಫ್ಲಶ್‌ಗೆ ಬಳಸುವಂತೆ ಆಗಬೇಕು ಮತ್ತು ಅದು ಕಟ್ಟುನಿಟ್ಟಾಗಿ ಜಾರಿಗೊಳ್ಳಬೇಕು: ಆಗಲೂ ಸಾಕಷ್ಟು ನೀರನ್ನು ಉಳಿಸಬಹುದು. ಮನುಕುಲದ ಉಳಿವಿಗೆ, ನಮ್ಮ ಸುತ್ತಲಿನ ಪರಿಸರದ ಉಳಿವಿಗೆ, ಅಮೂಲ್ಯ ನೀರನ್ನು ಮಿತವಾಗಿ ಬಳಸುವುದು ಅತಿ ಮುಖ್ಯ; ಈ ಪುಟ್ಟ ಉಪಕ್ರಮವು, ಆ ನಿಟ್ಟಿನಲ್ಲಿ ಒಂದು ದೊಡ್ಡ ಹೆಜ್ಜೆಯೇ ಆಗಬಹುದು!

ಕಾಂಡವೇ ಇಲ್ಲದ ಮರ!

● ಮಂಜುನಾಥ ಡಿ. ಎಸ್.

ಮನುಕುಲಕ್ಕೆ ಪ್ರಕೃತಿಯಿಂದ ದೊರೆತಿರುವ ಅತ್ಯಮೂಲ್ಯ ವರ ವೃಕ್ಷಸಂಕುಲ. ಗಿಡ-ಮರಗಳು ಹಲವಾರು ರೀತಿಯಲ್ಲಿ ಮನುಜರಿಗೆ ಉಪಕಾರಿಯಾಗಿರುವುದು ಸರ್ವವೇದ್ಯ. ಗಿಡ-ಮರಗಳು ಕೇವಲ ಮನುಷ್ಯರಿಗೆ ಮಾತ್ರವಲ್ಲದೆ ಪ್ರಾಣಿ ಮತ್ತು ಪಕ್ಷಿ ಸಂಕುಲಗಳಿಗೂ ಸಹ ಆಧಾರವಾಗಿವೆ. ಪ್ರಕೃತಿ ತನ್ನ ಸಮತೋಲನ ಕಾಪಿಟ್ಟುಕೊಳ್ಳುವಲ್ಲಿ ವೃಕ್ಷಗಳು ಮಹತ್ತರ ಪಾತ್ರ ನಿರ್ವಹಿಸುತ್ತವೆ. ಇಂತಹ ಬಹೂಪಯೋಗಿ ವೃಕ್ಷಗಳ ಸ್ವಾರ್ಥರಹಿತ ಗುಣ ಆದರ್ಶಪ್ರಾಯ.

ಆತ್ಮೀಯರೊಬ್ಬರ ತೋಟದಲ್ಲಿ ಕಂಡುಬಂದ, ಅಡಿಯಿಂದ ಮುಡಿಯವರೆಗೆ ಹಸಿರೆಲೆಗಳಿಂದ ಆವೃತವಾಗಿದ್ದ ಬೃಹತ್ ವೃಕ್ಷ ಮನದಾಳದಲ್ಲಿ ಸುಪ್ತವಾಗಿ ಹುದುಗಿದ್ದ ಈ ಚಿಂತನೆಗಳನ್ನು ಮತ್ತೊಮ್ಮೆ ಬಡಿದೆಬ್ಬಿಸಿತು. ನಿಸ್ವಾರ್ಥ ಭಾವದ ಪ್ರತೀಕದಂತೆ ಕಂಡ ಈ ಮರವು, ಮೂರು ವರ್ಷದ ಮಗುವಿನಲ್ಲೂ ಕುತೂಹಲ ಮೂಡಿಸಿತು. 'ಮರದ ಕಾಂಡ ಎಲ್ಲಿ?' ಎಂದು ಆ ಮಗು ಮುಗ್ಧತೆಯಿಂದ ಪ್ರಶ್ನಿಸಲು ಕಾರಣವಾಯಿತು. ಏಕೆಂದರೆ, ಮರವಿಡೀ ಎಲೆಗಳಿಂದಲೇ ತುಂಬಿಕೊಂಡಂತಹ



ನೋಟ! ತನ್ನ ಅಸ್ತಿತ್ವವನ್ನೂ ಮರೆಮಾಚಿಕೊಂಡು ಮೆಣಸಿನ ಬಳ್ಳಿಗೆ ಆಶ್ರಯ ನೀಡಿತ್ತು ಈ ಮರದ ಕಾಂಡ. ಹೀಗೆ ಔದಾರ್ಯತೆಯನ್ನು ಮೆರೆದಿದ್ದ ಈ ಮರ ವೃಕ್ಷಸಂಕುಲದ ಪರೋಪಕಾರಿ ಗುಣದ ಪರಾಕಾಷ್ಠೆಯನ್ನು ಬಿಂಬಿಸುತ್ತಿರುವಂತೆ ಭಾಸವಾಯಿತು.

ಮನುಷ್ಯನೂ ಸಹ ಇಂತಹ ಪರೋಪಕಾರಿ ಗುಣವನ್ನು ಬೆಳೆಸಿಕೊಂಡರೆ ಎಷ್ಟು ಚೆಂದವಾದೀತು? ತನ್ನ ಇರವನ್ನೂ ಮರೆತು, ಪರರಿಗೆ ಸಹಾಯ ಮಾಡುವ ಉದಾತ್ತ ಭಾವ ಮನುಜನಲ್ಲೂ ತುಂಬಿಬರಲಿ!

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
05.03.2025 ಬುಧವಾರ
vishwavani.news

ದಿನ ಭವಿಷ್ಯ

ಮೇಷ ಇಂದು ಮಧ್ಯಾಹ್ನದವರೆಗೆ ಕೊಂಚ ಮಂದಗತಿ ಇರುತ್ತದೆ. ನಿರಾಶೆಗೊಳ್ಳದಿರಿ, ಸಂಜೆ ವೇಳೆಗೆ ಶುಭಸುದ್ದಿಯನ್ನು ಕೇಳಲಿದ್ದೀರಿ.

ವೃಷಭ ಜೀವನ ಮುಗಿದೇ ಹೋಯಿತು ಎಂದು ಹತಾಶರಾಗುವ ಅಗತ್ಯವಿಲ್ಲ. ಮುಂದೆ ಗುರಿ ಇಟ್ಟುಕೊಳ್ಳಿ, ಹಿಂದೆ ಗುರುವಿದ್ದಾರೆ.

ಮಿಥುನ ಬದುಕಿನಲ್ಲಿ ಏರಿಳಿತ ಸಹಜ, ಹೀಗಾಗಿ ಧೃತಿಗೆಡುವ ಅಗತ್ಯವಿಲ್ಲ. ನಿಮ್ಮ ಪ್ರಾಮಾಣಿಕತೆಯೇ ನಿಮ್ಮನ್ನು ಕಾಪಾಡಲಿದೆ.

ಕಟಕ ಮನೆಯಲ್ಲಿ ಶಿಶುವಿನ ಜನನವಾಗಿ ಸಂತಸವನ್ನು ತಳೆಯುವಿರಿ. ಇನ್ನು ಮುಂದೆ ಹೆಚ್ಚಿನ ಹೊಣೆಗಾರಿಕೆ ಮೆರೆಯಬೇಕಾಗುತ್ತದೆ.

ಸಿಂಹ ಮನೆಯವರೊಂದಿಗೆ ಕೆಲ ಕಾಲ ಕಳೆದಿದ್ದು ನಿಮಗೆ ಸಂತಸ ತಂದಿದೆಯಲ್ಲವೇ? ಅದನ್ನು ಮೆಲುಕುಹಾಕುತ್ತಾ ಕೆಲಸದಲ್ಲಿ ತೊಡಗಿ.

ಕನ್ಯಾ ಬಯಸಿದ ಉದ್ಯೋಗ ಸಿಗುವ ಲಕ್ಷಣಗಳಿವೆ, ಆದರೆ ದೂರ ದೂರಿಗೆ ತೆರಳಬೇಕಾಗಿ ಬರಬಹುದು. ಸವಾಲು ಸ್ವೀಕರಿಸಿದರೆ ಜಯ. ವಿಷ್ಣು ದೇವಸ್ಥಾನಕ್ಕೆ ಹೋಗಿ ದೇವರಿಗೆ ತುಳಸಿ ಮಾಲೆ ಹಾಕಿ.

ತುಲಾ ಗುರು-ಹಿರಿಯರನ್ನು ಆದರಿಸಿ, ಅವರ ಸೇವೆಯನ್ನು ಮಾಡಿ. ಮಕ್ಕಳಿಗೆ ನಿಮ್ಮ ಮಾರ್ಗದರ್ಶನದ ಅಗತ್ಯವಿದೆ. ದುಡುಕು ಸಲ್ಲ.

ವೃಶ್ಚಿಕ ನಿಮ್ಮ ಒಳ್ಳೆಯತನವೇ ನಿಮ್ಮ ಆಸ್ತಿ, ಮೌನವೇ ನಿಮ್ಮ ಆಭರಣ. ಆಮಿಷಕ್ಕೆ ಸಿಲುಕಿ ವ್ಯಕ್ತಿತ್ವಕ್ಕೆ ಧಕ್ಕೆಯನ್ನು ತಂದುಕೊಳ್ಳದಿರಿ.

ಧನು ವೃತ್ತಿಜೀವನದಲ್ಲಿ ನಿಮ್ಮ ಅನುಭವವನ್ನು ಮತ್ತಷ್ಟು ವಿನಿಯೋಗಿಸ ಬೇಕಾಗಿ ಬರಬಹುದು. ನಂಬಿದ ದೇವರು ಕೈಬಿಡುವುದಿಲ್ಲ.

ಮಕರ ಹತ್ತಿರದವರು ಕೈಬಿಟ್ಟರೂ, ಅಜ್ಞಾತ ಶಕ್ತಿಯೊಂದು ನಿಮ್ಮ ರಕ್ಷಣೆಗೆ ಬರಲಿದೆ. ಗುರುಪೀಠಕ್ಕೆ ತೆರಳಿ ನಮಸ್ಕಾರ ಹಾಕಿಕೊಂಡು ಬನ್ನಿ.

ಕುಂಭ ಅಲಂಕಾರಿಕ ಸಾಮಗ್ರಿಗಳ ವ್ಯವಹಾರದಲ್ಲಿ ತೊಡಗಿಸಿಕೊಂಡವರು ಇಂದು ಉತ್ತರ ದಿಕ್ಕಿನಿಂದ ಶುಭಸುದ್ದಿಯನ್ನು ಕೇಳಲಿದ್ದೀರಿ.

ಮೀನ ಚಾಡಿಮಾತಿಗೆ ಕಿವಿಗೊಟ್ಟರೆ ನಿಮ್ಮ ಮನಸ್ಸು ಹಾಳಾಗುತ್ತದೆ. ಮನಸಿನ ಸ್ಥಿರತೆಗೆ, ನೆಮ್ಮದಿಗೆ ಧ್ಯಾನ-ಪ್ರಾರ್ಥನೆಯ ಮೊರೆಹೋಗಿ.

● ಕೆ.ಬಿ.ಸಂತೋಷ್ ಗುರೂಜಿ

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಫಾಲ್ಗುಣ ಮಾಸ, ಶುಕ್ಲ ಪಕ್ಷ, ಷಷ್ಠಿ ತಿಥಿ, ಕೃತ್ತಿಕ ನಕ್ಷತ್ರ, ವೈಧೃತಿ ಯೋಗ, ರಾಹುಕಾಲ ಮಧ್ಯಾಹ್ನ 12.31ರಿಂದ 2.01ರವರೆಗೆ, ಅಭಿಜಿತ್ ಮುಹೂರ್ತ: ಇಂದು ಲಭ್ಯವಿಲ್ಲ.

ಮನೆಮದ್ದು

ದೇಹದಲ್ಲಿ ಉರಿಯ ಅನುಭವವಾಗುತ್ತಿದ್ದರೆ, ಹೀರೇಕಾಯಿಯ ತಿರುಳನ್ನು ತುಪ್ಪದಲ್ಲಿ ಬೇಯಿಸಿ ಮೊಸರಿನೊಂದಿಗೆ ಸೇವಿಸಿದರೆ ಉರಿಯು ಶಮನವಾಗುವುದು, ದೇಹ ತಂಪಾಗುವುದು.

ಸೌಂದರ್ಯ ಸೂತ್ರ

ರಾತ್ರಿ ಮಲಗುವುದಕ್ಕೂ ಮೊದಲು ನಿಮ್ಮ ಪಾದಗಳಿಗೆ ಒಳ್ಳೆಯ ಗುಣಮಟ್ಟದ ಮಾಯಿಶ್ಚರೈಸರ್ ಲೇಪಿಸಿಕೊಂಡು ನಂತರ ಹತ್ತಿಯಿಂದ ಮಾಡಿದ ಮೃದು ಕಾಲು ಚೀಲಗಳನ್ನು ಧರಿಸಿ. ಇದರಿಂದಾಗಿ ಪಾದಗಳಲ್ಲಿ ತೇವಾಂಶ ಉಳಿಯುವುದರಿಂದ ಅವು ಬಿರಿಯುವುದಿಲ್ಲ.

ಜೀವನ ಜೋಕಾಲಿ

‘ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ’ ಎಂದು ಹೇಳಿದ್ದಾರೆ ಕನಕದಾಸರು. ಎಲ್ಲರ ಬದುಕಿನ ಬಂಡಿಗೆ ಯಾವಾಗಲೂ ಹೂವಿನ ಹಾದಿಯೇ ಸಿಗುತ್ತೆ ಅಂತೇನಿಲ್ಲ, ಕಲ್ಲುಮುಳ್ಳಿನ ಹಾದಿಗೂ ಒಡ್ಡಿಕೊಳ್ಳಬೇಕಾಗುತ್ತೆ. ಕೆಲವರದ್ದು ಬಯಸಿದ್ದನ್ನೆಲ್ಲಾ ಪಡೆಯುವ ಅದೃಷ್ಟವಾದರೆ, ಮತ್ತೆ ಕೆಲವರದ್ದು ಇರುವುದರಲ್ಲೇ ಸುಖವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆ. ಇಂಥದೊಂದು ದೃಶ್ಯ ಕಂಡಿದ್ದು ಬೆಂಗಳೂರು ವಿಶ್ವವಿದ್ಯಾಲಯ ಸಮೀಪದ ಮಲ್ಲತ್ತಹಳ್ಳಿ ಪ್ರದೇಶದಲ್ಲಿ. ಇಲ್ಲಿ, ಬದುಕಿನ ಬವಣೆಗೋ ಅಥವಾ ಬಿಸಿಲಿನ ಬೇಗೆಗೋ ಬಸವಳಿದ ಅಪ್ಪ, ತಾನು ವಿಶ್ರಮಿಸಲು ಪಾದಚಾರಿ ರಸ್ತೆಯನ್ನೇ ನೆಚ್ಚಿದ್ದಾನೆ; ಹಾಗಂತ ತನ್ನ ಹೊಣೆಯನ್ನು ಆತ ಮರೆತಿಲ್ಲ, ತನ್ನ ಮಕ್ಕಳಿಗೂ ಅಲ್ಲೇ ಜೋಕಾಲಿಯೊಂದನ್ನು ಕಟ್ಟಿಕೊಟ್ಟು ಆಡಿಸುತ್ತಿದ್ದಾನೆ... ಪ್ರೀತಿ-ಮಮತೆ ಅಂದರೆ ಇದೇ ಅಲ್ಲವೇ?

▶▶ ಚಿತ್ರ: ಸುಧಾಕರ್ ದೇವರಾಜ್

ಜೀವನಪಾಠ ಕಲಿಸಿದ ದೊರೆಯ ಪ್ರೀತಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

‘ಒಂದೊಳ್ಳೆ ಮಾತು’ ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಬ್ಬ ದೊರೆಯಿದ್ದ, ಅವನಿಗೊಬ್ಬ ವೃದ್ಧ ಸೇವಕನಿದ್ದ. ದೊರೆಯು ಚಿಕ್ಕ ಮಗುವಾಗಿದ್ದಾಗಿನಿಂದಲೂ ಅವನನ್ನು ಎತ್ತಿ ಆಡಿಸಿದವನು ಈ ಸೇವಕ. ಮುಂಜಾನೆಯ ಸುಪ್ರಭಾತದಿಂದ ಹಿಡಿದು, ಶಯನಗೃಹಕ್ಕೆ ಹೋಗುವವರೆಗೂ ದೊರೆಯ ಎಲ್ಲ ಬೇಕು-ಬೇಡಗಳನ್ನು ನೋಡಿಕೊಳ್ಳುತ್ತಿದ್ದವನು ಇವನೇ.

ದೊರೆಯು ಮಲಗುವ ಮುನ್ನ ತನ್ನೆಲ್ಲ ಆಭರಣಗಳನ್ನೂ ಕಳಚಿಕೊಟ್ಟರೆ, ಈ ವೃದ್ಧ ಸೇವಕ ಅವನ್ನೆಲ್ಲಾ ಒಪ್ಪವಾಗಿ ತೆಗೆದಿಟ್ಟು ಮುದ್ರೆಹಾಕಿ ದೊರೆಯ ಬಳಿ ಒಪ್ಪಿಸಿ ನಂತರ ಮನೆಗೆ ಹೋಗುತ್ತಿದ್ದ. ಅದೊಂದು ದುರ್ದಿನ, ಯಾರದ್ದೋ ದುರ್ಬೋಧನೆಯ ಪ್ರಭಾವಕ್ಕೆ ಸಿಲುಕಿದ್ದ ಈ ಸೇವಕ, ಆಭರಣಗಳನ್ನೆಲ್ಲಾ ಒಪ್ಪಮಾಡುವಾಗ ಬೆಲೆಬಾಳುವ ಕಡಗವೊಂದನ್ನು ತನ್ನ ಜೇಬಿಗಿಳಿಸಿದ ಹಾಗೂ ಮನೆಗೆ ಹೋಗದೆ ಎತ್ತಲೋ ಮಾಯವಾದ. ಮರುದಿನ ಬೆಳಗ್ಗೆ ಇವನಿಲ್ಲದೇ ದೊರೆಗೆ ನೆಮ್ಮದಿಯಿಲ್ಲ, ಮನದಲ್ಲಿ ತಳಮಳ. ಒಡವೆಯೊಂದು ಕಾಣದಾಗಲು ರಾಜಪರಿವಾರದವರು ಸಹಜವಾಗಿಯೇ ಅದಕ್ಕೂ ಸೇವಕನಿಗೂ ತಳುಕು ಹಾಕಿ ತೀವ್ರ ಹುಡುಕಾಟದಲ್ಲಿ ತೊಡಗಿದರು.

ಬಹುದೂರ ತೆರಳಿಬಿಟ್ಟಿದ್ದ ಸೇವಕನಿಗೋ ಕೈಯಲ್ಲಿ ಕಾಸಿಲ್ಲ. ಊಟ-ತಿಂಡಿಯಿರಲಿ, ಮುಖ ಮರೆಸಿಕೊಂಡು ಕುಡಿಯಲು ನೀರು ಕೇಳಲೂ ನಾಚಿಕೆ. ಆದರೆ ಕಡಗವಿತ್ತಲ್ಲ, ಅದನ್ನು ಮಾರಲು ಹಲವು ಅಕ್ಕಸಾಲಿಗಳ ಬಳಿಗೆ ಹೋದರೆ, ಅವರೆಲ್ಲ ಇವನನ್ನು ಸಂಶಯದಿಂದ ನೋಡತೊಡಗಿದರು. ಆಗ ಅವರ ಕೈಯಿಂದ ಅದನ್ನು ಕಿತ್ತುಕೊಂಡು ಮತ್ತೆ ಓಡುತ್ತಿದ್ದ ಸೇವಕ ಕೊನೆಗೆ ಸುಸ್ತಾಗಿ ಬದುಕುವುದೇ ಕಷ್ಟ ಎನ್ನುವ ಸ್ಥಿತಿಗೆ ಬಂದುಬಿಟ್ಟ. ಕೊನೆಗೆ ಒಂದು ನಿರ್ಧಾರಕ್ಕೆ ಬಂದ ಅವನು ಊರಿಗೆ ಮರಳಿ, ಸೀದಾ ಅರಮನೆಗೆ ಹೊರಟ. ಮಾಸಿದ ಬಟ್ಟೆ, ಬೆಳೆದ ದಾಡಿ-ಮೀಸೆಯಿಂದಾಗಿ ಅವನನ್ನು ಯಾರೂ ಗುರುತುಹಿಡಿಯಲಿಲ್ಲ. ಒಬ್ಬಿಬ್ಬರು ಕಳ್ಳನೆಂದು ಅವನನ್ನು ಹಿಡಿದು ದೊರೆಯಲ್ಲಿಗೆ ಒಯ್ದರು. ದೊರೆಗೆ ಹೇಗೋ ಅವನ ಗುರುತು ಸಿಕ್ಕಿತು. ಈ ಸೇವಕನೋ ಭಯದಿಂದ ಮೊದಲು ಕಡಗವನ್ನು ಒಪ್ಪಿಸಲು ಜೇಬನ್ನು ತಡಕಾಡಿದ. ದೊರೆಯು ಅದನ್ನು ನೋಡಿಯೂ ನೋಡದವನಂತೆ, ಸಿಂಹಾಸನದಿಂದ ಇಳಿದುಬಂದು ಸೇವಕನ ಮಲಿನ ವಸ್ತ್ರ, ಕೊಳಕು ಮೈಯನ್ನೂ ಗಮನಿಸದೆ ಅವನನ್ನು ಬಾಚಿ ತಬ್ಬಿಕೊಂಡು, “ಏನಜ್ಜಾ, ನನ್ನನ್ನು ಬಿಟ್ಟು ಎಲ್ಲಿಗೆ ಹೋಗಿಬಿಟ್ಟಿದ್ದೆ? ನೀನಿಲ್ಲದೆ ಎಷ್ಟೊಂದು ಸಂಕಟಪಟ್ಟೆ ಗೊತ್ತೇ?” ಎಂದು ಹಲುಬಿದ. ಕಡಗವನ್ನು ತೆಗೆದು ದೊರೆಯ ಪಾದದಲ್ಲಿಟ್ಟ ಮುದಿ ಸೇವಕ, “ಧಣೀ, ನನ್ನನ್ನು ಕ್ಷಮಿಸಿ” ಎನ್ನುತ್ತಾ ಬಿಕ್ಕಿದ. ಅವನನ್ನು ಮೇಲೆತ್ತಿ ತಬ್ಬಿ ಮೈಯೆಲ್ಲಾ ನೇವರಿಸಿದ ದೊರೆ, “ಕಡಗ ಹಾಗಿರಲಿ, ಅದೇನೂ ದೊಡ್ಡ ವಿಷಯವಲ್ಲ! ಒಂದಿಲ್ಲದಿದ್ದರೆ ಇನ್ನೊಂದು, ನೂರಾರು ಕಡಗ ಸಿಗುತ್ತದೆ, ಧರಿಸಿದರಾಯಿತು! ಆದರೆ ನಿನ್ನನ್ನೊಮ್ಮೆ ನೋಡಿಕೋ, ಎಷ್ಟು ಸೊರಗಿದ್ದೀಯೆ! ಊಟ ಮಾಡಿ ಎಷ್ಟು ಸಮಯ ವಾಯಿತೋ, ಪಾಪ!” ಎಂದ. ದೊರೆಯ ಕಾಲಿಗೆ ಕಡಗವನ್ನು ತೊಡಿಸದೇ ಬಿಡಲೊಲ್ಲ ಆ ಸೇವಕ. ಕೊನೆಗೆ ದೊರೆ ಕಾಲು ಚಾಚಿದ, ಮುದುಕ ಅದಕ್ಕೆ ಕಡಗವನ್ನು ತೊಡಿಸಿ ಕಣ್ಣೊರೆಸಿಕೊಂಡು, “ಪ್ರಭೂ, ನನ್ನದಲ್ಲದ ವಸ್ತು ವನ್ನು ಕದ್ದು ಪಡಬಾರದ ಪಾಡು ಪಟ್ಟೆ. ಅದನ್ನೀಗ ನಿಮ ಗೊಪ್ಪಿಸಿದ್ದೇನೆ. ನೀವೇನು ಶಿಕ್ಷೆ ಕೊಟ್ಟರೂ ಅನುಭವಿಸಲು ನಾನು ಸಿದ್ಧ” ಎಂದ. ಆಗ ಕಣ್ಣೀರಾದ ದೊರೆ, “ಅಜ್ಜಾ, ನಿನಗೆ ಹಣದ ಅವಶ್ಯಕತೆ ಇದ್ದಿದ್ದರೆ ನನ್ನನ್ನೇ ಕೇಳಬಹುದಿ ತ್ತಲ್ಲಾ! ನೀನು ಸಾಕೆನ್ನುವಷ್ಟು ಕೊಡುತ್ತಿದ್ದೆನಲ್ಲವೇ? ಅನ್ಯಾಯವಾಗಿ ಎಷ್ಟೊಂದು ಕಷ್ಟಪಟ್ಟೆಯಲ್ಲ! ಈಗ ವಿಶ್ರಾಂತಿ ಪಡೆದು ಮತ್ತೆ ನನ್ನ ಬಳಿಗೇ ಬಾ. ಕೊನೆ ಗಾಲದವರೆಗೂ ನೀನು ನನ್ನ ಬಳಿಯೇ ಇರಬೇಕು, ಬೇರಾವ ಕೆಲಸವನ್ನೂ ಮಾಡುವ ಅಗತ್ಯವಿಲ್ಲ” ಎಂದು ಅವನನ್ನು ಸಮಾಧಾನಪಡಿಸಿ, ಪ್ರೀತಿಯಿಂದಲೂ ಅಧಿಕಾರದಿಂದಲೂ ಆಜ್ಞಾಪಿಸಿದ.

ಭಗವಂತನ ಅಪರಿಮಿತ ಕೃಪಾಪಟಾಕ್ಷ ಸದಾ ನಮ್ಮ ಮೇಲಿರುತ್ತದೆ; ಆದರೆ ನಾವು ಪ್ರಾಪಂಚಿಕೆ ವಸ್ತುಗಳಿಗೆ ಆಸೆಪಟ್ಟು ಅವನ ಕೃಪೆಯಿಂದ ದೂರ ಸರಿಯುತ್ತೇವೆ. ಬದುಕಿನಲ್ಲಿ ನಾನಾ ಕಷ್ಟಗಳನ್ನು ಅನುಭವಿಸಿ, ಕೊನೆಗೆ ಅವನಿಗೆ ಶರಣಾಗುತ್ತೇವೆ. ಅದೆಷ್ಟೇ ದಾರಿ ತಪ್ಪಿದರೂ, ಶರಣು ಬಂದ ಭಕ್ತರನ್ನು ಕಾಯುವನು ಭಗವಂತ.

ಇಲ್ಲೊಂಚೂರು ಕೇಳ್ರೀ...

- ಅರಿವಿಲ್ಲದೆ ನಮ್ಮಿಂದಾದ ತಪ್ಪುಗಳಿಗೆ ಮತ್ತೊಬ್ಬರ ಕ್ಷಮೆ ಕೇಳುವುದರಿಂದ ನಾವು ಚಿಕ್ಕವರೇನೂ ಆಗುವುದಿಲ್ಲ. ಬದಲಿಗೆ ಮನದಲ್ಲಿ ಧನ್ಯತಾಭಾವ ಮೂಡುತ್ತದೆ.
- ಮತ್ತೊಬ್ಬರನ್ನು ಯಾವುದೇ ಕಾರಣಕ್ಕೂ ಅಳೆದು ತೂಗಿ, ‘ಇವರು ಇಷ್ಟೇ ಕಣ್ರೀ’ ಎಂದು ಅವರ ಯೋಗ್ಯತೆಯನ್ನು ನಿರ್ಧರಿಸುವುದು ತರವಲ್ಲ; ಅವರನ್ನು ಅವರು ಹೇಗಿದ್ದಾರೋ ಹಾಗೆಯೇ ಒಪ್ಪಿಕೊಳ್ಳೋಣ. ಪರಿಪೂರ್ಣತೆಯ ಹಠಕ್ಕೆ ಬಿದ್ದು ಬಾಂಧವ್ಯಕ್ಕೆ ಧಕ್ಕೆ ತಂದುಕೊಳ್ಳಬಾರದು.
- ಬದುಕಿನಲ್ಲಿ ಒದಗುವ ಸಣ್ಣಪುಟ್ಟ ಸಂಗತಿಗಳನ್ನು ಖುಷಿಯಿಂದ ಆಸ್ವಾದಿಸಬೇಕು. ಇತರರಿಂದ ದಕ್ಕಿದ ಸಣ್ಣ ನೆರವಿಗೂ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು.

ಪ ದ ಬಂ ಧ



ಎಡದಿಂದ ಬಲಕ್ಕೆ

1. ಒಳ್ಳೆಯ ಕಾರ್ಯಕ್ಕಾಗಿ ನೀಡಿದ ಬಲಿ (3)
2. ಪೂಜೆ ಮಾಡುವವನು (3)
4. ಸತ್ತವರನ್ನು ಹೂಳುವ ಸ್ಥಳ (3)
5. ಮರುಳುಗೊಳಿಸುವ ಎಂದರ್ಥ (3)
7. ಹೂವಿನ ಎಸಳು (3)
9. ಅಗಲ ಬಾಯಿಯುಳ್ಳ ಪಾತ್ರೆ (3)
11. ಪಾರಿವಾಳಕ್ಕೆ ಮತ್ತೊಂದು ಹೆಸರು (3)
13. ತಮ್ಮನಿಗೆ ಹೀಗೊಂದು ಹೆಸರು (3)
15. ಪಂದ್ಯ ಅಥವಾ ಜೂಜು (3)
16. ಗಣೇಶನಿಗೆ ಪ್ರಿಯವಾದ ಪವಿತ್ರವಾದ ಹುಲ್ಲು (3)
18. ತಿರುಗಿ ಬಂದಿರುವ ವ್ಯಾಪ್ತಿ (3)
20. ಸುವಾಸನೆಯುಳ್ಳ ಒಂದು ಸಾಂಬಾರ (3)
21. ತಿರುಗುಮುರುಗಾಗಿರುವ ಸಾಲು (3)
22. ಏನೋ ರೋಮಾಂಚನ (3)

ಮೇಲಿನಿಂದ ಕೆಳಕ್ಕೆ

1. ಹತ್ತುವುದು ಎಂದರ್ಥ (3)
2. ರಾಜನಿಗೆ ಹೀಗೊಂದು ಹೆಸರಿದೆ (3)
3. ಉದ್ದಕ್ಕೆ ಬಾಗಿರುವ ತುತ್ತೂರಿ (3)
5. ಮುದ ನೀಡಿದ ಸಿಹಿ ಕಡುಬು (3)
6. ಕಾಗದ ಪತ್ರಗಳ ಕಟ್ಟು (3)
8. ಅರ್ಧಚಂದ್ರಾಕೃತಿಯ ರಚನೆ (3)
10. ರೀತಿಯೊಂದಿಗೆ ಬಂದಿರುವ ಜೋಡಿಪದ (3)
12. ಪೋಲಿ ಎಂದು ಹೀಗೆ ಹೇಳಬಹುದು (3)
13. ಶತ್ರುವಿನೊಂದಿಗೆ ಬಂದಿರುವ ತಿಳುವಳಿಕೆ (3)
14. ಅಸ್ತವ್ಯಸ್ತವಾಗಿ ಬಂದಿದೆ ಹಡಗು (3)
16. ಎಣಿಸುವ ಕಾರ್ಯವಿದು (3)
17. ಕಾರಕ್ಕೆ ಮತ್ತೊಂದು ಹೆಸರು (3)
19. ಬಿಡುವಿನ ವೇಳೆಯಲ್ಲಿ ಕಂಡಿರುವ ಅಗಸ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1.ಆಹುತಿ 2.ಅರ್ಚಕ 4.ಸಮಾಧಿ 5.ಮೋಹಕ 7.ಪಕಳೆ 9.ಡಬರಿ 11.ಕಪೋತ 13.ಅನುಜ 15.ಜುಗಾರಿ 16.ಗರಿಕೆ 18.ವುರಹ 20.ಲವಂಗ 21.ಸರತಿ 22.ಪುಳಕ

ಮೇಲಿನಿಂದ ಕೆಳಕ್ಕೆ: 1.ಆರೋಹ 2.ಅಧಿಪ 3.ಕಹಳೆ 5.ಮೋದಕ 6.ಕಡತ 8.ಕಮಾನು 10.ರಿವಾಜು 12.ಪೋಕರಿ 13.ಅರಿವು 14.ಜಜುಹ 16.ಗಣತಿ 17.ಕೆಲಸ 19.ರಜಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಾರ್ಟೂನ್ ಕಚಗುಳಿ

▶▶ ವ್ಯಂಗ್ಯಚಿತ್ರ ಕೃಪೆ: ಸುಧೀರ್ ತೈಲಾಂಗ್

ನನ್ನದೇನೂ ತಪ್ಪಿಲ್ಲ ತಾಯೀ.... ಸಿಲಿಂಡರ್‌ನ ಬೆಲೆಯೇರಿಕೆಗೆ ನಾನು ಕಾರಣನಲ್ಲ...! ಸಿಲಿಂಡರ್‌ನಲ್ಲಿರುವ ‘ರೆಗ್ಯುಲೇಟರ್’ ಎಂಬ ಕಿವಿಯನ್ನು ನೀವು ಹಿಂಡಿದಾಗೆಲ್ಲಾ ನಿಮ್ಮ ಸೇವೆ ಮಾಡೋದಷ್ಟೇ ನನ್ನ ಕೆಲಸ!

ಮುದ್ರಾವಿಶ್ವ

ಡಾ. ಪತಂಜಲಿ ಆಚಾರ್ಯ

ಶೂನ್ಯಮುದ್ರೆ

ಇದು ಶರೀರದಲ್ಲಿನ ಆಕಾಶ ತತ್ವದ ಅಸಮತೋಲನವನ್ನು ಸರಿಪಡಿಸುವ ಸರಳ-ಸುಲಭ ಮುದ್ರೆಗಳಲ್ಲಿ ಒಂದೆನಿಸಿಕೊಂಡಿದೆ. ಹೀಗಾಗಿ ಇದಕ್ಕೆ ‘ಆಕಾಶ ಸುರಭಿ ಮುದ್ರೆ’ ಎಂಬ ಹೆಸರೂ ಇದೆ.

- **ಆಚರಿಸುವ ಕ್ರಮ:** ಚಿತ್ರದಲ್ಲಿ ತೋರಿಸಿರುವಂತೆ, ಮಧ್ಯದ ಬೆರಳನ್ನು ಮಡಚಿ ಮತ್ತು ಅದನ್ನು ಹೆಬ್ಬೆರಳಿನ ತುದಿಯಿಂದ ಒತ್ತಿಹಿಡಿಯಿರಿ. ಇತರ ಬೆರಳುಗಳನ್ನು ನೇರವಾಗಿ ಇಟ್ಟುಕೊಂಡಿರಬೇಕು. ಈ ಭಂಗಿಯಲ್ಲಿ ಕನಿಷ್ಠಪಕ್ಷ 2-3 ನಿಮಿಷದವರೆಗೆ ಇರಬೇಕು.
- **ಪ್ರಯೋಜನಗಳು:** ಕಿವಿಯ ಆರೋಗ್ಯ ಮತ್ತು ಸಮತೋಲನಕ್ಕಾಗಿ ಈ ಮುದ್ರೆಯನ್ನು ಆಚರಿಸಲಾಗುತ್ತದೆ. ಇದು ಕಿವಿನೋ ಕಡಿಮೆ ಮಾಡುವುದರ ಜತೆಗೆ, ಶ್ರವಣ ಸಾಮರ್ಥ್ಯ ಸುಧಾರಿಸುತ್ತದೆ.

ಸೂರ್ಯಮುದ್ರೆ

ದೇಹಕ್ಕೆ ಒಗ್ಗದ ಪರಕೀಯ ವಸ್ತುಗಳನ್ನು ತೆಗೆದುಹಾಕುವಲ್ಲಿ ಮಹತ್ವದ ಪಾತ್ರವನ್ನು ಈ ಮುದ್ರೆ ನಿರ್ವಹಿಸುವುದರಿಂದ, ಇದನ್ನು ದಿನಚರಿಯಲ್ಲಿ ಅಳವಡಿಸಿಕೊಳ್ಳುವುದು ಒಳಿತು.

- **ಆಚರಿಸುವ ಕ್ರಮ:** ಚಿತ್ರದಲ್ಲಿ ತೋರಿಸಿರುವಂತೆ, ಉಂಗುರದ ಬೆರಳನ್ನು ಮಡಚಿ ಮತ್ತು ಅದನ್ನು ಹೆಬ್ಬೆರಳಿನ ತುದಿಯಿಂದ ಒತ್ತಿ ಹಿಡಿಯಿರಿ. ಇತರ ಬೆರಳುಗಳನ್ನು ನೇರವಾಗಿ ಇಟ್ಟುಕೊಂಡಿರಬೇಕು. ಈ ಮುದ್ರೆಯನ್ನು ಕನಿಷ್ಠಪಕ್ಷ 2-3 ನಿಮಿಷದವರೆಗೆ ಆಚರಿಸಿದರೆ ಒಳ್ಳೆಯದು.
- **ಪ್ರಯೋಜನಗಳು:** ಈ ಮುದ್ರೆಯ ಅಭ್ಯಾಸವು ದೇಹಾಲಸ್ಯವನ್ನು ತಗ್ಗಿಸುವುದರ ಜತೆಗೆ ದೇಹದ ತೂಕ ನಷ್ಟಕ್ಕೆ ಉತ್ತೇಜಿಸುತ್ತದೆ. ಚಯಾಪಚಯ ಕ್ರಿಯೆಯು ಚುರುಕಾಗಿ ನಡೆಯುವಂತೆ ಪ್ರಭಾವ ಬೀರುತ್ತದೆ.

ಇಲ್ಲೊಂಚೂರು ಕೇಳ್ರೀ...

- ಮತ್ತೊಬ್ಬರಿಗೆ ಹಾನಿಯುಂಟು ಮಾಡುವ ಬಗ್ಗೆ ಕನಸು-ಮನಸಿನಲ್ಲೂ ಆಲೋಚಿಸಬಾರದು. ಈ ಪರಿಪಾಠ ವನ್ನು ಅಳವಡಿಸಿಕೊಂಡಲ್ಲಿ ನಾವು ಗಟ್ಟಿಯಾಗುತ್ತೇವೆ, ಪ್ರಬುದ್ಧರಾಗು ತ್ತೇವೆ. ನಮ್ಮ ಮುಖ ಬೆಳಗುತ್ತದೆ.
- ಮನೆಯ ನೆರೆಹೊರೆಯವರೊಂದಿಗಾಗಲೀ, ಕಚೇರಿಯ ಸಹೋದ್ಯೋಗಿಗಳ ಜತೆಗಾಗಲೀ ಹಸನ್ಮುಖಿಯಾಗಿ ವರ್ತಿಸಿದರೆ, ನಮ್ಮ ದಿನಚರಿ ಸಲೀಸಾಗಿ ಸಾಗುತ್ತದೆ.

ವಿವಿಧ ವಿನೋದಾವಳಿ...

HARDWARE ಪ್ರಶ್ನೆಗೆ SOFTWARE ಉತ್ತರ..!

ಯಗಟಿ ರಘು ನಾಡಿಗ್

‘ಗಂಡ-ಹೆಂಡತಿಯ ಜಗಳ, ಉಂಡು ಮಲಗೋ ತನಕ’ ಅಂತ ಒಂದು ಗಾದೆಯಿರುವುದು ನಿಮಗೆ ಗೊತ್ತು. ಆದರೆ, ಕೆಲವೊಂದು ದಂಪತಿಯ ಜಗಳ ಉಂಡು ಇನ್ನೇನು ಮಲಕ್ಕೋಬೇಕು ಅನ್ನೋ ಹೊತ್ತಿಗೇ ಶುರುವಾಗುತ್ತೆ! ಅದು ಕೂಡ ಜಗಳದ ಒಂದು ವೆರೈಟಿಯೇ ಇರಬಹುದು ಅಥವಾ ಮೇಲೆ ಉಲ್ಲೇಖಿಸಿರುವ ಗಾದೆಯನ್ನು ಸುಳ್ಳು ಮಾಡುವ ಛಲವೂ ಆ ದಂಪತಿಯ ‘ಹಿಡನ್ ಅಜೆಂಡಾ’ ಆಗಿರಬಹುದು ಎನ್ನಿ!

ಒಟ್ನಲ್ಲಿ, ಗಂಡ-ಹೆಂಡತಿ ‘ಏಕಪ್ರಾಯ’ದವರಾಗಿರಲಿ ಅಥವಾ ‘ಭಿನ್ನಪ್ರಾಯ’ದವರಾಗಿರಲಿ, ಒಂದೇ ‘ಅಭಿಪ್ರಾಯ’ದವರಾಗಿರಲಿ ಅಥವಾ ‘ಭಿನ್ನಾಭಿಪ್ರಾಯ’ದವರಾಗಿರಲಿ ಜಗಳ ತಪ್ಪಿದ್ದಲ್ಲ. ಇದಕ್ಕೆ ನಮ್ಮ ಕಥಾನಾಯಕ ರೋಹನ್ ಮತ್ತು ಅವನ ಪತ್ನಿ ಅಲಮೇಲು ಕೂಡ ಹೊರತಲ್ಲ. ಸಂಪ್ರದಾಯಸ್ಥ ಅಯ್ಯಂಗಾರ್ ಕುಟುಂಬದಿಂದ ಬಂದಿರುವ, ಕಚ್ಚೆಸೀರೆಯುಟ್ಟು ಹಣೆಯಲ್ಲಿ ಕಾಸಗಲದ ಪುಡಿ-ಕುಂಕುಮ ಇಟುಕೊಳ್ಳುವ ಅಲಮೇಲುವಿಗೂ, ತನಗಿಷ್ಟವಿಲ್ಲದಿದ್ದರೂ ಹಿರಿಯರ ಆಗ್ರಹದಂತೆ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಿರುವ Ultra-Modern ಸಾಫ್ಟ್‌ವೇರ್ ಎಂಜಿನಿಯರ್ ರೋಹನ್‌ಗೂ ನಡುವೆ ಕಾಲಕಾಲಕ್ಕೆ ಇಂಥ ಜಗಳ ನಡೆಯೋದುಂಟು. ಎರಡು ವಿಭಿನ್ನ ಸಂಸ್ಕೃತಿಗಳ ನಡುವಿನ ತಿಕ್ಕಾಟದ ಸ್ವರೂಪದಲ್ಲಿರುವ ಅಂಥ ಜಗಳದ ಪರಿಯನ್ನು, ‘ಕಲಹಪ್ರಿಯ’ ಕಿತಾಪತಿ ಓದುಗರಿಗಾಗಿ ಇಲ್ಲಿ ಹಂಚಿಕೊಳ್ಳಲಾಗಿದೆ. ಒಮ್ಮೆ ಓದಿ ಕಣ್ಣು ತಂಪು ಮಾಡಿಕೊಳ್ಳಿ!



ಹೇಳಿ-ಕೇಳಿ ರೋಹನ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವುದರಿಂದ, ‘ವಾರಕ್ಕೆ 70-80 ಗಂಟೆ ಕೆಲಸ ಮಾಡಬೇಕು’ ಎಂಬ ಕೆಲ ಉದ್ಯಮಪತಿಗಳ ಪರೋಕ್ಷ ಫರ್ಮಾನಿನ ಅನುಸಾರ ಕಚೇರಿಯಲ್ಲಿ ಹೇಸರಗತ್ತೆಯಂತೆ ದಿನಪೂರ್ತಿ ದುಡಿದು, ರೋಸತ್ತು, ರಾತ್ರಿ 12 ಗಂಟೆಗೆ ಮನೆಗೆ ಮರಳಿದ್ದಾನೆ. ಇದು ಗಂಡ-ಹೆಂಡತಿ ನಡುವಿನ ಜಗಳ ಆರಂಭವಾಗುವುದಕ್ಕೆ ಮುಂಚಿನ ಸಂದರ್ಭ. ಅನುಮಾನಗ್ರಸ್ತೆ ಅಲಮೇಲುವಿನ ‘ಕೊಂಕು ಸಂಪ್ರದಾಯಸ್ಥ’ ಭಾಷೆಯ ಪ್ರಶ್ನೆಗಳಿಗೆ ತನ್ನ Software Technology Languageನಲ್ಲೇ ಉತ್ತರಿಸುವಷ್ಟರ ಮಟ್ಟಿಗೆ ರೋಹನ್ ರೋಸತ್ತು ಬಿಟ್ಟಿದ್ದಾನೆ... ಮುಂದಿನದನ್ನು ನೀವೇ ಆಸ್ವಾದಿಸಿ...

ಅಲಮೇಲು: ಓಹೋಹೋ... ನನ್ ಪತಿದೇವರು ಕೊನೆಗೂ ಮನೆಗೆ ಬಂದ್ರಪ್ಪಾ! 18 ಗಜದ ಸೀರೆ ಸುತ್ಕೊಂಡು ಒಂದು ಹೆಣ್ಣು ಪ್ರಾಣಿ ಮನೆ ಮೂಲೇಲಿ ಬಿದ್ದಿರುತ್ತೆ ಅಂತ ರಾಯರಿಗೆ ಈಗ ನೆನಪಾಯ್ತೇನೋ... ಪಾಪ!

ರೋಹನ್: Good evening honey... I am just now logged in...

ಅಲಮೇಲು: ಡೈಮಂಡ್ ನೆಕ್ಲೆಸ್ ತಂದುಕೊಡಿ ಅಂತ ಮೂರು ತಿಂಗಳಿಂದ ನಾನು ಒಂದೇ ಸಮನೆ ಶಂಖ ಹೊಡ್ಕೋತಾನೇ ಇದ್ದೀನಿ... ಇವತ್ತು ಸಂಬಳದ ದಿನ... ಇವತ್ತಾದ್ರೂ ತಂದ್ರಾ..?

ರೋಹನ್: Bad command or file name...

ಅಲಮೇಲು: ಆದ್ರೆ ನಾನು ಬೆಳಗ್ಗೇನೇ, ನೀವು ಮನೆಯಿಂದ ಆಫೀಸಿಗೆ ಹೊರಡೋಕ್ಕೆ ಸಿದ್ಧವಾಗಿದ್ದಾಗ ಮೂರು ಮೂರು ಸಲ ಹೇಳಿದ್ನಲ್ರೀ..?

ರೋಹನ್: Erroneous syntax...

ಅಲಮೇಲು: ಹೋಗ್ಲೀ... ಹೊಸಾ ಕಾಂಜೀವರಂ ಸೀರೆ ತಂದ್ಕೊಡೋ ವಿಷಯ ಏನಾಯ್ತು...?

ರೋಹನ್: Variable not found....

ಅಲಮೇಲು: ಕೊನೇಪಕ್ಷ ನಿಮ್ ಕ್ರೆಡಿಟ್ ಕಾರ್ಡಾದ್ರೂ ಕೊಡಿ... ನಾನು ಬೆಳಗ್ಗೇನೇ ಸ್ವಲ್ಪ ಶಾಪಿಂಗ್ ಮಾಡ್ಬೇಕು... ನಿಮ್ಮನ್ನ ನೆಚ್ಕೊಂಡು ಕೂರೋಕ್ಕೆ ಆಗಲ್ಲ...

ರೋಹನ್: Sharing Violation... Access denied...

ಅಲಮೇಲು: ನೀವು ಮದುವೆ ಆಗಿರೋದು ನನ್ನನ್ನೋ ಅಥವಾ ನಿಮ್ಮ ಕಂಪ್ಯೂಟರ್ ಅನ್ನೋ..? ನೀವು ಕೊನೇ ತನಕ ಹೀಗೇ ಬೇಜವಾಬ್ದಾರಿತನದಿಂದ್ಲೇ ಇರ್ತೀರಾ..? ಹೆಂಡತಿ ಆಸೆ ಪಟ್ಟಿದ್ದನ್ನ ತಂದುಕೊಡಬೇಕು ಅನ್ನೋ ಜಾಯಮಾನ ನಿಮಗೆ ಇಲ್ಲವೇ ಇಲ್ವಾ..?

ರೋಹನ್: Too many parameters. Abort...!!

ಅಲಮೇಲು: ಹೋಗೀ ಹೋಗೀ ನಿಮ್ಮಂಥಾ ಅರಸಿಕರನ್ನ ಮದುವೆಯಾದೆ ನೋಡಿ, ಅದು ನನ್ನ ತಪ್ಪು. ನಿಮ್ಮ ಬದಲಿಗೆ, ನನ್ ಹಿಂದೆ ಬಿದ್ದಿದ್ದ ಆ ರಂಗನಾಥಸ್ವಾಮಿ ಗುಡಿ ಪೂಜಾರಿ ಅಳಸಿಂಗಾಚಾರಿನಾದ್ರೂ ನಾನು ಮದುವೆ ಆಗಿದ್ದಿದ್ರೆ ಪ್ರತಿದಿನವೂ ಬೆಳಗ್ಗೆ ಎರಡೆರಡು ದೊನ್ನೆ ತುಂಬಾ ಸಿಹಿ ಪೊಂಗಲ್, ಖಾರಾ ಪೊಂಗಲ್ ಆದ್ರೂ ಸಿಕ್ತಾ ಇತ್ತು, ಮಧ್ಯಾಹ್ನದ ಹೊತ್ತಿಗೆ ಪುಷ್ಕಳವಾಗಿ ಪುಳಿಯೋಗರೆ ಕತ್ತರಿಸಬಹುದಿತ್ತು... ನಿಮ್ಮಿಂದ ನಂಗೆ ಸಿಕ್ಕಿದ್ದು ತಿಪಟೂರು ತೆಂಗಿನಕಾಯಿ ಕರಟ ಅಷ್ಟೇ. ನಿಮ್ಮನ್ನ ಮದುವೆ ಆಗಿ ನಾನು ದೊಡ್ಡ ಮುಠ್ಠಾಳ ಕೆಲಸ ಮಾಡಿದೆ ಅನ್ಸುತ್ತೆ..!!

ರೋಹನ್: Data type mismatch...

ಅಲಮೇಲು: ಅಯ್ಯೋ...ಅಮ್ಮಾ... ಕಡವುಳೇ... ಮಧುರೈ ಮೀನಾಕ್ಷೀ.. ಕಂಚೀ ಕಾಮಾಕ್ಷೀ... ನಾನ್ ಯೇನ್ ಪಾವಂ ಪಣ್ಣಿಟ್ಟೇನ್? ನಾನು ಏನು ಪಾಪ ಮಾಡಿದ್ದೆ ಅಂತ ಈ ಗೂಬೆಯನ್ನ ನನಗೆ ಗಂಟುಹಾಕಿಬಿಟ್ಟೇ ತಾಯೀ? ಅಯ್ಯಾ ಪತಿದೇವಾ... ನೀವೊಂದು ಕೆಲಸಕ್ಕೆ ಬಾರದ ಘೂಶ್ಲು ಅಂತ ಈಗ ಅರ್ಥವಾಗ್ತಿದೆ...

ರೋಹನ್: Default Parameter....

ಅಲಮೇಲು: ನನ್ನ ಡೈಮಂಡ್ ನೆಕ್ಲೆಸ್ ಕಥೆ ನೆಗೆದುಬಿದ್ದು ಹೋಯ್ತು ಅಂತ ಗೊತ್ತಾಯ್ತು... ಕಡೇಪಕ್ಷ ದುಡ್ಡು ಏನು ಮಾಡಿದ್ರಿ, ಹೇಳಿ..? ಈ ಸಲದ ಸಂಬಳ ಎಲ್ಲಿ ಹೋಯ್ತು...?

ರೋಹನ್: Acess denied. File in Use...

ಅಲಮೇಲು: ಇದಕ್ಕೂ ಉತ್ತರ ಇಲ್ವಾ, ಹೋಗ್ಲಿ ಬಿಡಿ. ಅಂದ್ಹಾಗೆ ರಾಯರೇ... ಥೇಟು ಮಾರ್ಗರೇಟ್ ಗೆಟಪ್‌ನಲ್ಲಿದ್ದ ಒಬ್ಬಳು ಬಿನ್ನಾಣಗಿತ್ತಿ ಇವತ್ತು ಬೆಳಗ್ಗೆ ನಿಮ್ ಜತೆ ಕಾರ್‌ನಲ್ಲಿ ಕೂತಿದ್ಲಲ್ಲಾ..? ಯಾರವಳು..?

ರೋಹನ್: System unstable. Press CTRL+ALT+DEL to Reboot..

ಅತ್ಯಾಧುನಿಕ ಅಪಾರ್ಥಕೋಶ...

ಅಪಾರ್ಥಸಾರಥಿ
naadigru@gmail.com

- **ಬೇವು-ಬೆಲ್ಲ:** ಚುನಾವಣೆಯಲ್ಲಿ ಯಾರಾದರೂ ಅಯೋಗ್ಯನನ್ನು ಗೆಲ್ಲಿಸಿದರೆ, ಇದರಲ್ಲಿ ಮೊದಲನೆಯದು ಮತದಾರರಿಗೆ ಕಟ್ಟಿಟ್ಟ ಬುತ್ತಿ, ಹಾಗೆ ಗೆದ್ದವನಿಗೆ ಮಾತ್ರ ಎರಡನೆ ಯದು 5 ವರ್ಷಗಳವರೆಗೆ ನಿಕ್ಕಿ!
- **ಅಂಗನವಾಡಿ ಕೇಂದ್ರ:** ‘ತಲೆಯೆತ್ತಿ’ ಬದುಕುವುದು ಹೇಗೆ ಎಂಬುದನ್ನು ಮಕ್ಕಳಿಗೆ ಪುಟ್ಟ ವಯಸ್ಸಿನಿಂದಲೇ ಕಲಿಸಬೇಕಾದ ಈ ನೆಲೆಯು, ‘ಚಾವಣಿ ಕುಸಿದು ಬಿದ್ರೆ ಏನಪ್ಪಾ ಗತಿ?’ ಎಂಬ ಭಯದಿಂದ ಮಕ್ಕಳು ಪಾಠ ಕೇಳುವ ಬದಲು ಯಾವಾಗಲೂ ‘ತಲೆಯೆತ್ತಿ’ ಸೂರಿನೆಡೆಗೇ ದಿಟ್ಟಿಸಿಕೊಂಡು ಕೂರುವಂತೆ ಮಾಡುತ್ತೆ!
- **ನಿಗಮ-ಮಂಡಳಿ:** ಪ್ರಜಾಪ್ರತಿನಿಧಿ ಸಭೆಯಲ್ಲಿ ಕೂರುವ ಅಥವಾ ಮಂತ್ರಿಯಾಗುವ ಭಾಗ್ಯ ಸಿಗದವರು, ಈ ಇಬ್ಬರು ಬಿನ್ನಾಣಗಿತ್ತಿ ಯರಿಗೆ ‘ಲೈನು ಹೊಡೆಯಲು’ ಯತ್ನಿಸುವು ದುಂಟು..!
- **ವನವಾಸ:** ತ್ರೇತಾಯುಗದಲ್ಲಿ ಶ್ರೀರಾಮ-ಸೀತೆ-ಲಕ್ಷ್ಮಣರೂ, ದ್ವಾಪರಯುಗದಲ್ಲಿ ಪಾಂಡವರೂ ಅನುಭವಿಸಿದ ಸಂಕಷ್ಟಪರ್ವವಿದು; ಈ ಕಲಿಯುಗದಲ್ಲಿ ಬಹುತೇಕ ಕ್ಷೇತ್ರಗಳ ಮತದಾರರಿಗೆ ಚುನಾವಣೆಯ ನಂತರದಲ್ಲಿ ಐದು ವರ್ಷದ ಅವಧಿಗೆ ಇದು ಒದಗುತ್ತದೆ.
- **ನಾಮಪತ್ರ:** ಚುನಾವಣಾ ಕ್ಷೇತ್ರವೊಂದರ ಮತದಾರರ ಹಣೆಯ ಮೇಲೆ ಐದು ವರ್ಷದವರೆಗೆ ‘ನಾಮ’ ಹಾಕುವುದಕ್ಕೆ ಪೂರ್ವಭಾವಿಯಾಗಿ ಸಲ್ಲಿಸಬೇಕಾಗಿ ಬರುವ, ಲಗತ್ತುಗಳೊಂದಿಗಿನ ‘ದಾಖಲೆಪತ್ರ’.

- **ನಟ್ಟು-ಬೋಲ್ಟು:** ‘ಟೈಟು’ ಮಾಡಿಸಿಕೊಳ್ಳಲೆಂದೇ ಜನ್ಮವೆತ್ತಿರುವ ನತದೃಷ್ಟ ಹತಾರಗಳು..!
- **‘ಕಾಂಗ್ರೆಸ್’ ಕಡ್ಲೇಕಾಯಿ ಬೀಜ:** ‘ಬಿಜೆಪಿ’ಯವರು ನಖಶಿಖಾಂತವಾಗಿ ದ್ವೇಷಿಸುವ ಕುರುಕಲು ತಿಂಡಿ.

ಹಲ್‌ಬಿಡಿ ಶಾಸನ

- **ಶಿಕ್ಷಕರು:** ಲೇಯ್ ಸೋಮೂ, ಒಂದು ಮೋಸಂಬಿ ಹಣ್ಣಿಗೆ 5 ರುಪಾಯಿಯಾದರೆ, ಹತ್ತು ಮೋಸಂಬಿ ಹಣ್ಣಿಗೆ ಎಷ್ಟಾಗುತ್ತೋ?
- **ಸೋಮು:** ಎಷ್ಟಾಗುತ್ತೆ ಅಂದ್ರೇ... ಅಂದ್ರೇ...
- **ಶಿಕ್ಷಕರು:** ಲೋ ಮುಠ್ಠಾಳ, ಒಂದು ಮೂಸಂಬಿ ಹಣ್ಣಿಗೆ 5 ರುಪಾಯಿಯಾದರೆ 10 ಮೂಸಂಬಿಗೆ 50 ರುಪಾಯಿ ಆಗುತ್ತೆ. ಇಷ್ಟು ಸರಳ ಗಣಿತವೂ ನಿಂಗೆ ಗೊತ್ತಿಲ್ವಾ?
- **ಸೋಮು:** ಅಯ್ಯೋ ಗೊತ್ತು ಸರ್.... ಓ! ನೀವು ಮೋಸಂಬಿ ಹಣ್ಣು ಅಂತಾನಾ ಕೇಳಿದ್ದು, ನಾನು ಕಿತ್ತಳೆ ಹಣ್ಣು ಅಂದ್ಕೊಂಡಿದ್ದೆ. ಹಾಗಾಗಿ ತಕ್ಷಣ ಹೇಳೋಕ್ಕೆ ಆಗ್ಲಿಲ್ಲ ಅಷ್ಟೇ!
- **ಶಿಕ್ಷಕರು:** ಮುಂಡೇದೇ... ಮುಂದೆ ನೀನೊಬ್ಬ ಪುಢಾರಿ ಆಗೋದು ಗ್ಯಾರಂಟಿ ಕಣೋ!

***

- **ಶಿಕ್ಷಕರು:** ಲೋ ಗೋಪೀ, ನಾನು ಹೇಳಿದ್ದೇನು, ನೀನು ಮಾಡಿದ್ದೇನು? ಇಷ್ಟೊಂದು ಪೊಗರಾ ನಿಂಗೆ?
- **ಗೋಪಿ:** ಯಾಕ್ ಸರ್? ನಾನೇನು ಮಾಡಿದೆ?
- **ಶಿಕ್ಷಕರು:** ಕ್ರಿಕೆಟ್ ಪಂದ್ಯದ ಬಗ್ಗೆ ಒಂದು ಪ್ರಬಂಧ ಬರೆಯಿರಿ ಅಂತ ತಾನೇ ನಾನು ಹೇಳಿದ್ದು?
- **ಗೋಪಿ:** ಹೌದು ಸರ್...
- **ಶಿಕ್ಷಕರು:** ಪ್ರಬಂಧ ಬರೆಯೋದು ಬಿಟ್ಟು, ‘ಮಳೆ ಬಂದ ಕಾರಣ ಕ್ರಿಕೆಟ್ ಪಂದ್ಯವನ್ನು ರದ್ದುಗೊಳಿಸಲಾಗಿದೆ’ ಅಂತ ಬರೆದಿದ್ದೀಯಲ್ಲೋ ಭಡವಾ...!

ಸಮಾಚಾರ ಸಣ್ಣದಲ್ಲ

ಕಾಶಿನಾಥ್ ಶಿವಾಳ್ಕರ್ ನಿಧನ ಬಿಸಿಸಿಐಯಿಂದ ಸಂತಾಪ

ಮುಂಬೈ: ಕ್ರಿಕೆಟ್ ವಲಯದಲ್ಲಿ ಪ್ಯಾಡಿ ಎಂದೇ ಜನಪ್ರಿಯರಾಗಿದ್ದ ಮುಂಬೈನ ಮಾಜಿ ಸ್ಪಿನ್ನರ್ ಪದ್ಮಾಕರ್ ಕಾಶಿನಾಥ್ ಶಿವಾಳ್ಕರ್ ಸೋಮವಾರ ಮುಂಬೈನಲ್ಲಿ ನಿಧನರಾದರು. ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದ ಎಡಗೈ ಸ್ಪಿನ್ನರ್ ಆಗಿದ್ದ ಶಿವಾಳ್ಕರ್, 1961-62 ಮತ್ತು 1987-88ರ ನಡುವೆ

124 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ ಮತ್ತು 19.69 ಸರಾಸರಿಯಲ್ಲಿ 589 ವಿಕೆಟ್‌ಗಳನ್ನು ಪಡೆದಿದ್ದಾರೆ. ಬಿಸಿಸಿಐ ಅವರಿಗೆ 2017ರಲ್ಲಿ ಸಿ.ಕೆ ನಾಯುಡು ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಬಿಸಿಸಿಐ ಕೂಡ ಪದ್ಮಾಕರ್ ಶಿವಾಳ್ಕರ್ ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸಿದೆ. ಪದ್ಮಾಕರ್ ಶಿವಾಳ್ಕರ್ ಅವರ ಗೌರವಾರ್ಥವಾಗಿ, ಟೀಮ್ ಇಂಡಿಯಾದ ಆಟಗಾರರು ಮಂಗಳವಾರ ದುಬೈನಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಕೈಗೆ ಕಪ್ಪು ಪಟ್ಟಿಯನ್ನು ಧರಿಸಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಾಮಾಜಿಕ ಮಾಧ್ಯಮ ಟ್ವಿಟರ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಖೊ-ಖೊ ಸಂಸ್ಥೆ ಸಮಿತಿ: ಲೋಕೇಶ್ವರ ಆಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ಖೊ-ಖೊ ಸಂಸ್ಥೆಯ ಕಾರ್ಯಕಾರಿ ಸಮಿತಿ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಲೋಕೇಶ್ವರ ಅವಿರೋಧ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಮಂಜುನಾಥ್ ಜಿ. ವೈ., ಜಗದೀಶ್, ಮುರಳೀಧರ್ ಕೆ. ಬಿ. ಭೀಮಣ್ಣ, ಜಯರಾಂ ಆಯ್ಕೆಯಾಗಿದ್ದಾರೆ. ಗೌರವ ಕಾರ್ಯದರ್ಶಿಯಾಗಿ ರಾಮಲಿಂಗಪ್ಪ, ಖಜಾಂಚಿಯಾಗಿ ಶೋಭಾ ನಾರಾಯಣ್, ಜಂಟಿ ಕಾರ್ಯದರ್ಶಿಯಾಗಿ ಟಿ. ಕರಿಬಸಪ್ಪ ಹಾಗೂ ಜೋಸೆಫ್ ವೇದಕುಮಾರ್ ಗೆಲುವು ಸಾಧಿಸಿದ್ದಾರೆ. ಸಂಸ್ಥೆಯ ಆಡಳಿತಾವಧಿ ಮುಂದಿನ ನಾಲ್ಕು ವರ್ಷಗಳ ಕಾಲ ಇರಲಿದೆ.

ವಿರಾಮ
ಪ್ರತಿ ಭಾನುವಾರ

ವಿಶ್ವಕಪ್ ಸೋಲಿಗೆ ಸೇಡು ತೀರಿಸಿಕೊಂಡ ಭಾರತ | ಆಸೀಸ್ ವಿರುದ್ಧ 4 ವಿಕೆಟ್ ಜಯ

ಭಾರತ ಫೈನಲ್‌ಗೆ ಲಗ್ಗೆ

ದುಬೈ: ಮಂಗಳವಾರ ಇಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯದಲ್ಲಿ ಟೀಮ್ ಇಂಡಿಯಾ ಮಾಜಿ ನಾಯಕ ವಿರಾಟ್ ಕೊಹ್ಲಿ ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಭಾರತವು 4 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ತಂಡವನ್ನು ಬಗ್ಗು ಬಡಿದು ಫೈನಲ್ ಪ್ರವೇಶಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆಸೀಸ್, ನಾಯಕ ಸ್ಟೀವ್ ಸ್ಮಿತ್ (73) ಹಾಗೂ ಅಲೆಕ್ಸ್ ಕ್ಯಾರಿ (61) ಬಾರಿಸಿದ ಆಕರ್ಷಕ ಅರ್ಧ ಶತಕಗಳ ಹೊರತಾಗಿಯೂ 49.3 ಓವರ್‌ಗಳಲ್ಲಿ 264 ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು.

ಅನುಭವಿ ವೇಗದ ಬೌಲರ್ ಮೊಹಮ್ಮದ್ ಶಮಿ ಆರಂಭದಲ್ಲೇ ಆಸ್ಟ್ರೇಲಿಯಾಕ್ಕೆ ಆಘಾತ ನೀಡಿದರು. ಆರಂಭಿಕ ಬ್ಯಾಟರ್ ಕೂಪರ್ ಕೊನೊಲ್ಲಿ ಖಾತೆ ತೆರೆಯುವಲ್ಲಿ ವಿಫಲರಾದರು. ಈ ಹಂತದಲ್ಲಿ ಆಕ್ರಮಣಕಾರಿಯಾಗಿ ಬ್ಯಾಟ್ ಬೀಸಿದ ಟ್ರಾವಿಡ್ ಹೆಡ್ ಭಾರತಕ್ಕೆ ತಲೆನೋವಾದರು, ಆದರೆ ಅವರನ್ನು ವರುಣ್ ಚಕ್ರವರ್ತಿ ಪೆವಿಲಿಯನ್‌ಗೆ ಕಳುಹಿಸಿದರು, ಹೆಡ್ 33 ಬಾಲ್‌ಗಳಲ್ಲಿ 39 ರನ್ ಗಳಿಸಿದರು . ಮರ್ನಸ್ ಲಾನುಷೇನ್ (29) ಹಾಗೂ ಜೋಶ್ ಇಂಗ್ಲಿಸ್ (11) ವಿಕೆಟ್ ರವೀಂದ್ರ ಜಡೇಜಾ ಪಾಲಾಯಿತು. ಈ ಹಂತದಲ್ಲಿ ಅಲೆಕ್ಸ್ ಕ್ಯಾರಿ ಅವರೊಂದಿಗೆ ಜತೆಗೂಡಿ ಸ್ಮಿತ್ ತಂಡವನ್ನು ಮುನ್ನಡೆಸಿದರು. 96 ಬಾಲ್‌ಗಳಲ್ಲಿ 73 ರನ್ ಗಳಿಸಿದ ಸ್ಮಿತ್ ಅವರನ್ನು ಮೊಹಮ್ಮದ್ ಶಮಿ ಕ್ಲೀನ್ ಬೌಲ್ಡ್ ಮಾಡಿದರು. ಆ ನಂತರ ಗ್ಲೆನ್ ಮ್ಯಾಕ್ಸ್‌ವೆಲ್ (7) ಅವರನ್ನು ಅಕ್ಷರ್ ಪಟೇಲ್ ಕ್ಲೀನ್ ಬೌಲ್ಡ್ ಮಾಡಿದರು. ಕೆಳ ಕ್ರಮಾಂಕದಲ್ಲಿ ಬೆನ್ ಡ್ವಾರ್ಶಿಸ್ 19 ರನ್ ಗಳಿಸಿದರು. ಇನ್ನುಳಿದಂತೆ ಆ್ಯಡಂ ಜಂಪಾ 7 ಹಾಗೂ ನೇಥನ್ ಎಲ್ಲಿಸ್ 10 ರನ್ ಗಳಿಸಿದರು. ಶ್ರೇಯಸ್ ಅಯ್ಯರ್ ಅದ್ಭುತ ಫೀಲ್ಡಿಂಗ್‌ನಿಂದಾಗಿ ರನೌಟ್ ಆದ ಅಲೆಕ್ಸ್

ಕ್ಯಾರಿ 57 ಎಸೆತಗಳಲ್ಲಿ 61 ರನ್ ಗಳಿಸಿದರು. ಭಾರತದ ಪರ ಮೊಹಮ್ಮದ್ ಶಮಿ 3 ವಿಕೆಟ್, ವರುಣ್ ಚಕ್ರವರ್ತಿ, ರವೀಂದ್ರ ಜಡೇಜಾ ತಲಾ 2 ಹಾಗೂ ಹಾರ್ದಿಕ್ ಪಾಂಡ್ಯ 1 ವಿಕೆಟ್ ಪಡೆದರು.

265 ರನ್‌ಗಳ ಗುರಿ ಪಡೆದ ಭಾರತ ಪರವಾಗಿ ಶುಭ್‌ಮನ್ ಗಿಲ್ ಮತ್ತು ರೋಹಿತ್ ಶರ್ಮಾ ಬ್ಯಾಟಿಂಗ್ ಆರಂಭಿಸಿದರು. ತಂಡದ ಸ್ಕೋರ್ 30 ರನ್ ಆಗಿದ್ದಾಗ 8 ರನ್ ಗಳಿಸಿದ ಗಿಲ್ ತಮ್ಮ ವಿಕೆಟ್ ಕಳೆದುಕೊಂಡರು. ಆ ಬಳಿಕ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಭಾರತದ ಇನ್ನಿಂಗ್ಸ್ ಕಟ್ಟಿ ಬೆಳೆಸಿದರು. ಆದರೆ ತಂಡದ ಸ್ಕೋರ್ 43 ರನ್ ಆದಾಗ 29 ಬಾಲ್‌ಗಳಲ್ಲಿ 28 ರನ್ ಗಳಿಸಿದ ನಾಯಕ ರೋಹಿತ್ ಶರ್ಮಾ ವಿಕೆಟ್ ಕಳೆದುಕೊಂಡರು. ರೋಹಿತ್ ಜಾಗಕ್ಕೆ ಬಂದ ಶ್ರೇಯಸ್ ಅಯ್ಯರ್ ಕೊಹ್ಲಿಗೆ ಉತ್ತಮ ಜತೆಯಾಟ ನೀಡಿದರು. 62 ಬಾಲ್‌ಗಳಲ್ಲಿ 45 ರನ್ ಗಳಿಸಿ ಜಂಪಾಗೆ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಅಕ್ಷರ್ ಪಟೇಲ್-ಕೊಹ್ಲಿ ಜೋಡಿ ಇನ್ನಿಂಗ್ಸ್ ಮುಂದುವರಿಸಿದರು. 30 ಬಾಲ್‌ಗಳಲ್ಲಿ 27 ರನ್ ಗಳಿಸಿ ಅಕ್ಷರ್ ಪಟೇಲ್ ಪೆವಿಲಿಯನ್‌ಗೆ ತೆರಳಿದರು. ಆ ಬಳಿಕ ತಂಡದ ಮೊತ್ತ 225 ಆಗಿದ್ದಾಗ 98 ಬಾಲ್‌ಗಳಲ್ಲಿ 84 ರನ್ ಗಳಿಸಿದ ಕೊಹ್ಲಿ, ಜಂಪಾ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಕಳೆದುಕೊಂಡರು. ಹಾರ್ದಿಕ್ ಪಾಂಡ್ಯ 24 ಬಾಲ್‌ಗಳಲ್ಲಿ ಆಕರ್ಷಕ 28 ರನ್ ಗಳಿಸಿಕೊಂಡರು. ಜಡೇಜಾ 7 ರನ್ ಗಳಿಸಿ ಅಜೇಯರಾಗುಳಿದರು. ಭಾರತ ತಂಡವು 49.3 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 264 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಭಾನುವಾರ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಬುಧವಾರ ನಡೆಯಲಿರುವ ದ. ಆಫ್ರಿಕಾ-ನ್ಯೂಜಿಲೆಂಡ್ ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದೆ.

ಹೆಚ್ಚು ಕ್ಯಾಚ್: ಕೊಹ್ಲಿ ಸಾಧನೆ

ದುಬೈ: ಭಾರತ ತಂಡದ ಮಾಜಿ ನಾಯಕ ವಿರಾಟ್ ಕೊಹ್ಲಿ ಫೀಲ್ಡಿಂಗ್‌ನಲ್ಲಿ ನೂತನ ಮೈಲುಗಲ್ಲು ಸ್ಥಾಪಿಸಿದ್ದಾರೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ಕ್ಯಾಚ್‌ಗಳನ್ನು ಪಡೆದ ಮೊದಲ ಭಾರತೀಯ ಆಟಗಾರ (ವಿಕೆಟ್ ಕೀಪರ್ ಅಲ್ಲದ) ಸಾಧನೆಗೆ ವಿರಾಟ್ ಕೊಹ್ಲಿ ಭಾಜನರಾಗಿದ್ದಾರೆ, ಆ ಮೂಲಕ ಟೀಮ್ ಇಂಡಿಯಾ ಮಾಜಿ ನಾಯಕ ರಾಹುಲ್ ದ್ರಾವಿಡ್ ಅವರನ್ನು ಹಿಂದಿಕ್ಕಿದ್ದಾರೆ. ಎಲ್ಲಾ ಸ್ವರೂಪದಲ್ಲಿಯೂ ವಿರಾಟ್ ಕೊಹ್ಲಿ 335 ಕ್ಯಾಚ್‌ಗಳನ್ನು ಪಡೆದಿದ್ದು, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 334 ಕ್ಯಾಚ್‌ಗಳನ್ನು ಪಡೆದಿರುವ ರಾಹುಲ್ ದ್ರಾವಿಡ್ ಅವರಿಗಿಂತ ಇದೀಗ ಮುಂದಿದ್ದಾರೆ.

ಆರ್‌ಸಿಬಿ ಮುನ್ನಡೆಸಲಿರುವ ರಜತ್ ಪಾಟೀದಾರ್

ಐಪಿಎಲ್‌ನ ಆರ್‌ಸಿಬಿ ಅನ್‌ಬಾಕ್ಸ್ ಮಾರ್ಚ್ 17ರಂದು ಕಾರ್ಯಕ್ರಮ

ಬೆಂಗಳೂರು: ಐಪಿಎಲ್ 18ನೇ ಆವೃತ್ತಿಗೆ (2025) ಪೂರ್ವಭಾವಿಯಾಗಿ ಅಭಿಮಾನಿಗಳಿಗಾಗಿ ಆರ್‌ಸಿಬಿ ತಂಡ ಈ ಸಲವೂ ವಿಶೇಷ ಕಾರ್ಯಕ್ರಮವೊಂದನ್ನು ಏರ್ಪಡಿಸಿದೆ. ಕಳೆದ ಮೂರು ವರ್ಷಗಳಿಂದ 'ಆರ್‌ಸಿಬಿ ಅನ್‌ಬಾಕ್ಸ್' ಹೆಸರಿನಲ್ಲಿ ನಡೆಯುತ್ತಾ ಬಂದಿರುವ ಕಾರ್ಯಕ್ರಮ ಈ ಬಾರಿ ಮಾರ್ಚ್ 17ರಂದು ನಡೆಯಲಿದೆ. ಚಿನ್ನ ಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಆರ್‌ಸಿಬಿ ಅನ್‌ಬಾಕ್ಸ್‌ನಲ್ಲಿ ತಂಡದ ಹೊಸ ಜೆರ್ಸಿಯನ್ನೂ ಅನಾವರಣಗೊಳಿಸುವ ಜತೆಗೆ, ಅಭಿಮಾನಿಗಳ ಎದುರು ಹಲವು ಅಚ್ಚರಿಯ ಮತ್ತು ವಿಶೇಷ ಘೋಷಣೆಗಳನ್ನು ಮಾಡುವುದು ಈ ಬಾರಿಯ ವಿಶೇಷತೆ ಎನ್ನಲಾಗುತ್ತಿದೆ.

ಕಳೆದ ಬಾರಿ ರಾಯಲ್ ಚಾಲೆಂಜರ್ ಬ್ಯಾಂಗಲೂರ್ ಹೆಸರನ್ನು ರಾಯಲ್ ಚಾಲೆಂಜರ್ ಬೆಂಗಳೂರು ಎಂದು ಬದಲಾಯಿಸಲಾಗಿತ್ತು. ಇದರ ಜತೆಗೆ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಚೊಚ್ಚಲ ಕಪ್ ಗೆದ್ದ ಆರ್‌ಸಿಬಿ ತಂಡವನ್ನು ಪುರುಷರ ತಂಡ ಗಾರ್ಡ್ ಆಫ್ ಆನರ್ ನೀಡಿ ಗೌರವಿಸಲಾಗಿತ್ತು.

ರಜತ್ ಪಾಟಿದಾರ್ ಅವರು ಈ ಸಲ ಆರ್‌ಸಿಬಿ ತಂಡದ ನೂತನ ನಾಯಕನಾಗಿದ್ದಾರೆ. 2022ರಿಂದ 2024ರ ವರೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ದಕ್ಷಿಣ ಆಫ್ರಿಕಾ ಮಾಜಿ ನಾಯಕ ಫಾಫ್ ಡು ಪ್ಲೆಸಿಸ್ ಮುನ್ನಡೆಸಿದ್ದರು. ಅವರ ನಾಯಕತ್ವದಲ್ಲಿ ಆರ್‌ಸಿಬಿ ಎರಡು ಬಾರಿ ಪ್ಲೇ-ಆಫ್ಸ್‌ಗೆ ಲಗ್ಗೆ ಇಟ್ಟಿತ್ತು, ಆದರೆ ಆರ್‌ಸಿಬಿ ಚೊಚ್ಚಲ ಕಪ್ ಗೆಲ್ಲಲು ಸಾಧ್ಯವಾಗಲಿಲ್ಲ. ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಆರ್‌ಸಿಬಿ ಟೀಮ್ ಮ್ಯಾನೇಜ್‌ಮೆಂಟ್ ಇಂದೋರ್ ಮೂಲದ ರಜತ್ ಪಾಟಿದಾರ್‌ಗೆ ನಾಯಕತ್ವದ ಹೊಣೆಯನ್ನು ನೀಡಿದೆ.

ಈ ಬಾರಿಯ ಉದ್ಘಾಟನಾ ಪಂದ್ಯದಲ್ಲೇ ಆರ್‌ಸಿಬಿ ಕಣಕ್ಕಿಳಿಯಲಿದೆ. 2024ರ ಚಾಂಪಿಯನ್ ತಂಡವಾದ ಕೋಲ್ಕತಾ ನೈಟ್ ರೈಡರ್ಸ್ (ಕೆಕೆಆರ್) ತಂಡದ ವಿರುದ್ಧ ಸೆಣಸಾಡಲಿದ್ದು, ಮಾ. 22ರಂದು ಕೋಲ್ಕತಾದ ಈಡನ್ ಗಾರ್ಡನ್ಸ್‌ನಲ್ಲಿ ಈ ಹೈವೋಲ್ಟೇಜ್ ಪಂದ್ಯ ನಡೆಯಲಿದೆ.

ಆರ್‌ಸಿಬಿ ತಂಡ: ವಿರಾಟ್ ಕೊಹ್ಲಿ,ರಜತ್ ಪಾಟೀದಾರ್ (ನಾಯಕ), ಯಶ್ ದಯಾಳ್, ಜೋಶ್ ಹ್ಯಾಸಲ್‌ವುಡ್, ಫಿಲ್‌ಸಾಲ್ಟ್, ಜಿತೇಶ್ ಶರ್ಮ, ಲಿಯಾಮ್ ಲಿವಿಂಗ್‌ಸ್ಟೋನ್, ರಸಿಕ್ ಸಲಾಂ, ಸುಯಶ್ ಶರ್ಮ, ಭುವನೇಶ್ವರ್ ಕುಮಾರ್ ,ಕೃನಾಲ್ ಪಾಂಡ್ಯ, ಟಿಮ್ ಡೇವಿಡ್, ಜೇಕಬ್ ಬೆಥೆಲ್, ದೇವದತ್ ಪಡಿಕ್ಕಲ್, ನುವಾನ್ ತುಷಾರ, ರೊಮಾರಿಯೊ ಶೆರ್ಡ್, ಸ್ವಪ್ನಿಲ್ ಸಿಂಗ್, ಮನೋಜ್ ಭಾಂಡಗೆ, ಸ್ವಸ್ತಿಕ್ ಚಿಕರ, ಮೋಹಿತ್ ರಾಥೀ, ಅಭಿನಂದನ್ ಸಿಂಗ್, ಲುಂಗಿ ಎಂಗ್ಡಿ.

ನ್ಯೂಜಿಲೆಂಡ್ ವಿರುದ್ಧದ ಪಾಕ್ ಸರಣಿ | ಬಾಬರ್, ರಿಝ್ವಾನ್‌ಗೆ ಅರ್ಧಚಂದ್ರ

ಸಲ್ಮಾನ್ ಆಘಾ ಪಾಕ್ ಕ್ರಿಕೆಟ್ ನಾಯಕ

ಲಾಹೋರ್: ನ್ಯೂಜಿಲೆಂಡ್ ಪ್ರವಾಸದ ಟಿ20 ಹಾಗೂ ಏಕದಿನ ಸರಣಿಗಳಿಗೆ ಪಾಕಿಸ್ತಾನ ತಂಡವನ್ನು ಪ್ರಕಟಿಸಲಾಗಿದೆ. ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಸತತ ಬ್ಯಾಟಿಂಗ್

ವೈಫಲ್ಯ ಅನುಭವಿಸಿದ್ದ ಬಾಬರ್ ಆಝುಮ್ ಮತ್ತು ಮೊಹಮ್ಮದ್ ರಿಝ್ವಾನ್ ಅವರನ್ನು ಟಿ20 ತಂಡದಿಂದ ಕೈಬಿಡಲಾಗಿದೆ. ಪಾಕಿಸ್ತಾನ ಟಿ20 ತಂಡಕ್ಕೆ ಸಲ್ಮಾನ್ ಅಘಾ ಅವರನ್ನು ನಾಯಕ ಹಾಗೂ ಶದಾಬ್ ಖಾನ್ ಅವರನ್ನು ಉಪ ನಾಯಕನನ್ನಾಗಿ ನೇಮಿಸಲಾಗಿದೆ. 2024ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಬಳಿಕ ಶದಾಬ್ ಖಾನ್ ರಾಷ್ಟ್ರೀಯ ತಂಡದಲ್ಲಿ ಆಡಿರಲಿಲ್ಲ.

2025ರ ಸೆಪ್ಟಂಬರ್‌ನಲ್ಲಿ ನಡೆಯುವ ಟಿ20 ಏಷ್ಯಾ ಕಪ್ ಹಾಗೂ 2026ರಲ್ಲಿ ನಡೆಯುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಗಳ ನಿಮಿತ್ತ ಪಾಕಿಸ್ತಾನ ಟಿ20 ತಂಡಕ್ಕೆ ನಾಯಕನನ್ನಾಗಿ ಸಲ್ಮಾನ್ ಅಘಾ ಹಾಗೂ ಶದಾಬ್ ಖಾನ್‌ಗೆ ಕ್ರಮವಾಗಿ ನಾಯಕತ್ವ ಮತ್ತು ಉಪ ನಾಯಕತ್ವವನ್ನು ನೀಡಲಾಗಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ತನ್ನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಅಬ್ದುಲ್ ಸಮದ್, ಹಸನ್ ನವಾಝ್ ಹಾಗೂ ಮೊಹಮ್ಮದ್ ಅಲಿ ಸೇರಿ ಹೊಸ ಮುಖಗಳಿಗೆ ತಂಡದಲ್ಲಿ ಸ್ಥಾನವನ್ನು ಕಲ್ಪಿಸಲಾಗಿದೆ.

ಚಾಂಪಿಯನ್ಸ್ ಕಪ್ ಟೂರ್ನಿಯ ಪಂದ್ಯದಲ್ಲಿ ಸಮದ್ 115 ರನ್‌ಗಳನ್ನು ಕಲೆ ಹಾಕಿದ್ದರು. ಅಲ್ಲದೆ ಈ ಟೂರ್ನಿಯಲ್ಲಿ ಎರಡನೇ ಅತಿ ಹೆಚ್ಚು ರನ್ ಗಳಿಸಿದ್ದ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದರು. ಅವರು 142.47ರ ಸ್ಟ್ರೈಕ್ ರೇಟ್‌ನಲ್ಲಿ 312 ರನ್‌ಗಳನ್ನು ಕಲೆ ಹಾಕಿದ್ದರು.

ಏಕದಿನ ತಂಡಕ್ಕೆ ರಿಝ್ವಾನ್ ನಾಯಕ: ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಪಾಕಿಸ್ತಾನ ತಂಡ ವೈಫಲ್ಯ ಅನುಭವಿಸಿದರೂ ಮೊಹಮ್ಮದ್ ರಿಝ್ವಾನ್ ಅವರನ್ನು ಏಕದಿನ ತಂಡಕ್ಕೆ ನಾಯಕನನ್ನಾಗಿ ಉಳಿಸಿಕೊಳ್ಳ ಲಾಗಿದೆ.

ಬಲ ಪಾದದ ಗಾಯದಿಂದ ಗುಣಮುಖ ರಾಗುತ್ತಿರುವ ಸೈಮ್ ಆಯುಬ್ ಅವರನ್ನು ಎರಡು ಸರಣಿಗಳಿಗೆ ವಿಶ್ರಾಂತಿ ನೀಡಲಾಗಿದೆ. ಜನವರಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಕೇಪ್‌ಟೌನ್ ಟೆಸ್ಟ್‌ನಲ್ಲಿ ಸೈಯಮ್ ಆಯುಬ್ ಗಾಯಕ್ಕೆ ತುತ್ತಾಗಿದ್ದರು. ಮಾರ್ಚ್ 16ರಿಂದ ಟಿ20 ಪಂದ್ಯಗಳು ಹಾಗೂ ಮಾರ್ಚ್ 29ರಿಂದ ಏಕದಿನ ಸರಣಿಯೂ ನಡೆಯಲಿದೆ.

ಕುಸ್ತಿಪಟು ಸಾಗರ್ ಹತ್ಯೆ ಪ್ರಕರಣ | ದೆಹಲಿ ಹೈಕೋರ್ಟ್ ತೀರ್ಪು

ಸುಶೀಲ್ ಕುಮಾರ್‌ಗೆ ಜಾಮೀನು

ದೆಹಲಿ: ಕುಸ್ತಿಪಟು ಸಾಗರ್ ಧಂಕರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ದೆಹಲಿಯ ತಿಹಾರ್



ಜೈಲು ಸೇರಿದ್ದ ಅವಳಿ ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿಪಟು, ಸುಶೀಲ್ ಕುಮಾರ್‌ಗೆ ದೆಹಲಿ ಹೈಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ. ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಸಾಗರ್ ಧಂಕರ್ ಅವರನ್ನು ಥಳಿಸಿ ಹತ್ಯೆಗೈದ ಆರೋಪದ ಮೇಲೆ 2021ರ ಮೇ ತಿಂಗಳಿನಲ್ಲಿ ಸುಶೀಲ್ ಕುಮಾರ್ ಅವರನ್ನು ಬಂಧಿಸಲಾಗಿತ್ತು, ಆದರೆ 2023ರಲ್ಲಿ ಮೊಣಕಾಲು ಶಸ್ತ್ರಚಿಕಿತ್ಸೆಗಾಗಿ ಅವರಿಗೆ 7 ದಿನಗಳ ಕಾಲ ಮಧ್ಯಂತರ ಜಾಮೀನು ನೀಡಲಾಗಿತ್ತು.

2021ರ ಮೇ 4ರಂದು ದೆಹಲಿಯ ಛತ್ರಸಾಲ್ ಕ್ರೀಡಾಂಗಣದ ಪಾರ್ಕಿಂಗ್ ಸ್ಥಳದಲ್ಲಿ ಸಾಗರ್ ಧಂಕರ್ ಮತ್ತು ಅವರ ಸ್ನೇಹಿತರಾದ ಜೈ ಭಗವಾನ್ ಹಾಗೂ ಭಹತ್ ಮೇಲೆ ಆಸ್ತಿ ವಿವಾದದ ಹಿನ್ನೆಲೆಯಲ್ಲಿ ಸುಶೀಲ್ ಕುಮಾರ್ ಹಲ್ಲೆನಡೆಸಿ ತಲೆ ಮರೆಸಿಕೊಂಡಿದ್ದರು. ಪ್ರತಿನಿತ್ಯ ವಾಸದ ಸ್ಥಳ ಬದಲಿಸುತ್ತಿದ್ದ ಅವರು ಸಿಮ್ ಕಾರ್ಡ್‌ಗಳನ್ನೂ ಪದೇ ಪದೇ ಬದಲಿಸುತ್ತಿದ್ದರು. ಹೀಗಾಗಿ ಲುಕ್‌ಔಟ್ ನೋಟಿಸ್ ಹೊರಡಿಸಿ, ಮಾಹಿತಿ ನೀಡುವವರಿಗೆ ಬಹುಮಾನ ಘೋಷಿಸಬೇಕಾಯಿತು. ಅಂತಿಮ ಅಸ್ತ್ರವಾಗಿ ನಿರೀಕ್ಷಣಾ ಜಾಮೀನಿಗೂ ಅರ್ಜಿ ಹಾಕಿದ್ದರು, ಆದರೆ ನ್ಯಾಯಾಲಯ ಅದನ್ನು ತಿರಸ್ಕರಿಸಿ ಅವರಿಗೆ ಬಲವಾದ ಪೆಟ್ಟು ನೀಡಿತ್ತು. ಕೆಲ ದಿನಗಳ ಬಳಿಕ ಅವರನ್ನು ಬಂಧಿಸಿ ಹತ್ಯೆಯ ಪ್ರಮುಖ ಆರೋಪಿಯನ್ನಾಗಿ ಮಾಡಿ, ದೆಹಲಿ ಪೊಲೀಸರು 170 ಪುಟಗಳ ಚಾರ್ಜ್‌ಶೀಟ್ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸುಶೀಲ್ ಕುಮಾರ್ ದೇಶದ ಖ್ಯಾತ ಕುಸ್ತಿಪಟುವಾಗಿದ್ದು, 2008ರಲ್ಲಿ ನಡೆದಿದ್ದ ಬೀಜಿಂಗ್ ಒಲಿಂಪಿಕ್ಸ್ ಕಂಚಿನ ಪದಕ ಮತ್ತು 2012 ರಲ್ಲಿ ಲಂಡನ್‌ನಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಆದರೆ ಆ ಬಳಿಕ ಕೊಲೆ ಆರೋಪದಲ್ಲಿ ಜೈಲು ಸೇರಿ ತಮ್ಮ ಕುಸ್ತಿ ವೃತ್ತಿ ಬದುಕನ್ನು ಹಾಳು ಮಾಡಿಕೊಂಡರು.

ಅನೇಕ ಕುಸ್ತಿ ಟೂರ್ನಿಗಳಲ್ಲಿ ಚಾಂಪಿಯನ್ ಪಟ್ಟಗಳನ್ನು ಅಲಂಕರಿಸಿದ್ದ ಸುಶೀಲ್ ಆಗಾಗ ತೋರಿದ ದುರ್ವರ್ತನೆಗಳಿಂದಲೂ ಸುದ್ದಿಯಾಗಿದ್ದರು.

2014ರ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲು ಅವಕಾಶ ನೀಡದ್ದಕ್ಕೆ ಬೇಸರಗೊಂಡು ಏಷ್ಯನ್ ಕ್ರೀಡಾಕೂಟದಿಂದ ಕೊನೆಯ ಕ್ಷಣದಲ್ಲಿ ಹಿಂದೆ ಸರಿದು, ಭಾರತ ಕುಸ್ತಿ ಫೆಡರೇಷನ್ ಮೇಲೆ ಸೇಡು ತೀರಿಸಿಕೊಂಡ ಕಳಂಕವೂ ಅವರ ಮೇಲಿದೆ.

ದಸರಾ ತಂಡದ ಪ್ಯಾರಡೈಸ್

ದಸರಾ ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ಸ್ಟಾರ್ ಆಗಿ ಹೊರಹೊಮ್ಮಿದ್ದ ನ್ಯಾಚುರಲ್ ಸ್ಟಾರ್ ನಾನಿ ಈಗ ಬ್ಯಾಕ್ ಟು ಬ್ಯಾಕ್ ಚಿತ್ರಗಳಲ್ಲಿ ಬ್ಯುಸಿಯಾಗಿದ್ದಾರೆ. ಈಗ ಮತ್ತೊಮ್ಮೆ ದಸರಾ ತಂಡದ ಜತೆ ಕೈ ಜೋಡಿಸಿದ್ದು, ನಿರ್ದೇಶಕ ಶ್ರೀಕಾಂತ್ ಒಡೆಲಾ ಸಾರಥ್ಯದ ದಿ ಪ್ಯಾರಡೈಸ್ ಸಿನಿಮಾದಲ್ಲಿ ನಟಿಸಿದ್ದಾರೆ. ಈ ಚಿತ್ರದ ಮೊದಲ ಗ್ಲಿಂಪ್ಸ್ ಬಿಡುಗಡೆಯಾಗಿದೆ. ರಾ ಸ್ಟೇಟ್‌ಮೆಂಟ್ ಟೈಟಲ್‌ನಲ್ಲಿ ರಿಲೀಸ್ ಆಗಿರುವ ಝಲಕ್, ರಾ ಹಾಗೂ ಸಖತ್ ರಡಗ್ ಆಗಿದೆ.

ಮಾಸ್ ಆಗಿ ಮಿಂಚಿರುವ ನಾನಿ ರಕ್ತಸಿಕ್ತ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಹಿಂದೆಂದೂ ಕಾಣದ ಹೊಸ ಲುಕ್‌ನಲ್ಲಿ ನಾನಿ ಪ್ರತ್ಯಕ್ಷರಾಗಿದ್ದಾರೆ. ಈ ಹಿಂದೆ ದಸರಾ ಸಿನಿಮಾ ನಿರ್ಮಿಸಿದ್ದ ಸುಧಾಕರ್ ಚೆರುಕುರಿ ಶ್ರೀಲಕ್ಷ್ಮೀ ವೆಂಕಟೇಶ್ವರ ಸಿನಿಮಾಸ್ ಬ್ಯಾನರ್‌ನಲ್ಲಿ ದಿ ಪ್ಯಾರಡೈಸ್ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಅನಿರುದ್ಧ್ ಸಂಗೀತ ನಿರ್ದೇಶನ, ಜಿ.ಕೆ.ವಿಷ್ಣು ಛಾಯಾಗ್ರಹಣ, ನವೀನ್ ನೂಲಿ ಸಂಕಲನ ದಿ ಪ್ಯಾರಡೈಸ್ ಸಿನಿಮಾಕ್ಕಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಚಿತ್ರ ನಿರ್ಮಾಣವಾಗಿದ್ದು, ಈ ಸಿನಿಮಾದ ಮೊದಲ ಝಲಕ್‌ನ್ನು ತೆಲುಗು, ಕನ್ನಡ, ತಮಿಳು, ಹಿಂದಿ ಹಾಗೂ ಮಲೆಯಾಳಂ ಭಾಷೆಯಲ್ಲಿ ಬಿಡುಗಡೆ ಮಾಡಲಾಗಿದೆ.

ಹೃದಯಗೀತೆಯಲ್ಲಿ ಸುಮಧುರ ಗಾನ

ವೃತ್ತಿಯಲ್ಲಿ ವೈದ್ಯಯಾಗಿರುವ ಪ್ರೀತಿ ಅಶೋಕ್, ಸಾಹಿತಿಯ ಜತೆಗೆ ಗಾಯಕಿಯಾಗಿಯೂ ಗುರುತಿಸಿಕೊಂಡಿದ್ದಾರೆ. ಸದ್ಯ ಪ್ರೀತಿ ಅಶೋಕ್, ಹೃದಯ ಗೀತೆ ಎಂಬ ವಿಡಿಯೊ ಆಲ್ಬಂ ನಿರ್ಮಿಸಿದ್ದಾರೆ. ಈ ಆಲ್ಬಂನಲ್ಲಿ ನಾಲ್ಕು ಹಾಡುಗಳಿದ್ದು ಕೇಳಲು ಬಲು ಇಂಪಾಗಿವೆ. ಆರ್.ಎಸ್. ಗಣೇಶ್ ನಾರಾಯಣನ್ ಸಂಗೀತ ಸಂಯೋಜಿಸಿದ್ದು, ಹಾಡುಗಳಿಗೂ ದನಿಯಾಗಿದ್ದಾರೆ. ಹಿರಿಯ ನಿರ್ದೇಶಕ ಸಾಯಿ ಪ್ರಕಾಶ್, ಹಿರಿಯ ಸಂಗೀತ ನಿರ್ದೇಶಕ ವಿ.ಮನೋಹರ್, ಆಲ್ಬಂ ಸಾಂಗ್ ಬಿಡುಗಡೆ ಮಾಡಿ ಹಾಡುಗಳನ್ನು ಕೇಳಿ ಮೆಚ್ಚಿಕೊಂಡಾಡಿದರು.

ಚಿಕ್ಕಂದಿನಿಂದಲೂ ಸಾಹಿತ್ಯದ ಬಗ್ಗೆ ಆಸಕ್ತಿ ಇತ್ತು. ಈಗಾಗಲೇ ಮುನ್ನೂರಕ್ಕೂ ಹೆಚ್ಚು ಹಾಡುಗಳನ್ನು ರಚಿಸಿದ್ದೇನೆ. ವೃತ್ತಿಯಲ್ಲಿ ನಾನು ವೈದ್ಯೆಯಾದರೂ ನನಗೆ ಸಾಹಿತ್ಯ, ಸಂಗೀತದಲ್ಲಿ ಅಪಾರ ಆಸಕ್ತಿ. ಹಾಗಾಗಿಯೇ ಈ ಆಲ್ಬಂ ನಿರ್ಮಿಸಿದ್ದೇನೆ ಎಂದು ಪ್ರೀತಿ ಅಶೋಕ್ ತಿಳಿಸಿದರು. ಹಾಡುಗಳಲ್ಲಿ ಅರ್ಥಪೂರ್ಣ ಸಾಹಿತ್ಯವಿದ್ದು, ಮೂರು ಪ್ರೀತಿಯ ಮತ್ತು ಒಂದು ಶಿವನ ಕುರಿತ ಗೀತೆಯಿದೆ.

ಸಮರ್ಥ್, ತನ್ವಿ, ಶರತ್, ಅಜಿತ್ ಹಾಡುಗಳಲ್ಲಿ ಕಾಣಿಸಿಕೊಂಡಿದ್ದಾರೆ.

ನಮ್ಮ ಕಾಲದಲ್ಲಿ ಪ್ರತಿಯೊಬ್ಬ ಕಲಾವಿದರಿಗೂ ಸ್ಟಾರ್ ಇಮೇಜ್ ಇತ್ತು. ಕಾಲ ಬದಲಾದಂತೆ ಡಿಜಿಟಲ್ ಯುಗ ಬಂದು ಎಲ್ಲರೂ ಅವಕಾಶ ವಂಚಿತರಾಗಿದ್ದಾರೆ. ಸಂಗೀತ ಎನ್ನುವುದು ಸಮುದ್ರ ಇದ್ದಂತೆ. ಜೀವಂತವಾಗಿರುವುದು ಸಂಗೀತ. ಮಲಗುವ ಮುಂಚೆ ಒಳ್ಳೆ ಹಾಡು ಕೇಳಿ ಎಂದು ಡಾಕ್ಟರ್ ಸಲಹೆ ಕೊಡುತ್ತಾರೆ. ಅದರಲ್ಲಿ ಅಂತಹ ಶಕ್ತಿ ಇದೆ. ಗಣೇಶ್ ನಾರಾಯಣನ್, ಪ್ರೀತಿ ಅಶೋಕ ಸೇರಿಕೊಂಡು ಒಳ್ಳೆಯ ಆಲ್ಬಂ ಸಿದ್ಧಪಡಿಸಿದ್ದಾರೆ ಎಂದು ಹಿರಿಯ ನಿರ್ದೇಶಕ ಸಾಯಿಪ್ರಕಾಶ್ ಶುಭ ಹಾರೈಸಿದರು.

ಟಾಲಿವುಡ್ ಅಂಗಳದಲ್ಲಿ ವಾರ್ನರ್

ಆಸ್ಟ್ರೇಲಿಯಾದ ಖ್ಯಾತ ಕ್ರಿಕೆಟಿಗ ಡೇವಿಡ್ ವಾರ್ನರ್, ಸೋಷಿಯಲ್ ಮೀಡಿಯಾದಲ್ಲಿ ಆಕ್ಟಿವ್ ಆಗಿದ್ದಾರೆ. ರೀಲ್ಸ್ ಮಾಡುತ್ತಾ ಎಲ್ಲರನ್ನು ಗಮನಸೆಳೆಯುತ್ತಾರೆ.

ಕ್ರಿಕೆಟ್‌ನಿಂದ ನಿವೃತ್ತಿ ಪಡೆದಿರುವ ವಾರ್ನರ್ ಈಗ ಸಿನಿಮಾ ರಂಗಕ್ಕೂ ಎಂಟ್ರಿಕೊಟ್ಟಿದ್ದಾರೆ. ಹೌದು, ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆಯಲ್ಲಿ ನಿರ್ಮಾಣವಾಗಿರುವ ರಾಬಿನ್ ಹುಡ್ ಚಿತ್ರದಲ್ಲಿ ಡೇವಿಡ್ ವಾರ್ನರ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದನ್ನು ಕೇಳಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ವಾರ್ನರ್ ಯಾವ ಪಾತ್ರದಲ್ಲಿ ನಟಿಸಿರಬಹುದು ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ.

ವಾರ್ನರ್ ಅವರ ಭಾಗದ ಶೂಟಿಂಗ್ ಕೂಡ ಮುಕ್ತಾಯವಾಗಿದ್ದು, ಅವರ ಪಾತ್ರ ಏನು ಎಂಬುದನ್ನು ಚಿತ್ರತಂಡ ಗುಟ್ಟಾಗಿ ಇಟ್ಟಿದೆ. ರಾಬಿನ್‌ಹುಡ್ ಚಿತ್ರವನ್ನು ವೆಂಕಿ ಕುಡುಮುಲ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ನಿತಿನ್ ನಾಯಕನಾಗಿ ನಟಿಸಿದ್ದು, ಶ್ರೀಲೀಲಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಈ ತಿಂಗಳಾಂತ್ಯಕ್ಕೆ ರಾಬಿನ್ ಹುಡ್ ತೆರೆಗೆ ಬರಲಿದೆ.

ಡ್ರಗ್ಸ್ ಹಿಂದೆ ಡೆಡ್ಲಿ ಲವರ್ಸ್

ನಾಗೇಂದ್ರ, ಕಥೆ, ಚಿತ್ರಕಥೆ, ಸಂಭಾಷಣೆ, ಬರೆದು ನಿರ್ದೇಶನ ಮಾಡಿರುವ ಡೆಡ್ಲಿ ಲವರ್ಸ್ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಪ್ರೇಮಿಗಳಿಬ್ಬರು ಡ್ರಗ್ಸ್ ಮಾಫಿಯಾ ಭೇದಿಸಲು ಭೂಗತ ಲೋಕಕ್ಕೆ ಎಂಟ್ರಿಕೊಟ್ಟು, ಅಲ್ಲಿ ಖಳನಾಯಕನಿಗೆ ಚಳ್ಳೆಹಣ್ಣು ತಿನ್ನಿಸಿ ಡ್ರಗ್ಸ್ ಹಣವನ್ನು ಕದಿಯುತ್ತಾರೆ. ಈ ವಿಷಯ ಗೃಹ ಮಂತ್ರಿಗೆ ತಿಳಿದು ಕೇಸನ್ನು ಎಸಿಪಿಗೆ ವಹಿಸುತ್ತಾರೆ. ಅಷ್ಟಕ್ಕೂ ಲವರ್ಸ್‌ಗಳೂ ಡೆಡ್ಲಿ ಆಗಲು ಕಾರಣವೇನು ಇವರಿಬ್ಬರ ಹಿನ್ನೆಲೆ ಏನು, ಅಂತಿಮವಾಗಿ ದುಡ್ಡು ಯಾರಿಗೆ ದಕ್ಕುತ್ತದೆ ಎಂಬುದನ್ನು ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ.

ಅಖಿಲ್ ಕುಮಾರ್ ನಾಯಕನಾಗಿ ನಟಿಸಿದ್ದು, ತನು ಪ್ರಸಾದ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಪ್ರೇಮಾ ಗೌಡ, ಭಾಸ್ಕರ್, ವಿನೋಥ್, ಎ.ಆರ್.ಲೋಕೇಶ್ ಮುಂತಾದವರು ತಾರಾಗಣದಲ್ಲಿದ್ದಾರೆ. ಲಹರಿ ವೇಲು ಗೃಹ ಮಂತ್ರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ನಾನು ವಿಧಾನಸೌದ ಒಳಗೆ ಹೋಗುತ್ತೇನೊ ತಿಳಿಯದು. ಆದರೆ ಅಲ್ಲಿ ಮಾಡಲಿಕ್ಕೆ ಸಾಧ್ಯವಾಗದ್ದನ್ನು ಈ ಸಿನಿಮಾದಲ್ಲಿ ಕಾರ್ಯಗತಗೊಳಿಸಿದ್ದೇನೆ. ಜನರು ಸಿನಿಮಾ ನೋಡಲ್ಲ ಅನ್ನೋದು ತಪ್ಪು. ಸಾಂಸಾರಿಕ, ಕಾದಂಬರಿ ಆಧಾರಿತ ಚಿತ್ರಗಳನ್ನು ಮರೆತು ಹೋಗಿದ್ದೇವೆ. ಹೊಸತನದ ಕಥೆ, ತೆರೆಗೆ ತಂದರೆ ಪ್ರೇಕ್ಷಕರು ಖಂಡಿತ ಚಿತ್ರಮಂದಿರಕ್ಕೆ ಬರುತ್ತಾರೆ. ನಮ್ಮಲ್ಲೆ ಕೆಲವರು ಉದ್ಯಮವನ್ನು ಹಾಳು ಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಪೈರಸಿ ಮೇಲೆ ನಟ್ಟು, ಬೋಲ್ಟು ಟೈಟ್ ಮಾಡಿದಾಗ ಮಾತ್ರ ಚಿತ್ರರಂಗ ಉಳಿಯುತ್ತದೆ. ಸುಮ್ಮನೆ ಕಲಾವಿದರನ್ನು ದೋಷಿಸುವುದು ಸರಿಯಲ್ಲ.
-ಲಹರಿ ವೇಲು ನಟ, ನಿರ್ಮಾಪಕ

ಕನ್ನಡದ ಮೊದಲ ವಾಕ್ಚಿತ್ರ ಸತಿ ಸುಲೋಚನ ಬಿಡುಗಡೆಯಾಗಿ ಒಂಬತ್ತು ದಶಕಗಳೇ ಕಳೆದಿವೆ. ಸಿನಿಮಾ ಬರುವವರೆಗೂ ರಂಗಭೂಮಿಯಲ್ಲಿ ಕಲಾವಿದರ ಅಭಿನಯವನ್ನು ನೋಡಿದ ಜನರು, ಮೊದಲ ಬಾರಿಗೆ ಬೆಳ್ಳಿತೆರೆಯ ಮೇಲೆ ಮೊದಲ ವಾಕ್ಚಿತ್ರವನ್ನು ನೋಡಿ ಮೂಕವಿಸ್ಮಿತರಾದರು. ಹಿರಿಯ ನಟ ಆರ್.ನಾಗೇಂದ್ರ, ರಾಯರ ಸಲಹೆ ಮೇರೆಗೆ ರಾಜಸ್ಥಾನ ಮೂಲದವರಾದ ಚಮನ್ ಲಾಲ್ ಡೊಂಗಾಜಿ ನಿರ್ಮಾಣ ಮಾಡಿದ ಈ ಚಿತ್ರವನ್ನು ವೈ.ವಿ.ರಾವ್ ನಿರ್ದೇಶನ ಮಾಡಿದ್ದರು. ಖ್ಯಾತ ನಟ ಲೋಕೇಶ್ ಅವರ ತಂದೆ ಸುಬ್ಬಯ್ಯ ನಾಯ್ಡು ಈ ಚಿತ್ರದ ನಾಯಕರಾಗಿ ನಟಿಸಿದರೆ, ತ್ರಿಪುರಾಂಬಾ ನಾಯಕಿಯಾಗಿ ಅಭಿನಯಿಸಿದ್ದರು. ತೊಂಬತ್ತೊಂದು ವರ್ಷಗಳ ಹಿಂದೆ ಬಿಡುಗಡೆಯಾಗಿದ್ದ ಈ ಚಿತ್ರದ

ಮರು ಸೃಷ್ಟಿಯಾಗಲಿದೆ ಸತಿ ಸುಲೋಚನ

ಯಾವುದೇ ವಿಡಿಯೋ ತುಣುಕುಗಳು ಲಭ್ಯವಿಲ್ಲ. ಕೇವಲ ಕೆಲವೆ ಕೆಲವು ಸ್ಥಿರಚಿತ್ರಗಳಷ್ಟೇ ಇವೆ. ಈಗ ತಮ್ಮ ತಾತಾ ನಾಯಕರಾಗಿ ನಟಿಸಿದ್ದ ಈ ಪ್ರಥಮ ಚಿತ್ರವನ್ನು ಮರು ಸೃಷ್ಟಿ ಮಾಡಲು ಸೃಜನ್ ಲೋಕೇಶ್ ಮುಂದಾಗಿದ್ದಾರೆ. ಖ್ಯಾತ ನಿರ್ದೇಶಕ ಪಿ.ಶೇಷಾದ್ರಿ, ನಿರ್ದೇಶನ ಮಾಡಲಿದ್ದಾರೆ.

ಕನ್ನಡದ ಮೊದಲ ವಾಕ್ಚಿತ್ರ ಬಿಡುಗಡೆಯಾಗಿ ತೊಂಬತ್ತೊಂದು ವರ್ಷಗಳಾಗಿವೆ. 3.3.1934 ರಂದು ಸಂಜೆ 7.30ಕ್ಕೆ ಬೆಂಗಳೂರಿನ ಪ್ಯಾರಾಮೌಂಟ್ ಚಿತ್ರಮಂದಿರದಲ್ಲಿ ಈ ಚಿತ್ರ ಬಿಡುಗಡೆಯಾಗಿತ್ತು. ಆದರೆ ಈ ಚಿತ್ರವನ್ನು ನಾವು ನೋಡೋಣ ಎಂದರೆ ಲಭ್ಯವಿಲ್ಲ. ಕೇವಲ ಸ್ಥಿರಚಿತ್ರಗಳಷ್ಟೇ ಇವೆ. ಸತಿ ಸುಲೋಚನ ರಾಮಾಯಣದ ಒಂದು ಉಪಕಥೆ. ಬೆಳ್ಳಾವೆ ನರಹರಿ ಶಾಸ್ತ್ರಿಗಳು ಬರೆದಿದ್ದ ಈ ನಾಟಕವನ್ನು ವೈ.ವಿ.ರಾವ್ ಅವರು ಸಿನಿಮಾ ರೂಪಕ್ಕೆ ತಂದರು.

ನಮ್ಮ ತಾತಾ ನಾಯಕರಾಗಿ ನಟಿಸಿದ್ದ ಮೊದಲ ವಾಕ್ಚಿತ್ರ ಸತಿ ಸುಲೋಚನ ಬಿಡುಗಡೆಯಾಗಿ ಒಂಬತ್ತು ದಶಕಗಳೇ ಕಳೆದಿವೆ. ಈ ಸಂದರ್ಭದಲ್ಲಿ ಈ ಚಿತ್ರವನ್ನು ಮರು ಸೃಷ್ಟಿ ಮಾಡಲು ಲೋಕೇಶ್ ಪ್ರೊಡಕ್ಷನ್ಸ್ ಸಂಸ್ಥೆ ಮುಂದಾಗಿದೆ. ಅಂದುಕೊಂಡಂತೆ ಆದರೆ ಇಂದಿನಿಂದ ಒಂದು ವರ್ಷಕ್ಕೆ ಮರು ಸೃಷ್ಟಿಯಾದ ಈ ಚಿತ್ರವನ್ನು ಬಿಡುಗಡೆ ಮಾಡುತ್ತೇವೆ. ಇದು ನನ್ನ ಕನಸಿನ ಚಿತ್ರ.
-ಸೃಜನ್ ಲೋಕೇಶ್ ನಟ, ನಿರ್ಮಾಪಕ

ರಾಮನಗರದಲ್ಲಿ ದೇಶಾಭಿಮಾನಿ ರೈತ

ಕನ್ನಡದಲ್ಲಿ ರೈತನ ಕುರಿತು ಸಾಕಷ್ಟು ಚಿತ್ರಗಳು ಬಂದಿವೆಯಾದರೂ, ಸದ್ಯ ತೆರೆಗೆ ಸಿದ್ಧವಾಗಿರುವ ರಾಮನಗರ ಚಿತ್ರ ವಿಭಿನ್ನ ಕಥೆಯನ್ನು ಹೊತ್ತು ಬರುತ್ತಿದೆ. ಈ ಚಿತ್ರದ ಹಾಡು ಹಾಗೂ ಟ್ರೇಲರ್ ರಿಲೀಸ್ ಆಗಿದೆ. ಬೇವೂರು ಮಠದ ಸ್ವಾಮೀಜಿ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ರಾಮನಗರ ವಿದ್ಯಾವಂತ ರೈತನ ಕಥೆಯಾಗಿದ್ದು, ಹಳ್ಳಿಯಲ್ಲಿ ಆತ ಎದಿರಿಸುವ ಸವಾಲು, ವಿದ್ಯಾವಂತನಾದರೂ ಹಳ್ಳಿಯಲ್ಲಿ ನೆಲೆನಿಂತು ಇತರಿಗೂ ಸ್ಫೂರ್ತಿಯಾಗುವ ಸ್ಟೋರಿ ಇಲ್ಲಿದೆ. ಇದರ ಜತೆಗೆ ಗ್ರಾಮೀಣ ಸೊಗಡಿನ ಪ್ರೇಮಕಥೆಯೂ ಬೆರೆತಿದೆ. ಪ್ರಭುಸೂರ್ಯ ನಾಯಕನಾಗಿ ನಟಿಸಿದ್ದು, ಹಳ್ಳಿಯ ವಿದ್ಯಾವಂತನಾಗಿ ಕಾಣಿಸಿಕೊಂಡಿದ್ದಾರೆ. ಮೇಘನಾ ಮತ್ತು ಹಿಮಾಶ್ರೀ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಶಿವಕುಮಾರ್ ಆರಾಧ್ಯ, ತಿಥಿ ಖ್ಯಾತಿಯ ತಮ್ಮಣ್ಣ ಮುಂತಾದರು ತಾರಾಗಣದಲ್ಲಿದಾರೆ. ನಿರ್ಮಾಪಕ ಸಿ.ಕೆ. ಮಂಜುನಾಥ್ ಚಿತ್ರ ನಿರ್ಮಾಣ ಮಾಡಿದ್ದಾರೆ. ಚಿತ್ರದಲ್ಲಿ ಮೂರು ಹಾಡುಗಳಿದ್ದು ಕೆವಿನ್ ಸಂಗೀತ ಸಂಯೋಜಿಸಿದ್ದಾರೆ.

ರಾಮನಗರ ಊರಿನ ಶೀರ್ಷಿಕೆಯಾದರೂ ಇದು ರೈತನ ಕಥೆ. ಅದರಲ್ಲೂ ವಿದ್ಯಾವಂತ ದೇಶಾಭಿಮಾನಿ ರೈತನ ಕಥೆಯಾಗಿದೆ.

ವಿದ್ಯಾವಂತನಾದರೂ ಹಳ್ಳಿಯಲ್ಲಿಯೇ ನೆಲಯೂರಿ ವ್ಯವಸಾಯ ಮಾಡಿ ಇತರ ವಿದ್ಯಾವಂತ ಯುವಕರಿಗೂ ಮಾದರಿ ಯಾಗುವ ಸ್ಫೂರ್ತಿದಾಯಕ ಸ್ಟೋರಿ ಈ ಚಿತ್ರದಲ್ಲಿದೆ ಎನ್ನುತ್ತಾರೆ ನಿರ್ದೇಶಕ ವಿಜಯ್ ರಾಜ್. ರಾಮನ ಗರ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ, ಶೂಟಿಂಗ್ ಮುಗಿಸಿರುವ ರಾಮನಗರ ಯುಗಾದಿಯ ಹೊತ್ತಿಗೆ ತೆರೆಗೆ ಬರಲಿದೆ.